
ರಂಜನೆ ಬೋಧನೆ ಪ್ರಬೋಧನೆ


ಲಂಕೇಶ್


ಅಕ್ಟೋಬರ್ 6, 2010 ರೂ. 12/-

ಪಟ್ಟರಾಜ ಗವಾಯಿ ಉತ್ತರಾಧಿಕಾರಿ ಕಿತ್ತಾಟ ಶುರು



ರೆಡ್ಡಿ ಬಾಲ ಕಟ್






ಹಳ್ಳಿ ಹೈದ ಪ್ಯಾಟೆಗ್ ಬಂದ

ಇದೆಂಥ ವಿಕೃತಿ

ಂಡ್ಲುಪೇಟೆ: ಕರ್ತವ್ಯ ಮರೆತ ಪೋಲೀಸ್

ಅಧಿಕಾರದ ಪಿತ್ತ ಂಬಾವಳಿಗೆ ಲಾತಾ!





ನಿತ್ಯಾನಂದನ ಲೀಲಾ ವಿನೋದ ಮತ್ತೆ ಆರಂಭ!

ಮ್ಯಾಗಿ-ದೇಶಪಾಂಡೆ ಸಿವಿಲ್ ವಾರ್

ಮಸೀದಿಯಲ್ಲಿಲ್ಲದ ರಾಮ ಮಂದಿರದಲ್ಲೂ ಇರುವುದಿಲ್ಲ!



ಈ ಸಂಚಿಕೆ ನಿಮಗೆ ತಲುಪುವ ವೇಳೆಗೆ ಬಾಬ್ರಿ ಮಸೀದಿ-ರಾಮ ಜನ್ಮಭೂಮಿ ವಿವಾದದ ಬಗ್ಗೆ ಅಲಹಾಬಾದ್ ಹೈಕೋರ್ಟು ತನ್ನ ತೀರ್ಮಾನವನ್ನು ಕೊಟ್ಟಿರುಬೇಕಿತ್ತು, ಆದರೆ ಸುಪ್ರೀಂಕೋರ್ಟ್ ಸೆ. 29ತನಕ ತೀರ್ಪಿನ ಪ್ರಕಟಣೆಯನ್ನು ಮುಂದೂಡಿದೆ. ಅದೇನೆ ಇರಲಿ ತೀರ್ಪು ಯಾರ ಪರವಾಗಿರುತ್ತದೆ ಎಂಬ ಬಗ್ಗೆ ಈಗಾಗಲೇ ಸಾಕಷ್ಟು ಊಹಾಪೋಹಗಳು ಚಾಲ್ತಿಯಲ್ಲಿವೆ. 24ರಂದು ಶುಕ್ರವಾರ. ಮುಸ್ಲಿಮರು ನಮಾಜು ಮಾಡುವ ದಿನ. ತೀರ್ಪು ಅಂದು ಮಧ್ಯಾಹ್ನ ಹೊರಬೀಳುವ ನಿರೀಕ್ಷೆ ಇತ್ತು, ಅಂದರೆ ಮುಸ್ಲಿಮರು ನಮಾಜು ಮುಗಿಸಿ ಹೊರಬೀಳುವ ವೇಳೆಗೆ ತೀರ್ಪು ಹೊರಬೀಳುವ ಸಾಧ್ಯತೆ ಇತ್ತು, ತೀರ್ಪು ಯಾರ ಪರವಾಗಿಯೇ ಬಂದರೂ ಮುಸ್ಲಿಮರು ಒಟ್ಟಾಗಿ ಸೇರುವ ಧಾರ್ಮಿಕ ಸಂದರ್ಭವೇ ಅವರನ್ನು ರಾಜಕೀಯವಾಗಿ ಆರೋಪಿಗಳ ಸ್ಥಾನದಲ್ಲಿ ನಿಲ್ಲಿಸಿಬಿಡಬಹುದು. ಕಳೆದ 20 ವರ್ಷಗಳಿಂದ ಆಗುತ್ತಾ ಬಂದಿರುವುದೇ ಹೀಗೇ ಅಲ್ಲವೇ? ಇಂದು ಭಾರತದಲ್ಲಿ ಕೋಮುಗಲಭೆಯ ಸಂದರ್ಭಗಳಲ್ಲಿ ಕಾನೂನು ಸುವ್ಯವಸ್ಥೆಯ ರಕ್ಷಣೆ ಎಂದರೆ ಮುಸ್ಲಿಮರು ಹೊರಬರದಂತೆ ಬಿಗಿಯಾದ ಪಹರೆ ಹಾಕುವುದು ಎಂತಲೇ ಆಗಿಬಿಟ್ಟಿದೆ. ಇದು ಗೊತ್ತಿದ್ದೋ ಗೊತ್ತಿಲ್ಲದೆಯೋ ಸಮಾಜದಲ್ಲಿ ಇಡೀ ಮುಸ್ಲಿಂ ಸಮುದಾಯದ ಬಗ್ಗೆ ಒಂದು ಪೂರ್ವಾಗ್ರಹ ಸೃಷ್ಟಿಸುತ್ತದೆ ಅಥವಾ ಈಗಾಗಲೇ ಇರುವ ಪೂರ್ವಾಗ್ರಹವನ್ನು ಮತ್ತಷ್ಟು ಗಟ್ಟಿಗೊಳಿಸುತ್ತದೆ. ದಿನಾಂಕ ನಿಗದಿ ಮಾಡುವಾಗ ನ್ಯಾಯಾಧೀಶರಿಗೆ ಈ ಸೂಕ್ಷ್ಮ ಏಕೆ ಹೊಳೆಯಲಿಲ್ಲ? ಈಗ ತೀರ್ಪು ಮುಂದೂಡಲಾಗಿದೆ. ಮುಂದಿನ ದಿನಾಂಕ ನಿಗದಿ ಮಾಡುವ ಸಂದರ್ಭದಲ್ಲಾದರೂ ಕೋರ್ಟು ಇದನ್ನು ಗಮನಿಸಲಿ.

ಅದೇನೇ ಇರಲಿ. ತೀರ್ಪು ಯಾರ ಪರವಾಗಿರುತ್ತದೆ ಎಂಬುದಕ್ಕಿಂತ ನ್ಯಾಯದ ಪರವಾಗಿರುತ್ತದೆಯೇ ಎಂಬುದೇ ಅತಿಮುಖ್ಯ. ಅದಕ್ಕೆ ನ್ಯಾಯನಿಷ್ಠುರತೆ ಮತ್ತು ಸಾಂವಿಧಾನಿಕ ಮೌಲ್ಯಗಳ ಬಗ್ಗೆ ಬದ್ಧತೆ ಇರುವುದು ಅತಿ ಮುಖ್ಯ. ನಮ್ಮ ದೇಶದ ಶಾಸಕಾಂಗವಾಗಲೀ, ಕಾರ್ಯಾಂಗವಾಗಲೀ ಬಾಬ್ರಿ ಮಸೀದಿಯ ನಾಶದ ನಂತರ ಈ ದೇಶದ ಸಂವಿಧಾನವನ್ನು ರಕ್ಷಣೆ ಮಾಡುವದಕ್ಕಿಂತ ನಾಶ ಮಾಡುವುದರಲ್ಲೇ ಪ್ರವೀಣರೆಂಬುದನ್ನು ಸಾಬೀತುಪಡಿಸಿದೆ. ಹೀಗಾಗಿ ಈ ದೇಶದ ಸಂವಿಧಾನ ಮತ್ತು ಪ್ರಜಾಪ್ರಭುತ್ವದ ಮೌಲ್ಯಗಳನ್ನು ನ್ಯಾಯಾಂಗವಾದರೂ ರಕ್ಷಿಸಬಹುದೇ ಎಂಬ ಅನುಮಾನ ಈ ದೇಶದ ಎಲ್ಲಾ ಪ್ರಜಾತಂತ್ರವಾದಿಗಳನ್ನು ಕಾಡುತ್ತಿದೆ. ಏಕೆಂದರೆ ನ್ಯಾಯ ಹಾಗೂ ಸಂವಿಧಾನದ ದೃಷ್ಟಿಯಿಂದ ನೋಡಿದರೆ ಈ ವಿವಾದವನ್ನು ಹುಟ್ಟುಹಾಕುವುದಕ್ಕೇ ಶಾಸಕಾಂಗ ಮತ್ತು ಕಾರ್ಯಾಂಗಗಳು ಅವಕಾಶ ಮಾಡಿಕೊಡಬಾರದಿತ್ತು, ಈಗ ಅವುಗಳು ಈ ವಿವಾದವನ್ನು ಸಾಂವಿಧಾನಿಕವಾಗಿ ಪರಿಹರಿಸಲು ವಿಫಲವಾಗಿವೆ. ಏಕೆಂದರೆ ಈ ವಿವಾದ ಎತ್ತಿದ ಪ್ರಶ್ನೆಯೇ ಅಸಾಂವಿಧಾನಿಕವಾಗಿದೆ. ರಾಮ ಬಾಬ್ರಿ ಮಸೀದಿಯಲ್ಲಿ ಹುಟ್ಟಿದ್ದು ಎಂಬುದು ನಮ್ಮ ವಿಶ್ವಾಸದ ಮತ್ತು ಶ್ರದ್ಧೆಯ ಪ್ರಶ್ನೆ, ಅದಕ್ಕೆ ನಾವು ಯಾವ ಪುರಾವೆಗಳನ್ನೂ ಕೊಡುವುದಿಲ್ಲ, ಈ ದೇಶದಲ್ಲಿ ಹಿಂದೂಗಳು ಬಹುಸಂಖ್ಯಾತರಾದ್ದರಿಂದ ಯಾವುದೇ ತರ್ಕ-ನ್ಯಾಯದ ಪ್ರಶ್ನೆ ಎತ್ತದೆ ಬಾಬ್ರಿ ಮಸೀದಿ ಇರುವ ಆವರಣವನ್ನು ಹಿಂದೂಗಳಿಗೆ ಬಿಟ್ಟುಕೊಡಬೇಕೆಂಬುದು ಸಂಘಪರಿವಾರದ ಆಗ್ರಹವಾಗಿದೆ. ಇದು ಸಂವಿಧಾನಕ್ಕೇ ಮತ್ತು ಸೌಹಾರ್ದತೆಗೇ, ನ್ಯಾಯಪ್ರಜ್ಞೆಗೇ ಹಾಕಿರುವ ಸವಾಲು. ಇದಕ್ಕೆ ವಿವಾದದ ಮತ್ತು ನ್ಯಾಯ ಪರಿಹಾರದ ಪ್ರಶ್ನೆಯ ಸ್ಥಾನ ನೀಡುವುದೇ ಅಸಾಂವಿಧಾನಿಕವಾದದ್ದು. ಆದರೆ ಪ್ರಶ್ನೆಯಲ್ಲದ ಪ್ರಶ್ನೆಯನ್ನು ನ್ಯಾಯಾಂಗ ಕೈಗೆತ್ತಿಕೊಳ್ಳುವಂತೆ ಮಾಡುವುದರ ಮೂಲಕ ಮೊಟ್ಟ ಮೊದಲಿಗೆ ಸಾಂವಿಧಾನಿಕ ಮೌಲ್ಯಗಳಿಗೆ ಅಪಚಾರವಾಗಿದೆ.

ಇದನ್ನು ಸ್ವಲ್ಪ ವಿವರವಾಗಿ ನೋಡುವ ಅಗತ್ಯವಿದೆ. ಈ ದೇಶಕ್ಕೆ 1947ರಲ್ಲಿ "ಸ್ವಾತಂತ್ರ್ಯ" ಬಂದು 1950ರಲ್ಲಿ ಈ ದೇಶಕ್ಕೆ "ನಾವು ಈ ದೇಶದ ಜನ" ಒಂದು ಸಂವಿಧಾನವನ್ನು ಬರೆದುಕೊಂಡೆವು. ನಂತರ ಅದರ ಆಧಾರದಲ್ಲಿ ಹಿಂದಿನದೆಲ್ಲವನ್ನೂ ಹಿಂದಿಕ್ಕಿ ಸಮಾನತೆ, ಭ್ರಾತೃತ್ವಗಳ ಆಧಾರದ ಮೇಲೆ ಹೊಸ ಭಾರತವನ್ನು ಕಟ್ಟುವ ನಿರ್ಧಾರವನ್ನು ಕೈಗೊಂಡಿದ್ದೇವೆ. 1947ರ ಹಿಂದೆ ಈ ದೇಶದ ಜನರ ನಿಮಿತ್ತವಿಲ್ಲದೆ ರಾಜ-ಮಹಾರಾಜರು, ಬ್ರಿಟಿಷರು, ಫ್ರೆಂಚರಂತಹ ವಸಾಹತುಶಾಹಿಗಳು ಈ ದೇಶವನ್ನು -ಜನರನ್ನೂ ಒಡೆದು ಆಳಿದ್ದಾರೆ. ತಮ್ಮ ಈ ಶೋಷಣೆಗೆ ಪೂರಕವಾಗಿ ಜಾತಿ ಆಧಾರದಲ್ಲಿ ಮತ್ತು ಧರ್ಮದ ಆಧಾರದಲ್ಲಿ ಜನರನ್ನು ಒಡೆದಿದ್ದಾರೆ. ಕೌಟಿಲ್ಯನಿಂದ ಹಿಡಿದು ಕ್ಲೈವ್‌ನ ತನಕ ಎಲ್ಲರೂ ಈ ದೇಶವನ್ನು ಆಳಲು ಬಳಸಿದ್ದು "ಒಡೆದು ಆಳುವ" ತಂತ್ರವನ್ನೇ! ಅದನ್ನು ಬ್ರಿಟಿಷರು ಆಧುನಿಕಗೊಳಿಸಿ ನಮ್ಮ ಸಮಾಜವನ್ನು ಕೋಮುಗಳ ಆಧಾರದಲ್ಲಿ ಧ್ರುವೀಕರಿಸಿ 250 ವರ್ಷಗಳ ಕಾಲ ನಿರಾತಂಕವಾಗಿ ಆಳಿದರು. ಒಂದು ಅಂದಾಜಿನ ಪ್ರಕಾರ ಈ ದೇಶವನ್ನು ಬ್ರಿಟಿಷರು ಆಳುತ್ತಿದ್ದಾಗ ಎಂದಿಗೂ 17,000ಕ್ಕಿಂತ ಹೆಚ್ಚಿಗೆ ಬಿಳಿ ಸೈನಿಕರಿರಲಿಲ್ಲ, ಆದರೂ ಅವರು 25 ಕೋಟಿಗೂ ಹೆಚ್ಚಿನ ಜನಸಂಖ್ಯೆ ಇದ್ದ ಈ ದೇಶವನ್ನು ಆಳಲು ಸಾಧ್ಯವಾದದ್ದು ಒಡೆದು ಆಳುವ ಕೋಮುವಾದಿ ನೀತಿಯಿಂದಲೇ!

ಈ ದೇಶದಲ್ಲಿ ಹಿಂದೂ ಮುಸ್ಲಿಮರು ಒಗ್ಗಟ್ಟಾಗಿ ಇದ್ದರೆ ಈ ದೇಶವನ್ನು ಆಳುವುದು ಕಷ್ಟ ಎಂಬುದನ್ನು 1857ರ ಭಾರತದ ಸ್ವಾತಂತ್ರ್ಯ ಸಂಗ್ರಾಮ ಅವರಿಗೆ ಮನವರಿಕೆ ಮಾಡಿಕೊಟ್ಟಿತ್ತು, 1857ಕ್ಕೆ ಎರಡು ವರ್ಷಗಳ ಮುಂಚೆ ಇದೇ ಅಯೋಧ್ಯೆಯ ಬಾಬ್ರಿ ಮಸೀದಿಯ ಬಗ್ಗೆ ಒಂದು ಸಣ್ಣ ದಾವೆ ದಾಖಲಾಗಿತ್ತು, 1906ರ ಒಂದು ಬ್ರಿಟಿಷ್ ಗೆಜಿಟಿಯರ್ ಹೇಳುವ ಪ್ರಕಾರ 1855ರ ತನಕವೂ ಹಿಂದೂ ಮುಸ್ಲಿಮರಿಬ್ಬರೂ ಒಟ್ಟಿಗೆ ಬಾಬ್ರಿ ಮಸೀದಿ ಆವರಣದಲ್ಲಿ ತಮ್ಮ ತಮ್ಮ ದೈವಗಳಿಗೆ ಪ್ರಾರ್ಥನೆ ಸಲ್ಲಿಸುತ್ತಿದ್ದರು. ಅದರ ಬಗ್ಗೆ ಯಾವುದೇ ತಕರಾರು ಎರಡೂ ಸಮುದಾಯದಿಂದ ಇರಲಿಲ್ಲ, ಆದರೆ 1857ರ ಸಂಗ್ರಾಮದ ನಂತರ ಬಾಬ್ರಿ ಮಸೀದಿಯ ಹೊರ ಆವರಣದ ಸುತ್ತ ಬ್ರಿಟಿಷರು ತಡೆಯನ್ನು ನಿರ್ಮಿಸಿ ಹಿಂದೂಗಳು ಒಳ ಆವರಣವನ್ನು ಪ್ರವೇಶಿಸದಂತೆ ನಿರ್ಬಂಧ ಹೇರಿದರು. ಹೀಗಾಗಿ ಹಿಂದೂಗಳು ಬಾಬ್ರಿ ಮಸೀದಿಯ ಹೊರ ಆವರಣದಲ್ಲಿ ರಾಮ ಚಬೂತರ್‌ನಲ್ಲಿ ಪ್ರಾರ್ಥನೆ ಸಲ್ಲಿಸುವುದು ಪ್ರಾರಂಭವಾಯಿತು. 1861ರಲ್ಲಿ ಅಯೋಧ್ಯೆ ಇರುವ ಫೈಜಾಬಾದ್ ತೆಹ್‌ಶೀಲ್‌ನ ಬ್ರಿಟಿಷ್ ಕಮಿಷನರ್ ಬರೆದ **"A Historical Sketch of Fyzabad Tehsil Including the Former Capital Ayodhya and Fyzabad"** ಎಂಬ ಪುಸ್ತಕದಲ್ಲಿ ಮೊಟ್ಟ ಮೊದಲ ಬಾರಿಗೆ ಕೋಮುವಾದದ ವಿಷಬೀಜಗಳನ್ನು ಬಿತ್ತಲಾಯಿತು. "ಬಾಬ್ರಿ ಮಸೀದಿಯೆಂಬುದು ಮೊದಲು ರಾಮ ಮಂದಿರವೇ ಆಗಿದ್ದು ಅದನ್ನು 1528ರಲ್ಲಿ ಬಾಬರ್‌ನ ದಂಡ ನಾಯಕ ಮೀರ್ ಬಾಕಿ ಕೆಡವಿ ಬಾಬರಿ ಮಸೀದಿ ಕಟ್ಟಿರುವ ಸಾಧ್ಯತೆ ಇದೆ" ಎಂಬುದನ್ನು ಯಾವುದೇ ಪುರಾವೆ ಇಲ್ಲದೆ ಕೇವಲ ವಸಾಹತುಶಾಹಿ ದುರುದ್ದೇಶದಿಂದ ಈ ಅಧಿಕಾರಿ ಬರೆದ. 1885ರಲ್ಲಿ ಕೆಲವು ಹಿಂದೂ ಭಕ್ತರು ಇದರಿಂದ ಉತ್ತೇಜಿತರಾಗಿ ಬಾಬರ್‌ನಿಂದ ತಮಗಾದ ಅನ್ಯಾಯವನ್ನು ಸರಿಪಡಿಸಿ ತಮಗೆ ಹೊರಗಿನ ಛಬೂತರ್‌ನಲ್ಲಿ ದೇವಸ್ಥಾನವನ್ನು ಕಟ್ಟಿಕೊಳ್ಳಲು ಅವಕಾಶ ಮಾಡಿಕೊಡಬೇಕೆಂದು ದಾವೆ ಹೂಡಿದರು. ಆದರೆ ನ್ಯಾಯಾಲಯವು 350 ವರ್ಷಗಳ ಹಿಂದೆ ನಡೆದ ಅನ್ಯಾಯಕ್ಕೆ ಈಗ ನ್ಯಾಯ ಮಾಡಲು ಸಾಧ್ಯವಿಲ್ಲವೆಂದು ಹೇಳಿತಾದರೂ ಪರೋಕ್ಷವಾಗಿ ಬಾಬರ್ ಮಸೀದಿ ಕೆಡವಿದ್ದು ನಿಜವೆಂಬ ಸುಳ್ಳನ್ನು ಯಾವುದೇ ಪುರಾವೆಯಿಲ್ಲದೆ ಒಪ್ಪಿಕೊಂಡು ಅದಕ್ಕೆ ಐತಿಹಾಸಿಕ ಸತ್ಯದ ಸ್ಥಾನವನ್ನು ಕೊಟ್ಟುಬಿಟ್ಟಿತು. ಹೀಗೆ ರಾಮ ಮಂದಿರವನ್ನು ಕೆಡವಿ ಬಾಬ್ರಿ ಮಸೀದಿಯನ್ನು ಕಟ್ಟಲಾಯಿತು ಎಂಬ ಅಚ್ಚ "ಬಿಳಿ" ಸುಳ್ಳು ಕಪ್ಪು ಅಕ್ಷರಗಳಲ್ಲಿ ಭಾರತೀಯ ನ್ಯಾಯಾಲಯಗಳಲ್ಲಿ ದಾಖಲಾಗಿಬಿಟ್ಟಿತು.



ಚಾರ್ವಾಕ

▶▶ ಶಿವಸುಂದರ್

ಆದರೂ 1949ರ ತನಕ ಮುಸ್ಲಿಮರು ಯಾವುದೇ ಅಡ್ಡಿಗಳಿಲ್ಲದೆ ಬಾಬ್ರೀ ಮಸೀದಿಯಲ್ಲಿ ಪ್ರಾರ್ಥನೆ ಸಲ್ಲಿಸುತ್ತಿದ್ದರು. ಹಿಂದೂಗಳು ಹೊರವಲಯದ ಚಬೂತರ್‌ನಲ್ಲಿ ರಾಮ ಲಲ್ಲಾನಿಗೆ ಪೂಜೆ ಸಲ್ಲಿಸುತ್ತಿದ್ದರು. ಆದರೆ 1949ರ ಡಿಸೆಂಬರ್ 22ರ ರಾತ್ರಿ ಕೆಲವು "ಕಿಡಿಗೇಡಿ"ಗಳು ಬಾಬ್ರಿ ಮಸೀದಿ ಆವರಣದೊಳಗೆ ಪ್ರವೇಶಿಸಿ ರಾಮನ ಮೂರ್ತಿಯನ್ನು ಪ್ರತಿಷ್ಠಾಪಿಸಿಬಿಟ್ಟರು. ಕೂಡಲೇ ಆವರಣದ ಸುತ್ತಾ ನಿಷೇಧ ಹೇರಿದ ಜಿಲ್ಲಾ ಮ್ಯಾಜಿಸ್ಟ್ರೇಟ್ ಕೆ.ಕೆ. ನಾಯರ್ ಕೆಲವರ್ಷಗಳ ನಂತರ ಬಿಜೆಪಿಯ ಮೂಲ ಪಕ್ಷವಾದ ಭಾರತೀಯ ಜನಸಂಘದ ಪತಿಯಿಂದ ಚುನಾವಣೆಗೆ ಸ್ಪರ್ಧಿಸಿದರು! ನಂತರ ಜಿಲ್ಲಾ ನ್ಯಾಯಾಲಯವೂ ಸಹ ಅಲ್ಲಿಂದ ರಾಮ ವಿಗ್ರಹವನ್ನು ತೆಗೆದರೆ ಗಲಭೆ ಉಂಟಾಗಬಹುದೆಂದು ತೀರ್ಮಾನ ಮಾಡಿದ್ದಲ್ಲದೆ ಯಾವ ಕಾರಣಕ್ಕೂ ಅಲ್ಲಿ ನಡೆಯುವ ಪೂಜೆಗೆ ಅಡ್ಡಿಯನ್ನು ಮಾಡಬಾರದೆಂದು ತೀರ್ಪು ನೀಡಿತು. ಅಲ್ಲಿಂದಾಚೆಗೆ ಮುಸ್ಲಿಮರು ಅಲ್ಲಿ ಪ್ರಾರ್ಥನೆ ಸಲ್ಲಿಸುವುದನ್ನೂ ಪರೋಕ್ಷವಾಗಿ ನಿಷೇಧಿಸಲಾಯಿತು. ಇದಾದ ನಂತರ 1950, 1951ರಲ್ಲಿ ಕೆಲವು ಹಿಂದೂ ಭಕ್ತರು ತಮಗೆ ರಾಮನ ಪೂಜೆಯನ್ನು ಮಾಡಲು ಸರ್ಕಾರ ಮತ್ತು ಮುಸ್ಲಿಮರು ಯಾವುದೇ ಅಡ್ಡಿಗಳನ್ನು ಉಂಟು ಮಾಡದಂತೆ ತಡೆಯಾಜ್ಞೆ ನೀಡಬೇಕೆಂದು ದಾವೆ ಹೂಡಿದರು. 1961ರಲ್ಲಿ ಸುನ್ನಿ ಸಮುದಾಯದವರು ಬಾಬ್ರಿ ಮಸೀದಿ ಆವರಣದ ಮೇಲೆ ತಮ್ಮ ಹಕ್ಕನ್ನು ಸ್ಥಾಪಿಸಲು ದಾವೆ ಹೂಡಿದರು. ಈ ಎಲ್ಲಾ ಪ್ರಕರಣಗಳು ನಡೆಯುತ್ತಿದ್ದರೂ ಇದು 1984ರ ತನಕ ಒಂದು ಸ್ಥಳೀಯ ವಿದ್ಯಮಾನವಾಗಿಯೇ ಮುಂದುವರೆಯಿತು.

1984ರಲ್ಲಿ ಆರೆಸ್ಸೆಸ್‌ನ ಕುಮ್ಮಕ್ಕಿನೊಂದಿಗೆ ಕೆಲವು ಹಿಂದೂ ಸಂಘಟನೆಗಳು ಬಾಬ್ರಿ ಮಸೀದಿಯನ್ನು ಸಂಪೂರ್ಣವಾಗಿ ಹಿಂದೂಗಳ ಕೈಗೊಪ್ಪಿಸಿ ರಾಮನನ್ನು ವಿಮೋಚನೆ(!) ಮಾಡಬೇಕೆಂದು ಚಳವಳಿ ಹೂಡಿದವು. ಬಾಬ್ರಿ ಮಸೀದಿಯನ್ನು ಆ ಪರಿಕ್ರಮದಿಂದಲೇ ಹೊರಹಾಕಿ ಇಡೀ ಆವರಣಕ್ಕೆ ಹಾಕಿರುವ ಬೀಗವನ್ನು ತೆಗೆದು ಹಿಂದೂ ಯಾತ್ರಾರ್ಥಿಗಳು ರಾಮನ ದರ್ಶನವನ್ನು ಸರಾಗವಾ... ಮಾಡಲು ಅವಕಾಶ ಕೊಡಬೇಕೆಂದು ದಾವೆಯನ್ನು ಹೂಡಿದರು. ಈಗಾಗ... ನೋಡಿದಂತೆ ನ್ಯಾಯಾಲಯವೇ 1949ರಿಂದ ಮುಸ್ಲಿಮರಿಗೆ ಅಲ್ಲಿ ಪ್ರಾರ್ಥ... ಮಾಡುವ ಹಕ್ಕನ್ನು ನಿರಾಕರಿಸಿತ್ತು, ಈಗ ಅದೇ ನ್ಯಾಯಾಲಯವೇ "ಹೇಗಿದ್ದರ... ಅಲ್ಲಿ ಮುಸ್ಲಿಮರು ಅಲ್ಲಿ ಪ್ರಾರ್ಥನೆ ಮಾಡುವುದಿಲ್ಲವಾದ್ದರಿಂದ ಆವರಣ... ಹಾಕಿರುವ ಬೀಗವನ್ನು ತೆಗೆದು ದರ್ಶನ ಮತ್ತು ಪೂಜೆಗೆ ಅವಕಾಶ ಮಾಡಿಕೊಟ್ಟ... ಆಕಾಶವೇನೂ ಕಳಚಿ ಬೀಳುವುದಿಲ್ಲವೆಂದು" ತೀರ್ಪು ನೀಡಿತು. ರಾಜೀವ... ಗಾಂಧಿಯ ಕಾಂಗ್ರೆಸ್ ಸರ್ಕಾರ ಸಹ ಶಾ ಬಾನು ಕೇಸಿನ ನಂತರ ಹಿಂದೂಗಳ... ತುಷ್ಟಿಗೊಳಿಸಲು ಅವಕಾಶಕ್ಕೆ ಕಾಯುತ್ತಿತ್ತು, ಹೀಗಾಗಿ ಈ ಅವಕಾಶವ... ಬಳಸಿಕೊಂಡು ಬಾಬ್ರಿ ಮಸೀದಿಯ ಗೇಟುಗಳನ್ನು ಹಿಂದೂಗಳಿಗೆ ಮು... ತೆಗೆಯಲಾಯಿತು.

ಈ "ವಿಜಯ"ದಿಂದ ಹುಚ್ಚೆದ್ದ ಹಿಂದುತ್ವವಾದಿಗಳು ಸಾಮಾನ್ಯ ಹಿಂದೂ... ಧಾರ್ಮಿಕ ಭಾವನೆಯನ್ನು ದುರುಪಯೋಗಮಾಡಿಕೊಂಡು ಇಡೀ ಬಾ... ಮಸೀದಿ ಆವರಣವನ್ನು ಹಿಂದೂಗಳಿಗೆ ಒಪ್ಪಿಸಬೇಕೆಂದೂ, ಅದು ರಾಮ... ಜನ್ಮಸ್ಥಾನವಾದ್ದರಿಂದ ಅಲ್ಲಿ ರಾಮನಿಗೆ ಭವ್ಯವಾದ ರಾಮಮಂದಿರ ಕಟ್ಟುವುದ... ಎಲ್ಲಾ ಹಿಂದೂಗಳ ಕರ್ತವ್ಯವೆಂದೂ, ಅದನ್ನು ವಿರೋಧಿಸುವುವವರು ಹಿಂದ... ದ್ರೋಹಿಗಳು ಮಾತ್ರವಲ್ಲ, ದೇಶದ್ರೋಹಿಗಳೆಂದು ಪಕ್ಕಾ ಕೋಮುವಾ... ಪ್ರಚಾರವನ್ನು ದೇಶದ ಮೂಲೆಮೂಲೆಗಳಲ್ಲಿ ಪ್ರಾರಂಭಿಸಿದರು. ಆ ಮೂಲ... ಇಡೀ ದೇಶವನ್ನು ಮತ್ತೊಮ್ಮೆ ಕೋಮುಗಳ ಆಧಾರದಲ್ಲಿ ಧ್ರುವೀಕರಣಗೊಳಿಸಿ... ಮಾತ್ರವಲ್ಲದೆ ದೇಶದೆಲ್ಲೆಡೆ ಅಲ್ಪಸಂಖ್ಯಾತರ ಮಾರಣಹೋಮ ನಡೆಸಿದರ... ಕೇಂದ್ರ ಸರ್ಕಾರದ ಅಂದಾಜಿನ ಪ್ರಕಾರವೇ ಏನಿಲ್ಲವೆಂದರೂ 116 ಕ... ಕೋಮು ಗಲಭೆಗಳು ನಡೆದು ಸಾವಿರಾರು ಅಮಾಯಕರ ಪ್ರಾಣಹರಣವಾಯಿತ... ಕರ್ನಾಟಕದಲ್ಲೂ 22ಕ್ಕೂ ಹೆಚ್ಚು ಕಡೆ ಕೋಮುಗಲಭೆಗಳು ನಡೆದು 100ಕ... ಹೆಚ್ಚು ಮುಗ್ಧರ ಪ್ರಾಣಹರಣವಾಯಿತು. ಇವೆಲ್ಲದರ ಅಂತಿಮ ಪರಿಣಾಮವಾ... 1992ರ ಡಿಸೆಂಬರ್ 6ರಂದು ಅತ್ಯಂತ ಯೋಜಿತವಾಗಿ ಸಂಘಪರಿವಾರ... ದುಷ್ಟ ಶಕ್ತಿಗಳು ಬಾಬ್ರಿ ಮಸೀದಿಯನ್ನು ಕೆಡವಿ ಹಾಕಿದರು. ಇದಕ್ಕೆ ಪರೋಕ್ಷವಾ... ನರಸಿಂಹರಾವ್ ನೇತೃತ್ವದ ಕಾಂಗ್ರೆಸ್ ಸರ್ಕಾರವೂ ಕಾರಣವಾಗಿದ್ದು ಈ... ಇತಿಹಾಸ.

ಆ ನಂತರ ಕೇಂದ್ರ ಸರ್ಕಾರವೇ ಬಾಬ್ರಿ ಮಸೀದಿ ಆವರಣದಲ್ಲಿನ 6... ಎಕರೆಯನ್ನು ತನ್ನ ಸುಪರ್ದಿಗೆ ತೆಗೆದುಕೊಂಡು ಅಲ್ಲಿ ಬಾಬ್ರಿ ಮಸೀದಿಯ... ಕಟ್ಟುವ ಮುಂಚೆ ರಾಮಮಂದಿರವಿತ್ತೇ ಎಂದು ಕಂಡುಹಿಡಿಯಲು ಉತ್ಖನ... ನಡೆಸಲು ಆದೇಶ ನೀಡಿದರು. ಅದಕ್ಕೆ ಸುಪ್ರೀಂಕೋರ್ಟು ಸಹ ತಾತ್ವಿಕ ಒಪ್ಪಿ... ನೀಡಿತು.

ಹೀಗೆ ಈ ದೇಶದ ಶಾಸಕಾಂಗ ಮತ್ತು ನ್ಯಾಯಾಂಗಗಳೇ ಮುಂದೆ ನಿಂತ... ರಾಜಕೀಯ ಲಾಭಕ್ಕಾಗಿ ಕೋಮುವಾದಿಗಳು ಹಿಂಸಾಕೋರರು ಗಲಭೆಕೋರರ... ಎತ್ತಿದ ಪ್ರಶ್ನೆಗಳಿಗೆ ಶಾಸನಬದ್ಧ ಮತ್ತು ಐತಿಹಾಸಿಕ ಮಾನ್ಯತೆಯನ್ನೂ ಒದಗಿ... ಬಿಟ್ಟವು. ಆ ಉತ್ಖನನವು ಯಾವ ಬಗೆಯಲ್ಲಿ ಯಾವುದೇ ಪುರಾವೆಯ... ಒದಗಿಸಲು ಸಾಧ್ಯವಿತ್ತು? ಭಾರತದ ಇತಿಹಾಸದ ಗುಂಡಿಯನ್ನು ಎಷ್ಟು ಆಳ... ತೋಡುತ್ತೇವೆ ಎಂಬ ಉದ್ದೇಶವನ್ನು ಆಧರಿಸಿ "ನಮಗೆ ಬೇಕಾದ ಸತ್ಯವನ್ನು... ಇತಿಹಾಸವು ಒದಗಿಸುತ್ತದೆ. ಏಕೆಂದರೆ ಇಲ್ಲಿ ಆಳಕ್ಕೆ ತೋಡುತ್ತಾ ಹೋದ... ಒಂದೊಂದು ಐತಿಹಾಸಿಕ ಪದರದಲ್ಲಿ ಒಂದೊಂದು ಧರ್ಮಶ್ರದ್ಧೆಗಳು ನಾಶವಾ... ಮತ್ತು ಆ ಧರ್ಮಕ್ಕೆ ಸೇರಿದವರ ನರಹತ್ಯೆಯಾದ ಪುರಾವೆಗಳು ಸಿಗು... ಹೋಗುತ್ತದೆ.

ಇತಿಹಾಸವನ್ನು ಉತ್ಖನನ ಮಾಡುತ್ತಾ ಹೋದಂತೆ ಹಿಂದೂಗ... ದೇವಸ್ಥಾನವನ್ನು ಮುಸ್ಲಿಮರು ಉರುಳಿಸಿರುವ ಕುರುಹುಗಳ ಜೊತೆಗೆ ಹಿಂದೂಗ... ಮುಸ್ಲಿಮರ ಮಸೀದಿಗಳನ್ನು ಉರುಳಿಸಿರುವ ಕುರುಹುಗಳೂ ಸಿಗುತ್ತದೆ. ಇನ್ನೂ... ಆಳಕ್ಕೆ ಹೋದರೆ ಶೈವರು ವೈಷ್ಣವರ ಮತ್ತು ವೈಷ್ಣವರು ಶೈವರ ದೇವಸ್ಥಾನಗಳ... ನಾಶ ಮಾಡಿರುವುದರ ಕುರುಹುಗಳು ಸಿಗುತ್ತವೆ. ಇನ್ನೂ ಆಳಕ್ಕೆ ಹೋದ... ಬ್ರಾಹ್ಮಣರು ಬೌದ್ಧ ವಿಹಾರಗಳನ್ನೂ ಮತ್ತು ಜೈನ ಬಸದಿಗಳನ್ನೂ ಕೆಡವಿರು... ಕುರುಹುಗಳು ಸಿಗುತ್ತವೆ. ಹೀಗಾಗಿ ಪ... ಎಷ್ಟು ಆಳಕ್ಕೆ ತೋಡುತ್ತೇವೆ ಎಂಬುದ... ಮೇಲೆ ನಮಗೆ "ಬೇಕಾದ" ಸತ್ಯಗ... ಸಿಗುತ್ತಾ ಹೋಗುತ್ತವೆ. ಹೀಗಾ... ಉತ್ಖನನದಿಂದ ಇತಿಹಾಸದಲ್ಲಿ ಆಗಿರು... ಅನ್ಯಾಯಗಳನ್ನು ತಿಳಿದುಕೊಂಡ... ಸರಿಪಡಿಸುತ್ತೇವೆ ಎಂಬ ನಿಲುವ... ತೆಗೆದುಕೊಂಡರೆ ಈ ದೇಶದ ಎ... ಪ್ರಖ್ಯಾತ ದೇವಮಂದಿರಗಳು ಅಂತಿಮದಲ್ಲಿ ಬೌದ್ಧ ವಿಹಾರಗಳೋ, ಜೈ... ಬಸದಿಗಳೋ ಅಥವಾ ಈ ದೇಶದ ಮೂಲನಿವಾಸಿಗಳ ದೇವಸ್ಥಾನಗಳ... ಆಗಿ ಪರಿವರ್ತನೆಗೊಳ್ಳಬೇಕಾಗುತ್ತದೆ. ಅದಕ್ಕೆ ಬದಲಿಗೆ ಸಂವಿಧಾನವನ್ನು ರಚಿಸಿಕೊ... ನಂತರ ಈ ದೇಶದ ಎಲ್ಲಾ ಧಾರ್ಮಿಕ ಶ್ರದ್ಧಾಕೇಂದ್ರಗಳು 1947ರ ಆಗ... 15ರಂದು ಯಾವ ಸ್ವರೂಪದಲ್ಲಿದ್ದವೋ ಅದನ್ನು ಹಾಗೆ ಕಾಪಾಡಿಕೊಂ... ಬರುವ ಮತ್ತು ಅದ ಶ್ರದ್ಧಾಂತರ ಮಾಡದಂತೆ ನಿಷೇಧಿಸುವು... ನ್ಯಾಯೋಚಿತವಾದ ಕ್ರಮ.

ವಾಸ್ತವವಾಗಿ ಬಾಬ್ರಿ ಮಸೀದಿ-ರಾಮ ಜನ್ಮಭೂಮಿ ವಿವಾದ ನಡೆಯುತ್ತಿ... ವಾಗ 1991ರಲ್ಲಿ ಸಂಸತ್ತಿನಲ್ಲಿ ಈ ಬಗೆಯ ಒಂದು ಕಾಯಿದೆಯನ್ನು ಜಾರಿ... ತರಲಾಗಿದೆ. ಅದು **The Place of Worship(Special Provision) Act, 1991.** ಇದರ ಪ್ರಕಾರ ಈ ದೇಶದಲ್ಲಿ ಯಾವುದೇ ಧಾರ್ಮಿಕ ಶ್ರ... ಕೇಂದ್ರಗಳ ಬಗ್ಗೆ ಯಾವುದೇ ವಿವಾದವಿದ್ದರೂ ಅವನ್ನು ಈ ಕಾಯಿದೆ... ಪ್ರಕಾರ 1947ರ ಆಗಸ್ಟ್ 15ರಂದು ಯಾವ ರೀತಿಯಲ್ಲಿತ್ತೋ ಅ... ರೀತಿಯಲ್ಲಿ ಕಾಪಾಡಿಕೊಂಡು ಬರುವ ಜವಾಬ್ದಾರಿ ಸರ್ಕಾರದ್ದು. ಯಾರಾದರ... ಇದಕ್ಕೆ ವ್ಯತಿರಿಕ್ತವಾಗಿ ನಡೆದುಕೊಂಡಲ್ಲಿ ಅವರ ಮೇಲೆ ಮೂರು ವರ್ಷ ... ಮತ್ತು ದಂಡ ವಿಧಿಸುವ ಅವಕಾಶವನ್ನು ಈ ಕಾಯಿದೆ ಒದಗಿಸುತ್ತದೆ. ಇ... ಹಿಂದಿನ ತರ್ಕವು ಅತ್ಯಂತ ಸಾಂವಿಧಾನಾತ್ಮಕವಾಗಿದೆ. 1947ರವರೆಗೆ ... ದೇಶದಲ್ಲಿ ಭ್ರಾತೃತ್ವ, ಸಮಾನತೆ ಮತ್ತು ಜನರ ಆಶಯಗಳನ್ನು ಗಮನದಲ್ಲಿಟ್ಟುಕೊಂ... ರಾಜ್ಯಭಾರ ನಡೆದಿಲ್ಲ. ಈಗ ಇತಿಹಾಸದಲ್ಲಿ ಪ್ರಥಮ ಬಾರಿಗೆ "ನಾವು ... ದೇಶದ ಜನರು" ಭ್ರಾತೃತ್ವದಿಂದ ಬಾಳಲು ಸಂಕಲ್ಪ ಮಾಡುತ್ತಿದ್ದೇವೆ. ಹೀಗ... ಇತಿಹಾಸವನ್ನು ಇತಿಹಾಸಕ್ಕೆ ಬಿಟ್ಟು ಹೊಸ ಬಂಧುತ್ವದ ಇತಿಹಾ...

▶▶ 1...

ದುಕಿರುವವರು ಸತ್ತಂತಿರುವ ಸ್ಥಳದಲ್ಲಿ....



ಕಂಡಹಾಗೆ

• ಗೌರಿ ಲಂಕೇಶ್
editorlankesh@gmail.com

ಮಾನದ ಕಿಟಕಿಯಿಂದ ನೋಡಿದಾಗ ಮಣಿಪುರ ಸುಂದರ ರಾಜ್ಯ ಇನ್ನೊಂದಿರಲಾರದು ಎನಿಸಿತು. ಳಿ ಮೋಡಗಳು ಚದುರಿದಾಗಲೆಲ್ಲ ಕಣ್ಣಿಗೆ ಕಂಡಿದ್ದು ಸಿರು ಬಣ್ಣದ ಗುಡ್ಡಗಳು. ಅವುಗಳ ನಡುವಿನ ಲ್ಲಿ ನೆಲದ ಮೇಲೆ ಅಚ್ಚುಕಟ್ಟಾಗಿ ಹಾಸಿರುವ ತೆ ಒಂದಕ್ಕೊಂದು ಹೊಂದಿಕೊಂಡಿದ್ದ ತಿಳಿ ಬಣ್ಣದ ಭತ್ತದ ಹೊಲಗಳು. ವಿಮಾನವು ನಿಲ್ದಾಣದಲ್ಲಿ ಸುತ್ತಲೂ ಕಂಡಿದ್ದು ನಾಚಿಕೊಂಡಿರುವ ಹುಡುಗಿ ಮೋಡಗಳಲ್ಲಿ ತಮ್ಮ ತಲೆಗಳನ್ನು ಮರೆಸಿಕೊಂಡಿದ್ದ ಗಿರಿಗಳು.

ಾನ್ಯ ಭಾರತದ ಏಳು ರಾಜ್ಯಗಳಲ್ಲಿ ಒಂದಾದ ರದ ಸುಂದರ ದೃಶ್ಯ ಅಲ್ಲಿಗೆ ಅಂತ್ಯಗೊಂಡಿತು. ಸ್ವಾಗತಿಸಲು ಗ್ರೇಸ್ ಜಾಜೋ ಎಂಬ ನಾಗಾ ಬಂದಿದ್ದಳು. "ವಿಮಾನದಿಂದ ಕಂಡದ್ದು ಮಲ್ ಆಗಿತ್ತು" ಅಂದೆ: "ನೆಲದ ಮೇಲಿನ ವಾಸ್ತವ ನಂತರ ಹಾಗನ್ನಿಸಲಾರದು" ಎಂದು ಆಕೆ ನಕ್ಕಳು. ಲ್ಲಿನ ರಾಜಕೀಯದ ಬಗ್ಗೆ ಒಂದಿಷ್ಟು ಗೊತ್ತಿದ್ದರಿಂದ ನಿರ್ಮಿತ ಸೌಂದರ್ಯ, ಮಾನವ ನಿರ್ಮಿತ ?!" ಎಂದೆ ನಾನು.


ಣಿಪುರದ ರಾಜಧಾನಿ ಇಂಫಾಲ್‌ನಲ್ಲಿನ ಏರ್ ಬೆಂಗಳೂರಿನ ರೈಲ್ವೆ ನಿಲ್ದಾಣಕ್ಕಿಂತಲೂ ಕೆಟ್ಟದಾಗಿದೆ. ನಗರದ ರಸ್ತೆಗಳು ಡಾಂಬರು ಕಂಡು ಅದೆಷ್ಟೋ ಾಗಿವೆ. ಬೆಂಗಳೂರಿನಲ್ಲಿರುವಂತೆ ದೊಡ್ಡ ದೊಡ್ಡ ಬಹುಮಹಡಿ ಕಟ್ಟಡಗಳಿರಲಿ, ಇಟ್ಟಿಗೆ ಮತ್ತು ನಿಂದ ನಿರ್ಮಿಸಿರುವ ಚಿಕ್ಕಮಟ್ಟ ಕಟ್ಟಡಗಳೂ ನಲ್ಲಿ ಕಾಣುವುದೇ ಅಪರೂಪ. ಇಲ್ಲಿನ ಷ್ಟು ಕಟ್ಟಡಗಳನ್ನು ಮರದ ಹಲಗೆಗಳಿಂದ ದಿರುವುದರಿಂದ ಮತ್ತು ಅವುಗಳಲ್ಲಿ ಹೆಚ್ಚಾಗಿ ರೇ ವಾಸಿಸುತ್ತಿರುವುದಿಂದ ಅವೆಲ್ಲವೂ ೀ ಆಗಲೋ ಕುಸಿಯಲಿರುವ ತಾತ್ಕಾಲಿಕ ಂತೆ ಕಾಣಿಸುತ್ತವೆ.

ತ್ತೀಚೆಗೆ ಇಂಫಾಲ್‌ನಲ್ಲಿ ಕ್ಲಾಸಿಕ್ ಎಂಬ ಲ್ ತಲೆ ಎತ್ತಿದೆ. ಇದೇನು ಐಶಾರಾಮಿ ತಾರಾ ಹೋಟೆಲ್ ಅಲ್ಲ, ಬದಲಾಗಿ ಟ್ಟಾದ ಒಂದು ಮಾಮೂಲಿ ಥ್ರೀ ಸ್ಟಾರ್ ಲ್. ಆದರೆ ಈ ರಾಜ್ಯದ ಮಟ್ಟಿಗೆ ಈ ಲ್ ಸ್ವರ್ಗಕ್ಕೆ ಸಮಾನ! ನಾನು ಅಲ್ಲಿಗೆ ವಾಗ ಇದೇ ಹೋಟೆಲ್‌ನಲ್ಲಿ 'ಮಣಿಪುರ ಮುಂದಿನ ಸವಾಲುಗಳು' ಎಂಬ ವಿಚಾರ ಸಭೆಯೊಂದು ನಡೆಯುತ್ತಿತ್ತು. ಅದೆಷ್ಟು ಸಭೆಯಾಗಿತ್ತೆಂದರೆ ಅದನ್ನು ರಾಜ್ಯ ಪಾಲರು ಟಿಸಿದ್ದರು ಮತ್ತು ಮುಖ್ಯ ಮಂತ್ರಿ ಸೇರಿದಂತೆ, ಅಧಿಕಾರಿಗಳು, ಇಲ್ಲಿ ಅರ್ಧ ದರ್ಬಾರು ತ್ತಿರುವ ಸೈನ್ಯದ ಅಧಿಕಾರಿಗಳು, ಚಿಂತಕರು, ್ವಾಲಯದ ಹಿರಿಯರು, ಪತ್ರಕರ್ತರು ಅದರಲ್ಲಿ ಹಿಸಿ ದ್ದರು. ಆ ಸಭೆಯ ಆಹ್ವಾನ ಪ್ರತಿಯನ್ನು ನನ್ನ ಕೊಠಡಿಗೆ ತಂದಾಗ ಅದರಲ್ಲಿದ್ದ ಒಂದು ನನ್ನ ಗಮನ ಸೆಳೆಯಿತು. ಅದು ಸ್ಥಳೀಯ ಇಂಫಾಲ್ ಸ್ ಎಂಬ ಪ್ರಮುಖ ದಿನಪತ್ರಿಕೆಯ ಸಂಪಾದಕ ಫಂಜುಭಮ್‌ನ ಹೆಸರು.

ಂಭತ್ತರ ದಶಕದಲ್ಲಿ ನಾನು ದೆಹಲಿಯ ಟೈಮ್ಸ್ ಇಂಡಿಯಾದಲ್ಲಿ ಕೆಲಸ ಮಾಡುತ್ತಿದ್ದಾಗ ಇದೇ ಫಂಜುಭಮ್ ನನ್ನ ಸಹೋದ್ಯೋಗಿ ಆಗಿದ್ದ. ಆ ನಮ್ಮಿಬ್ಬರ ನಡುವೆ ಯಾವ ಸಂಪರ್ಕವೂ ಇರಲಿಲ್ಲ ಂದ ಆತ ಎಲ್ಲಿಗೆ ಹೋದ ಎಂದಾಗಲಿ, ನಾನು ೆ ಎಂದಾಗಲಿ ಇಬ್ಬರಿಗೂ ಗೊತ್ತಿರಲಿಲ್ಲ. ಆದರೆ ವರ್ಷಗಳ ನಂತರ ಅಚಾನಕ್ಕಾಗಿ ನಾವಿಬ್ಬರೂ ಒಂದೇ ಲ್ಲಿ ಮಾತ್ರವಲ್ಲ, ಒಂದೇ ಕಟ್ಟಡದಲ್ಲಿ ಇದ್ದೆವು!

ಣಿಪುರದ ಪ್ರಸ್ತುತ ಸ್ಥಿತಿಗತಿಗಳ ಬಗ್ಗೆ ಏನು ಚರ್ಚೆ ದೆ ಎಂದು ತಿಳಿದುಕೊಳ್ಳಲು ಮತ್ತು ಹಳೇ ಪ್ರದೀಪ್ ನನ್ನು ಭೇಟಿ ಆಗಲು ನಾನು ಆ ಸಭೆಗೆ . ಅದು ಸರ್ಕಾರವೇ ಏರ್ಪಡಿಸಿದ್ದ ಕಾರ್ಯಕ್ರಮ ರಿಂದ ಎಲ್ಲರೂ, ಎಲ್ಲದರ ಬಗ್ಗೆಯೂ ಸುತ್ತು ಬಳಸಿ ಾಡುತ್ತಿದ್ದರೆ ವಿನಃ ಯಾರೂ ನೇರವಾಗಿ ಇದ್ದದ್ದನ್ನು ವ ಗಟ್ಟಿತನವನ್ನು ತೋರಿರಲಿಲ್ಲ. ಇದೆಲ್ಲದರಿಂದ , ಮಹಿಳೆಯೊಬ್ಬರು ಎದ್ದು ನಿಂತು "ಇವತ್ತು ಈ ಪ್ರಮುಖ ಸಮುದಾಯಗಳ ನಡುವೆ ಸಂಘರ್ಷ ೆ. ಪೈಪೋಟಿಗೆ ಬಿದ್ದಂತೆ ಮಣಿಪುರಿ ಮತ್ತು ಸಮುದಾಯಗಳು ಪರಸ್ಪರ ದಿಗ್ಬಂಧನ ಹೇರಿರುವುದ ಇಲ್ಲಿನ ಜನರ ಬದುಕೇ ಅಸಹನೀಯವಾಗಿದೆ. ರು ದಶಕಗಳಿಂದ ನಡೆಯುತ್ತಿರುವ ಈ ಸಂಘರ್ಷವನ್ನು ರಿಸದೆ ಮಣಿಪುರ ರಾಜ್ಯದ ಸಮಸ್ಯೆಗಳ ಬಗ್ಗೆ ಾಡಿ ಯಾವ ಪ್ರಯೋಜನವೂ ಇಲ್ಲ. ಈ ್ಯೆಯನ್ನು ಬಗೆಹರಿಸುವ ದಾರಿ ರಾಜ್ಯದ ವಿಭಜನೆ. ಮಣಿಪುರಿ ಸಮುದಾಯದವರು ಹೆಚ್ಚಾಗಿ ವಾಸಿಸುವ ಪ್ರದೇಶವನ್ನು ಅವರಿಗೆ ಮತ್ತು ಉಳಿದ ಪ್ರದೇಶಗಳನ್ನು ಅಲ್ಲಿ ವಾಸಿಸುತ್ತಿರುವ ನಾಗಾ ಸಮುದಾಯದವರಿಗೆ ಬಿಟ್ಟುಕೊಡಬೇಕು. ಆಗ ಮಾತ್ರ ಇಂತಹ ಸಭೆಗಳಿಗೆ ಅರ್ಥ ಬರುತ್ತದೆ" ಎಂದು ಗಟ್ಟಿದನಿಯಲ್ಲಿ ತಮ್ಮ ಅಸಹಾಯಕತೆ ಮತ್ತು ಅಸಮಾಧಾನವನ್ನು ತೋಡಿಕೊಂಡರು. ಆ ಮಹಿಳೆಯ ಮಾತುಗಳನ್ನು ಕೇಳಿ ಸಭೆಯಲ್ಲಿದ್ದವರೆಲ್ಲಾ ದಂಗಾಗಿ ಹೋದರು. ಕೆಲಕ್ಷಣಗಳಲ್ಲಿ ಚೇತರಿಸಿಕೊಂಡ ಅಧಿಕಾರಿಯೊಬ್ಬರು "ಆದರೆ ಇಮಾ (ಅಂದರೆ ಅಮ್ಮಾ), ಈ ಸಭೆಯ ಉದ್ದೇಶ ಬೇರೆಯದ್ದು" ಎಂದು ಹೇಳುತ್ತಲೇ ಬೇರೆಯವರನ್ನು ಮಾತನಾಡಲು ಆಹ್ವಾನಿಸುವ ಮೂಲಕ ಆಕೆಯ ಪ್ರತಿಭಟನೆಗೆ ತೆರೆ ಎಳೆದರು.

ಸಭೆಯ ನಂತರ ಪ್ರದೀಪ್ ಮತ್ತು ನಾನು ಭೇಟಿಯಾಗಿ ಮರುದಿನದ ಮಧ್ಯಾಹ್ನ ಸಿಗುವುದೆಂದು ನಿಗದಿಪಡಿಸಿಕೊಂಡೆವು. ಅದರಂತೆ ಮಾರನೆ ದಿನ ಪ್ರದೀಪನ ಕಾರ್‌ನಲ್ಲಿ ಹೋಗುತ್ತಿರುವಾಗ ಮಳೆ ಜೋರಾಗಿ ಸುರಿಯುತ್ತಿತ್ತು, ಆದರೆ ಅಂತಹ ಮಳೆಯಲ್ಲೂ ನೂರಾರು ಜನ ತಮ್ಮ ವಾಹನಗಳ ಜೊತೆ ಪೆಟ್ರೋಲ್ ಬಂಕ್‌ಗಳ ಮುಂದೆ ಸಾಲುಗಟ್ಟಿ ನಿಂತಿದ್ದರು. ಮಣಿಪುರ ಹೇಗಿದೆ ಅಂದರೆ ಈ ರಾಜ್ಯದ ಗಡಿ ಪ್ರದೇಶದಲ್ಲಿ ಗಿರಿಗಳಿದ್ದು ಅಲ್ಲೆಲ್ಲ ನಾಗಾ ಸಮುದಾಯದವರು ವಾಸಿಸುತ್ತಿದ್ದಾರೆ. ಆದರೆ ಈ ಗಿರಿಗಳ ಮಧ್ಯೆ ಇರುವ ಇಂಫಾಲ್ ಕಣಿವೆಯಲ್ಲಿ ಮಣಿಪುರಿ ಸಮುದಾಯದವರಿದ್ದಾರೆ. ಈಗ ಈ ಎರಡೂ ಸಮುದಾಯಗಳ ನಡುವೆ ನಡೆಯುತ್ತಿರುವ ಸಂಘರ್ಷದಲ್ಲಿ ಕಣಿವೆಯೊಂದಿಗೆ ಪ್ರಮುಖ ರಸ್ತೆ ಸಂಪರ್ಕವಾಗಿರುವ ರಾಷ್ಟ್ರೀಯ ಹೆದ್ದಾರಿ 39 ಮತ್ತು 53 ಗಳಲ್ಲಿ ನಾಗಾ ಸಮುದಾಯದವರು



ಮಣಿಪುರದ ಬೆಟ್ಟಪ್ರದೇಶದಲ್ಲಿ ನಾಗಾಗಳು ವಾಸಿಸುವ ಉಕ್ರುಲ್ ಜಿಲ್ಲೆಯ ದ್ವಾರದಲ್ಲಿ...

ನಿಷೇಧವನ್ನು ಹೇರಿ ರಸ್ತೆ ಮಾರ್ಗವಾಗಿ ಬರುವ ಎಲ್ಲ ವಸ್ತುಗಳನ್ನು ತಡೆಹಿಡಿದಿದ್ದಾರೆ. ಇದರ ಜೊತೆಗೆ ಸ್ಥಳೀಯ ವ್ಯಾಪಾರಸ್ಥರು ಅಗತ್ಯ ವಸ್ತುಗಳನ್ನು ಸರಬರಾಜು ಮಾಡದೇ ಅವುಗಳನ್ನು ಅಕ್ರಮವಾಗಿ ಸಂಗ್ರಹಿಸಿಟ್ಟುಕೊಂಡಿರುವುದರಿಂದ ಕಣಿವೆಯಲ್ಲಿನ ಜನ ತತ್ತರಿಸುತ್ತಿದ್ದಾರೆ. ಎಷ್ಟರ ಮಟ್ಟಿಗೆ ಅಂದರೆ ಇಲ್ಲೀಗ ಒಂದು ಲೀಟರ್ ಪೆಟ್ರೋಲ್ ಬೆಲೆ ಬರೋಬ್ಬರಿ ಮುನ್ನೂರು ರೂಪಾಯಿ ಆಗಿದ್ದರೆ, ಅಕ್ಕಿ ಬೆಲೆ ನೂರು ರೂಪಾಯಿ ದಾಟಿದೆ. ನಾನಿರುವ ಕ್ಲಾಸಿಕ್ ಹೋಟೆಲ್‌ನ ಮೆನು ಕಾರ್ಡಿನಲ್ಲಿ ಒಂದು ಬೇಯಿಸಿದ ಮೊಟ್ಟೆ ಬೆಲೆ 45 ರೂಪಾಯಿಯೆಂದು ಪ್ರಕಟಿಸಲಾಗಿದ್ದರೂ ಇಲ್ಲೀಗ ನೂರು ರೂಪಾಯಿ ಕೊಟ್ಟರೂ ಮೊಟ್ಟೆಗಳೇ ಸಿಗುತ್ತಿಲ್ಲ. ಮಣಿಪುರಿ ಮತ್ತು ನಾಗಾ ಸಮುದಾಯಗಳ ನಡುವಿನ ಈ ಸಂಘರ್ಷಕ್ಕೆ ಪ್ರಸ್ತುತ ಮತ್ತು ಐತಿಹಾಸಿಕ ಕಾರಣಗಳನ್ನು ಮುಂದೆ ವಿವರವಾಗಿ ಬರೆಯಲಿದ್ದೇನಾದ್ದರಿಂದ ಸದ್ಯಕ್ಕೆ ಇಲ್ಲಿ ಕೆಲವು ಅಂಶಗಳನ್ನು ಮಾತ್ರ ನಾನು ಹೇಳುತ್ತಿದ್ದೇನೆ.

ಇಲ್ಲಿ ಪೆಟ್ರೋಲ್ ಮಾತ್ರವಲ್ಲ, ಅಡುಗೆ ಗ್ಯಾಸ್‌ಗೂ ಎಂತಹ ಬರ ಇದೆ ಎಂದರೆ ಪ್ರದೀಪನ ಪತ್ರಿಕೆಯ ಮುಖಪುಟದಲ್ಲೇ ಯಾವ ಅಂಗಡಿಯಿಂದ ಎಷ್ಟು ದಿನಗಳ ನಂತರ ಗ್ಯಾಸ್ ಸಿಗುತ್ತದೆ ಎಂಬುದರ ಬಗ್ಗೆಯೇ ಒಂದು ಕಾಲಂ ಇದೆ. "ಸದ್ಯದ ನಿಷೇಧದಿಂದಾಗಿ ಈ ಕಾಲಂ ಬರುತ್ತಿದೆಯಾ?" ಎಂದು ಕೇಳಿದೆ. ಅದಕ್ಕೆ ಪ್ರದೀಪ್ "ಇಲ್ಲ, ಆ ಕಾಲಂ ಅನ್ನು ನಾವು ಕೆಲ ವರ್ಷಗಳಿಂದ ಪ್ರಕಟಿಸುತ್ತಿದ್ದೇವೆ. ಅದು ಇಲ್ಲಿನ ಬದುಕಿನ ಒಂದು ಮುಖ್ಯ ಅಂಶ" ಅಂದ. ಅಂದು ಪ್ರದೀಪ್ ನನ್ನನ್ನು ಕರೆದುಕೊಂಡು ಹೋದದ್ದು, ಇಂಫಾಲದಲ್ಲಿರುವ ಹಳೆಯ ವಿಮಾನ ನಿಲ್ದಾಣಗಳನ್ನು ತೋರಿಸಲು. ಈ ನಿಲ್ದಾಣಗಳನ್ನು ನಿರ್ಮಿಸಿದ್ದು ಬ್ರಿಟಿಷರು. ಅದು ಎರಡನೇ ಮಹಾಯುದ್ಧದ ಸಂದರ್ಭ. ಆಗ ಜಪಾನಿಯರು ಬರ್ಮಾ ದೇಶವನ್ನು ವಶಪಡಿಸಿಕೊಂಡಿದ್ದ ರಲ್ಲದೆ, ಬರ್ಮಾಗೆ (ಈಗಿನ ಮ್ಯಾನ್‌ಮಾರ್) ತಾಗಿಕೊಂಡಿರುವ ಮಣಿಪುರದ ಮೂಲಕ ಭಾರತವನ್ನೂ ತಮ್ಮದಾಗಿಸಿಕೊಳ್ಳುವ ಪ್ರಯತ್ನದಲ್ಲಿದ್ದರು. ಅಂದು ಜಪಾನಿಯರೊಂದಿಗೆ ಕೈಜೋಡಿಸಿದ್ದದ್ದು ಸುಭಾಷ್ ಚಂದ್ರಭೋಸ್ ಅವರ ಇಂಡಿಯನ್ ನ್ಯಾಷನಲ್ ಆರ್ಮಿ. ಐಎನ್‌ಎ ಮತ್ತು ಜಪಾನಿಯರ ಸೈನ್ಯ ಇಂಫಾಲ್‌ಗೆ ಬಹಳಷ್ಟು ಹತ್ತಿರ ಸಮೀಪಿಸಿತ್ತು, ಸುತ್ತಮುತ್ತಲಿನ ರಸ್ತೆಗಳನ್ನು ವಶಪಡಿಸಿಕೊಂಡಿತ್ತು, ಇನ್ನೇನು ಭಾರತವನ್ನು ಪ್ರವೇಶಿಸುತ್ತೇವೆ ಎಂದು ಅವರಿಬ್ಬರು ಭಾವಿಸಿದ್ದರು. ಆದರೆ ಐಎನ್‌ಎ ಮತ್ತು ಜಪಾನಿಯರಿಗಿಂತ ಹೆಚ್ಚು ವಾಯು ಶಕ್ತಿಯನ್ನು ಪಡೆದಿದ್ದ ಬ್ರಿಟಿಷರು ಇಂಫಾಲ್ ಸೇರಿದಂತೆ ಸುತ್ತಮುತ್ತಲಿನ ಪ್ರದೇಶದಲ್ಲಿ ಆಗಿನ ಕಾಲಕ್ಕೇ ಐದು ವಿಮಾನ ನಿಲ್ದಾಣಗಳನ್ನು ನಿರ್ಮಿಸಿದ್ದರು, ಆ ನಿಲ್ದಾಣಗಳ ಮೂಲಕ ತಮಗೆ ಅಗತ್ಯವಾಗಿದ್ದ ಅಸ್ತ್ರಗಳನ್ನು, ಸಾಮಗ್ರಿಗಳನ್ನು ಪಡೆಯುತ್ತಿದ್ದರು. ಈ ವಾಯು ಶಕ್ತಿಯಿಂದಾಗಿಯೇ ಬ್ರಿಟಿಷರು ಜಪಾನಿ ಮತ್ತು ಭೋಸ್‌ರ ಸೈನ್ಯವನ್ನು ಸೋಲಿಸುವಲ್ಲಿ ಯಶಸ್ವಿಯಾದರು. ಇದ್ಯಾವುದೂ ನಮ್ಮ ಇತಿಹಾಸದ ಪುಸ್ತಕಗಳಲ್ಲಿ ಓದಿದ್ದ ನೆನಪು ನನಗಿಲ್ಲವಾದ್ದರಿಂದ ಇಲ್ಲಿ ಅದನ್ನು ನೆನಪಿಸಿಕೊಳ್ಳುತ್ತಿದ್ದೇನೆ.

ಅಂದು ಬ್ರಿಟಿಷರು ನಿರ್ಮಿಸಿದ್ದ ಈ ವಿಮಾನ ನಿಲ್ದಾಣಗಳ ರನ್‌ವೇಗಳು ಈಗಲೂ ಇವೆ. ಆದರೆ ಅವುಗಳು ಪಾಳು ಬಿದ್ದಿರುವುದರಿಂದ ಅವುಗಳನ್ನು ಉಪಯೋಗಿಸಲಾಗುತ್ತಿಲ್ಲ. ಇವುಗಳನ್ನು ತೋರಿಸಿದ ನಂತರ ಪ್ರದೀಪ್ ನನ್ನನ್ನು ಇನ್ನೊಂದು ಪ್ರಮುಖ ಜಾಗಕ್ಕೆ ಕರೆದುಕೊಂಡು ಹೋದ. ಅಲ್ಲಿಗೆ ಹೋಗುವ ರಸ್ತೆಯಲ್ಲಿ ದೊಡ್ಡ ಗುಂಡಿಗಳಿದ್ದುದರಿಂದ ಅವುಗಳಲ್ಲಿ ಮಳೆ ನೀರು ತುಂಬಿತ್ತು, ಆ ಸ್ಥಳದ ಕಾಂಪೌಂಡ್ ಮತ್ತು ಗೇಟ್ ಕೂಡ ಪುರಾತನ ಕಾಲದಂತಿದ್ದವು. ಇವೆಲ್ಲವನ್ನು ದಾಟಿ ಸ್ವಲ್ಪ ದೂರ ನಡೆಯುತ್ತಿದ್ದಂತೆ ಒಂದು ಅಚ್ಚುಕಟ್ಟಾದ ಕಾಂಪೌಂಡ್ ಗೋಡೆ ಮತ್ತು ಗೇಟ್ ಕಾಣಿಸಿದವು. ಅದೆಲ್ಲಕ್ಕಿಂತ ಅಚ್ಚರಿ ಹುಟ್ಟಿಸುವಂತೆ ಸುತ್ತಲಿನ ಗಲೀಜು ಮತ್ತು ಅವ್ಯವಸ್ಥೆಯ ನಡುವೆ ಆ ಗೇಟಿನ ಆಚೆ ಸ್ವಚ್ಛವಾಗಿದ್ದ ಹುಲ್ಲುಹಾಸು ಕಂಡಿತು. "ಇದು ಎರಡನೆ ಮಹಾ ಯುದ್ಧದಲ್ಲಿ ಮಡಿದ ಸೈನಿಕರ ಸ್ಮಶಾನ" ಎಂದು ಪ್ರದೀಪ್ ವಿವರಿಸಿದ.

ಅಲ್ಲಿದ್ದ ಸುಮಾರು 1,600 ಸಮಾಧಿಗಳಲ್ಲಿ ಹೆಚ್ಚಿನವು ಬ್ರಿಟಿಷರ ಸೈನಿಕರದ್ದಾಗಿದ್ದರೂ ಅಲ್ಲಲ್ಲಿ ಹಲವು ಭಾರತೀಯರ ಹೆಸರುಗಳೂ ಕಂಡವು. "ಇಲ್ಲಿರುವ ಬ್ರಿಟಿಷರ ಸೈನಿಕರ ವಂಶಸ್ಥರು ಇವತ್ತಿಗೂ ಇಲ್ಲಿಗೆ ಬಂದು ತಮ್ಮ ಪೂರ್ವಜರಿಗೆ ನಮನವನ್ನು ಸಲ್ಲಿಸುತ್ತಾರೆ" ಎಂದ ಪ್ರದೀಪ್. ಅಂದಹಾಗೆ, ಈಗ ಬದುಕಿರುವ ಜನರಿಗಾಗಿ ನೆಟ್ಟಗಿರುವ ರಸ್ತೆಯನ್ನೂ ನಿರ್ಮಿಸಲಾಗದ ಸರ್ಕಾರ ಅದು ಹೇಗೆ ಅರವತ್ತು ವರ್ಷಗಳ ಹಿಂದೆ ಮಡಿದ ಈ ಸೈನಿಕರ ಸ್ಮಶಾನವನ್ನು ಇಷ್ಟು ಚೆಂದವಾಗಿ ನೋಡಿಕೊಳ್ಳುತ್ತಿದೆ ಎಂದು ವಿಚಾರಿಸಿದಾಗ ಗೊತ್ತಾಗಿದ್ದೇನೆಂದರೆ ಈ ಸಮಾಧಿಯೂ ಸೇರಿದಂತೆ ಸುತ್ತಮುತ್ತಲಿನ ರಾಜ್ಯಗಳಲ್ಲೂ ಇರುವ ಇಂತಹದ್ದೇ ಮಹಾಯುದ್ಧದ ಸಮಾಧಿಗಳನ್ನು ಕಾಮನ್ ವೆಲ್ತ್‌ಗೆ ಸಂಬಂಧ ಪಟ್ಟ ಒಂದು ಸಂಸ್ಥೆ ಪ್ರತಿ ವರ್ಷ ಲಕ್ಷಾಂತರ ರೂಪಾಯಿಗಳ ವೆಚ್ಚದಲ್ಲಿ ನೋಡಿಕೊಳ್ಳುತ್ತಿದೆ ಎಂಬುದು! ಬದುಕಿರುವವರು ಸತ್ತಂತಿರುವಾಗ ಸತ್ತವರಿಗೆ ಬದುಕಿರುವವರ ಸ್ಥಾನ ಎಂದರೆ ಇದೇ ಇರಬಹುದಲ್ಲವೇ ಅನ್ನಿಸಿತು.

ಮಾರನೆ ದಿನ ಮಣಿಪುರಿ ಊಟ ಕೊಡಿಸಲು ಗ್ರೇಸ್ ನನ್ನನ್ನು ಒಂದು ಬ್ರಾಹ್ಮಣರ ಹೋಟೆಲ್‌ಗೆ ಕರೆದುಕೊಂಡು ಹೋದಳು. ಅಂದಹಾಗೆ, ಮಣಿಪುರಿ ಸಮುದಾಯ ಮೂಲಭೂತವಾಗಿ ಒಂದು ಬುಡಕಟ್ಟು ಜನಾಂಗವಾಗಿದ್ದೂ ಸುಮಾರು 18ನೇ ಶತಮಾನದಲ್ಲಿ ಇಲ್ಲಿನ ರಾಜ ಹಿಂದೂ ಧರ್ಮಕ್ಕೆ ಮತಾಂತರಗೊಂಡನಲ್ಲದೆ ತನ್ನ ಪ್ರಜೆಗಳೂ ಹಿಂದೂ ಧರ್ಮವನ್ನು ಸ್ವೀಕರಿಸ ಬೇಕು ಎಂದು ಒತ್ತಾಯಿಸಿದ. ಆಗ ಇಲ್ಲಿನ ಜನ ವೈಷ್ಣವರಾಗಿ ಮತಾಂತರಗೊಂಡು ಹಿಂದೂ ಧರ್ಮೀಯರಾದರು. ಆದರೆ ಜನಿವಾರ ಬಂದರೂ ಅವರಿಗೆ ಮಾಂಸಾಹಾರವನ್ನು ಸಂಪೂರ್ಣವಾಗಿ ತ್ಯಜಿಸಲಾಗಲಿಲ್ಲ. ಆದ್ದರಿಂದ ಈಗಲೂ ಇಲ್ಲಿನ ಬ್ರಾಹ್ಮಣರೂ ಸೇರಿದಂತೆ ಇತರೆ ಹಿಂದೂಗಳು ಮೀನನ್ನು ತಿನ್ನುತ್ತಾರೆ. ಆ ಕಾರಣಕ್ಕಾಗಿ ಆ 'ಅಪ್ಪಟ' ಬ್ರಾಹ್ಮಣರ ಹೋಟೆಲ್‌ನಲ್ಲಿ ರುಚಿಕರವಾದ ಮೀನು ಪಲ್ಯ ಮೀನು ಸಾರು ಎಲ್ಲವೂ ಸಿಕ್ಕವು! ಅದನ್ನೆಲ್ಲ ತಿನ್ನುತ್ತಾ ಈ ಬ್ರಾಹ್ಮಣರನ್ನು ನಮ್ಮ ಪೇಜಾವರ ಶ್ರೀಗಳಾಗಲಿ, ಇತರೆ ಮಡಿ, 'ಇಂಗು' ಬ್ರಾಹ್ಮಣರಾಗಲೀ ಬ್ರಾಹ್ಮಣರೆಂದು ಸ್ವೀಕರಿಸುತ್ತಾರೆಯೇ ಎಂಬ ತುಂಟು ಯೋಚನೆ ಸುಳಿಯಿತು!

ಆ ಹೋಟೆಲ್‌ಗೆ ಹತ್ತಿರದಲ್ಲೇ ಇರುವ ಐತಿಹಾಸಿಕ ಮಾರುಕಟ್ಟೆಗೆ ಹೋದೆವು. ಮಣಿಪುರಿ ಸಮುದಾಯದಲ್ಲಿ ಹಿಂದಿನಿಂದಲೂ ಚಿಕ್ಕಮಟ್ಟ ವ್ಯಾಪಾರದ ಮೇಲೆ ಮಹಿಳೆಯರದ್ದೇ ಮೇಲುಗೈ. ಈ ಪರಂಪರೆ ಈಗಲೂ ಮುಂದುವರೆದಿದ್ದು 'ಇಮಾ'(ಅಮ್ಮಾ) ಎಂಬ ಈ ಐತಿಹಾಸಿಕ ಮಾರುಕಟ್ಟೆಯಲ್ಲಿ ಈಗಲೂ ವ್ಯಾಪಾರ ಮಾಡುವವರಲ್ಲಿ ಮಹಿಳೆಯರೇ ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಇತ್ತೀಚೆಗೆ ಈ ಮಹಿಳಾ ಜಗತ್ತನ್ನು ಕೆಲ ಪುರುಷರು ಪ್ರವೇಶಿಸಿರುವುದರಿಂದ ಈಗ ಈ ಮಾರುಕಟ್ಟೆ ಯಲ್ಲಿ ಕೆಲ ಪುರುಷ ವ್ಯಾಪಾರಸ್ಥರೂ ಇದ್ದಾರೆ. ಈ ಮಾರುಕಟ್ಟೆ ವ್ಯವಸ್ಥೆ ಎಂತಹದ್ದೆಂದರೆ ಇಲ್ಲಿ ಏನನ್ನೇ ಮಾರಾಟ ಮಾಡುವವರು ಆ ಹಕ್ಕನ್ನು ತಮ್ಮ ತಾಯಂದಿರಿಂದ ವಂಶಪಾರಂಪರ್ಯವಾಗಿ ಪಡೆದಿರಬೇಕು. ಅಷ್ಟರ ಮಟ್ಟಿಗೆ ಈ ಮಾರುಕಟ್ಟೆ ಮಹಿಳಾಪರ ವ್ಯವಸ್ಥೆಯಾಗಿದೆ.

ಕೆಳ ಮಧ್ಯಮ ವರ್ಗದವರ ಅಗತ್ಯಗಳನ್ನು ಪೂರೈಸುವ ಈ ಮಾರುಕಟ್ಟೆಯಲ್ಲಿ ತರಹೇವಾರಿ ವಸ್ತುಗಳು ಸಿಗುತ್ತವೆ. ಅವುಗಳಲ್ಲಿ ನನ್ನ ಗಮನ ಸೆಳೆದ ಹಲವನ್ನು ಇಲ್ಲಿ ನಿಮ್ಮೊಂದಿಗೆ ಹಂಚಿಕೊಳ್ಳಬೇಕೆನಿಸುತ್ತಿದೆ. ನಮ್ಮ ಮಾರುಕಟ್ಟೆಗಳಲ್ಲಿ ಒಣಗಿದ ಮೀನುಗಳನ್ನು ಕಂಡಿದ್ದೇನೆ. ಆದರೆ ಇಲ್ಲಿ ಒಣಗಿದ ಹಾವು ಮೀನು ಮತ್ತು ಕೊಬ್ಬಿನೊಂದಿಗೆ ಅಂಟಿಕೊಂಡಿರುವ ಜಾನುವಾರುಗಳ ಚರ್ಮ ಕೂಡ ಮಾರಾಟವಾಗುತ್ತಿರುವುದನ್ನು ಕಂಡೆ. ಹೀಗೆ ಒಣಗಿರುವ ಚರ್ಮವನ್ನು ಅಡುಗೆಗೆ ಉಪಯೋಗಿಸುತ್ತಾರಂತೆ.

ಬೆರಳಷ್ಟು ಉದ್ದನೆ ಮುಳ್ಳುಗಳನ್ನು ಹೊಂದಿರುವ ತರಕಾರಿಗಳನ್ನು, ತರಹೇವಾರಿ ಗಡ್ಡೆಗೆಣಸುಗಳನ್ನು, ವಿವಿಧ ರೀತಿಯ ಸೊಪ್ಪುಗಳನ್ನು, ಪುಟ್ಟ ಬದನೇಕಾಯಿಗಳಂತೆ ಕಾಣಿಸುತ್ತಿದ್ದ ಮರದ ಟೊಮೆಟೋಗಳನ್ನು, ನನ್ನ ಕಣ್ಣಿಗೆ ವಿಚಿತ್ರವಾಗಿದ್ದ, ಆದರೆ ಇಲ್ಲಿನ ಜನರಿಗೆ ಸಹಜವಾಗಿದ್ದ ಆಹಾರ ವಸ್ತುಗಳನ್ನು ಕಂಡೆ. ಆದರೂ ಇವೆಲ್ಲವುಗಳ ನಡುವೆ ನನಗೆ ತುಂಬ ಕುತೂಹಲಕಾರಿಯಾಗಿ ಕಂಡ ಒಂದು ಹಣ್ಣಿನ ಬಗ್ಗೆ ಹೇಳಲೇ ಬೇಕು. ಹಸಿರು ಬಣ್ಣ ಹೊಂದಿದ್ದ, ದೊಡ್ಡ ಬುಗುರಿಯ ಆಕಾರದಲ್ಲಿದ್ದ, ಮೇಲೆ ಒಂದು ಸ್ಪೇಸ್ ಶಿಪ್‌ನಂತೆ ಉಬ್ಬುಗಳನ್ನು ಪಡೆದಿದ್ದ ಆ ಹಣ್ಣನ್ನು ನೋಡಿ ನಾನು "ಇದೇನು?" ಎಂದು ಗ್ರೇಸ್ ಳನ್ನು ಕೇಳಿದೆ. "ಅದು ಕಮಲದ ಹಣ್ಣು" ಎಂದಳು ಗ್ರೇಸ್. ಆದರೆ ಕಮಲದ ಹಣ್ಣಿನ ಬಗ್ಗೆ ನಾನು ಕೇಳಿರಲಿಲ್ಲವಾದ್ದರಿಂದ ನಾನು ಆ ಹಣ್ಣನ್ನು ಕೊಂಡೆ. ಆ ಹಣ್ಣನ್ನು ಒಂದು ಕಡೆಯಿಂದ ಸುಲಿದ ಗ್ರೇಸ್ ಅದರೊಳಗಿದ್ದ ಬಟಾಣಿ ಗಾತ್ರದ ಬೀಜವನ್ನು ನನ್ನ ಕೈಗಿಟ್ಟು "ಇದನ್ನು ಸುಲಿದು ತಿನ್ನಬೇಕು" ಅಂದಳು. ಅದು ಹಸಿ ಕಡಲೆಯಷ್ಟೂ ರುಚಿಕರವಾಗಿರಲಿಲ್ಲವಾದ್ದರಿಂದ ಒಂದೆರಡು ಕಾಳುಗಳನ್ನು ತಿಂದು ಸುಮ್ಮನಾದೆ.

ಮಾರನೆ ದಿನ ಇಂಫಾಲ್‌ನ ಹೊರವಲಯದಲ್ಲಿ ಪ್ರಯಾಣಿಸುತ್ತಿದ್ದಾಗ ಒಂದು ಪುಟ್ಟ ಕೆರೆಯಲ್ಲಿ ನೀರಿನ ಮಟ್ಟಕ್ಕಿಂತ ಒಂದಡಿಯಷ್ಟು ಎತ್ತರ ತಲೆಯೆತ್ತಿ ಕಂಗೊಳಿಸುತ್ತಿದ್ದ ಕಮಲದ ಹೂವೊಂದನ್ನು ತೋರಿಸಿದ ಗ್ರೇಸ್ "ಈ ಕಮಲದ ಹೂವೇ ಆ ನಂತರ ಹಣ್ಣಾಗುವುದು" ಎಂದಳು. ನಮ್ಮಲ್ಲಿ ಕಮಲದ ಹೂ ಹಣ್ಣಾಗುವುದಿಲ್ಲವಲ್ಲ ಎಂದುಕೊಂಡೆ. ಆ ರಾತ್ರಿ ಬೇರೆ ಇನ್ಯಾವುದಕ್ಕೋ ಸಂಬಂಧಿಸಿದಂತ ಕಂಪ್ಯೂಟರ್‌ನಲ್ಲಿರುವ ಇಂಗ್ಲಿಷ್ ಮತ್ತು ಕನ್ನಡ ಡಿಕ್ಷನರಿಯನ್ನು ನೋಡುತ್ತಿದ್ದಾಗ "ಕಮಲದ ಹಣ್ಣು: ಇದನ್ನು ತಿಂದರೆ ಚಟುವಟಿಕೆಯ ಜೀವನದಲ್ಲಿ ಆಸಕ್ತಿ ಕಳೆದು ಕೊಂಡು ಸುಖಸ್ವಪ್ನ ಕಾಣುವ, ಭೋಗಾಸಕ್ತಿಯನ್ನು ಹುಟ್ಟಿಸುವ ಒಂದು ಗಿಡ ಅಥವಾ ಅದರ ಹಣ್ಣು" ಎಂದಿರುವುದನ್ನು ನೋಡಿದೆ!

ಈ ನನ್ನ ಪ್ರಯಾಣದ ಕಳೆದ ಐದಾರು ದಿನಗಳಲ್ಲಿ ಇನ್ನೂ ಎಷ್ಟೋ ವಿಚಾರಗಳನ್ನು, ವಿಸ್ಮಯಕಾರಿಯಾದ ಅಂಶಗಳನ್ನು ಕಂಡಿದ್ದೇನೆ, ಮಣಿಪುರದ ರಾಜಧಾನಿಯಾದ ಇಂಫಾಲ್‌ನ ಸೆಕೆಯನ್ನೂ, ಓಕ್ರುಲ್ ಎಂಬ ಗಿರಿಯ ಚಳಿಯನ್ನೂ ಅನುಭವಿಸಿದ್ದೇನೆ, ಬಸವನಹುಳ ಮತ್ತು ಜೇನುಹುಳದ ಪಲ್ಯವನ್ನೂ ಸೇವಿಸಿದ್ದೇನೆ, ಹಲವು ಹೊಸ ಸ್ನೇಹಿತರನ್ನೂ ಪಡೆದಿದ್ದೇನೆ... ಮಣಿಪುರ ರಾಜ್ಯದಿಂದ ನಾಗಾಲ್ಯಾಂಡಿಗೆ ಪ್ರಯಾಣ ಬೆಳೆಸುವ ಮುನ್ನ ನಾನು ಕಂಡಿರುವ ಹಲವನ್ನು ನಿಮ್ಮೊಂದಿಗೆ ಇಲ್ಲಿ ಹಂಚಿಕೊಂಡಿದ್ದೇನೆ... ಮುಂದಿನ ವಾರ ಇನ್ನಷ್ಟು ಅನುಭವಗಳನ್ನು ವಿವರಿಸುತ್ತೇನೆ. ಇವೆಲ್ಲವೂ ನನ್ನನ್ನು ಚಕಿತಗೊಳಿಸಿದಷ್ಟೇ ನಿಮ್ಮನ್ನೂ ಚಕಿತಗೊಳಿಸುತ್ತವೆ ಎಂಬುದು ನನ್ನ ಭರವಸೆ.

ನಾನು ಇಲ್ಲೆಲ್ಲೋ ಸುತ್ತುತ್ತಿರುವಾಗ ಪಾರ್ವತೀಶ್, ಸತೀಶ್, ರಾಜು ಮತ್ತು ನಮ್ಮ ತಂಡದ ಇತರರು ಜೊತೆಗೂಡಿ ಪತ್ರಿಕೆಯನ್ನು ತರುತ್ತಿರುವುದು ನನ್ನಲ್ಲಿ ಭವಿಷ್ಯದ ಬಗ್ಗೆ ಹೊಸ ಭರವಸೆಯನ್ನು ಮೂಡಿಸಿದೆ... ●

ಕೊನೆಗೂ ಎರಡೂವರೆ ವರ್ಷಗಳ ನಂತರ ಮುಖ್ಯಮಂತ್ರಿ ಯಡಿಯೂರಪ್ಪ ಸರ್ಕಾರ ಮತ್ತು ಪಕ್ಷದ ಮೇಲೆ ತನ್ನ ಬಿಗಿಹಿಡಿತವನ್ನು ಪ್ರದರ್ಶಿಸಿದ್ದಾರೆ. ಆರು ಜನ ಶಾಸಕರನ್ನು ಸಚಿವ ಸಂಪುಟಕ್ಕೆ ಸೇರಿಸಿಕೊಳ್ಳುವ ಕಸರತ್ತಿನಲ್ಲಿ ಯಡಿಯೂರಪ್ಪ ತೋರಿಸಿದ ಚಾಣಕ್ಯ ತಂತ್ರಗಳು ಮತ್ತು ರಾಜಕೀಯ ಮುತ್ಸದ್ದಿತನವನ್ನು ನೋಡಿ ಪಕ್ಷದ ಶಾಸಕರೇ ನಿಬ್ಬೆರಗಾಗಿ ಹೋಗಿದ್ದಾರೆ.

ರೆಡ್ಡಿ ಬುಡಕ್ಕೆ ಕೈಯಿಟ್ಟ ಯಡ್ಡಿ


ಮುಖ್ಯವಾಗಿ ಕಳೆದ ಎರಡು ವರ್ಷಗಳಿಂದ ತನ್ನ ಹಣಬಲ ಮತ್ತು ದೆಹಲಿ ನಂಟಿನಿಂದ ಆಗಾಗ್ಗೆ ಸರ್ಕಾರವನ್ನು ಇಕ್ಕಟ್ಟಿಗೆ ಮತ್ತು ಬಿಕ್ಕಟ್ಟಿಗೆ ತಳ್ಳುತ್ತಿದ್ದ ಬಳ್ಳಾರಿಯ ರೆಡ್ಡಿ ಸಹೋದರರ ಬ್ಲಾಕ್‌ಮೇಲ್ ರಾಜಕಾರಣವನ್ನು ಈ ಬಾರಿ ಯಡ್ಡಿ ಯಶಸ್ವಿಯಾಗಿ ಮಟ್ಟ ಹಾಕಿದ್ದಾರೆ. ಬಳ್ಳಾರಿ ಗಣಿದಣಿಗಳ ಬೆಂಬಲಿಗರೆನಿಸಿಕೊಂಡ ಲೈಬ್ರರಿ ಸಚಿವ ಶಿವನಗೌಡ ನಾಯಕ್ ಮತ್ತು ಯುವಜನ ಸೇವಾ ಮತ್ತು ಜವಳಿ ಖಾತೆ ಸಚಿವ ಗೂಳಿಹಟ್ಟಿ ಶೇಖರ್ ಇವರಿಬ್ಬರನ್ನು ಮುಲಾಜಿಲ್ಲದೆ ಸಂಪುಟದಿಂದ ವಜಾ ಮಾಡುವ ಧೈರ್ಯವನ್ನು ತೋರಿಸಿರುವುದೊಂದೇ ಯಡ್ಡಿ ರಾಜಕೀಯವಾಗಿ ಗಟ್ಟಿಯಾಗಿ ತಳವೂರಿದ್ದಾರೆ ಎಂಬುದಕ್ಕೆ ಸಾಕ್ಷಿ.

ಇವರಿಬ್ಬರನ್ನು ಸಂಪುಟದಿಂದ ಕೈಬಿಡುವ ಸುದ್ದಿಗಳು ಕೇಳಿಬಂದಾಗ 'ನಾನು ಆತ್ಮಹತ್ಯೆ ಮಾಡಿಕೊಳ್ಳುತ್ತೇನೆ' ಎಂದು ಟಿವಿ ಚಾನೆಲ್‌ವೊಂದರಲ್ಲಿ ಹೇಳಿಕೆ ನೀಡಿ ಗೂಳಿಹಟ್ಟಿ ಯಡ್ಡಿಯನ್ನು ಹೆದರಿಸಿದ್ದರು. ಅಷ್ಟೇ ಅಲ್ಲ ಸಚಿವ ಸಂಪುಟದ ವಿಸ್ತರಣೆಯ ದಿನವಾದ ಸೋಮವಾರ ಬೆಳಿಗ್ಗೆ ರೇಸ್‌ಕೋರ್ಸ್ ರಸ್ತೆಯಲ್ಲಿರುವ ಯಡ್ಡಿ ಮನೆ ಮುಂದೆ ಗೂಳಿಹಟ್ಟಿಯ ಅಭಿಮಾನಿಗಳು ಭಾರೀ ಸಂಖ್ಯೆಯಲ್ಲಿ ಸೇರಿ ಯಡ್ಡಿ ವಿರುದ್ಧ ಧಿಕ್ಕಾರದ ಕೂಗನ್ನು ಹಾಕಿದ್ದರು. ಸುಮಾರು ಹತ್ತು ನಿಮಿಷಗಳ ಕಾಲ ಯಡ್ಡಿ ಕಾರನ್ನು ಮುತ್ತಿಗೆ ಹಾಕುವಲ್ಲಿ ಈ ಗೂಳಿಯ ಅಭಿಮಾನಿಗಳು ಯಶಸ್ವಿಯಾಗಿದ್ದರು. ಬಹುಶಃ ಆ ಹೊತ್ತಿಗೆ ಗೂಳಿಯನ್ನು ಕೈಬಿಡಲೇಬೇಕು ಎಂಬ ಅಂತಿಮ ತೀರ್ಮಾನವನ್ನು ಯಡ್ಡಿ ಕೈಗೊಂಡಿದ್ದರೆಂದರೆ ಆಶ್ಚರ್ಯ ವಿಲ್ಲ. ಮತ್ತೊಂದೆಡೆ ಶಿವನಗೌಡ ನಾಯಕ್ ಮುಖ್ಯಮಂತ್ರಿ ತನ್ನನ್ನು ಕೈ ಬಿಡುತ್ತಾರೆಂಬ ಸುದ್ದಿ ಗೊತ್ತಾದ ತಕ್ಷಣವೇ ರೆಡ್ಡಿಗಳ ಮನೆಗೆ ದೌಡಾಯಿಸಿ ಅವರೊಂದಿಗೆ ಸಮಾಲೋಚಿಸಿದ ನಂತರ 'ಮಂತ್ರಿ ಸ್ಥಾನಕ್ಕೆ ರಾಜೀನಾಮೆ ಕೇಳಿದರೆ ಶಾಸಕರ ಸ್ಥಾನಕ್ಕೆ ರಾಜೀನಾಮೆ ನೀಡುತ್ತೇನೆ' ಎಂದು ಆರ್ಭಟಿಸಿದ್ದರು. ಅಷ್ಟೇ ಅಲ್ಲ, ನನ್ನನ್ನು ಐದು ವರ್ಷಗಳ ಕಾಲ ಮಂತ್ರಿಯಾಗಿ ಮುಂದುವರೆಯಲು ಅವಕಾಶ ನೀಡು ತ್ತೇನೆ ಎಂದು ಯಡಿಯೂರಪ್ಪ ವಚನ ನೀಡಿದ್ದರು. ಈಗ ನನ್ನನ್ನು ಕೈಬಿಟ್ಟರೆ ಅವರು 'ವಚನ ಭ್ರಷ್ಟರೆಂಬ ಆರೋಪಕ್ಕೆ' ಗುರಿಯಾಗುತ್ತಾರೆ ಎಂಬ ಬಾಣ ಬಿಟ್ಟಿದ್ದರು. ಕಳೆದ ಬಾರಿ ಕುಮಾರಸ್ವಾಮಿ ಅಧಿಕಾರವನ್ನು ನಿಗದಿತ ದಿನಾಂಕದಂದು ಯಡ್ಡಿಗೆ ಹಸ್ತಾಂತರಿಸದಿದ್ದಾಗ 'ಕುಮಾರಣ್ಣ ವಚನಭ್ರಷ್ಟ' ಎಂಬ ಆರೋಪ ದಿಂದಲೇ ವಿಲನ್ ತರಹ ಜನರ ಕಣ್ಣಲ್ಲಿ ಕಾಣಿಸಿದರು. ಅದೇರೀತಿ ಈ ಬಾರಿ ಯಡ್ಡಿಯನ್ನು 'ವಚನಭ್ರಷ್ಟ'ರಾಗಿ ತೋರಿಸುವುದೇ ರೆಡ್ಡಿ ಸಹೋದರರ ಗೇಮ್ ಪ್ಲಾನ್ ಆಗಿತ್ತು.

ಹೀಗೆ ಒಂದೆಡೆ ಸಚಿವರೊಬ್ಬರ ಪ್ರಾಣ ತ್ಯಾಗ ಮಾಡುವ ಬೆದರಿಕೆ, ಮತ್ತೊಂದೆಡೆ ವಚನಭ್ರಷ್ಟರಾಗುವ ಅಪಾಯದಿಂದ ಯಡಿಯೂರಪ್ಪ ಹೇಗೆ ಪಾರಾಗಬಹುದು ಎಂದೇ ರಾಜಕೀಯ ಪಂಡಿತರು ಚಿಂತಿಸುತ್ತಿದ್ದರು.


ದೆಹಲಿಯಲ್ಲೂ ಯಡ್ಡಿ ದರ್ಬಾರು!

ಈ ಮಧ್ಯೆ ದೆಹಲಿ ಹೈಕಮಾಂಡ್ ಕೂಡಾ ಸಚಿವ ಸಂಪುಟ ವಿಸ್ತರಣೆ ಬಗ್ಗೆ ಎರಡು ವಿಭಿನ್ನವಾದ ಅಭಿಪ್ರಾಯಗಳನ್ನು ಹೊಂದಿದೆ ಎಂಬ ಸುದ್ದಿ ತೇಲಿಬಂದಿದ್ದೇ ತಡ ಯಡ್ಡಿ ವಿರೋಧಿ ಗುಂಪುಗಳು ಮತ್ತು ಸಚಿವ ಸ್ಥಾನದ ಆಕಾಂಕ್ಷಿಗಳು ಇನ್ನಷ್ಟು ಚುರುಕಾದರು. ಇದಕ್ಕೆ ಒಂದು ಬಲವಾದ ಕಾರಣವೂ ಇದೆ. ಅದೇನೆಂದರೆ ದೆಹಲಿಯಲ್ಲಿ ಪಕ್ಷದ ಮೇಲೆ ಉತ್ತಮ ಹಿಡಿತವನ್ನು ಸಾಧಿಸಿರುವ ಸುಷ್ಮಾ ಸ್ವರಾಜ್ ಯಾವುದೇ ಕಾರಣಕ್ಕೂ ರೆಡ್ಡಿ ಸಹೋದರರಿಗೆ ರಾಜಕೀಯವಾಗಿ ಸೋಲಾಗದಂತೆ ನೋಡಿಕೊಳ್ಳುತ್ತಾರೆಂದೆ ರೆಡ್ಡಿಗಳ ಹಿಂಬಾಲಕರು ನಂಬಿಕೊಂಡಿದ್ದರು. ಎಲ್ಲಿಯವರೆಗೆ ಅಮ್ಮನ ಕೃಪಾಕಟಾಕ್ಷವಿದೆಯೋ ಅಲ್ಲಿಯ ತನಕ ರೆಡ್ಡಿ ಸಹೋದರರಿಗೆ ರಾಜಕೀಯ ಮುಖಭಂಗವಾಗುವುದಿಲ್ಲ, ಅವರ ಕುರ್ಚಿ ಅಲುಗಾಡುವುದಿಲ್ಲ ಎಂದೇ ಬಹುತೇಕ ಬಿಜೆಪಿ ಶಾಸಕರು ಅರಿತಿದ್ದಂತಹ ಸತ್ಯ. ಈ ಕಾರಣಕ್ಕೆ ಆರೆಸ್ಸೆಸ್‌ನಿಂದ ಹಂತಹಂತವಾಗಿ ಮೇಲೇರಿ ಬಂದ ಅರವಿಂದ ಲಿಂಬಾವಳಿಯಂತಹ 'ಚಡ್ಡಿ' ಮಂತ್ರಿ ಕೂಡಾ ತನ್ನ ಸ್ಥಾನವನ್ನು ಉಳಿಸಿಕೊಳ್ಳಲು ಬಳ್ಳಾರಿ ಗಣಿದಣಿಗಳ ಮೊರೆಹೋಗಿದ್ದು,




ರೆಡ್ಡಿ ಬ್ರದರ್ಸ್ ಬಾಲ ಕಟ್

ಈ ಬಾರಿಯ ಸಂಪುಟ ಪುನರ್ರಚನೆಯ ಸಂದರ್ಭದಲ್ಲಿ ಬಳ್ಳಾರಿಯ ರೆಡ್ಡಿ ಸಹೋದರರ ಮತ್ತು ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಅನಂತಕುಮಾರ್‌ರವರ ಯಾವುದೇ ಹಿಂಬಾಲಕರಿಗೆ ಸಚಿವ ಸಂಪುಟದಲ್ಲಿ ಸ್ಥಾನ ದೊರಕಿಲ್ಲವೆಂದರೆ ಪಕ್ಷ ಮತ್ತು ಸರ್ಕಾರ ಯಡ್ಡಿಮಯವಾಗಿದೆ ಎಂಬುದು ಸ್ಪಷ್ಟವಾಗಿದೆ. ಈ ಹಿಂದೆ ದೆಹಲಿಯಲ್ಲಿ ತನಗೆ ಮುಖಭಂಗ ಮಾಡಿದ ರಾಷ್ಟ್ರೀಯ ನಾಯಕಿ ಸುಷ್ಮಾ ಸ್ವರಾಜ್ ಅವರಿಗೆ ಯಡ್ಡಿ ತಿರುಗುಬಾಣ ಹೊಡೆದಿದ್ದಾರೆಂದರೆ ಯಡ್ಡಿ ಎಷ್ಟು ಬಲಶಾಲಿಯಾಗಿರಬೇಕಲ್ಲವೇ? ಈಗ ಸಂಪುಟ ಪುನರ್ರಚನೆಯ ಪ್ರಹಸನ, ನಾಟಕ, ಬೀದಿನಾಟಕ, ದೊಂಬರಾಟಗಳೆಲ್ಲವೂ ಮುಗಿದುಹೋಗಿದೆ. ರೆಡ್ಡಿಯ ಕಪಿಮುಷ್ಟಿಯಿಂದ ಪಕ್ಷವನ್ನು ಬಚಾವು ಮಾಡಿದ್ದಾರೆ.



ಯಡ್ಡಿ ಗೆಲುವಿನ ರೂವಾರಿ ಜೇಟ್ಲಿ !

ಆದರೆ ದೆಹಲಿಯಲ್ಲಿ ನಡೆದ ರಾಜಕೀಯವೇ ಬೇರೆ, ಮುಖ್ಯಮಂತ್ರಿ ಯಡಿಯೂರಪ್ಪ ಮತ್ತು ಬಿಜೆಪಿ ರಾಜ್ಯಾಧ್ಯಕ್ಷ ಈಶ್ವರಪ್ಪ ಜಂಟಿಯಾಗಿ ಪಕ್ಷದ ಅಧ್ಯಕ್ಷ ನಿತಿನ್ ಗಡ್ಕರಿಗೆ ಎಲ್ಲಾ ವಿದ್ಯಮಾನಗಳನ್ನು ಸವಿವರವಾಗಿ ವಿವರಿಸಿದ್ದರು. ಈ ಸಂದರ್ಭದಲ್ಲಿ ಸಂಪುಟ ಪುನರ್ರಚನೆ ಮಾಡುವುದರಿಂದ ಆಗುವ ಲಾಭವನ್ನು ವಿವರಿಸಿದ್ದು ಮಾತ್ರವಲ್ಲ, ಒಂದು ವೇಳೆ ಅದಕ್ಷ ಸಚಿವರನ್ನು ಕೈಬಿಡದಿದ್ದರೆ ಮುಂದೇನಾಗಬಹುದು ಎಂಬಿತ್ಯಾದಿ ವಿಷಯಗಳ ಬಗ್ಗೆ ಮನಮುಟ್ಟುವಂತೆ ವಿವರಣೆ ನೀಡಿದ್ದರು. ಹಾಗಂತ ಯಡಿಯೂರಪ್ಪ ಮತ್ತು ಈಶ್ವರಪ್ಪ ಎಂಬ ಶಿವಮೊಗ್ಗದ ಮುದಿಹೋರಿಗಳ ಮಾತನ್ನು ಗಡ್ಕರಿ ಸಂಪೂರ್ಣವಾಗಿ ನಂಬಿದ್ದರೆಂದು ನೀವು ಊಹಿಸಿದ್ದರೆ ಅದು ಸುಳ್ಳು. ವಾಸ್ತವವಾಗಿ ಶಿವಮೊಗ್ಗದ ಈ ಜೋಡಿಯ ಬಾಯಲ್ಲಿ ಆ ಮಾತುಗಳನ್ನು ಹೇಳಿಸಿದವರು ಕೇಂದ್ರ ಮತ್ತೊಬ್ಬ ನಾಯಕರಾದ ಅರುಣ್ ಜೇಟ್ಲಿ.



ಅಮ್ಮನ ಕಣ್ಣೀರು?

ಯಾವಾಗ ಕಳೆದ ಬಾರಿ ಯಡಿಯೂರಪ್ಪನವರ ಪದತ್ಯಾಗಕ್ಕಾಗಿ ರೆಡ್ಡಿ ಸಹೋದರರು ದೆಹಲಿ ನಾಯಕರಿಗೆ ದುಂಬಾಲು ಬಿದ್ದುದು ಮಾತ್ರವಲ್ಲ; ಹಠಮಾರಿತನವನ್ನೂ ಪ್ರದರ್ಶಿಸಿದರೋ ಆಗಲೇ ಈ ರೆಡ್ಡಿ ಸಹೋದರರು ಪಕ್ಷಕ್ಕಿಂತ ಮೀರಿ ದೊಡ್ಡದಾಗಿ ಬೆಳೆಯುತ್ತಿದ್ದಾರೆ ಎಂಬ ತೀರ್ಮಾನಕ್ಕೆ ದೆಹಲಿ ನಾಯಕರು ಬಂದರು. ಕಳೆದ ಬಾರಿ ಸುಷ್ಮಾಸ್ವರಾಜ್ ಹಠ ಹಿಡಿಯದಿದ್ದರೆ ರೆಡ್ಡಿ ಸಹೋದರರು ಬೀದಿಗೆ ಬರುವುದು ಬಹುತೇಕ ಗ್ಯಾರಂಟಿಯಾಗಿತ್ತು. ಯಾಕೆಂದರೆ ಗಣಿಯ ಹಣಬಲದಿಂದಲೇ ಪಕ್ಷವನ್ನು ಹಿಡಿತಕ್ಕೆ ತೆಗೆದುಕೊಳ್ಳಲು ಹೊರಟ ರೆಡ್ಡಿ ಸಹೋದರ[...] ಜಂಘಾಬಲವನ್ನು ಉಡುಗಿಸಲೇಬೇಕು ಎಂದು ನಾಯಕ[...] ತೀರ್ಮಾನ ಕೈಗೊಂಡಿದ್ದರು. ಅಷ್ಟೇ ಅಲ್ಲ, ಸುಷ್ಮಾ ಸ್ವರಾ[...] ಅವರನ್ನು ಮುಂದಿನ ಪ್ರಧಾನಿಯನ್ನಾಗಿ ಮಾಡುವು[...] ನಮ್ಮ ಗುರಿ, ಅದಕ್ಕಾಗಿ ಐದು ಸಾವಿರ ಕೋಟಿ ಖ[...] ಮಾಡಲು ತಯಾರು ಎಂಬ ರೆಡ್ಡಿ ಸಹೋದರರ ಹೇಳಿಕೆಗ[...] ಕೂಡಾ ದೆಹಲಿ ಬಿಜೆಪಿ ನಾಯಕರನ್ನು ಕಂಗೆಡಿಸಿದ್ದವು.

ಇದೇ ಸಂದರ್ಭದಲ್ಲಿ ಕಾಂಗ್ರೆಸ್ಸಿಗರ ಬಳ್ಳಾರಿ ಪಾದಯಾ[...] ಪಕ್ಷದ ವಿರುದ್ಧವಲ್ಲ, ಬಳ್ಳಾರಿಯ ರೆಡ್ಡಿ ಸಹೋದರ[...] ವಿರುದ್ಧ ಎಂಬುದನ್ನು ಯಡ್ಡಿ ದೆಹಲಿ ನಾಯಕರಿಗೆ ಮ[...]ವರಿಕೆ ಮಾಡಿಕೊಟ್ಟರು. ಹಾಗೆಯೇ ಕಳೆದ ಅಧಿವೇಶನದ[...] ಕಾಂಗ್ರೆಸ್ ನಾಯಕರು ಅಹೋರಾತ್ರಿ ವಿಧಾನಸಭೆಯ[...] ಮೊಗಸಾಲೆಯಲ್ಲಿ ಮಲಗಿದ್ದು ಕೂಡಾ ರೆಡ್ಡಿ ಸಹೋದರ[...] ದುರಾಡಳಿತದ ಆರ್ಭಟದ ವಿರುದ್ಧ ಎಂಬುದನ್ನು ಯಡಿಯೂ[...]ರಪ್ಪ ದೆಹಲಿ ವರಿಷ್ಠರಿಗೆ ಸಮಜಾಯಿಸಿದ್ದರು. ಹೀಗಾ[...] ರಾಜ್ಯದಲ್ಲಿ ವಿರೋಧ ಪಕ್ಷಗಳು ಬಳ್ಳಾರಿ ಗಣಿದಣಿಗ[...] ವಿರುದ್ಧ ಹೋರಾಟ ಮಾಡುತ್ತಾ ಚೇತರಿಸಿಕೊಳ್ಳುತ್ತಿದೆ. [...] ಕಾರಣಕ್ಕಾಗಿ ರೆಡ್ಡಿ ಸಹೋದರರಿಗೆ ನಾವು ಮಣೆಹಾಕಬಾರದು[...] ಹಾಗೇನಾದರೂ ಅವರಿಗೆ ಅವಕಾಶ ಮಾಡಿಕೊಟ್ಟರೆ ಪ[...] ಇನ್ನೂ ದೈನೇಸಿ ಪರಿಸ್ಥಿತಿಗೆ ತಲುಪುತ್ತದೆ ಮತ್ತು ವಿರೋ[...] ಪಕ್ಷಗಳು ಚೇತರಿಸಲು ನಾವೇ ಅವಕಾಶ ಮಾಡಿಕೊಟ್ಟಂ[...]ಗುತ್ತದೆ ಎಂಬ ಮಾತುಗಳೆಲ್ಲಾ ಆರೆಸ್ಸೆಸ್ ನಾಯಕರಿಗ[...] ಪಕ್ಷದ ವರಿಷ್ಠರಿಗೂ ಸರಿಯೆನಿಸಿದ್ದರಿಂದಲೇ ರೆಡ್ಡಿಗಳ[...] ಹಿಂಬಡ್ತಿಯಾಯಿತು.

ಆಪರೇಷನ್ ರೆಡ್ಡಿ ಬ್ರದರ್ಸ್!

ಹೀಗಾಗಿ ದೆಹಲಿ ನಾಯಕರು ಮತ್ತು ಮುಖ್ಯಮಂ[...] ಯಡಿಯೂರಪ್ಪನವರು ಜಂಟಿಯಾಗಿ ಈ ಬಾರಿ 'ಆ[...]ರೇಷನ್ ರೆಡ್ಡಿ ಬ್ರದರ್ಸ್' ಕಾರ್ಯಕ್ರಮವನ್ನು ಹವಿ[...]ಕೊಂಡಿದ್ದರು. ಇದರ ಫಲವಾಗಿಯೇ ರೆಡ್ಡಿಯ ಹಿಂಬಾಲ[...] ಮಂತ್ರಿಗಳಾದ ಗೂಳಿಹಟ್ಟಿ ಮತ್ತು ಶಿವನಗೌಡ ನಾಯ[...] ಹಾಗೂ ಕೊನೇಕ್ಷಣದಲ್ಲಿ ಯಡ್ಡಿ ಪಾದಕ್ಕೆರಗಿದ ಅರವಿಂ[...] ಲಿಂಬಾವಳಿ... ಈ ಮೂವರು ರಾಜೀನಾಮೆ ನೀಡದಿದ್ದರ[...] ಅವರನ್ನು ವಜಾ ಮಾಡುವ ಶಕ್ತಿಯನ್ನು ತೋರಿಸ[...] ಯಡ್ಡಿಗೆ ಸಾಧ್ಯವಾದುದು.

ಡಿಪಾಸಿಟ್ ಕಳೆದುಕೊಂಡ ಅನಂತು!

ಹಾಗೇ ನೋಡಿದರೆ ಈ ಎಲ್ಲಾ ರಾಜಕೀಯ ದೊಂಬರಾಟ ಮತ್ತು ಗೊಂದಲಗಳಿಗೆ ಮುನ್ನುಡಿ ಬರೆದದ್ದೇ ಮುಖ್ಯಮಂತ್ರಿ ಯಡ್ಡಿಯ[...] ಸಾಂಪ್ರದಾಯಿಕ ವೈರಿ ಅನಂತಕುಮಾರ್! 'ಡಿಸೆಂಬರ್‌ತನಕ[...] ರಾಜ್ಯಸಚಿವ ಸಂಪುಟ ವಿಸ್ತರಣೆ ಮಾಡಲು ಕಾಲ ಪಕ್ವವಾಗಿಲ್ಲ, ಪಂಚಾಯತ್ ಚುನಾವಣೆ ಮುಗಿದ[...] ನಂತರ ವಿಸ್ತರಣೆ ಮಾಡುವುದು ಒಳ್ಳೆಯದು' ಎಂದು ಮೊದಲಿಗೆ ವಿಸ್ತರಣೆಯ ಬಗ್ಗೆ ಅಪಸ್ವರದ ಮಾತುಗಳನ್ನಾಡಿದ್ದೇ ಅನಂತ್‌ಕುಮಾರ್. ಆದರೆ ರೆಡ್ಡಿ ಸಹೋದರರನ್ನೇ ಬಗ್ಗುಬಡಿಯಲು ಹೊರಟ ಯಡಿಯೂರಪ್ಪನವರಿಗೆ ಅನಂತಕುಮಾರ್ ಪೀಕಲಾಟ[...] ತರ್ಲೆಗಳು ಯಾವುದೂ ಸಮಸ್ಯೆಯಾಗಲೇ ಇಲ್ಲ, ನೇರವಾಗಿ ದೆಹಲಿಗೆ ಹಾರಿಹೋಗಿ ದೆಹಲಿ ದೊರೆಗಳಿಗೆ ಸಂಪುಟ ಪುನರ್ರಚನೆಯ ಅವಶ್ಯಕತೆಯ[...] ಮನದಟ್ಟು ಮಾಡಿದರು. ಹಾಗೇ ದೆಹಲಿಗೆ ಹಾರಿಹೋಗುವ ಮೊದಲು ಈಶ್ವರಪ್ಪ ಮತ್ತು ಯಡಿಯೂರಪ್ಪ ದೀರ್ಘ ಸಮಾಲೋಚನೆ ನಡೆಸಿ ನಾವಿಬ್ಬರು ಒಂದುಗೂಡಿದರೆ ಈ ಬ್ರಾಹ್ಮಣನನ್ನು ಸುಲಭವಾಗಿ ಮಟ್ಟಹಾಕಬಹುದು ಎಂಬ ತೀರ್ಮಾನ[...] ಬಂದುಬಿಟ್ಟಿದ್ದರು.

ಈ ಮನುಷ್ಯ ಕೇಂದ್ರದಲ್ಲಿ ಸಚಿವರಾಗಿದ್ದಾಗ ನಾನ[...] ಎಂದಾದರೂ ಆತನ ಕೆಲಸದಲ್ಲಿ ಮೂಗು ತೂರಿಸಿದ್ದೇನೆಯೇ? ಈಗ ನನ್ನ ಕೆಲಸದಲ್ಲಿ ಈತ ಮೂಗು ತೂರಿಸಲು ನಾನು ಬಿಡುತ್ತೇನೆಯೇ? ನೋ[...] ನಾನು ದೆಹಲಿಗೆ ಹೋಗಿ ಆತನನ್ನು ಹೇಗೆ ಮಟ್ಟಹಾಕುತ್ತೇನೆ ಎಂದು ಯಡಿಯೂರಪ್ಪ ದೆಹಲಿಗೆ ಹೋಗುವ ಮುನ್ನ ತನ್ನ ಪರಮಾಪ್ತರಲ್ಲಿ ಧೈರ್ಯವಾ[...] ಹೇಳಿಕೊಂಡಿದ್ದರಂತೆ. ಹೀಗಾಗಿ ಅನಂತ್ ಮಾತನ್ನು ತಿರಸ್ಕರಿಸಿದ್ದು ಮಾತ್ರವಲ್ಲ ಅವರ ಹಿಂಬಾಲಕರಿಗೆ ಮಂತ್ರಿ ಸ್ಥಾನವೂ ದೊರಕದಿರುವುದು ಅನಂತು ಪಾ[...] ಡಿಪಾಸಿಟ್ ಕಳೆದುಕೊಂಡಂತಾಗಿದೆ.

ಯಡ್ಡಿ: ಪ್ರಶ್ನಾತೀತ ನಾಯಕ?


ಹೀಗಾಗಿ ಇದೇ ಮೊದಲಬಾರಿಗೆ ಹಣಬಲದಿ[...] ಬ್ಲಾಕ್‌ಮೇಲ್ ಮಾಡುತ್ತಾ ತನ್ನ ಸರ್ಕಾರವ[...] ಅಪಾಯದಂಚಿಗೆ ದೂಡುತ್ತಿದ್ದ ಬಳ್ಳಾರಿ ರೆಡ್ಡಿ ಸಹೋದರ[...] ಮತ್ತು ತನ್ನ ರಾಜಕೀಯ ತಂತ್ರಗಾರಿಕೆ ಮತ್ತು ದೆ[...]

ರೆಡ್ಡಿ ಕ್ಯಾಂಪ್‌ನಲ್ಲೀಗ ಶಾಸಕರಿಲ್ಲ!

ಹಿಂದೊಮ್ಮೆ ಸುಮಾರು 60 ಜನ ಶಾಸಕರನ್ನು ತನ್ನ ಕಪಿಮುಷ್ಟಿಯಲ್ಲಿಟ್ಟುಕೊಂಡು ಮುಖ್ಯಮಂತ್ರಿ ಯಡ್ಡಿಯನ್ನು ತನ್ನಮೂಗಿನ ನೇರಕ್ಕೆ ಅಲ್ಲಾಡಿಸುತ್ತಿದ್ದ ಬಳ್ಳಾರಿಯ ರೆಡ್ಡಿ ಸಹೋದರರು ಈಗ ಹಿಂಬಾಲಕರಿಲ್ಲದೆ ಸೊರಗಿಹೋಗಿದ್ದಾರೆ. ಸದ್ಯಕ್ಕೆ ಬಳ್ಳಾರಿಯ ಶಾಸಕರನ್ನು ಹೊರತುಪಡಿಸಿ ಬೇರೆ ಯಾವ ಅತೃಪ್ತ ಶಾಸಕರು ತಮ್ಮನ್ನು ರೆಡ್ಡಿ ಬಣದೊಂದಿಗೆ ಗುರುತಿಸಿಕೊಂಡಿಲ್ಲ, ಹೀಗಾಗಿ ಆರಂಭದ ದಿನಗಳಲ್ಲಿ ಭಿನ್ನಮತ ನಾಯಕ ಮತ್ತು ಯಡ್ಡಿಗೆ ಪರ್ಯಾಯ ನಾಯಕ ಎಂಬ ಬಿರುದು ಗಳಿಸಿಕೊಂಡಿದ್ದ ಜನಾರ್ದನ ರೆಡ್ಡಿ ಈಗ ಒಂದು ಜಿಲ್ಲೆಯ ನಾಯಕನಾಗಿ ಮಾತ್ರ ಉಳಿದುಕೊಂಡಿದ್ದಾರೆ.

ಉದಾಹರಣೆಗೆ ಯಡ್ಡಿ ಪದತ್ಯಾಗದ ಚಳವಳಿಯ ಸಂದರ್ಭದಲ್ಲಿ ರೆಡ್ಡಿ ಬಣದ ಜೊತೆಗೆ ಗುರುತಿಸಿಕೊಂಡಿದ್ದ ಜಗದೀಶ್ ಶೆಟ್ಟರ್ ಈಗ ಮಂತ್ರಿ ಸ್ಥಾನ ಪಡೆದ ನಂತರ ಭಿನ್ನಮತೀಯ ಚಟುವಟಿಕೆಗಳಿಗೂ ರೆಡ್ಡಿ ಬಳಗಕ್ಕೂ ದೊಡ್ಡ ಸಲಾಮು ಹೊಡೆದಿದ್ದಾರೆ. ಈ ಬಾರಿಯ ಪುನರ್ರಚನೆಯಲ್ಲಿ ತನ್ನ ರಾಜಕೀಯ ವೈರಿ ಸಿಸಿ ಪಾಟೀಲರಿಗೆ ಸಂಪುಟಸ್ಥಾನ ನೀಡಿದ್ದರ ಬಗ್ಗೆ ಸ್ವಲ್ಪ ಅಸಮಾಧಾನ ಹೊರತುಪಡಿಸಿದರೆ ಉಳಿದಂತೆ ಇದರ ಬಗ್ಗೆ ಜಗದೀಶ್ ಶೆಟ್ಟರ್ ತಲೆಕೆಡಿಸಿಕೊಂಡದ್ದೇ ಇಲ್ಲ.

ಈ ಹಿಂದೆ ಎಲ್ಲಾ ಭಿನ್ನಮತೀಯ ಚಟುವಟಿಕೆ ಸಂದರ್ಭದಲ್ಲಿ ಅಗ್ರಗಣ್ಯ ನಾಯಕನಂತೆ ಓಡಾಡುತ್ತಿದ್ದ ಹೊನ್ನಾಳಿಯ ಶಾಸಕ ರೇಣುಕಾಚಾರ್ಯ ಸುಮಾರು 20 ಜನ ಶಾಸಕರನ್ನು ರೆಡ್ಡಿ ಬಣದಿಂದ ಹೊರತಂದು ತನ್ನ ಹಿಡಿತದಲ್ಲಿಟ್ಟುಕೊಂಡಿದ್ದಾರೆ. ಅಲ್ಲಿಗೆ ಈಗ ಈ ಇಪ್ಪತ್ತು ಜನ ಅತೃಪ್ತ ಶಾಸಕರಿಗೆ ರೇಣುಕಾಚಾರ್ಯನೇ ದಂಡನಾಯಕನೇ ವಿನಃ ಬಳ್ಳಾರಿಯ ಗಣಿದಣಿಗಳಲ್ಲ, ಬೇಳೂರು ಗೋಪಾಲಕೃಷ್ಣ ನೇತೃತ್ವದಲ್ಲಿ ಅಸಮಾಧಾನಗೊಂಡಿದ್ದ ಈ ಇಪ್ಪತ್ತು ಜನ ಶಾಸಕರನ್ನು ರೇಣುಕಾಚಾರ್ಯ ಯಡ್ಡಿ ಮನೆಗೆ ಕರೆತಂದು ಅವರನ್ನೆಲ್ಲಾ ಸಂಪೂರ್ಣ ಸಂತೋಷಪಡಿಸಿದ್ದಾರೆ. ಈ ಇಪ್ಪತ್ತು ಜನ ಶಾಸಕರನ್ನು ರೆಡ್ಡಿ ಗ್ಯಾಂಗ್‌ನಿಂದ ಹೈಜಾಕ್ ಮಾಡಿರುವ ರೇಣುಕಾಚಾರ್ಯ ಕೂಡಾ ಭಿನ್ನಮತೀಯ ಚಟುವಟಿಕೆಗೆ ಬೆಂಬಲ ನೀಡುತ್ತಿಲ್ಲದ ಕಾರಣ ಬಳ್ಳಾರಿಯ ಗಣಿದಣಿಗಳು ಹಿಂಬಾಲಕರು ಮತ್ತು ಅನುಯಾಯಿಗಳಿಲ್ಲದೆ ನಿಶ್ಯಕ್ತರಾಗಿದ್ದಾರೆ.


ಅರುಣ್‌ಜೇಟ್ಲಿ

ರ ನಿಕಟ ಸಂಬಂಧದ ಬಲದಿಂದಲೇ ಆಗಾಗ ಮಾಡುತ್ತಿದ್ದ ಅನಂತಕುಮಾರ್ ಇವರಿಬ್ಬರನ್ನೂ ರಿಯ ಸಂಪುಟ ಪುನರ್ರಚನೆಯ ಸಂದರ್ಭದಲ್ಲಿ ರವಾಗಿ ಮಟ್ಟಹಾಕುವ ಮುಖಾಂತರ ಯಡಿ ಪ್ಪ ಸದ್ಯದ ರಾಜಕೀಯ ಪರಿಸ್ಥಿತಿಯಲ್ಲಿ ಪ್ರಶ್ನಾತೀತ ಟೀಕಾತೀತ ನಾಯಕರಾಗಿ ಬಿಜೆಪಿ ಪಕ್ಷದಲ್ಲಿ ಮುತ್ತಿದ್ದಾರೆ.

...-ಸೋಮಣ್ಣ ಇನ್, ಯಡ್ಡಿ ವಿನ್!

ಲ್ಲೊಂದು ಮುಖ್ಯವಾದ ಮತ್ತೊಂದು ವೆಂದರೆ ಯಡಿಯೂರಪ್ಪ ಹೇಗೆ ನಿರ್ದಾಕ್ಷಿಣ್ಯವಾಗಿ ರೋಧಿ ಬಣದಲ್ಲಿರುವ ಮಂತ್ರಿಗಳನ್ನು ಸಂಪುಟದಿಂದ ರೋ ಅಷ್ಟೇ ಧೈರ್ಯವಾಗಿ ತಮ್ಮ ಪರಮಾಪ್ತರನ್ನು ಮಾಡುವ ಸಾಹಸವನ್ನೂ ತೋರಿಸಿದ್ದಾರೆ. ಕಳೆದ ರೆಡ್ಡಿ ಸಹೋದರರ ಒತ್ತಡಕ್ಕೆ ಮಣಿದು ಶೋಭಾ ಜೆಯನ್ನು ಕೈಬಿಟ್ಟ ಯಡ್ಡಿ ಈ ಬಾರಿ ಆಕೆಯನ್ನು ಮಂತ್ರಿ ಮಾಡುವ ಮುಖಾಂತರ ತನ್ನ ಪ್ರಭುತ್ವವನ್ನು ಸಿದ್ದಾರೆ. ಅದೇರೀತಿ ಸೋಮಣ್ಣನವರನ್ನು ಮಂತ್ರಿ ಬೇಕು ಎಂಬುದು ಯಡ್ಡಿಯ ಒಂದಂಶದ ಕ್ರಮವಾಗಿತ್ತು, ಅದಕ್ಕೆ ಕಾರಣ ಅವರು ಜಾತಿಬಾಂಧವ ದೋ ಅಥವಾ ಉತ್ತಮ ಸಂಘಟಕ ಎಂಬುದೋ ಲಿಂಗಾಯತ ಸ್ವಾಮೀಜಿಗಳ ಆದೇಶವೋ ಮು ಗೊತ್ತಿಲ್ಲ. ಆದರೂ ಸೋಮಣ್ಣನವರನ್ನು ಮಂತ್ರಿ ವುದಕ್ಕೆ ಸದಾ ಉತ್ಸುಕತೆಯನ್ನು ಸಿಎಂ ಸಾಹೇಬರು ಸುತ್ತಿದ್ದುದು ನಿಜ. ನಿನ್ನೆ ಮೊನ್ನೆ ಪಕ್ಷಕ್ಕೆ ಬಂದ ಮಾಡಲು ಪಕ್ಷದಲ್ಲಿ ಅನೇಕರ ವಿರೋಧವಿದ್ದರೂ ನ್ನಾ ಲೆಕ್ಕಿಸದೆ ಈಗ ಮುಖ್ಯಮಂತ್ರಿ ಯಡ್ಡಿ ತಾನು ಸುವ ಹಠವನ್ನೇ ಸಾಧಿಸಿ ತೋರಿಸಿದ್ದಾರೆ. ಸೋಮಣ್ಣ ಕೃಪೆಯಿಂದ ಮತ್ತೆ ಮಂತ್ರಿಯಾಗಿದ್ದಾರೆ.


ಡು ಸಚಿವ ಸ್ಥಾನಗಳನ್ನು ತನ್ನ ಹಿಂಬಾಲಕರಿಗೆ ಸಂದರ್ಭದಲ್ಲಿ ಪಕ್ಷದ ರಾಜ್ಯಾಧ್ಯಕ್ಷ ಈಶ್ವರಪ್ಪನವರಿಗೆ ಸ್ಥಾನವನ್ನು ಬಿಟ್ಟುಕೊಡುವುದು ಯಡ್ಡಿಗೆ ಅಷ್ಟೇನೂ ಗಲಿಲ್ಲ, ಆ ಕಾರಣಕ್ಕೆ ಈಶ್ವರಪ್ಪ ಅಧ್ಯಕ್ಷ ಸ್ಥಾನ ನಂತರ ಖಾಲಿಯಾದ ಕುರುಬ ಮಂತ್ರಿ ಸ್ಥಾನಕ್ಕೆ ಹಿಂಬಾಲಕ ವಿಧಾನಪರಿಷತ್ ಸದಸ್ಯರಾದ ವಿಜಯ್ ನನ್ನು ಸಂಪುಟಕ್ಕೆ ಸೇರಿಸಿಕೊಂಡರು. ಆನೇಕಲ್ ಯಣಸ್ವಾಮಿ ನಾಲ್ಕು ಬಾರಿ ಆಯ್ಕೆಯಾದ ಗಿರುವುದರಿಂದ ಸಹಜವಾಗಿ ಮಂತ್ರಿಯಾದರು. ಮಂತ್ರಿ ಸ್ಥಾನವನ್ನು ನೀಡುವುದನ್ನು ವಿರೋಧಿಸು ಯಾರಿಗೂ ಸಾಧ್ಯವಿರಲಿಲ್ಲ, ಆ ನಂತರ ಇನ್ನುಳಿದ ಸ್ಥಾನಕ್ಕೆ ಮತ್ತೆ ಯಡ್ಡಿ ತನ್ನ ಗರಡಿಯಲ್ಲಿ ಪಳಗಿದ ಾದ ಮೈಸೂರಿನ ರಾಮದಾಸ್ ಮತ್ತು ಸಿಸಿ ರನ್ನು ಆಯ್ಕೆ ಮಾಡುವ ಮುಖಾಂತರ ಯಡ್ಡಿ ರ್ಣವಾಗಿ ಪಕ್ಷವನ್ನು ತನ್ನ ಕಪಿಮುಷ್ಟಿಯಲ್ಲಿಟ್ಟು ಂತಾಯಿತು.

ಾದರೆ ಈ ಬಾರಿಯ ಸಂಪುಟ ಪುನರ್ರಚನೆಯ ದಲ್ಲಿ ಬಳ್ಳಾರಿಯ ರೆಡ್ಡಿ ಸಹೋದರರ ಮತ್ತು ಮು ಪ್ರಧಾನ ಕಾರ್ಯದರ್ಶಿ ಅನಂತಕುಮಾರ್‌ರವರ ದೇ ಹಿಂಬಾಲಕರಿಗೆ ಸಚಿವ ಸಂಪುಟದಲ್ಲಿ ಸ್ಥಾನ ಲ್ಲವೆಂದರೆ ಪಕ್ಷ ಮತ್ತು ಸರ್ಕಾರ ಯಡ್ಡಿಮಯವಾಗಿದೆ ದು ಸ್ಪಷ್ಟವಾಗಿದೆ. ಈ ಹಿಂದೆ ದೆಹಲಿಯಲ್ಲಿ ತನಗೆ ಭಂಗ ಮಾಡಿದ ರಾಷ್ಟ್ರೀಯ ನಾಯಕಿ ಸುಷ್ಮಾ ಅವರಿಗೆ ಯಡ್ಡಿ ತಿರುಗುಬಾಣ ಹೊಡೆದಿದ್ದಾರೆಂದರೆ ಷ್ಟು ಬಲಶಾಲಿಯಾಗಿರಬೇಕಲ್ಲವೇ? ಈಗ ಸಂಪುಟ ಚನೆಯ ಪ್ರಹಸನ, ನಾಟಕ, ಬೀದಿನಾಟಕ, ರಾಟಗಳೆಲ್ಲವೂ ಮುಗಿದುಹೋಗಿದೆ. ರೆಡ್ಡಿಯ ಷ್ಟಿಯಿಂದ ಪಕ್ಷವನ್ನು ಬಚಾವು ಮಾಡಿದ್ದಾರೆ. ಇನ್ಮುಂದೆಯಾದರೂ ಇವರಿಂದ ಈ ರಾಜ್ಯದ ದ್ಧಿಯನ್ನು ನಾವು ನಿರೀಕ್ಷಿಸಬಹುದೋ ಏನೋ? ಈ ಪುನರ್ರಚನೆಯಲ್ಲಿ ಆದ ಮುಖಭಂಗವನ್ನೇ ಗಿ ಸ್ವೀಕರಿಸಿ ರೆಡ್ಡಿ ಬ್ರದರ್ಸ್ ಮತ್ತೆ ಯಡ್ಡಿ ವಿರುದ್ಧ ಬೀಳುತ್ತಾರೋ ನೋಡಬೇಕು.

● ಶೆಣೈ

shenoylankesh@gmail.com

ಆನೇಕಲ್: ದಲಿತರ ಹಣ ನುಂಗಿದೋರಿಗೆ ಶಾಸಕನೇ ಲೀಡರ್!


ನಾರಾಯಣಸ್ವಾಮಿ

ಆನೇಕಲ್ ತಾಲ್ಲೂಕಿನ ದಲಿತರ ಬದುಕು ತಲ್ಲಣಿಸಿದೆ. ಸಾಮಾಜಿಕ ಕ್ರೌರ್ಯ, ಬಡತನ ಹಾಗೂ ಅಭದ್ರತೆಗಳ ನಡುವೆ ನಿಂತ ನೆಲ, ತಲೆಮೇಲಿನ ಸೂರು ಇವ್ಯಾವುದಕ್ಕೂ ಗ್ಯಾರಂಟಿಯಿಲ್ಲದೆ ದಲಿತರು ಕಂಗಾಲಾಗಿದ್ದಾರೆ. ದುರಂತವೆಂದರೆ ಪುರಸಭೆಯ ಘಟಿಂಗರು ಹತ್ತು ವರ್ಷಗಳಿಂದ ನಿರಂತರವಾಗಿ ದಲಿತರ ಮೀಸಲು ಹಣವನ್ನು ನುಂಗಿ ನೊಣೆದಿದ್ದಾರೆ. ಇಂಥಾ ದಗಲ್ಬಾಜಿಗಳಿಗೆ ಖುದ್ದು ಎಮ್ಮೆಲ್ಲೆ ಎ ನಾರಾಯಣ ಸ್ವಾಮಿಯೇ ನಾಯಕ ನಾಗಿರುವುದು ಮತ್ತೊಂದು ದುರಂತ.

ಯಾವುದೇ ಸರ್ಕಾರಿ ಮತ್ತು ಸ್ಥಳೀಯ ಸರ್ಕಾರಿ ಸಂಸ್ಥೆಗಳು ವಾರ್ಷಿಕ ಆಯವ್ಯಯದಲ್ಲಿ ದಲಿತರಿಗಾಗಿ ಇಂತಿಷ್ಟು ಹಣ ಮೀಸಲಿಡಬೇಕು ಅಂತೊಂದು ನಿಯಮ ವಿದೆ. ಇದನ್ನು ಆನೇಕಲ್ ಪುರಸಭೆಯೂ ಅಳವಡಿಸಿಕೊಂಡಿದ್ದರೆ ಇಲ್ಲಿನ ದಲಿತರ ಬದುಕು ಈ ಪರಿ ಹದಗೆಡುವ ಸಾಧ್ಯತೆಗಳಿರಲಿಲ್ಲ, ಹಾಗಾದರೆ ಪುರಸಭೆಯ ಮಂದಿ ದಲಿತರಿಗೆಂದು ಮೀಸಲಿಟ್ಟ ಹಣವನ್ನು ಏನು ಮಾಡಿದರು. ಅಂತೊಂದು ಪ್ರಶ್ನೆ ಎದುರಿಗಿಟ್ಟುಕೊಂಡು ತಲಾಶೆಗಿಳಿದರೆ ಮಹಾಮೋಸವೊಂದು ಬಿಚ್ಚಿಕೊಳ್ಳತೊಡಗುತ್ತದೆ.

ಹೊಸ ಮಂತ್ರಿ ನಾರಾಯಣಸ್ವಾಮಿ ಜಾತಕ

2005ರಲ್ಲಿ ಮೂರು ವರ್ಷದ ಆಯವ್ಯಯ ವನ್ನು ಒಂದೇ ಸಾರಿ ಪ್ರಕಟಿಸಿದ ಅಧ್ವಾನ ಈ ನುಂಗಾಟದ ಮೂಲ ಮತ್ತು ವಿಷಾದದ ಸಂಗತಿಯೆಂದರೆ, 2001ರಿಂದ 10ರವರೆಗಿನ ಆಯವ್ಯಯದಲ್ಲಿ ದಲಿತ ಮೀಸಲು ಹಣದ ಖರ್ಚಿನ ವಿವರವಾಗಲಿ, ಬಾಕಿಯಿರುವ ಮೊತ್ತದ ವಿವರವಾಗಲಿ ಇಲ್ಲ, ಜೊತೆಗೆ ಈ ಬಗ್ಗೆಗಿನ ದಾಖಲಾತಿಗಳೇ ಮಾಯವಾಗಿ ಬಿಟ್ಟಿವೆ! ಇನ್ನು ಫಲಾನುಭವಿಗಳ ಲಿಸ್ಟು ಎಲ್ಲಿಂದ ಬರಬೇಕು?

ಈ ಬಗ್ಗೆ ತಲೆಕೆಡಿಸಿಕೊಂಡ ಕೆಲ ಪ್ರಜ್ಞಾವಂತರು ಮಾಹಿತಿ ಹಕ್ಕು ಕಾಯ್ದೆಯಡಿ ತನಿಖೆಗಿಳಿದಾಗ ಕಳೆದ ಹತ್ತು ವರ್ಷಗಳಲ್ಲಿ 1,82,08,128 ರೂ.ಗಳನ್ನು ದಲಿತ ಮೀಸಲಿನಡಿ ಇಟ್ಟಿರುವುದು ಹಾಗೂ 55,22,086 ರೂ. ಖರ್ಚು ಮಾಡಿರುವುದು ಬೆಳಕಿಗೆ ಬಂದಿದೆ. ಆದರೆ ಉಳಿದ 1,21,22,671 ರೂ. ಏನಾಯಿತೆಂಬುದರ ಬಗ್ಗೆ ಪುರಸಭೆಯ ಘಟಿಂಗ ಪಡೆಯ ಬಳಿ ಉತ್ತರವಿಲ್ಲ.

ಉಳಿದ ಹಣ ಹಾಳುಬಿದ್ದೋಗಲಿ, ಕೋಟಿಗಳ ಮೊತ್ತದಲ್ಲಿ ಖರ್ಚಿನ ಲೆಕ್ಕ ತೋರಿಸಿದ್ದಾರಲ್ಲಾ? ಅದು ಯಾವುದಕ್ಕೆ ಖರ್ಚಾಗಿದೆ, ದಲಿತರಿಗೇನಾದರೂ ಉಪಯೋಗವಾಗಿದೆಯಾ ಅಂತ ನೋಡಹೋದರೆ ಪುರಸಭೆಯ ಪ್ರಭೃತಿಗಳ ದಲಿತ ದ್ರೋಹ ಅನಾವರಣಗೊಳ್ಳುತ್ತದೆ. ಯಾಕೆಂದರೆ ಈ ಹಣ ಯಾವ ರೀತಿಯಲ್ಲೂ ದಲಿತರಿಗೆ ಉಪಯೋಗವಾಗಿಲ್ಲ. ಬದಲಾಗಿ ಈ ಹಣದಲ್ಲೇ ಚರಂಡಿ ಮೋರಿ ಅಂತೆಲ್ಲ ಮಾಡಲಾಗಿದೆ. ಅದೂ ಸಹ ದಲಿತ ಕೇರಿಗಳಲ್ಲಿಲ್ಲ, ಬದಲಾಗಿ ಮೇಲ್ವರ್ಗದ ಮಂದಿ ಯಿರುವ ಪ್ರದೇಶಗಳದ್ದು!

ಹತ್ತು ವರ್ಷಗಳಿಂದ ನಡೆಯುತ್ತಿರುವ ಈ ಹಕೀಕತ್ತುಗಳ ಹಿಂದೆ ದೊಡ್ಡದೊಂದು ದುಷ್ಟಪಡೆಯೇ ಇದೆ. ಹಿಂದಿನ ಅಧ್ಯಕ್ಷರುಗಳಾದ ನಾಗರಾಜ್, ಸುಜಾತಾ, ಉದಯ ಕುಮಾರ್ ಅದರಲ್ಲಿ ಪ್ರಮುಖರು. ಈ ಉದಯ್ ಕುಮಾರ್ ಎಮ್ಮೆಲ್ಲೆ ನಾರಾಯಣ ಸ್ವಾಮಿಯ ಸಹೋದರನೆಂಬುದು ಪ್ರಮುಖ ವಿಚಾರ. ಈಗಿನ ಅಧ್ಯಕ್ಷೆ ಜಯಲಕ್ಷ್ಮಿ ಮುನಿರಾಜು ಎಂಬಾಕೆ ದಲಿತ ದ್ರೋಹದ ಪರಂಪರೆಯನ್ನು ಜತನದಿಂದ ಮುಂದುವರೆಸುತ್ತಿದ್ದಾಳೆ. ಈ ಘನಕಾರ್ಯಕ್ಕೆ ಸೆಕ್ರೆಟರಿ ಕಲ್ಲೇಶಯ್ಯ ಎಂಬಾತ ಪಕ್ಕಾ ಸಾಥ್ ನೀಡುತ್ತಿದ್ದಾನೆ.

ತೀರಾ ಅಮಾಯಕನಂತೆ ನಟಿಸುವ ಸೆಕ್ರೆಟರಿ ಕಲ್ಲೇಶಯ್ಯ


ಕಲ್ಲೇಶ್


ಉದಯಕುಮಾರ್


ನಾಗರಾಜ್


ಜಯಲಕ್ಷ್ಮಿ

ಈ ಅಪರಾತಪರಾದ ಬಗ್ಗೆ ವಿಚಾರಿಸಿದರೆ ಭಯಂಕರವಾಗಿ ಸುಳ್ಳು ಒದರುತ್ತಾನೆ. ದಾಖಲಾತಿಗಳನ್ನು ಕೇಳಿದರೆ 'ಆಫೀಸ್ ಶಿಫ್ಟ್ ಆಗೋವಾಗ ಕಳೆದುಹೋಗಿದೆ' ಎಂಬರ್ಥದ ಅಸಂಬದ್ಧ ಮಾತಾಡುತ್ತಾನೆ. ಆದರೆ ಈ ಕಟ್ಟಡ 2001ರಲ್ಲೇ ಶಿಫ್ಟ್ ಆಗಿದೆ. ಅದಕ್ಕೂ ಮುಂಚಿನ ಕಡತಗಳು ಕಳೆದು ಹೋಗಿವೆಯೆಂದುಕೊಂಡರೂ ಆ ನಂತರದ್ದಾದರೂ ಇರಬೇಕಲ್ಲಾ? ಅವುಗಳೆಲ್ಲ ಏನಾದವು?

ಇಲ್ಲಿನ ದಲಿತರ ಬದುಕು ಹೇಗಿದೆಯೆಂದರೆ ಎ.ಕೆ. ಕಾಲೋನಿ, ಬದ್ರಾಪುರ ಮುಂತಾದೆಡೆಗಳಲ್ಲಿನ ಬಹುತೇಕರಿಗೆ ಸ್ವಂತ ಮನೆಯಿಲ್ಲ, ನಾರಾಯಣಪುರ, ಕೆರೆದ ಮುಂತಾದೆಡೆಗಳ ದಲಿತರದ್ದೂ ಇದೇ ಪಾಡು. ಇವರುಗಳೆಲ್ಲಾ ಕೂಲಿ, ಮಗ್ಗ ಅಂತೆಲ್ಲ ಹೊಟ್ಟೆಪಾಡು ನಿಭಾಯಿಸುತ್ತಿದ್ದರಾದರೂ ವರ್ಷದ ಹೆಚ್ಚುಕಾಲ ನಿರುದ್ಯೋಗಿಗಳಾಗಿರುವ ಪರಿಸ್ಥಿತಿಯಿದೆ. ವಿಚಾರ ಈ ರೀತಿಯಿರುವಾಗ ಮಕ್ಕಳಿಗೆ ಶಿಕ್ಷಣವು ಮರೀಚಿಕೆಯಾಗಿ ಹೊತ್ತಿನ ಕೂಳಿಗೂ ಪರದಾಡುವ ಪರಿಸ್ಥಿತಿಯಿದೆ.

ಇಂಥ ಜನರಿಗೆ ಮೀಸಲಿಟ್ಟಿರುವ ಹಣಕ್ಕೂ ಬಾಯಿಬಿಡುತ್ತಾರೆಂದರೆ ನಾರಾಯಣ ಸ್ವಾಮಿಯ ಗ್ಯಾಂಗು ಅದೆಂಥಾ ಖೂಳರಿರಬಹುದೋ ಯೋಚಿಸಿ. ಖುದ್ದು ದಲಿತನಾಗಿರುವ, ಅದೇ ಬಲದಿಂದ ಯಡ್ಡಿ ಕ್ಯಾಬಿನೆಟ್ ನಲ್ಲಿ ಸಚಿವಸ್ಥಾನ ಗಿಟ್ಟಿಸಿರುವ ನಾರಾಯಣ ಸ್ವಾಮಿ ಸ್ವತಃ ದಲಿತ ದ್ರೋಹಿಗಳ ನಾಯಕನಾಗಿದ್ದಾನೆ!

ಈ ವಿಪರ್ಯಾಸಕ್ಕೆ ಏನೆನ್ನಬೇಕು?

● ಬಾಗಿಲಗದ್ದೆ

ನಾಲಾಯಕ್ ನಾರಾಯಣಸ್ವಾಮಿ

ಈ ನೆಲದಲ್ಲಿ ದಲಿತರು, ಅಲ್ಪಸಂಖ್ಯಾತರು ಯಾರ್‍ಯಾರದ್ದೋ ರಾಜಕೀಯದಾಟಗಳಿಗೆ ದಾಳಗಳಾಗಿ, ತರಹೇವಾರಿ ಸಮಸ್ಯೆಗಳಿಂದ ನರಳುತ್ತಿರುವುದು ತಿಳಿದಿರುವ ವಿಚಾರವೇ. ಆನೇಕಲ್ ಭಾಗದ ದಲಿತರ ಕರ್ಮವೆಂದರೆ ತಾವೇ ಆರಿಸಿಕಳಿಸಿದ, ತಮ್ಮವನೇ ಆದ ನಾರಾಯಣಸ್ವಾಮಿಯಿಂದಲೇ ತುಳಿತಕ್ಕೊಳಗಾಗುತ್ತಿದ್ದಾರೆ.

ಈ ಆಸಾಮಿ ತನ್ನ ಕ್ಷೇತ್ರದಲ್ಲಿ ದಲಿತರಿಗೆ ಸಹಾಯವಾಗುವಂಥ ಒಂದೇಒಂದು ಕೆಲಸ ಮಾಡಿದ ಉದಾಹರಣೆಯೂ ಸಿಗಲಿಕ್ಕಿಲ್ಲ, ವಿದ್ಯಾಭ್ಯಾಸವಿಲ್ಲದೆ, ಕೆಲಸವಿಲ್ಲದೆ ಪೋಲಿಬಿದ್ದ ದಲಿತ ಯುವಕರನ್ನೇ ತನ್ನ ರಾಜಕೀಯದಾಟಕ್ಕೆ ದಾಳಗಳಂತೆ ಬಳಸಿಕೊಂಡ ಕತೆಗಳು ನಾರಾಯಣಸ್ವಾಮಿಯ ಇತಿಹಾಸದಲ್ಲಿ ದಂಡಿದಂಡಿಯಾಗಿ ಸಿಗುತ್ತವೆ.


ಈತ ಅದೆಂಥ ದಲಿತ ವಿರೋಧಿಯೆಂಬುದಕ್ಕೆ ಒಂದು ಉದಾಹರಣೆ ಹೇಳುತ್ತೇವೆ ನೋಡಿ; ಆನೇಕಲ್ ಪಟ್ಟಣದ ಚೌಡಾರೆಡ್ಡಿ ಸರ್ಕಲ್‌ನಲ್ಲಿ ದಲಿತ ವಿದ್ಯಾರ್ಥಿಗಳಿಗಾಗಿ ಸರ್ಕಾರಿ ಹಾಸ್ಟೆಲ್ ಒಂದು ಕಾರ್ಯ ನಿರ್ವಹಿಸುತ್ತಿತ್ತು, ಬಡ ದಲಿತ ವಿದ್ಯಾರ್ಥಿಗಳಿಗಿದು ವರದಾನವಾಗಿ ಪರಿಣಮಿಸಿತು. ಇತ್ತೀಚೆಗೆ ಪುರಸಭೆ ಇದನ್ನು ನೆಲಸಮ ಮಾಡಿದೆ. ಆ ಜಾಗದಲ್ಲಿ ಕಾಂಪ್ಲೆಕ್ಸ್ ಒಂದು ತಲೆಯೆತ್ತಿದೆ!

ಈ ಹಾಸ್ಟೆಲ್‌ನ ವಿದ್ಯಾರ್ಥಿಗಳನ್ನೆಲ್ಲ ಪ್ರಾಥಮಿಕ ಮತ್ತು ಪ್ರೌಢಶಾಲೆಯ ವಿದ್ಯಾರ್ಥಿಗಳ ಹಾಸ್ಟೆಲ್‌ಗೆ ತುಂಬಲಾಗಿದೆ. ಕಿಕ್ಕಿರಿದು ಹೋಗಿರುವ ಈ ಹಾಸ್ಟೆಲ್‌ನಲ್ಲಿ ದಲಿತ ವಿದ್ಯಾರ್ಥಿಗಳೆಲ್ಲ ಓದಲೂ ಆಗದೆ, ಬದುಕಲೂ ಆಗದೇ ಕಂಗಾಲಾಗಿದ್ದಾರೆ. ಇಷ್ಟೆಲ್ಲಾ ನಡೆಯುತ್ತಿದ್ದರೂ ಸ್ವತಃ ದಲಿತನಾಗಿರುವ ನಾರಾಯಣಸ್ವಾಮಿ ಏನೂ ಕ್ರಮ ಕೈಗೊಳ್ಳುತ್ತಿಲ್ಲ.

ಇಂಥಾ ಮನುಷ್ಯ ಯಡಿಯೂರಪ್ಪನವರ ಕಣ್ಣಿಗೆ ಯಾವ ಕೋನದಲ್ಲಿ ದಲಿತ ನಾಯಕನಂತೆ ಕಂಡನೋ, ಏನೋ?

ವಿಜಯಶಂಕರ್: ಸಿದ್ದು ದಮನಕ್ಕೆ ಬಿಜೆಪಿ ಅಸ್ತ್ರ

ಸಂಪುಟ ಪುನಾರ್ರಚನೆ ಸಂಬಂಧ ಶಿಸ್ತಿನ ಪಕ್ಷ ಬಿಜೆಪಿಯೊಳಗೆ ನಖಶಿಖಾಂತ ಅಸಹನೆ ಹೆಪ್ಪುಗಟ್ಟಿದೆ. ಇದರ ನಡುವೆಯೇ ಪುನಾರ್ರಚನೆಯ ಹಿಂದಿರುವ ಬಿಜೆಪಿಯ ಥರಹೇವಾರಿ ಲೆಕ್ಕಾಚಾರಗಳೂ ಬಿಚ್ಚಿಕೊಳ್ಳಹತ್ತಿವೆ.



ವಿಜಯಶಂಕರ್

ಪ್ರಸ್ತುತ ಮೈಸೂರಿನ ಸಿ.ಎಚ್. ವಿಜಯ್ ಶಂಕರ್‌ಗೆ ಸಚಿವ ಸ್ಥಾನ ನೀಡಿದ್ದರ ಹಿಂದೆಯೂ ಇಂತಹುದೇ ಒಂದು ಲೆಕ್ಕಾಚಾರ ಅಡಗಿದೆ. ಅದು ಕಾಂಗ್ರೆಸ್‌ನ ಮಾಸ್ ಲೀಡರ್ ಸಿದ್ಧರಾಮಯ್ಯರನ್ನ ಹಣಿಯುವ ಉದ್ದೇಶ!

ಗಣಿ ರೆಡ್ಡಿ ಗ್ಯಾಂಗಿನ ಡೌಲುಗಳಿಗೆ ಸೆಡ್ಡು ಹೊಡೆದು ಬಳ್ಳಾರಿಗೆ ಪಾದಯಾತ್ರೆ ಹೊರಟರಲ್ಲಾ ಸಿದ್ಧರಾಮಯ್ಯ? ಇದರಿಂದ ರೆಡ್ಡಿಗಳಷ್ಟೇ ಅಲ್ಲದೆ ಬಿಜೆಪಿ ಪಟಾಲಂ ಕೂಡಾ ಒಂದಷ್ಟು ತಲ್ಲಣಿಸಿತ್ತು, ಆದ ಅವಮಾನ ಮುಚ್ಚಿಡಲೋಸ್ಕರವೇ ಶ್ರೀರಾಮುಲು ಮೈಸೂರಲ್ಲಿ ಸಮಾವೇಶ ನಡೆಸಿ ನಗೆಪಾಟಲಿಗೀಡಾಗಿದ್ದ, ಆದರೆ ಸಿದ್ಧರಾಮಯ್ಯರಿಗೆ ಯಾವ ರೀತಿಯಲ್ಲೂ ಎದಿರೇಟು ನೀಡಲಾಗಲಿಲ್ಲ.

ಇದರಿಂದೆಲ್ಲ ಹತಾಶಗೊಂಡ ಬಿಜೆಪಿ ಮಂದಿ ಸಿದ್ಧರಾಮಯ್ಯರನ್ನು ಹಣಿಯಲು ಅವರದೇ ನೆಲದಲ್ಲಿ ಕುರುಬರಿಗೊಂದು ಪರ್ಯಾಯ ನಾಯಕತ್ವ ನೀಡುವುದೊಂದೇ ದಾರಿಯೆಂಬ ನಿರ್ಧಾರಕ್ಕೆ ಬಂದಿದೆ. ಮೈಸೂರು ಭಾಗದ ಕುರುಬ ಜನಾಂಗದ ವಿಜಯಶಂಕರ್ ಮಂತ್ರಿಯಾಗಿರುವುದು ಈ ಕಾರಣಕ್ಕೇನೆ. ಬಿಜೆಪಿ ಪಟಾಲಂ ಆತನಿಗೆ ಸಚಿವ ಸ್ಥಾನ ನೀಡಿ ಸಿದ್ದುವನ್ನು ಮುಗಿಸಿಯೇ ಬಿಟ್ಟ ಸಂತಸದಲ್ಲಿದೆ.


ಇದರ ಹಿಂದಿರುವ ಇನ್ನೊಂದು ಸೂಕ್ಷ್ಮವೆಂದರೆ, ಈಗಿನ ಪರಿಸ್ಥಿತಿಯಲ್ಲಿ ನಿತ್ರಾಣವಾಗಿಯಾದರೂ ಬಿಜೆಪಿಗೆ ಎದುರು ನಿಲ್ಲಬಹುದಾಗಿ ಕಂಡರೂ ಕಾಂಗ್ರೆಸ್ ಮಾತ್ರ. ತೀರಾ ವೈಯಕ್ತಿಕ ವರ್ಚಸ್ಸಿನೊಂದಿಗೆ ಅಖಾಡಕ್ಕಿಳಿಯಬಲ್ಲ ಮಾಸ್ ಲೀಡರ್ ಅರಿತಿರುವುದೂ ಸಿದ್ದು ಮಾತ್ರ. ಹೀಗಿರುವಾಗ ಸಿದ್ದುವನ್ನು ದುರ್ಬಲಗೊಳಿಸಿಬಿಟ್ಟರೆ ಕಾಂಗ್ರೆಸ್‌ನ ಕಥೆ ಮುಗಿದಂತೆಯೇ!




ಹೀಗೆ ಒಂದೇ ಕಲ್ಲಲ್ಲಿ ಎರಡು ಹಕ್ಕಿ ಕೆಡಹುವ ಹುನ್ನಾರ ಬಿಜೆಪಿಯದ್ದು, ಆದರೆ ವಿಜಯ್‌ಶಂಕರ್‌ಗೂ ಸಿದ್ಧರಾಮಯ್ಯರಿಗೂ ಅಜಗಜಾಂತರ ವ್ಯತ್ಯಾಸವಿದೆ. ವಿಜಯ ಶಂಕರ್ ಸಚಿವನಾದಾಕ್ಷಣ ಕರ್ನಾಟಕದ ಅಹಿಂದ ವರ್ಗಗಳ ನಾಯಕನೆಂದು ಒಪ್ಪಿಕೊಳ್ಳಲು ಯಾರು ಕಾದಿದ್ದಾರೆ? ●

ಲಂಚ, ಮಂಚ, ಡೀಲು, ಗೋಲ್‌ಮಾಲು

ಅಧಿಕಾರದ ಪಿತ್ಥ ಲಿಂಬಾವಳಿಗೆ ಲಾತಾ


ಲಿಂಬಾವಳಿ

ಭಾವೀ ಉಪಮುಖ್ಯಮಂತ್ರಿ ಪಟ್ಟದ ಕನಸು ಕಾಣುತ್ತಿದ್ದ ಲಿಂಬಾವಳಿಗಿದು ದೊಡ್ಡ ಪೆಟ್ಟು. ಶಿವನಗೌಡನನ್ನೋ ಗೂಳಿಹಟ್ಟಿಯನ್ನೋ ಮಂತ್ರಿ ಪದವಿಯಿಂದ ಹೊರದಬ್ಬಿದ್ದಕ್ಕೆ ಯಾರೂ ತಲೆ ಕೆಡಿಸಿಕೊಳ್ಳದಿರಬಹುದು. ಆದರೆ ಲಿಂಬಾವಳಿ ಬಿಜೆಪಿಯ ವರ್ಚಸ್ವೀ ನಾಯಕ. ಮುಂದೊಮ್ಮೆ ತಾನೇ ಉಪಮುಖ್ಯಮಂತ್ರಿ ಕ್ಯಾಂಡಿಡೇಟೆಂದು ಪೋಜು ಕೊಟ್ಟುಕೊಂಡೇ ಬಂದವರು. ತನ್ನ ಆರೆಸ್ಸೆಸ್ ಸಂಸ್ಕಾರದ ಬಗ್ಗೆ ತಾನೇ ಬೆನ್ನು ತಟ್ಟಿಕೊಂಡವರು. ಆದರೆ ಇದ್ಯಾವುದನ್ನೂ ಲೆಕ್ಕಿಸದೇ ಯಕಶ್ಚಿತ್ತಾಗಿ ಹೊರದಬ್ಬುವಂತ ಹರಕತ್ತಾದರೂ ಯಡ್ಡಿಗೇನಿತ್ತು?


ಅನಂತು

ಅದು ಅಧಿಕಾರದ ಪಿತ್ಥ ನೆತ್ತಿಗೇರಿದ ಲಿಂಬಾವಳಿಗೆ ತಾನೇನು, ತನ್ನ ಸ್ಥಾನವೇನೆಂಬುದೇ ಮರೆತುಹೋಗಿತ್ತು. ಮಹದೇವಪುರದಿಂದ ಗೆದ್ದು ಎಮ್ಮೆಲ್ಲೇಯಾಗಿ,ಯಡ್ಡಿ-ಅನಂತ್ ಹಣಾಹಣಿಯ ಲಾಭ ಪಡೆದು ಮಂತ್ರಿಯೂ ಆದ ಲಿಂಬಾವಳಿಗೆ ನೆಲವೇ ಕಾಣದಂತಾಗಿತ್ತು. ಹೊಳೆ ದಾಟದ ಮೇಲೆ ಅಂಬಿಗನ ಮಿಂಡ ಎಂಬಂತೆ ಮಂತ್ರಿಗಿರಿಯ ಗತ್ತು ಮತ್ತು ಉಪಮುಖ್ಯಮಂತ್ರಿ ಗಾದಿಯ ಹುಚ್ಚಿನಲ್ಲೇ ಅಧಿಕಾರ, ದುಡ್ಡು, ಕೀರ್ತಿ ಮತ್ತು ಸುಖದ ಭ್ರಮೆಗೆ ಬಿದ್ದರು.


ಇದು ಲಿಂಬಾವಳಿಯ ವ್ಯಕ್ತಿತ್ವವನ್ನೇ ನಾಶ ಮಾಡಿತು. ಸಿಕ್ಕ ಉನ್ನತ ಶಿಕ್ಷಣ ಖಾತೆಯನ್ನು ಬಳಸಿಕೊಂಡು ಏನೇನೆಲ್ಲಾ ಸಾಧಿಸಬಹುದಾಗಿತ್ತಾದರೂ ಅದನ್ನು ಧಿಮಾಕು-ದೌಲತ್ತಿನ ಮಟ್ಟಿಗಷ್ಟೇ ಸೀಮಿತಗೊಳಿಸಿದ್ದು ಅಂತಿಮವಾಗಿ ಲಿಂಬಾವಳಿಯಂಥ ದಲಿತ ಪ್ರತಿಭಾವಂತನೊಬ್ಬನನ್ನು ಕುಲಗೆಡಿಸಿತು.

ಆದ್ಯಾವ ಗಳಿಗೆಯಲ್ಲಿ ನಾಗಲಾಂಬಿಕೆ ಎಂಬ ಅಹಂಕಾರಿ ಐಎಎಸ್ ಲಿಂಬಾವಳಿ ಇಲಾಖೆಗೆ ಬಂದರೋ ಇಡೀ ಉನ್ನತ ಶಿಕ್ಷಣ ಇಲಾಖೆಯೇ ಹೊಲಸೆದ್ದು ಹೋಯಿತು. ಇದಕ್ಕೆ ತಕ್ಕಂತೆ ಮಾಲತೇಶ ಭಟ್ಟನೆಂಬ ಹುಟ್ಟಾ ಚೆಡ್ಡಿಯೊಬ್ಬ ಮಂತ್ರಿ ಆಪ್ತನಾಗಿ ಸಚಿವಾಲಯದಲ್ಲಿ ಪ್ರತಿಷ್ಠಾಪಿತನಾದ. ತನ್ನ ವಿದ್ವತ್ತು, ಕಾರ್ಯದಕ್ಷತೆಯ ಸಾಬೀತಿಗೆ ಮಂತ್ರಿಗಿರಿಯೆಂಬುದು ಸಿಕ್ಕ ಅದ್ಭುತ ಅವಕಾಶವೆಂಬುದನ್ನೇ ಮರೆತ ಲಿಂಬಾವಳಿ ಇಡೀ ಇಲಾಖೆಯನ್ನು ಭ್ರಷ್ಟರ ಕೈಗೊಪ್ಪಿಸಿ ತಾನು ರಿಯಲ್ ಎಸ್ಟೇಟ್, ಮೈನಿಂಗ್ ಕಾಂಟ್ರಾಕ್ಟ್ ಇತ್ಯಾದಿ ವ್ಯವಹಾರಗಳಲ್ಲೇ ಬಿಜಿಯಾಗಿ ಬಿಟ್ಟರು.

ಇದಕ್ಕೆ ಲಿಂಬಾವಳಿಗೆ ಜೊತೆಯಾದವನು ಅವರ ಸಮಸ್ತ ವ್ಯವಹಾರಗಳ ಸ್ಲೀಪಿಂಗ್ ಪಾರ್ಟನರ್ ಪ್ರದೀಪ್ ಒಡೆಯರ್. ಹೆಸರಘಟ್ಟ ಸಮೀಪದ ಐನೂರು ಎಕರೆ ಸರ್ಕಾರಿ ಅರಣ್ಯಕ್ಕೆ ಬೋಗಸ್ ದಾಖಲೆ ಸೃಷ್ಟಿಸಿ ಕಬಳಿಸುವ ಡೀಲೊಂದಕ್ಕೆ ಸದ್ದಿಲ್ಲದೇ ಕೈಯಿಟ್ಟ ಲಿಂಬಾವಳಿ ತನ್ನ ಮೈನಿಂಗ್ ದಂಧೆಯನ್ನು ಸಿಂಗಾಪುರ್, ಮಲೇಷ್ಯಾದ ತನಕ ವಿಸ್ತರಿಸುವ ಮಟ್ಟಕ್ಕೆ ಕೈಯಿಟ್ಟರು. ಪ್ರದೀಪ್ ಒಡೆಯರ್ ಮತ್ತು ಲಿಂಬಾವಳಿ ಪಾಲುದಾರಿಕೆಯಲ್ಲಿ ರಿಯಲ್ ಎಸ್ಟೇಟ್ ಕಂಪೆನಿ ಕೂಡ ತಲೆ ಎತ್ತಿತ್ತು. ದುಡ್ಡು ಮತ್ತು ದೌಲತ್ತು ಒಮ್ಮೆ ರಕ್ತಗತವಾಯಿತೆಂದರೆ ನಿಂತ ನೆಲವೇ ಕಾಣಿಸದಷ್ಟು ಕಣ್ಣು ಕುರುಡಾಗುತ್ತದೆ.

ಲಿಂಬಾವಳಿ ತಮ್ಮ ಕ್ಷೇತ್ರವನ್ನೇ ಮರೆತುಬಿಟ್ಟರು. ಇಡೀ ಕ್ಷೇತ್ರದ ಉಸ್ತುವಾರಿ ನೋಡಿಕೊಳ್ಳುತ್ತಿದ್ದದ್ದು ಅವರ ಪತ್ನಿಯ ಅಣ್ಣ ಮತ್ತು ಸಿ.ವಿ. ರಾಮನ್ ನಗರದ ಶಾಸಕ ರಘು. ಮಹದೇವಪುರದ ಜನ ಬಂದು ಬೆಳ್ಳಂಬೆಳಿಗ್ಗೆಯೇ ಕಾದು ಕೂತಿದ್ದರೂ ಅವರನ್ನು ಕಾಟಾಚಾರಕ್ಕೂ ಮಾತಾಡಿಸುತ್ತಿರಲಿಲ್ಲ, ರಘು ಶಿಷ್ಯರೇ ಮೇಲೆ ಬಿದ್ದು ಮಹದೇವಪುರದ ಆಗುಹೋಗುಗಳನ್ನು ನಿಭಾಯಿಸತೊಡಗಿದರು. ಮಿಕ್ಕಂತೆ ಸಣ್ಣಪುಟ್ಟ ಕೆಲಸಗಳಿಗೂ ಪೀಎ ಆನಂದನನ್ನು ಮುಂದೆ ಬಿಡುತ್ತಿದ್ದರು.


ಇದರ ಪ್ರತಿಫಲವೆಂಬಂತೆ ಪಾಲಿಕೆ ಚುನಾವಣೆಯಲ್ಲಿ ದೊಡ್ಡ ನೆಕ್ಕುಂದಿಯ ಶ್ರೀಧರ ರೆಡ್ಡಿ ಒಬ್ಬನ ಹೊರತಾಗಿ ಮಹದೇವಪುರದ ಅಷ್ಟೂ ಬಿಜೆಪಿ ಅಭ್ಯರ್ಥಿಗಳು ನೆಲಕಚ್ಚಿ ಹೋದರು. ತಾನೇ ಟಿಕೆಟ್ ಕೊಡಿಸಿ ನಿಲ್ಲಿಸಿದ ಅಭ್ಯರ್ಥಿಗಳ ಪರವಾಗಿ ಪ್ರಚಾರಕ್ಕೂ ಬಾರದಷ್ಟು ಬಿಜಿಯಾಗಿದ್ದರು ಲಿಂಬಾವಳಿ. ಆದರೆ ಬಿಜಿಯಾಗಿದ್ದದ್ದು ಮಾತ್ರ ಇಲಾಖೆಯ ಕೆಲಸಗಳಿಗಲ್ಲ ಎಂಬುದು ಹೆಚ್ಚು ಕಾಲ ರಹಸ್ಯವಾಗಿರಲಿಲ್ಲ. ಮೈಸೂರು ವಿಶ್ವವಿದ್ಯಾಲಯದ ಉಪಕುಲಪತಿಯಾಗಿ ತಳವಾರ್ ಎಂಬ ತನ್ನದೇ ಜಾತಿಯ 'ಪುಸ್ತಕದ ಕೀಟ'ವನ್ನು ತಂದು ಕೂರಿಸಿದ್ದಕ್ಕೆ ಪ್ರತಿಯಾಗಿ ಆತನಿಂದ ಎರಡು ಕೋಟಿ ಕಿತ್ತರೆಂಬುದು ದೊಡ್ಡ ಸುದ್ದಿಯಾಯ್ತು.


ತಳವಾರ್


ನಾಗಲಾಂಬಿಕಾ

ಇದಕ್ಕೆ ತಕ್ಕಂತೆ ಬಿಟಿಎಂ ಲೇಔಟಿನ ಅಲೈಯನ್ಸ್ ಬಿಜಿನೆಸ್ ಅಕಾಡೆಮಿಯ ಸುಧೀರ್ ಅಂಗೂರ್ ಎಂಬ ಡೊನೇಷನ್ ಖದೀಮನಿಂದ ಲಿಂಬಾವಳಿ ೨೦ ಕೋಟಿ ಕಿತ್ತ ಸುದ್ದಿ ಬಂತು. ಈ ಸುಧೀರ್ ಅಂಗೂರ್ ಹೇಳಿಕೇಳಿ ರಾಷ್ಟ್ರಮಟ್ಟದ ಡೊನೇಷನ್ ಪಿಶಾಚಿ. ಬಿಟಿಎಂ ಲೇಔಟನಲ್ಲಿ ಈತನದೇ ಅಲೆಯನ್ಸ್ ಬಿಜಿನೆಸ್ ಮ್ಯಾನೇಜ್‌ಮೆಂಟ್ ಅಕಾಡೆಮಿ ಎಂಬ ಕಾಲೇಜಿದೆಯಾದರೂ ಅದು ಯಾವುದೋ ಹಳ್ಳಿ ಟೆಂಟಗಿಂತಲೂ ಅಧ್ವಾನವಾಗಿದೆ. AIMS ನ ಆಡಳಿತಾಧಿಕಾರಿಗಳಿಗೆ ಸಿಕ್ಕಾಪಟ್ಟೆ ಲಂಚ ತಿನ್ನಿಸಿಯೇ ಬೇಕಾಬಿಟ್ಟಿ ಎಂಬಿಎ, ಬಿಬಿಎಂ ಸೀಟುಗಳನ್ನು ಮಂಜೂರು ಮಾಡಿಸಿಕೊಂಡು ಅಂಗಡಿ ತೆರೆದು ಕೂತ ಸುಧೀರ್ ಅಂಗೂರ್ ಪ್ರತಿ ಸೀಟೊಂದಕ್ಕೆ ಕನಿಷ್ಠ 15 ರಿಂದ ೨೦ ಲಕ್ಷ ಕೀಳುತ್ತಾನೆ. ಹೋಗಲಿ ಬೋಧನೆಯ ಮಟ್ಟವಾದರೂ ನೆಟ್ಟಗಿದೆಯಾ ಎಂದರೆ ಈತನ ಕಾಲೇಜಿನ ಹೆಸರು ಕೇಳಿದರೇನೇ ಸಣ್ಣಪುಟ್ಟ ಕಂಪೆನಿಗಳಿಗೂ ಕ್ಯಾಕರಿಸಿ ಉಗಿಯುತ್ತವೆ!

ಇಂಥ ಥರ್ಡ್‌ರೇಟ್ ಶಿಕ್ಷಣ ಸಂಸ್ಥೆಗೆ ಡೀಮ್ಡ್ ಯೂನಿವರ್ಸಿಟಿಯ ಸ್ಥಾನಮಾನ ಕಲ್ಪಿಸಿದ್ದು ಲಿಂಬಾವಳಿ ಸಾಹೇಬರು. ಅದೂ ಕಾಂಗ್ರೆಸ್ ಮತ್ತು ಗಣಿರೆಡ್ಡಿಗಳ ಮಧ್ಯೆ ವಿಧಾನಸಭಾ ಅಧಿವೇಶನದಲ್ಲೇ ಮಾರಾಮಾರಿ ನಡೆದ ಸಮಯ ಕಾದು. ಶಿಕ್ಷಣ ಮಸೂದೆಗೇ ತಿದ್ದುಪಡಿ ತಂದು ಇಂಥ ತಲೆಬುಡವಿಲ್ಲದ ಶಿಕ್ಷಣ ಸಂಸ್ಥೆಗಳಿಗೆ ವಿಶ್ವವಿದ್ಯಾಲಯದ ಸ್ಥಾನಮಾನ ಕಲ್ಪಿಸಿಕೊಡುವಷ್ಟು ಅವಸರ ಲಿಂಬಾವಳಿಗೇನಿತ್ತು?


ರಘು

ಹಾಗೇ ವಿಶ್ವವಿದ್ಯಾಲಯದ ಸ್ಥಾನಮಾನ ಕಲ್ಪಿಸಬೇಕಾದರೆ ಕರ್ನಾಟಕದಲ್ಲಿ ಎಂತೆಂಥಾ ದೈತ್ಯ ಶಿಕ್ಷಣ ಸಂಸ್ಥೆಗಳಿಲ್ಲ, ಸುತ್ತೂರು ಸ್ವಾಮಿಗಳ ಜೆಎಸ್‌ಎಸ್ ಶಿಕ್ಷಣ ಕೂಟವಾಗಲಿ, ಸಿದ್ಧಗಂಗೆ ಸ್ವಾಮಿಗಳ ವಿದ್ಯಾ ಕೇಂದ್ರವಾಗಲಿ ಕಮ್ಮಿಯ ಸಂಸ್ಥೆಗಳೇ? ಪ್ರಭಾಕರ್ ಕೋರೆಯ ಕೆಎಲ್‌ಇ ಸಮೂಹವಾಗಲಿ, ಶಾಮನೂರು ಧಣಿಯ ಬಾಪೂಜಿ ಸಂಸ್ಥೆಯಾಗಲಿ ಯಾವ ಕಾಲದಿಂದ ಕಾಲೇಜುಗಳನ್ನು ನಡೆಸುತ್ತಿಲ್ಲ, ದಯಾನಂದ್ ಸಾಗರ್, ಎಂ.ಎಸ್. ರಾಮಯ್ಯ, ಆದಿಚುಂಚನಗಿರಿ ದೊರೆಸ್ವಾಮಿ ನಾಯ್ಡುವಿನ ಪೀಇಎಸ್, ಆರೆಸ್ಸೆಸ್ ಚೆಡ್ಡಿಗಳೇ ನಡೆಸುವ ಪೂರ್ಣಪ್ರಜ್ಞ, ಧರ್ಮಸ್ಥಳ ಶಿಕ್ಷಣ ಸಮೂಹ; ಇತ್ಯಾದಿ ಕರ್ನಾಟಕದ ಮಣ್ಣಿನ ದೈತ್ಯ ಕಾಲೇಜು ಸಮೂಹಗಳನ್ನೆಲ್ಲ ಧಿಕ್ಕರಿಸಿ ಸುಧೀರ್ ಅಂಗೂರ್‌ನಂಥ ಹುಟ್ಟಾ ವಂಚಕನ ಕಾಲೇಜಿಗೆ ವಿಶ್ವವಿದ್ಯಾಲಯದ ಸ್ಥಾನಮಾನ ಕಲ್ಪಿಸುವ ಹರಕತ್ತಾದರೂ ಲಿಂಬಾವಳಿಗೇನಿತ್ತು.

ಅದು ಲಂಚದ ಬಾಬತ್ತಲ್ಲವೇ ಮತ್ತೇನಲ್ಲ ಎಂಬುದು ಆರೆಸ್ಸೆಸ್ ಮುಖ್ಯಸ್ಥರಿಗೆ ಗೊತ್ತಾಗಲು ಎಷ್ಟು ಹೊತ್ತು? ಈ ರೀತಿ ಲಿಂಬಾವಳಿ ಸಾಹೇಬರ ಮರ್ಜಿಗೆ ಬಿದ್ದು ವಿಶ್ವವಿದ್ಯಾಲಯದ ಸ್ಥಾನಮಾನ ಗಿಟ್ಟಿಸಿದ ಮತ್ತೊಂದು ಕಂಪೆನಿಯೆಂದರೆ ಅದು ಅಜೀಮ್ ಪ್ರೇಮ್‌ಜಿಯ ವಿಪ್ರೋ!

ಶಿಕ್ಷಣದ ಗಂಧಗಾಳಿಯಿಲ್ಲದ ಈ ಎರಡು ಕಂಪೆನಿಗಳಿಗೆ ವಿಧಾನಮಂಡಲದ ವಿಶೇಷ ಅಧಿವೇಶನದಲ್ಲಿ ಕಾಯ್ದೆಗೇ ತಿದ್ದುಪಡಿ ಮಾಡಿ ವಿಶ್ವವಿದ್ಯಾಲಯದ ಸ್ಥಾನಮಾನ ಕಲ್ಪಿಸಿದ ಲಿಂಬಾವಳಿಗೆ ಅದ್ಯಾವ ಮಟ್ಟದ ದುಡ್ಡು ಹರಿದಿರಬೇಡ?


ಸಹಜವಾಗೇ ಸಿದ್ಧಗಂಗೆ, ಜೆಎಸ್‌ಎಸ್, ಧರ್ಮಸ್ಥಳ, ತರಳಬಾಳು, ಆದಿಚುಂಚನಗಿರಿಯಂಥ ಶಿಕ್ಷಣದ ಖಾವಿಗಳ[...] ಲಿಂಬಾವಳಿ ವಿರುದ್ಧ ತಿರುಗಿಬಿದ್ದರು. ಕೇಂದ್ರ ಸರ್ಕಾ[...] ಮೈಸೂರು ವಿಶ್ವವಿದ್ಯಾಲಯಕ್ಕೊಂದೇ ನೂರು ಕೋಟಿಯ[...] ವಿಶೇಷ ಅನುದಾನ ಕೊಟ್ಟಿತ್ತಲ್ಲ; ಅಂ[...] ಜಾಗಕ್ಕೆ ರೊಕ್ಕ ತಿಂದು ತಳವಾರನನ್[...] ತಂದದ್ದು ಸಹಜವಾಗೇ ಆರೆಸ್ಸೆಸ್[...] ಮೂಲದ ಪಂಡಿತರನ್ನು ರೊಚ್[...]ಗೆಬ್ಬಿಸಿತು. ದುಡ್ಡು ಕೊಟ್ಟೇ ಉ[...] ಕುಲಪತಿ ಪದವಿ ಗಿಟ್ಟಿಸಿದ ತಳವಾರ್[...] ಕೈಗೆ ನೂರು ಕೋಟಿ ಸಿಕ್ಕರೆ ನೆಕ್ಕದ[...] ಇರುತ್ತಾನಾ?

ಎತ್ತಿಂದೆತ್ತ ನೋಡಿದರ[...] ಲಿಂಬಾವಳಿ ಶಿಕ್ಷಣ ರಂಗವನ್ನು ಇನ್ನಷ[...] ಕುಲಗೆಡಿಸಿದರೇ ಹೊರತ[...] ನಯಾಪೈಸೆಯ ಉದ್ಧಾರ ಮಾಡಲಿಲ[...] ಉನ್ನತ ಶಿಕ್ಷಣದ ಕಮಿಶನರಾಗಿ ಬಂ[...] ನಾಗಲಾಂಬಿಕೆ ಮಂತ್ರಿಯ ಜೊತೆಗಿನ ತನ್ನ ಸಲು[...] ಬಳಸಿಕೊಂಡೇ ಆದೆಂಥಾ ತುಘಲಕ್ ದರ್ಬಾರಿಗಿಳಿದಳೆಂದ[...] ಕೇವಲ ಎರಡೇ ತಿಂಗಳಲ್ಲಿ ಐನೂರು ವರ್ಗಾವಣೆಗಳನ್[...] ಮಾಡಿ ದಾಖಲೆ ನಿರ್ಮಿಸಿಬಿಟ್ಟರು.

ಕಾಲೇಜುಗಳ ಪ್ರಾಂಶುಪಾಲರು, ಉಪನ್ಯಾಸಕರು[...] ಬೋಧಕೇತರ ಸಿಬ್ಬಂದಿಗಳನ್ನು ಸೇವಾ ಹಿರಿತನ, ಪ್ರೊಬೆಷನ್[...] ಅವಧಿ ಪೂರ್ಣಗೊಂಡಿದೆಯೇ, ಒಂದೇ ಸ್ಥಳದಲ್ಲಿ ಎಷ[...] ವರ್ಷದಿಂದ ಕಾರ್ಯ ನಿರ್ವಹಿಸುತ್ತಿದ್ದಾರೆ, ಯಾವಾ[...] ನಿವೃತ್ತಿಯಾಗುತ್ತಾರೆ. ಆರೋಗ್ಯ ಇತ್ಯಾದಿ ಏನೊಂದನ್[...] ಲೆಕ್ಕಿಸದೇ ಬೇಕಾಬಿಟ್ಟಿ ವರ್ಗಾವರ್ಗಿಗೆ ಕೈಯಿಟ್ಟರು. 200[...] ರಲ್ಲಿ ಲೋಕಸೇವಾ ಆಯೋಗದ ಮೂಲಕ ನೇಮಕಗೊಂಡಿ[...] 2500 ಮಂದಿ ಉಪನ್ಯಾಸಕರನ್ನು ಅವರ ಪ್ರೊಬೇಷನ್[...] ಅವಧಿ ತುಂಬುವ ಮೊದಲೇ ರೊಕ್ಕ ತಿಂದು ಆರಾಮಶೀ[...] ಸ್ಥಾನಗಳಿಗೆ ವರ್ಗಾವಯಿಸಲಾಗಿತ್ತು.

ಇಂಥ ಲಂಚದ ಮೇಷ್ಟುಗಳಿಗೆ ಸ್ಥಾನ ಕಲ್ಪಿಸಲು ಆಗಷ್ಟೆ[...] ಕೌನ್ಸಿಲಿಂಗ್ ಮೂಲಕ ಎತ್ತಂಗಡಿಯಾಗಿದ್ದವರನ್ನು ಮತ್ತೆಮ[...]ಕಿತ್ತು ಬಿಸಾಕಲಾಯ್ತು. ಒಂದೇ ಜಾಗದಲ್ಲಿದ್ದ ಗಂಡಹೆಂಡ[...]ಯರನ್ನು ಬೇರ್ಪಡಿಸಲಾಯ್ತು. ನಿವೃತ್ತಿಗಿನ್ನೂ ತಿಂಗಳಿರ[...]ವಾಗಲೇ ಎತ್ತಂಗಡಿ ಮಾಡಲಾಗಿತ್ತು. ಇದರ ವಿರು[...] ಕೆಎಟಿಯ ಮೊರೆ ಹೊಕ್ಕ ನೂರಾರು ಉಪನ್ಯಾಸಕರ ಪೈ[...] ಬಹುತೇಕರು ಆರೆಸ್ಸೆಸ್ ಮೂಲದವರಾಗಿದ್ದರೂ ಅದನ್[...] ಲಿಂಬಾವಳಿ ಲೆಕ್ಕಿಸಲಿಲ್ಲ. ರೋಸತ್ತ ಕೆಎಟಿಯೇ ಕಾಲೇಜ[...] ಶಿಕ್ಷಣ ಇಲಾಖೆಯ ವರ್ಗಾವರ್ಗಿ ದಂಧೆಯ ವಿರು[...]

ಸೀಟಿ ರವಿ ಅಪ್ಪಾ ಎಂದರೆ ಯಡ್ಡಿ ಬೆಪ್ಪಾ ಎಂದು ಒದ್ದ.....


ಸಿ.ಟಿ.ರವಿ

ಕೊನೆಗೂ ಸಿ.ಟಿ. ರವಿಗೆ ಜ್ಞಾನೋದಯವಾಗಿರಬೇಕು. ಅಧಿಕಾರದ ವಿಷಯದಲ್ಲಿ ಸಂಘಟನಾ ಚಾತುರ್ಯ, ವಿದ್ವತ್ತು ವ್ಯಕ್ತಿತ್ವಕ್ಕಿಂತಲೂ ವ್ಯಕ್ತಿಗತ ಮರ್ಜಿಯೇ ಮುಖ್ಯವಾಗುತ್ತದೆ. ಯಾವ ಕೋನದಿಂದ ನೋಡಿದರೂ ಈಗ ಮಂತ್ರಿಗಳಾದ ರಾಮದಾಸ್, ನಾರಾಯಣಸ್ವಾಮಿ, ಸಿ.ಸಿ. ಪಾಟೀಲ್, ವಿಜಯ್ ಶಂಕರ್ ಇತ್ಯಾದಿಗಳ್ಯಾರೂ ಸಿಟಿ ರವಿಗೆ ಸಮರಲ್ಲ. ಆದರೆ ಮಹತ್ವಾಕಾಂಕ್ಷೆ ಹಾಗೂ ಸಾಮರ್ಥ್ಯವೇ ರವಿ ಪಾಲಿಗೆ ಮುಳುವಾಗಿದೆ.

ಚಿಕ್ಕಮಗಳೂರು ಜಿಲ್ಲೆಯ ಐದಕ್ಕೆ ಐದೂ ಮಂದಿ ಬಿಜೆಪಿ ಶಾಸಕರಿಗೆ ಹೋಲಿಸಿದರೆ ರವಿ ನಿಜಕ್ಕೂ ವರ್ಚಸ್ಸು, ಸಾಮರ್ಥ್ಯ ಜಿಲ್ಲಾ ಪ್ರಾತಿನಿಧ್ಯ, ಜಾತಿ ಯಾವ ಲೆಕ್ಕದಲ್ಲಿ ನೋಡಿದರೂ ರವಿಗೆ ಮಂತ್ರಿಗಿರಿ ತಪ್ಪಲೇಬಾರದಿತ್ತು. ಆದರೆ ಅನಂತ್‌ಕುಮಾರ್ ಅನುಯಾಯಿ ಎಂಬ ಒಂದೇ ಹಣೆಪಟ್ಟಿ ರವಿಗೆ ಕಂಟಕವಾಯಿತು. 'ಅಲ್ಲಯ್ಯಾ ರಾಜಕಾರಣ ಅಂದ್ರೆ ಮ್ಯಾರಥಾನ್ ಇದ್ದಂಗೆ. ಅದನ್ನು ನಿಧಾನವಾಗಿ ದಿನವಿಡೀ ಓಡಬೇಕೇ ಹೊರತು ನೂರು ಮೀಟರ್ ಓಡಿದಂತೆ ಒಂದೇ ಸ್ಪೀಡಿಗೆ ನಿನ್ನಂತೆ ಓಡಿಬಿಟ್ಟರೆ ಆಗುತ್ತೇನಯ್ಯಾ? ಎಂದರಂತೆ ಮುಖ್ಯಮಂತ್ರಿ ಯಡಿಯೂರಪ್ಪ.

ಮುಖ್ಯಮಂತ್ರಿಯೇ ಹೀಗಂದ ಮೇಲೆ ರವಿ ತಾನೇ ಹಣೆ ಚಚ್ಚಿಕೊಳ್ಳದೇ ಇನ್ನೇನು ಮಾಡಲು ಸಾಧ್ಯ? ರವಿ ನಂಬಿದ್ದು ಯಡ್ಡಿಯನ್ನು, ನಿನ್ನೆ ಮೊನ್ನೆಯ ತನಕ ಅನಂತ್ ಅನುಯಾಯಿಯಾಗಿದ್ದು ಈಗ ತನ್ನ ಬೆನ್ನಿಗೆ ಬಿದ್ದ ರವಿಯನ್ನು ಜೀರ್ಣಿಸಿಕೊಳ್ಳುವ ಶಕ್ತಿ ಯಡ್ಡಿಗೆಲ್ಲಿತ್ತು? ಯಾವತ್ತೂ ಯಡ್ಡಿಯನ್ನು ಓಲೈಸತೊಡಗಿದರೋ ಗುರು ಅನಂತ್‌ಗ[...] ಹೊಟ್ಟೆಯೊಳಗೆ ಖಾರ ಕಲಿಸಿದಂತಾಯ್ತು. ಆನೇಕಲ್ ನಾರಾಯಣಸ್ವಾಮಿ[...] ವಿಜಯ್ ಶಂಕರ್, ರಾಮದಾಸ್‌ರಂಥ ಗೋಮುಖರ ಬೆನ್ನಿಗೆ ನಿಂತ[...] ಹೊರತು ಸಿ.ಟಿ. ರವಿ ಬಗ್ಗೆ ಕಾಟಾಚಾರಕ್ಕೂ ದನಿಯೆತ್ತಲಿಲ್ಲ. ತನಗಿಂತಲ[...] ಸಮರ್ಥ ಮತ್ತು ಪ್ರತಿಭಾವಂತನೆಂಬ ಕಾರಣಕ್ಕೆ ಮೊದಲೇ ಈಶ್ವರಪ್ಪನವರ[...] ಅಸೂಯೆಯಿತ್ತು. ಹೀಗಾಗಿ ಯಡ್ಡಿ, ಅನಂತ್, ಈಶ್ವರಪ್ಪ ಯಾರೂ ರವಿಯ ಬೆನ್ನಿಗೆ ನಿಲ್ಲಲಿಲ್ಲ.

ಮತ್ತೊಬ್ಬ ಒಕ್ಕಲಿಗ ಸಂಪುಟಕ್ಕೆ ಬಂದರೆ ಅದು ತನಗೇ ಲಾಭ ಎಂಬುದು ಅಶೋಕ್ ಆಶೆಯಾಗಿತ್ತಾದರೂ ರವಿ ಪರವಾಗಿ ಪಟ್ಟು ಹಿಡಿದು ಕೂರುವಂಥ ದರ್ದು ಅಶೋಕ್‌ಗಿರಲಿಲ್ಲ. ಹೀಗಾಗಿ ಚಿಕ್ಕಮಗಳೂರು ಪ್ರಾತಿನಿಧ್ಯದ ವಿಷಯದಲ್ಲಿ ರವಿ ಮುಂದೆ ಏನೇನೂ ಅಲ್ಲದ ಜೀವರಾಜ್ ಹೆಸರನ್ನು ತೇಲಿಬಿಟ್ಟರು. ಅದು ರವಿಯನ್ನು ಹಿಮ್ಮೆಟ್ಟಿಸುವ, ಅವಮಾನಿಸುವ ಅದಮುವ ಹುನ್ನಾರವಾಗಿತ್ತೇ ಹೊರತು ಇನ್ನೇನಾಗಿರಲಿಲ್ಲ.

ಸದ್ಯ ಚಿಕ್ಕಮಗಳೂರಿನ ಪಾಲಿಗೆ ಮಂತ್ರಿಗಿರಿಯೇ ಮಿಸ್ಸಾಗಿದೆ. ರಾಜಕಾರಣದ ಕ್ರೌರ್ಯ ಏನೆಂಬುದು ನನಗೆ ಈಗ ಅರ್ಥವಾಗುತ್ತಿದೆ ಎಂದು ಹಲಬುವ ರವಿಗೆ ಕೋಮು ದ್ವೇಷದ ಕ್ರೌರ್ಯ ಮಾತ್ರ ಈತನಕ ಅರ್ಥವಾಗಿರಲಿಕ್ಕಿಲ್ಲ. ಕನಿಷ್ಠ ಮನುಷ್ಯತ್ವದ ಮೂಲ ಪಾಠ ಕೂಡ ಗೊತ್ತಾದಂತಿಲ್ಲ. ತನ್ನ ವಿರುದ್ಧ ತನ್ನದೇ ಶಿಷ್ಯರನ್ನು ಎತ್ತಿಕಟ್ಟಿದ್ದ ಯಡ್ಡಿ ವಿರುದ್ಧ ರವಿ ಕಿಡಿಕಾರುವ ಒಂದು ಮಾತಂತೂ ಮಾರ್ಮಿಕವಾಗಿದೆ.

ಮಕ್ಕಳು ಕಚ್ಚಾಡುವುದು ಪ್ರಕೃತಿ. ತಂದೆಯಾದವನು ಅದನ್ನು ಬಿಡಿಸುವುದೂ ಪ್ರಕೃತಿ. ಆದರೆ ತಂದೆಯೇ ಮಕ್ಕಳ ಮಧ್ಯೆ ಕಚ್ಚಾಟ ಹಚ್ಚುವುದಿದೆಯಲ್ಲ; ಅದು ಮಾತ್ರ ವಿಕೃತಿ......! ಯಡ್ಡಿಯ ಸಣ್ಣಬುದ್ಧಿಗೆ ಇದಕ್ಕಿಂತ ಬೇಕೆ?

...ಹದೇ ಸರ್ಕಾರಕ್ಕೆ ಛೀಮಾರಿ ಹಾಕಿತು. ಮುಂದಿನ ...ದ ಪೀಳಿಗೆಯನ್ನು ರೂಪಿಸಬೇಕಾದ ಕಾಲೇಜು ಶಿಕ್ಷಣ ... ಹೇಗೆ ಕುಲಗೆಟ್ಟು ಹೋಗಿದೆಯೆಂದು ...ವಾಣಿಯೇ ತನ್ನ ಸಂಪಾದಕೀಯದಲ್ಲಿ ಮರುಗ ...ಯ್ತು.

...ತ್ತ ಮಂತ್ರಿಗಿರಿಯನ್ನೂ ನಿಭಾಯಿಸದೆ, ಗೆಲ್ಲಿಸಿ ಕಳಿಸಿದ ...ನನ್ನೂ ಲೆಕ್ಕಿಸದೇ ಕೇವಲ ದುಡ್ಡು ಮತ್ತು ದೌಲತ್ತನ್ನೇ ...ಡಿಸಿಕೊಂಡ ಲಿಂಬಾವಳಿಗೆ ಅಧಿಕಾರ ಮದ ಅದ್ಯಾವ ...ನೆತ್ತಿಗೇರಿತೆಂದರೆ, ಪಕ್ಷದ ಸಭೆಗಳನ್ನೇ ಧಿಕ್ಕರಿಸಲಾರಂಭ... ಇಡೀ ಕಾಲೇಜು ವ್ಯವಸ್ಥೆಯನ್ನೇ ಕೇಸರಿಮಯ ...ಸುವ ಕನಸು ಹೊತ್ತು ಬಂದಿದ್ದ ಎಬಿವಿಪಿ ನಾಯಕರಿಗೆ ...ದಂತೆ ಅವಮಾನವಾಗಿತ್ತು. ತನ್ನನ್ನು ಬೆಳೆಸಿ ...ಗಿರಿಗೂ ಕಾರಣರಾದ ಗುರು ಅನಂತ್‌ಕುಮಾರ್‌ರನ್ನು ...ಬಿಟ್ಟರು. ಹೋಗಲಿ, ಮುಖ್ಯಮಂತ್ರಿ ಯಡ್ಡಿಯನ್ನಾ ... ಸಂಭಾಳಿಸಬೇಕಲ್ಲವೆ?

...ನ್ನಂಥ ಧೀಮಂತನನ್ನು ಮುಖ್ಯಮಂತ್ರಿಯೇ ಓಲೈಸಿ ...ಗಿಟ್ಟುಕೊಳ್ಳಬೇಕೆಂದು ಇಲ್ಲದ ಪ್ರತಿಷ್ಠೆಗೆ ಬಿದ್ದರು. ...ಆರೆಸ್ಸೆಸ್ಸನ್ನೂ ಮರೆತರು. ಇಷ್ಟೆಲ್ಲಾ ದುಡ್ಡು ಮಾಡಿ ... ಫಂಡಿಗೆಂದು ನಯಾಪೈಸೆ ಬಿಚ್ಚಲಿಲ್ಲ, ತನ್ನದೇ ...ಯ ಬೋವಿವಡ್ಡರ ಸಂಘಕ್ಕೂ ನಯಾಪೈಸೆಯ ...ಗಲಿಲ್ಲ, ಮಾಕಳಿ ರವಿ ಎಂಬ ಬೋವಿ ಜನಾಂಗದ ...ಕನೇ ಲಿಂಬಾವಳಿಯ ದುರಹಂಕಾರಕ್ಕೆ ಕಂಡಕಂಡಲ್ಲಿ ...ಹಾಕುತ್ತಾ ಓಡಾಡಿದ್ದು ಅವರ ಅವನತಿಗೆ ಹಿಡಿದ ...ಯುಂತಿತ್ತು.

...ಲ್ಲಿಗೆ ನಾಲ್ಕು ತಿಂಗಳ ಹಿಂದೆಯೇ ಆರೆಸ್ಸೆಸ್ ವರಿಷ್ಠ ... ಜಯದೇವ ಕರೆದು 'ನೀನು, ತಿದ್ದಿಕೊಳ್ಳದೇ ಹೋದರೆ ...ಮೂ ಮಾಡೋಕ್ಕಾಗಲ್ಲ' ಎಂದು ವಾರ್ನಿಂಗ್ ಕೊಟ್ಟು ...ದ್ದಾಗಲಿ, ಜಿದ್ದಿಗೆ ಬಿದ್ದ ಅನಂತ್ ಕುಮಾರ್ ಬಿಜೆಪಿಯ ...ಷ್ಠ ಮೋರ್ಛಾದ ರಾಷ್ಟ್ರೀಯ ಮಂಡಳಿಯಿಂದ ...ವಳಿಯನ್ನು ಉಚ್ಚಾಟಿಸಿ ಆ ಜಾಗಕ್ಕೆ ಜಯನಗರದ ...ಶನನ್ನು ನೇಮಿಸಿದ್ದಾಗಲಿ ಲಿಂಬಾವಳಿಯನ್ನು ತಿದ್ದಲೇ ...

...ದೆಲ್ಲದರ ಪರಮಾವಧಿಯೆಂಬಂತೆ ಐಎಎಸ್ ನಾಗ ...ಕೆ ಬಗ್ಗೆ ಲಿಂಬಾವಳಿ ಸಾಹೇಬರು ಅದೆಂಥದೋ ...ತ ಔದಾರ್ಯ ತೋರಿಸುತ್ತಿರುವ ವದಂತಿ ಹಬ್ಬಿತು. ...ಯ ರಾಜ್ಯ ಪ್ರಧಾನ ಕಾರ್ಯದರ್ಶಿ ಮತ್ತು ಬಿಟಿಎಂ ...ನ ರೊಕ್ಕಸ್ಥ ಪ್ರಸಾದ್ ರೆಡ್ಡಿಯ ಸಂಬಂಧಿಯಾದ ...ನಂದ ರೆಡ್ಡಿ ಎಂಬಾತನೇ ಇದನ್ನು ಟಾಂಟಾಂ ...ತ್ತಾ ಹೋದ.

...ಾನೆಗೆ ಬಾಮೈದ ರಘುವೇ ಹೋಗಿ ಭಾವ ...ವಳಿಯ ಮಂತ್ರಿಗಿರಿಯ ವಿರುದ್ಧ ಲಾಬಿ ...ಟ್ಟಿದ್ದಾರೆ. ಆರೆಸ್ಸೆಸ್, ಅನಂತ್, ಎಬಿವಿಪಿ ಎಲ್ಲರೂ ...ಡಿಸಿದ್ದಾರೆ. ಯಡ್ಡಿ ತಾನೇ ಯಾವ ಕಾರಣಕ್ಕೆ ...ವಳಿಯಂಥಯವರನ್ನು ಸಮರ್ಥಿಸುತ್ತಾರೆ? ಯಾರೂ ...ಸದಂತೆ ಲಿಂಬಾವಳಿಯ ಉಚ್ಚಾಟನೆಯಾಗಿದೆ.

...ನ್ನ, ಅನಂತ್‌ಕುಮಾರ್ ಶ್ರೀರಕ್ಷೆಯಿಲ್ಲ, ಯಡ್ಡಿಗೆ ...ಲ್ಲ, ಬೋವಿ ವಡ್ಡರ ಸಂಘವೇ ಬೆನ್ನಿಗಿಲ್ಲ, ಆರೆಸ್ಸೆಸ್, ...ಪಿ, ಬಿಜೆಪಿ ಹೈಕಮಾಂಡ್ ಮೀಡಿಯಾ-ಯಾರನ್ನೂ ...ವಳಿ ಜೊತೆಗಿಟ್ಟುಕೊಂಡಿಲ್ಲ.

...ಧಿಕಾರದ ಪಿತ್ಥ ನೆತ್ತಿಗೇರಿದರೆ ಲಿಂಬಾವಳಿಯಂಥ ...ಪ್ರತಿಭಾವಂತ ಕೂಡ ಹೇಗೆ ಹಾಳಾಗುತ್ತಾನಲ್ಲವೆ? ...ವಳಿಗಿದು ಪಾಠವಾಗಲಿ. ಅಧಿಕಾರ, ಅಂತಸ್ತು, ದುಡ್ಡು ...ತ್ತೂ ಶಾಶ್ವತವಲ್ಲ ಎಂಬುದು ಈಗಲಾದರೂ ...ಟ್ಟಾಗಲಿ.

• ರಾ. ಸೋಮನಾಥ್

ಗುರುಸಿದ್ದ ರಾಜಯೋಗೇಂದ್ರನ ಹಪಾಹಪಿ

ಪುಟ್ಟರಾಜ ಗವಾಯಿಗಳ ಉತ್ತರಾಧಿಕಾರಿಯಾಗುವ ರೇಸಿನಲ್ಲೀಗ ಹುಬ್ಬಳ್ಳಿಯ ಮೂರುಸಾವಿರ ಮಠದ ಗುರುಸಿದ್ಧ ರಾಜಯೋಗೇಂದ್ರ ಸ್ವಾಮಿಯು ಕಾಣಿಸಿಕೊಂಡಿದ್ದಾರೆ. ಮೊನ್ನೆ ಮೊನ್ನೆ ಅಷ್ಟೇ ಮೂರುಸಾವಿರ ಮಠದ ಆಸ್ತಿಯನ್ನು ಹಡಬೆ ದುಡ್ಡಿಗಾಗಿ ಬೇರೊಬ್ಬರಿಗೆ ಪರಭಾರೆ ಮಾಡಲು ಯತ್ನಿಸಿರುವ ಗುರುಸಿದ್ಧರಾಜ ಯೋಗೇಂದ್ರ ಯಾವ ಆ್ಯಂಗಲ್‌ನಲ್ಲಿ ನೋಡಿದರೂ ಸಮಾಜಕ್ಕೆ ಕಂಟಕನೇ. ಮೂರುಸಾವಿರ ಮಠವನ್ನು ಉತ್ತರ ಕರ್ನಾಟಕದ ಸಂಘ ಪರಿವಾರದ ಶಾಖೆಯನ್ನಾಗಿಸಿ ಪರಿವರ್ತಿಸಿರುವ ಇವರೇನಾದರೂ ಗವಾಯಿಗಳ ಮಠಕ್ಕೆ ಉತ್ತರಾಧಿಕಾರಿಯಾದರೆ ಊಹಿಸಲಾರದಷ್ಟು ಅವಘಡಗಳು ಸಂಭವಿಸುವುದರಲ್ಲಿ ಯಾವ ಅನುಮಾನಗಳೂ ಇಲ್ಲ. ಮೇಲಾಗಿ ಗುರುಸಿದ್ಧ ರಾಜಯೋಗೇಂದ್ರ ವಿಲಾಸಿ ಜೀವನಪ್ರಿಯನಾಗಿರುವ ವ್ಯಕ್ತಿಯೆಂದು ಉತ್ತರ ಕರ್ನಾಟಕದ ಮನೆಮಂದಿಗೆಲ್ಲ ಗೊತ್ತು. ಇಂಥವರು ಶೂನ್ಯ ಸಿಂಹಾಸನ ಸಿದ್ಧಾಂತ ನಂಬಿ ಬದುಕಿದ್ದ ಪುಟ್ಟರಾಜರ ಉತ್ತರಾಧಿಕಾರಿಯಾಗುವುದಾದರೂ ಯಾವ ಮಾನದಂಡದಿಂದ ಎಂದು ಮಠದ ಭಕ್ತರು ವಿಚಾರಿಸುವಂತಾಗಲಿ.

ಪುಟ್ಟರಾಜ ಗವಾಯಿ ಮಠ ಉತ್ತರಾಧಿಕಾರಿ ಕಿತ್ತಾಟ

ಮರಣವೇ ಮಹಾನವಮಿ ಎಂಬ ಶರಣರ ನುಡಿಕಟ್ಟುಗಳು ಪುಟ್ಟರಾಜ ಗವಾಯಿಗಳ ಅಂತ್ಯಕ್ರಿಯೆಯಲ್ಲಿ ಸುಳ್ಳಾಗಿವೆ. ಇದಕ್ಕೆ ತಾಜಾ ಉದಾಹರಣೆ ಎಂಬಂತೆ ಗವಾಯಿಗಳ ಮಠದಲ್ಲಿ ಚಿತ್ರವಿಚಿತ್ರ ದೊಂಬರಾಟಗಳು ಖಾತೆ ತೆರೆದಿವೆ. ಪುಟ್ಟರಾಜ ಗವಾಯಿಗಳು ಇರುವತನಕ ಇಲ್ಲದಿದ್ದ ರಗಳೆಗಳು ಈಗ ಮಠವನ್ನು ಆಕ್ರಮಿಸಿಕೊಳ್ಳುತ್ತಿವೆ. ಇದಕ್ಕಾಗಿ ರಾಜಕಾರಣಿಗಳು, ಹಿರಿಯರೆನಿಸಿಕೊಂಡ ದುರುಳರು ಸಾಕಷ್ಟು ಶ್ರಮಪಡುತ್ತಿದ್ದಾರೆ. ಪುಟ್ಟರಾಜ ಗವಾಯಿಗಳ ಉತ್ತರಾಧಿಕಾರಿ ಪೀಠಕ್ಕಾಗಿ ಮಸಲತ್ತುಗಳು ಶುರುವಾಗಿವೆ.


ಒಂದು ಕಡೆ ಹುಬ್ಬಳ್ಳಿಯ ಮೂರು ಸಾವಿರ ಮಠದ ಚಿಡ್ಡಿ ಸ್ವಾಮಿ ಗುರುಸಿದ್ಧ ಈ ಪೀಠಕ್ಕೆ ಕಣ್ಣು ಹಾಕಿದ್ದಾರೆ. ಮತ್ತೊಂದು ಕಡೆ ಶಿವಯೋಗ ಮಂದಿರದ ವಟುಗಳ ಹಿಂಡು ಮಠ ಹೊಕ್ಕು ಆಧಿಪತ್ಯ ಸ್ಥಾಪಿಸಲು ನೋಡುತ್ತಿದೆ. ದುಷ್ಟ ಸಚಿವ ಶ್ರೀರಾಮುಲು ತನ್ನ ಚಿಡ್ಡಿ ಚೇಲಾಗಳನ್ನು ಮಠದಲ್ಲಿ ಸ್ಥಾಪಿಸಲು ಹವಣಿಸುತ್ತಿದ್ದಾನೆ.

ಇದಕ್ಕೂ ಒಂದು ಹಿನ್ನೆಲೆಯಿದೆ.



ಆ ಕಾಲದಲ್ಲಿ ಶಾಲೆಯಲ್ಲಿ ಕಲಿಯಲು ಬರುತ್ತಿದ್ದ ಅನಾಥ ಮಕ್ಕಳಿಗೆ ಆಹಾರ ಪೂರೈಸುವ ಸ್ವತಂತ್ರ ಶಕ್ತಿ ಇಲ್ಲದ ಕಾರಣಕ್ಕೆ ಪಂಚಾಕ್ಷರಿ ಗವಾಯಿಗಳು ಸಂಕಟಪಡುತ್ತಾರೆ. ಈ ಅವಧಿಯಲ್ಲಿ ಪುಟ್ಟರಾಜ ಗವಾಯಿಗಳ ತಮ್ಮ ಗುರುವಿನ ಸಂಕಟ ಅರಿತುಕೊಳ್ಳುತ್ತಾರೆ. ಇದಕ್ಕೆ ಪೂರಕವಾಗಿ ಕುಮಾರೇಶ್ವರ ನಾಟಕ ಮಂಡಳಿಯನ್ನು ಕಟ್ಟಿ ನಾಟಕಗಳನ್ನು ಆಡುವುದರ ಮೂಲಕ ಸಲುಹಲು ಆರಂಭಿಸಿದರು. ಅಲ್ಲಿಗಾಗಲೇ ಪುಟ್ಟರಾಜ ಗವಾಯಿಗಳು ತಮ್ಮಲ್ಲಿದ್ದ ಅಪರಿಮಿತ ಜ್ಞಾನದಿಂದ ಹೆಸರುವಾಸಿಯಾಗಿ ಬಿಟ್ಟಿರುತ್ತಾರೆ.

1940ರ ನಂತರದ ಅವಧಿಯಲ್ಲಿ ಪಂಚಾಕ್ಷರಿ ಗವಾಯಿಗಳು ಗದುಗಿನ ಚನ್ನವೀರ ಶಾಸ್ತ್ರೀ ಹಿಡ್ಕಿಮಠ, ಸಿದ್ದರಾಮಪ್ಪ ಮಾನ್ವಿ, ಬಸರಿಗಿಡದ ವೀರಪ್ಪನವರ ಸಹಾಯ ಪಡೆದುಕೊಂಡು ಗದಗಿನಲ್ಲಿ ವೀರೇಶ್ವರ ಪುಣ್ಯಾಶ್ರಮವನ್ನು ಸ್ಥಾಪಿಸುತ್ತಾರೆ. ಆಶ್ರಮದಲ್ಲಿ ಅಂಧ ಅನಾಥರಿಗೆ ಆಶ್ರಯ ಮತ್ತು ಊಟದ ವ್ಯವಸ್ಥೆಯನ್ನು ಆರಂಭಿಸುತ್ತಾರೆ. ಮುಂದೆ 1944ರಲ್ಲಿ ಪಂಚಾಕ್ಷರಿಗವಾಯಿಗಳು ಅಕಾಲಿಕ ಮರಣ ಹೊಂದುತ್ತಾರೆ. ಮರಣಕ್ಕೂ ಮುಂಚೆ ವೀರೇಶ್ವರ ಪುಣ್ಯಾಶ್ರಮದ ಉತ್ತರಾಧಿಕಾರಿಯನ್ನಾಗಿ ಪುಟ್ಟರಾಜ ಗವಾಯಿಗಳು ಆಗಬೇಕೆಂದು ಪಂಚಾಕ್ಷರಿ ಗವಾಯಿಗಳು ಮೃತ್ಯುಪತ್ರ ಬರೆದಿಟ್ಟು ಹೋಗಿರುತ್ತಾರೆ. ಈ ಕಾರಣಕ್ಕಾಗಿ ವೀರೇಶ್ವರ ಪುಣ್ಯಾಶ್ರಮದ ನೊಗವನ್ನು ಪುಟ್ಟರಾಜರು ಹೊರುತ್ತಾರೆ. ಅಲ್ಲಿಂದ ಇಲ್ಲಿತನಕ ಪುಟ್ಟರಾಜ ಗವಾಯಿಗಳು ತಮಗೆ ದಕ್ಕಿದ ಅಧಿಕಾರವನ್ನು ಅಂಧ, ಅನಾಥರ ಏಳಿಗೆಗಾಗಿ ಬಳಸಿದ್ದಾರೆ. ಅವರ ಅವಧಿಯಲ್ಲಿ ಮಠದ ಸುತ್ತ ಯಾವುದೇ ಅನಾಚಾರಗಳ ಅಸ್ತಿತ್ವ ಎದ್ದಿಲ್ಲ, ಆದರೆ ಈಗ ಪುಟ್ಟರಾಜರ ಅಂತ್ಯಸಂಸ್ಕಾರ ಮುಗಿದ ಮರುಗಳಿಗೆಯಲ್ಲಿಯೇ ಮಠದ ಚಹರೆ ಬದಲಾಗುತ್ತಿದೆ.



ಪಂಡಿತ ಪುಟ್ಟರಾಜ ಗವಾಯಿಗಳು ಇನ್ನೂ ಜೀವಂತವಾಗಿದ್ದಾಗಲೇ ಮಠದಲ್ಲೇ ಒಂದು ಅಪಸ್ವರ ಭುಗಿಲೆದ್ದಿತ್ತು. ಅದು ಮಠದ ಕಾರ್ಯದರ್ಶಿ ಬಸವರಾಜ ಹಿಡ್ಕಿಮಠರ ವಿಚಾರದಿಂದ ಮೊದಲ್ಗೊಂಡು ಅಂಧ, ಅನಾಥಮಕ್ಕಳಿಗೆ ಪೂರೈಕೆಯಾಗುವ ಆಹಾರದ ತನಕ ತನ್ನ ವ್ಯಾಪ್ತಿ ವಿಸ್ತರಿಸಿತ್ತು. ಈ ಬಸವರಾಜು ಹಿಡ್ಕಿಮಠ ಬೇರೆ ಯಾರೂ ಅಲ್ಲ, ಹಿಂದೆ ಪಂಚಾಕ್ಷರಿ ಗವಾಯಿಗಳು ಸಂಕಟದಲ್ಲಿದ್ದಾಗ ಅವರಿಗೆ ಆಶ್ರಯ ನೀಡಿದ್ದ ಚನ್ನವೀರ ಶಾಸ್ತ್ರಿ ಹಿಡ್ಕಿಮಠರ ಕುಲರತ್ನರು. ಸಂಗೀತ ಪಾಠಶಾಲೆ ವಿದ್ಯಾರ್ಥಿಗಳಿಗೆ ಅವರ ಅಗತ್ಯಕ್ಕೆ ತಕ್ಕಂತೆ ಆಹಾರ ಪೂರೈಕೆಯಾಗುತ್ತಿಲ್ಲ, ಇದಕ್ಕೆ ಬಸವರಾಜ ಹಿಡ್ಕಿಮಠರ ಲಾಲಸೆಗುಣ ಕಾರಣವೆಂದು ಮಠದ ಒಂದು ವರ್ಗದ ಜನ ಎದ್ದು ನಿಂತಿದ್ದರು. ಇದು ನಿಜವೋ ಸುಳ್ಳೋ ಎನ್ನುವ ತರ್ಕ ನಡೆಯುವ ಮೊದಲೇ ಈ ಅಪಸ್ವರ ತಣ್ಣಗಾಗಿಬಿಟ್ಟಿತ್ತು. ಇಷ್ಟಲ್ಲದೆ ಬಸವರಾಜ ಹಿಡ್ಕಿಮಠರು ಪುಟ್ಟರಾಜ ಗವಾಯಿಗಳನ್ನು ಚೌಕಾಶಿ ರಾಜಕಾರಣದ ಸರಕಾಗಿ ಬಳಸಿಕೊಂಡಿದ್ದಾರೆ ಎಂಬ ದೊಡ್ಡ ಮಟ್ಟದ ಆರೋಪಗಳು ನಂತರದಲ್ಲಿ ಕೇಳಿಬಂದಿದ್ದವು. ಆಗ ಪುಟ್ಟರಾಜ ಗವಾಯಿಗಳು ಎಲ್ಲರನ್ನು ಕರೆಯಿಸಿ "ಹಿಂದೆ ನಾವು ಸಂಕಟದಲ್ಲಿದ್ದಾಗ ಹಿಡ್ಕಿಮಠ ಕುಟುಂಬ ನಮ್ಮನ್ನು, ನಮ್ಮನ್ನು ನಂಬಿದವರನ್ನು ಸಾಕಿ ಸಲುಹಿದೆ. ಇದಕ್ಕಾಗಿ ನಾವಿರುವತನಕ ಬಸವರಾಜ ಹಿಡ್ಕಿಮಠ ಪ್ರಶ್ನಾತೀತರು" ಎಂದು ಹೇಳಿ ವಿವಾದವನ್ನು ತಣ್ಣಗಾಗಿಸಿದರು.

ಆ ನಂತರದಲ್ಲಿ ಗವಾಯಿಗಳ ಮಠದಲ್ಲಿ ರಾದ್ಧಾಂತಗಳ ಸುಳಿವೇ ಇಲ್ಲದಂತಾಗಿ ಹೋಯಿತು. ಒಂದೆಡೆ ಮಠ ಆರ್ಥಿಕವಾಗಿ ಕುಸಿಯುತ್ತಾ ಹೊರಟಾಗ ಮತ್ತೆ ಪುಟ್ಟರಾಜ ಗವಾಯಿಗಳು ಮಠವನ್ನು ಆಶ್ರಯಿಸಿದ್ದ ಅಂಧ, ಅನಾಥರಿಗಾಗಿ ತುಲಾಭಾರಗಳಿಗೆ ಹೋಗಲು ಆರಂಭಿಸಿದರು. ತುಲಾಭಾರಗಳಿಂದ ಬರುವ ಕಾಣಿಕೆಗಳಿಂದ ಮತ್ತೆ ಮಠವು ಒಂದು ಹಂತಕ್ಕೆ ಬಂದು ತಲುಪಿತು. ಈ ಅವಧಿಯಲ್ಲಿ ಮಠದಲ್ಲಿ ಕಲಿತ ಮಕ್ಕಳು ದೇಶ-ವಿದೇಶಗಳಲ್ಲಿ ಸಾಧನೆ ಮಾಡಲು ಆರಂಭಿಸಿದರು. ಮಠದ ಸಂಗೀತ ಪರಂಪರೆ ದೇಶಕೋಶಗಳ ಗೋಡೆಗಳನ್ನು ಹಿಮ್ಮೆಟ್ಟಿಸಿ ಬೆಳೆಯತೊಡಗಿತು. ಕಳೆದ ಹತ್ತು ವರ್ಷಗಳಲ್ಲಿ ಗವಾಯಿಗಳ ಮಠ ತನ್ನ ಹಿಂದಿನ ಬಡತನವನ್ನು ನೀಗಿಸಿಕೊಂಡು ಮುಂದಡಿ ಇಡುವ ಪ್ರಯತ್ನ ಆರಂಭಿಸಿತು. ಅಲ್ಲಿಗಾಗಲೇ ಪುಟ್ಟರಾಜ ಗವಾಯಿಗಳಿಗೆ ಲಕ್ಷಾಂತರ ಭಕ್ತಸಮುದಾಯ ಲಭಿಸಿತು. ಇವೆಲ್ಲವುಗಳ ಬಲದಲ್ಲಿ ಪುಟ್ಟರಾಜ ಗವಾಯಿಗಳು ಅಂಧ, ಅನಾಥರ ಆಶಾಕಿರಣದಂತಾಗಿ ಹೋದರು. ಮಧ್ಯೆ ಪುಟ್ಟರಾಜರ ಆರೋಗ್ಯದಲ್ಲಿ ಏರುಪೇರುಗಳು ಕಾಣಿಸತೊಡಗಿದವು. ಆಗ ಪುಟ್ಟರಾಜ ಗವಾಯಿಗಳು ತಮ್ಮ ಪರ್ಯಾಯ ಉತ್ತರಾಧಿಕಾರಿಯ ಹುಡುಕಾಟದಲ್ಲಿ ಇದ್ದರು. ಇದಕ್ಕೆ ಪೂರಕವಾಗಿ ಕಲ್ಲಯ್ಯಜ್ಜರನ್ನು ಸಂಗೀತ ಮತ್ತು ಸಾಹಿತ್ಯ ಕ್ಷೇತ್ರದ ಪಟ್ಟುಗಳನ್ನು ಕಲಿಯಲು ಪ್ರೇರೇಪಿಸಲಾಯಿತು. ಇದರಿಂದಾಗಿ ಪುಟ್ಟರಾಜರ ನಂತರದ ಪುಣ್ಯಾಶ್ರಮದ ಉತ್ತರಾಧಿಕಾರಿಯಾಗಿ ಕಲ್ಲಯ್ಯಜ್ಜರೆಂಬ ಮಾತು ಸಮಾಜದ ಮಧ್ಯೆ ದೃಢವಾಗುತ್ತಾ ಸಾಗಿತು.

ಈಗ ಮಠದಂಗಳದಲ್ಲಿ ವಿವಾದ ಎದ್ದಿರುವುದು ಇದೇ ಕಲ್ಲಯ್ಯಜ್ಜನವರ ಹೆಸರಲ್ಲಿ, ಒಂದು ವರ್ಗ ಕಲ್ಲಯ್ಯಜ್ಜನವರು ಹತ್ತು ವರ್ಷದಿಂದ ಮಠದಲ್ಲಿದ್ದರೂ ಅವರಿಗೆ ಸಂಗೀತ ಹಾಗೂ ಸಾಹಿತ್ಯದಲ್ಲಿ ಪಳಗಲಾಗಿಲ್ಲ, ಹೀಗಿದ್ದಾಗ ಅವರನ್ನು ಪುಟ್ಟರಾಜ ಗವಾಯಿಗಳ ಪೀಠಕ್ಕೆ ಕೂಡ್ರಿಸುವುದು ಹೇಗೆ ಸಾಧ್ಯ? ಎಂದು ಪುಕಾರು ಹಬ್ಬಿಸಿದೆ. ಮತ್ತೊಂದೆಡೆ ಮಠದ ಉಸ್ತುವಾರಿ ಮತ್ತೆ ಕಣ್ಣಿಲ್ಲದ ಕಲ್ಲಯ್ಯಜ್ಜರಿಗೆ ನೀಡಿದರೆ ಬಸವರಾಜ ಹಿಡ್ಕಿಮಠರ ಕಳ್ಳಾಟಗಳಿಗೆ ಇಂಬು ನೀಡಿದಂತಾಗುತ್ತದೆ ಎಂಬ ವಾದ ಚಾಲ್ತಿಯಲ್ಲಿದೆ. ಇವೆರಡರ ಮಧ್ಯೆ ಶಿವಯೋಗ ಮಂದಿರ ಎಂಬ ಪುರೋಹಿತ ಲಿಂಗವಂತರ ದಂಡು ಮಠದಂಗಳಕ್ಕೆ ಹೊಕ್ಕಿದೆ. ಈ ಎಲ್ಲ ಬೆಳವಣಿಗೆಗಳು ಪುಟ್ಟರಾಜ ಗವಾಯಿಗಳ ಸ್ವಚ್ಛ ಇತಿಹಾಸಕ್ಕೆ ಕಪ್ಪುಮಸಿ ಬಳಿಯುವ ಎಲ್ಲಾ ಲಕ್ಷಣಗಳು ಗೋಚರಿಸುತ್ತಿವೆ. ಇದರಿಂದಾಗಿ ಪುಟ್ಟರಾಜರ ಆದರ್ಶಗಳನ್ನು ನಂಬಿ ಪಾಲಿಸುತ್ತಿರುವ ಭಕ್ತ ಸಮುದಾಯ ತೀವ್ರ ಆತಂಕಕ್ಕೆ ಮುಳುಗಿದೆ. ಮಠವನ್ನು ಆಶ್ರಯಿಸಿರುವ ಜನ ಯಾವ ಗೊಂದಲವಿಲ್ಲದೆ ಉತ್ತರಾಧಿಕಾರಿಯಾಗಬೇಕೆಂಬ ಹಂಬಲ ವ್ಯಕ್ತಪಡಿಸಿದೆ.

ಪುಟ್ಟರಾಜ ಗವಾಯಿಗಳು ತೀರಿದ ಬಳಿಕ ಮಠದಲ್ಲಿ ಅವರ ಉತ್ತರಾಧಿಕಾರಿಯ ಕುರಿತಾಗಿ ಇಷ್ಟು ಕೀಳುಮಟ್ಟದ ಚೌಕಾಶಿ ರಾಜಕಾರಣ ಗರಿಗೆದರಿದ್ದು ದೊಡ್ಡ ದುರಂತವೇ ಸರಿ. ಒಂದು ಮೂಲದ ಪ್ರಕಾರ ಗದಗ ಜಿಲ್ಲಾ ಉಸ್ತುವಾರಿ ಸಚಿವ ಶ್ರೀರಾಮುಲು ಕೂಡಾ ರಾಜಕೀಯ ಲಾಭಕ್ಕಾಗಿ ಉತ್ತರಾಧಿಕಾರಿಯಾಗುವವರನ್ನು ಬಿಜೆಪಿಮಯ ಮಾಡಲು ಹೊಂಚುಹಾಕಿದ್ದಾನೆ. ಇದಕ್ಕಾಗಿ ಮಠದ ಆವರಣದಲ್ಲೀಗ ಕೇಸರಿ ಪಡೆಯು ಠಳಾಯಿಸುತ್ತಿದೆ. ಬಹುಶಃ ಸ್ವರ್ಗ ಸೇರಿರುವ ಪುಟ್ಟರಾಜರು ಮಠದ ಈಗಿನ ಪರಿಸ್ಥಿತಿ ನೋಡಿ ಕೊರಗುತ್ತಿರುವುದಂತೂ ದಿಟ.

• ಹುರುಳಿಕೊಪ್ಪಿ, ವಿನಯ್

...ಡ್ಕರಿಯಿಂದ ತಾರಾಮಾರ ಉಗಿಸಿಕೊಂಡ ಶೆಟ್ಟರ್!

...ದ್ದಿ ಪಡೆಯ ತೋಪು ಸಿನಿಮಾದ ಫ್ಲಾಪ್ ಹೀರೋ ಜಗದೀಶ್ ... ಆತ್ಮ ಅಸಹನೆಯಿಂದ ಒದ್ದಾಡುತ್ತಿದೆ. ಗಣಿಗಳ್ಳರ ಮಾತಿಗೆ ...ಾಗಿ ಸ್ಪೀಕರ್ ಹುದ್ದೆಯಿಂದಿಳಿದು ಬಂಡಾಯ ಸಾರಿದ ಶೆಟ್ಟರ್ ...ನಲ್ಲಿದ್ದದ್ದು ಸಿಎಂ ಗದ್ದುಗೆಯ ಕನಸು, ಆದರೆ ಸಿಕ್ಕಿದ್ದು ...ಣಾಭಿವೃದ್ಧಿ ಖಾತೆ!

...ಂಥಾ ಭ್ರಮನಿರಸನದಿಂದಾದ ಅಸಹನೆಯು ...ಕೊಂಡ ಹುದ್ದೆಯನ್ನು ನೆಟ್ಟಗೆ ನಿಭಾಯಿಸದಂತೆ ...ರನ್ನು ನಿಷ್ಕ್ರಿಯಗೊಳಿಸಿಬಿಟ್ಟಿದೆ. ಆದರೆ ಈ ...ಗೆ ಬಹಿರಂಗವಾಗಿ ಯಾರ ನೆರವೂ ಇಲ್ಲದೆ ... ವ್ಯಕ್ತಪಡಿಸುವುದಾಗಲಿ, ಬಂಡಾಯ ...ವುದಾಗಲಿ ಸಾಧ್ಯವಿಲ್ಲ, ಈ 'ಕೊರತೆ'ಯನ್ನು ... ವಿರುದ್ಧವಿರುವವರನ್ನು ಮನೆಗೆ ಕರೆಸಿಕೊಂಡು ...ಗು ನಡೆಸಿ ಸತ್ಕರಿಸಿ ಕಳಿಸುವ ಮೂಲಕ ...ಕೊಳ್ಳುತ್ತಿದ್ದಾರೆ!



... ಮನಸ್ಥಿತಿಯೇ ಇದೀಗ ಬಿಜೆಪಿ ಅಧ್ಯಕ್ಷ ಗಡ್ಕರಿಯಿಂದ ...ಕೊಳ್ಳುವುದಕ್ಕೂ ಕಾರಣವಾಗಿದೆ. ನಡೆದದ್ದೇನೆಂದರೆ, ಮೊನ್ನೆ ...ವಾದ ಸಂಪುಟ ವಿಸ್ತರಣೆ ಸಂಬಂಧ ಬಿಜೆಪಿ ಪಾಳೆಯವೇ ಜ್ವರ ಏರಿಸಿಕೊಂಡಿತ್ತಲ್ಲಾ? ಈ ಸಂದರ್ಭದಲ್ಲಿ ಯಡಿಯೂರಪ್ಪ ಕ್ಯಾಬಿನೆಟ್ ಮೀಟಿಂಗ್ ಕರೆದರೆ ಜಗದೀಶ್ ಶೆಟ್ಟರ್ ಹಾಜರಾಗಿರಲಿಲ್ಲ. ವಾಡಿಕೆಯಂತೆ ಯಡ್ಡಿ ವಿರುದ್ಧ ಬುಸುಗುಡುತ್ತಿದ್ದವರನ್ನು ಮನೆಗೆ ಕರೆಸಿಕೊಂಡು ಮೀಟಿಂಗು ನಡೆಸುತ್ತಿದ್ದರು!

ಇತ್ತ ರೆಡ್ಡಿ ಗ್ಯಾಂಗೂ ಕ್ಯಾಬಿನೆಟ್ ಮೀಟಿಂಗಿಗೆ ಬರದೆ, ಶೆಟ್ಟರ್ ಕೂಡಾ ಚಕ್ಕರ್ ಹೊಡೆದದ್ದನ್ನು ಗಮನಿಸಿದ ಪಕ್ಷ ನಿಷ್ಠರು ಬಿಜೆಪಿ ಅಧ್ಯಕ್ಷ ನಿತಿನ್ ಗಡ್ಕರಿಗೆ ವಿಷಯ ಮುಟ್ಟಿಸಿದ್ದಾರೆ. ತಕ್ಷಣ ಅತ್ತಲಿಂದ ಶೆಟ್ಟರ್‌ನ್ನು ಸಂಪರ್ಕಿಸಿದ ಗಡ್ಕರಿ ನೀವು ಸ್ಪೀಕರ್ ಆಗಿದ್ದೋರು, ಈಗ ಸಚಿವರಾಗಿದ್ದೀರಿ. ಪಕ್ಷದಲ್ಲೇ ಜವಾಬ್ದಾರಿಯುತ ಸ್ಥಾನದಲ್ಲಿದ್ದೀರಿ. ಕ್ಯಾಬಿನೆಟ್ ಮೀಟಿಂಗ್‌ಗೆ ಹೋಗೋ ಬದ್ಲು ಇಲ್ಲೇನ್ಮಾಡ್ತಿದೀರಿ. ಸರ್ಕಾರದೊಳಗಿದ್ದುಕೊಂಡು ಬಂಡಾಯಗಾರರೊಂದಿಗೆ ಸಭೆ ನಡೆಸಿದ್ದೀರಲ್ಲಾ ಜವಾಬ್ದಾರಿಯಿರೋರು ಮಾಡೋ ಕೆಲ್ಸನಾ ಇದು' ಅಂತೆಲ್ಲ ಕ್ಲಾಸು ತೆಗೆದುಕೊಂಡಿದ್ದಾರೆ. ಜೊತೆಗೆ ಮಾರನೆ ದಿನ ನಡೆಯಲಿದ್ದ ಪ್ರಮಾಣವಚನ ಸ್ವೀಕಾರ ಸಮಾರಂಭದಲ್ಲೂ ಹಾಜರಿರುವಂತೆ ಹುಕುಂ ಹೊರಡಿಸಿದ್ದಾರೆ.

ಇದರಿಂದಾಗಿ ಯಡ್ಡಿ ವಿರುದ್ಧದ ಬಂಡಾಯವನ್ನು ಮನಸಾರೆ ಆಸ್ವಾದಿಸಿ ಮುರಗೊಳ್ಳುತ್ತಿದ್ದ ಶೆಟ್ಟರ್‌ಗೆ ನೆತ್ತಿ ಮೇಲೆ ತಣ್ಣೀರು ಸುರಿದಂತಾಗಿದೆ!




ಸರ್ಕಾರದ ವಿರುದ್ಧ ಶೆಟ್ಟರ್‌ಗೆ ಅಸಹನೆಯಿರಬಹುದು. ತೀರಾ ಸರ್ಕಾರದಿಂದಲೇ ಹೊರ ಬಂದು ಬಂಡಾಯ ಸಾರುವುದಿದ್ದರೆ ಅದು ನಿಜವಾದ ನೈತಿಕ ಹಾದಿ. ಆದರೆ ಶೆಟ್ಟರ್‌ಗೆ ಆ ಹಾದಿಗೆ ಹೆಜ್ಜೆಯಿತ್ತಿಕ್ಕಲು ತಾಕತ್ತಿಲ್ಲ.

ಇದೆಲ್ಲ ಹಾಳು ಬಿದ್ದೋಗಲಿ ಅಂದರೆ ಈ ಆಸಾಮಿ ತನಗೊಹಿಸಿದ ಗ್ರಾಮೀಣಾಭಿವೃದ್ಧಿ ಖಾತೆಗೂ ನ್ಯಾಯಯುತವಾಗಿ ಕೆಲಸ ಮಾಡುತ್ತಿಲ್ಲ. ಈ ಖಾತೆಯ ನೆರಳಲ್ಲೇ ಹಳ್ಳಿ ಹಳ್ಳಿಗಳಲ್ಲಿ ಅವ್ಯವಹಾರಗಳು ನಡೆಯುತ್ತಿದ್ದರೂ ಈತ ತಲೆ ಕೆಡಿಸಿಕೊಳ್ಳುವುದಿಲ್ಲ.

ಅಂತೂ ನಿತಿನ್ ಗಡ್ಕರಿ ಬಿಜೆಪಿ ಅಧ್ಯಕ್ಷರಾದ ಮೇಲೆ ಆತನಿಂದ ಉಗಿಸಿಕೊಂಡ ರಾಜ್ಯದ ಏಕೈಕ ರಾಜಕಾರಣಿ ಶೆಟ್ಟರ್ ಅಂತ ಬಿಜೆಪಿ ಪಾಳಯ ನಗೆಯಾಡ ಹತ್ತಿದೆ! •

ಎ.ಕೆ. ಸಿಂಗ್ ಎನ್‌ಕೌಂಟರ್ ಮಾಡಿಸಿದ್ದು ಯಾರು?



ಕಟ್ಟಾ ಜಗ್ಗನಿಗಿತ್ತು ಲಿಂಕ್

ಅದು ಮಂತ್ರಿ ಕಟ್ಟಾ ಮಗ ಜಗ್ಗನ ವಿಕೃತ ಶೋಕಿಗಾಗಿ ಮತ್ತು ಅದನ್ನು ಮುಚ್ಚಿಹಾಕಲೆಂದು ನಡೆಸಿದ ಸುಪಾರಿ ಎನ್‌ಕೌಂಟರೆ?

ಬೆಂಗಳೂರಿನ ವಂಚಕ ಲೋಕದಲ್ಲಿ ಸಿಂಗ್ ಅಲಿಯಾಸ್ ಅಜಿತ್ ಎಂದೇ ಪರಿಚಿತನಾಗಿದ್ದ ಎ.ಕೆ. ಸಿಂಗ್ ಕೇವಲ ಕಾರುಗಳ್ಳನಷ್ಟೇ ಅಲ್ಲ, ಕೆಲ ವರ್ಷಗಳಿಂದ ಆತ ಲೈವ್‌ಬ್ಯಾಂಡ್ ಹುಡುಗಿಯರ ದಂಧೆಗಿಳಿದಿದ್ದ. ಮುಂಬಯಿ, ಕೊಲ್ಕತ್ತಾಗಳಿಂದ ಡಜನ್ನುಗಟ್ಟಲೇ ಬ್ಯಾಂಡ್ ಹುಡುಗಿಯರನ್ನು ಕರೆಸುತ್ತಿದ್ದ. ಅವರನ್ನು ಹೊರವಲಯದ ಬಂಗಲೆಗಳಲ್ಲಿ ಮನೆಮಾಡಿಟ್ಟು ತನಗೆ ಪರಿಚಿತವಾಗಿದ್ದ ಶ್ರೀಮಂತರ ಮಕ್ಕಳಿಗೆ ಒದಗಿಸುತ್ತಿದ್ದ.

ಇದು ಆತನ ಒಂದು ಮುಖವಾದರೆ, ತಾನೇ ಕಳಿಸಿಕೊಟ್ಟ ಹುಡುಗಿಯರ ಕೈಗೆ ಸೂಕ್ಷ್ಮಗ್ರಾಹಿ ವೀಡಿಯೋ ಕ್ಯಾಮೆರಾ ಸೌಲಭ್ಯವುಳ್ಳ ಮೊಬೈಲುಗಳನ್ನು ಕೊಟ್ಟು ಚಿತ್ರೀಕರಿಸಿ ಬ್ಲಾಕ್‌ಮೇಲ್ ಮಾಡುವುದು ಆತನ ಮತ್ತೊಂದು ಮುಖವಾಗಿತ್ತು.

ಈ ತಂತ್ರ ಬಳಸಿಯೇ ಬೆಂಗಳೂರಿನ ಅನೇಕ ಶ್ರೀಮಂತ ಶೋಕಿಲಾಲರು ಮತ್ತು ಅವರ ಮಕ್ಕಳನ್ನು ಸಿಂಗ್ ಬ್ಲಾಕ್‌ಮೇಲ್ ಮಾಡಿ ದುಡ್ಡು ಕಿತ್ತಿದ್ದ. ಇದೇ ತಂತ್ರ ಬಳಸಿ ಆತ ಕಟ್ಟಾ ಮಗ ಜಗ್ಗನನ್ನು ಬ್ಲಾಕ್‌ಮೇಲ್ ಮಾಡುತ್ತಿದ್ದನೆ? ಕಟ್ಟಾ ಮಗ ಜಗದೀಶನ ವಿಕೃತ ಶೋಕಿಗಳ ವೀಡಿಯೋ ತೆಗೆಸಿದ್ದನೆ? ಅದನ್ನಿರಿಸಿಕೊಂಡು 2 ಕೋಟಿ ರೂಪಾಯಿಯ ಡಿಮ್ಯಾಂಡ್ ಇಟ್ಟಿದ್ದನೆ?

ಕಟ್ಟಾ ಮಗ ಜಗದೀಶ್ ಮತ್ತು ಸಿಂಗ್ ಮಧ್ಯೆ ಗೆಳೆತನವಿತ್ತು, ಕೌನ್ಸಿಲರ್ ಆಗುವುದಕ್ಕೂ ಮುನ್ನ ಸಿಂಗ್ ಪದೇಪದೇ ಕಟ್ಟಾ ಜಗ್ಗನ ಜೊತೆ ಕಾಣಿಸಿಕೊಂಡಿದ್ದ. ಹಾಗೇ ಸಿಂಗ್‌ನನ್ನು ಕಟ್ಟಾ ಮಗನಿಗೆ ಪರಿಚಯಿಸಿ ಕೊಟ್ಟಿದ್ದು ಶಿವಾಜಿನಗರದ ಹಳೇ ಹಂಟರ್ ಇಷ್ತಿಯಾಕ್ ಪೈಲ್ವಾನ್. ಮಂತ್ರಿ ಕಟ್ಟಾ ಮತ್ತು ರೌಡಿ ಇಷ್ತಿಯಾಕ್ ಕೆಲದಿನಗಳ ಹಿಂದೆ ಒಂದೇ ವೇದಿಕೆಯಲ್ಲಿ ಅಕ್ಕಪಕ್ಕ ಕುಳಿತಿದ್ದರು. ಕೆಲಕಾಲ ಜಗ್ಗನನ್ನು ಜೊತೆ ಹಾಕಿಕೊಂಡೇ ಓಡಾಡಿದ ರೌಡಿ ಇಷ್ತಿಯಾಕ್ ಅದ್ಯಾವ ಉದ್ದೇಶ ಇಟ್ಟುಕೊಂಡು ಸಿಂಗ್‌ನನ್ನು ಅಂಟ ಹಾಕಿದನೋ? ಸಿಂಗ್ ಕಲ್ಪಿಸಿದ ಸಕಲ ಸೌಲಭ್ಯಗಳನ್ನಂತೂ ಕಟ್ಟಾ ಜಗ್ಗ ತಪ್ಪದೇ ಸದುಪಯೋಗಪಡಿಸಿಕೊಂಡ ಫಲವೇ ಸೆಕ್ಸ್ ಸೀಡಿಯೊಂದಕ್ಕೆ ಕಾರಣವಾಯಿತೆ?

ಕಟ್ಟಾ ಜಗ್ಗನ ಮದುವೆ ನಡೆಯುವುದಕ್ಕೂ ಮುನ್ನ, ಜಗ್ಗ ಪ್ರತಿ ಸಂಜೆ ಕಳೆಯುತ್ತಿದ್ದದ್ದು ಬಾಗಲೂರು ರಸ್ತೆಯ ಬೆಳ್ಳಳ್ಳಿಯ ಜಯಪ್ಪರೆಡ್ಡಿಯ ಫಾರ್ಮ್ ಹೌಸಿನಲ್ಲಿ. ಅಪರೂಪಕ್ಕೊಮ್ಮೆ ಜಗ್ಗ ಅಲ್ಲಿ ಡಿಸ್ಕೋಪಾರ್ಟಿಗಳನ್ನು ನಡೆಸುತ್ತಿದ್ದ. ಇಂಥ ಪಾರ್ಟಿಯೊಂದಕ್ಕೆ ಸಿಂಗ್ ಐವರು ಜೀನ್ಸ್‌ಧಾರಿ ಯುವತಿಯರನ್ನು ಜೊತೆ ಹಾಕಿಕೊಂಡು ಬಂದಿದ್ದಕ್ಕೆ ಸಿಂಗ್ ಬಳಿಯೇ ಸಾಕ್ಷ್ಯಾಧಾರಗಳಿದ್ದವು. ನಡುರಾತ್ರಿಯ ನಂತರ ಅದೇ ಫಾರ್ಮ್ ಹೌಸಿನಲ್ಲಿ ಜಗ್ಗ ರಾತ್ರಿ ಕಳೆದಿದ್ದ!

ಇದಾದನಂತರ ಕಟ್ಟಾ ಜಗ್ಗ ಯಲಹಂಕ ಬಾರ್ಡರ್ ಸೆಕ್ಯೂರಿಟಿ ಫೋರ್ಸ್ (ಬಿಎಸ್‌ಎಫ್) ನೆಲೆಯ ಪಕ್ಕದ ರಸ್ತೆಯ ಸಿಂಧಿ ಸ್ಕೂಲ್ ಧಣಿಗಳ ಫಾರ್ಮ್ ಒಂದರಲ್ಲಿ ಅಡ್ಡೆ ಹಾಕತೊಡಗಿದ. ಸಿಂಗ್ ಅಲ್ಲಿಗೂ ಜೀನ್ಸ್‌ಧಾರಿ ಲಲನೆಯರೊಂದಿಗೆ ಬರುತ್ತಿದ್ದ. ಇಂಥ ಶೋಕಿ ಖಯಾಲಿಗಳಿಗೆಲ್ಲ ಸಹಕಾರ ಮತ್ತು ಸೇವೆ ಕಲ್ಪಿಸಿದ ಫಲವಾಗೇ ನೆಲಗಳ್ಳ ರೌಡಿ ಜಯಪ್ಪ ರೆಡ್ಡಿಗೆ ಹೆಬ್ಬಾಳ ವಾರ್ಡಿನ ಬಿಜೆಪಿ ಟಿಕೆಟ್ ಸಿಕ್ಕು ಗೆದ್ದು ಕೌನ್ಸಿಲರ್ ಆಗಿಬಿಟ್ಟ. ಅದೇನಾಯಿತೋ ತಾನೂ ಗೆದ್ದು ಕೌನ್ಸಿಲರ್ ಆದನಂತರ ಕಟ್ಟಾ ಜಗ್ಗ ಇದ್ದಕಿದ್ದಂತೆ ಸಿಂಗ್‌ನನ್ನು ದೂರವಿಟ್ಟ.

ಆ ಹೊತ್ತಿಗಾಗಲೇ ಸಿಂಗ್ ಕಳಿಸಿದ್ದ ಬ್ಯಾಂಡು-ಬೇಬ್ಸ್‌ಗಳ ಜೊತೆ ಜಗ್ಗ ಏನೇನು ಭಾನಗಡಿ ಮಾಡಿಕೊಂಡಿದ್ದನೋ, ಅದರ ವೀಡಿಯೋ ಇಟ್ಟುಕೊಂಡು ಸಿಂಗ್ ಏನೆಲ್ಲಾ ಬ್ಲಾಕ್‌ಮೇಲ್‌ಗಿಳಿದಿದ್ದನೋ.

ಇದೆಲ್ಲದರ ತಾರ್ಕಿಕ ಅಂತ್ಯವೆಂಬಂತೆ ಈಗ ಸಿಂಗ್ ಕಥೆ ಮುಗಿಸಲಾಗಿದೆ. ●

ಅಜಿತ್ ಸಿಂಗ್ ಅಲಿಯಾಸ್ ಎ.ಕೆ. ಸಿಂಗ್ ಯಾರು? ಆತ ಆ ಮಟ್ಟದ ಪಾತಕಿಯಾ? ನಿಜಕ್ಕೂ ಆತ ಪೊಲೀಸರ ಮೇಲೆ ಗುಂಡು ಹಾರಿಸಿದನಾ? ಎನ್‌ಕೌಂಟರ್ ಮಾಡಿ ಕೊಲ್ಲುವಷ್ಟು ಅಪಾಯಕಾರಿ ಕ್ರಿಮಿನಲ್ ಹಿನ್ನೆಲೆ ಆತನಿಗಿತ್ತಾ?

ಇಂಥ ಅನೇಕ ಅನುಮಾನ ಗೊಂದಲಗಳ ಹುತ್ತದಂತೆ ನಿಗೂಢಗೊಳ್ಳುತ್ತದೆ ಸೆಪ್ಟೆಂಬರ್ 8 ರ ಎನ್‌ಕೌಂಟರ್. ಅಜಿತ್ ಸಿಂಗ್ ಅಲಿಯಾಸ್ ಎ.ಕೆ. ಸಿಂಗ್ ಎಂಬಾತ, ಓರ್ವ ಅಂತರರಾಜ್ಯ ಕಾರುಗಳ್ಳನೆಂಬುದನ್ನು ಬಿಟ್ಟರೆ ಆತನಿಗೆ ರೌಡಿ ಹಿನ್ನೆಲೆಯಿಲ್ಲ, ಒಂದಿಬ್ಬರು ರೌಡಿಗಳ ಪರಿಚಯ ಇರಬಹುದು. ಆತನ ಮೇಲೆ ಯಾವುದೇ ಕೊಲೆ ಕೇಸಿಲ್ಲ, ಇಡೀ ಬೆಂಗಳೂರು ಅಂಡರ್‌ವರ್ಲ್ಡ್‌ಗೆ ಗೊತ್ತಿರುವ ಹಾಗೆ ಆತ ಓರ್ವ ಪೊಲೀಸ್ ಇನ್‌ಫಾರ್ಮೆಂಟ್. ಈತನ ತಂದೆ ನಾರಾಯಣಸಿಂಗ್ ಮೂಲತಃ ಉತ್ತರ ಪ್ರದೇಶದ ವಾರಣಾಸಿ ಪಕ್ಕದ ರಾಮುಗಡದವನು. ತನ್ನ ಪತ್ನಿ ಊರ್ಮಿಳಾ ಎಂಬಾಕೆಯ ಜೊತೆ ಯಾವುದೋ ಕಾಲಕ್ಕೆ ಬೆಂಗಳೂರಿಗೆ ವಲಸೆ ಬಂದು ನೆಲಮಂಗಲ ಸಮೀಪದ ಅಂಚೆಪಾಳ್ಯದಲ್ಲಿ ನೆಲೆಸಿದ್ದ. ಹೊಟ್ಟೆಪಾಡಿಗೆ ಸೆಕ್ಯೂರಿಟಿ ಗಾರ್ಡ್ ಕೆಲಸ ಮಾಡಿಕೊಂಡಿದ್ದ.

ಈತನ ಮಗನೇ ಎ.ಕೆ. ಸಿಂಗ್ ಅಲಿಯಾಸ್ ಅಜಿತ್ ಸಿಂಗ್. ಪೀಣ್ಯ ಸುತ್ತಮುತ್ತ ಹೈಸ್ಕೂಲು ಮುಗಿಸಿ ಮುಂದೆ ಪ್ರತಿಷ್ಠಿತ ಸೆಂಟ್ ಜೋಸೆಫ್ ಕಾಲೇಜಿಗೆ ಸೇರಿ, ಅಲ್ಲಿ ಕಂಪ್ಯೂಟರ್ ಆಪ್ಲಿಕೇಷನ್‌ನಲ್ಲಿ ಪದವಿ ಗಿಟ್ಟಿಸಿದ್ದ. ಸೆಂಟ್ ಜೋಸೆಫ್ ಕಾಲೇಜಿಗೆ ಬರುತ್ತಿದ್ದ ಶ್ರೀಮಂತರ ಮಕ್ಕಳ ಜೊತೆ ಸೇರಿ ಪಬ್ಬು ಡಿಸ್ಕೋಥೆಕ್ ಶೋಕಿಗೆ ಬಿದ್ದ. ಕ್ರಮೇಣ ಐಷಾರಾಮಿ ಕಾರುಗಳನ್ನು ಕದಿಯತೊಡಗಿದ. ಹೀಗೆ ಕದ್ದ ಕಾರುಗಳನ್ನು ಮುಂಬಯಿಯ ಕುಖ್ಯಾತ ಕಾರುಗಳ್ಳ ಅಮ್ಜದ್ ಮತ್ತು ಕಲೀರ್ ಮೂಲಕ ಲಕ್ನೋ, ಕಾನ್ಪುರ್, ಅಹಮದಾಬಾದ್‌ನ ಶ್ರೀಮಂತರಿಗೆ ಮಾರುತ್ತಿದ್ದ. ಈ ರೀತಿ ಕಾರು ಕದ್ದು ಭಾರತದ ಬೇರೆಬೇರೆ ನಗರಗಳಿಗೆ ಸಾಗಿಸುವಲ್ಲಿ ಆತನಿಗೆ ಬೆಂಗಳೂರು ಅಂಡರ್‌ವರ್ಲ್ಡ್‌ನ ಯಾವುದೇ ನೆರವು ಬೇಕಿತ್ತಿಲ್ಲವಾದರೂ ಕ್ರಮೇಣ ಲೈವ್‌ಬ್ಯಾಂಡ್, ಮೆಡಿಕಲ್ ಸೀಟು ವಂಚನೆ, ಮೊಬೈಲ್ ಕಳುವು, ರಾಬರಿ ಇತ್ಯಾದಿಗಳಿಗೆ ಕೈಯಿಟ್ಟು; ಶಿವಾಜಿನಗರದ ಡಾನ್ ಇಷ್ತಿಯಾಕ್ ಪೈಲ್ವಾನನ ನೆರಳಿಗೆ ಬಂದ.

ಇದು ಆತನ ಭೂಗತ ಲಿಂಕಿನ ನಾಂದಿಯಾದರೆ ಮುಂದೆ ಗೋರಿಪಾಳ್ಯದ ರಣಪಾತಕಿ ಇಮ್ರಾನ್ ಜೊತೆಗೂ







ಕೈಜೋಡಿಸಿದ. ಮಾಜಿ ಕೌನ್ಸಿಲರ್ ಆರಿಫ್ ಪಾಷಾನ ಮಗ ಇಮ್ರಾನ್ ಕೂಡ ಪಾರ್ಟ್ ಟೈಮ್ ಕಾರುಗಳ್ಳ. ಜೊತೆಗೆ ಮೊಬೈಲ್ ಕಳ್ಳತನ, ಲೈವ್ ಬ್ಯಾಂಡ್ ಹುಡುಗಿಯರ ದಂಧೆ ಕೂಡ ನಡೆಸುತ್ತಾನೆ. ಬೆಂಗಳೂರು ಪಾಪಕೂಪದ ಮಟ್ಟಿಗೆ ಶಿವಾಜಿನಗರದ ರೌಡಿ ಇಷ್ತಿಯಾಕ್ ಮತ್ತು ಗೋರಿಪಾಳ್ಯದ ಇಮ್ರಾನ್ ಇಬ್ಬರೂ ಎರಡೂ ದೇಹ ಒಂದೇ ಉಸಿರಿದ್ದಂತೆ!

ಕಾರುಗಳ್ಳತನದಲ್ಲಿ ಇಷ್ತಿಯಾಕ್ ಶಿಷ್ಯ ಜುಹೇದ್ ಅಜಿತ್‌ಗೆ ಸಾತು ಕೊಟ್ಟರೆ, ಇಷ್ತಿಯಾಕ್‌ನ ಮತ್ತೊಬ್ಬ ಬಂಟ ಚೀಟರ್ ಇಬ್ರಾಹಿಂ ಉರ್ಫ್ ಡಾಕ್ಟರ್ ಎಂಬಾತನ ಜೊತೆ ಸೇರಿ ಅಜಿತ್ ಮೆಡಿಕಲ್ ಸೀಟ್ ವಂಚನೆಗೂ ಕೈಯಿಟ್ಟ. ಮೆಡಿಕಲ್ ಸೀಟ್ ಕೊಡಿಸುತ್ತೇನೆಂದು ನಾರ್ತ್ ಇಂಡಿಯನ್ ಶ್ರೀಮಂತರಿಂದ ಕಾಸು ಕಿತ್ತು ಪರಾರಿಯಾಗುತ್ತಿದ್ದ ಕ್ರಮೇಣ ನಕಲಿ ಕ್ರೆಡಿಟ್ ಕಾರ್ಡ್ ಬಳಸಿ ಶಾಪಿಂಗ್ ಮಾಲ್‌ಗಳಲ್ಲಿ ವಂಚನೆಗಿಳಿದ. ರೌಡಿಗಳ ಕಣ್ಣು ತನ್ನ ಮೇಲೆ ಬಿದ್ದದ್ದೆ ತಾನು ವೆಪನ್ ಸಪ್ಲೈಯರ್ ಎಂದೂ ತನಗೆ ಮುಂಬಯಿಯ ಹಂತಕರು ಗೊತ್ತೆಂದೂ ಪೋಜು ಕೊಡುತ್ತಿದ್ದ. ಕೊಯಮತ್ತೂರಿನ ಕುಖ್ಯಾತ ವೆಪನ್ ಡೀಲರ್ ನವಾಜ್, ದಿಂಡಿಗಲ್‌ನ ಕುಮಾರ್ ಮತ್ತು ಸತ್ತಿವೇಲು ಮುಂತಾದ ರಿವಾಲ್ವರ್ ಡೀಲರುಗಳ ಜೊತೆಗೂ ಕೈಜೋಡಿಸಿದ್ದ. ಬಿಹಾರದಿಂದಲೂ ರಿವಾಲ್ವರ್ ತರಿಸಿಕೊಂಡು ಇಮ್ರಾನ್ ಮತ್ತು ಇಷ್ತಿಯಾಕ್ ಮೂಲಕ ಮಾರುತ್ತಿದ್ದ.


ಇದು ಪೊಲೀಸರಿಗೆ ಗೊತ್ತಾಗಿ 2007ರಲ್ಲಿ ಸಿಸಿಬಿಗೆ ಸಿಕ್ಕುಬಿದ್ದ. ಅದೇನಾಯಿತೋ, ಅಲ್ಲಿಂದಾಚೆಗೆ ಅಜಿತ್ ಸಿಸಿಬಿ ಪೊಲೀಸರಿಗೆ ಮಾಹಿತಿದಾರನಾದ. ಭಾರತದ ಕುಖ್ಯಾತ ಅಂತರರಾಜ್ಯ ಕಾರುಗಳ್ಳರ ಬಗ್ಗೆ, ಬೆಂಗಳೂರಿಗೆ ಎಲ್ಲೆಲ್ಲಿಂದ ರಿವಾಲ್ವರ್ ಬರುತ್ತದೆ? ಯಾರೆಲ್ಲ ರಿವಾಲ್ವರ್ ಕೊಡುತ್ತಿದ್ದಾರೆ? ಯಾರ್‍ಯಾರ ಬಳಿ ಪಿಸ್ತೂಲಿದೆ? ಎಲ್ಲಿ ಕಾರು ಕಳುವಾದರೆ ಯಾರು ಕದ್ದಿದ್ದಾರೆ? ಇತ್ಯಾದಿ ಪ್ರತಿಯೊಂದಕ್ಕೂ ಸಿಸಿಬಿ ಪೊಲೀಸರು ಅವಲಂಬಿಸುತ್ತಿದ್ದದ್ದು ಅಜಿತ್ ಅಲಿಯಾಸ್ ಸಿಂಗ್‌ನನ್ನೇ!



ಇಂಥ ಸಿಂಗ್ ತಮಗೆ ಮಾಹಿತಿ ಕೊಡುತ್ತಿಲ್ಲ ಎಂದು ಕೆಲ ಪೊಲೀಸ್ ಅಧಿಕಾರಿಗಳಿಗೆ ಸಿಟ್ಟಿತ್ತು. ಬೆಂಗಳೂರಿನ ಇಬ್ಬರು ಡಿಸಿಪಿ ಮಟ್ಟದ ಐಪಿಎಸ್ ಅಧಿಕಾರಿಗಳಿಗೆ ತಾನು ರಿವಾಲ್ವರ್ ಕೊಟ್ಟಿದ್ದೇನೆಂದು ಸಿಂಗ್ ಹೇಳಿಕೊಂಡಿದ್ದ. ಈ ಮಧ್ಯೆ, ಮೂವರು ಸಾಫ್ಟ್‌ವೇರ್ ಇಂಜಿನಿಯರ್‌ಗಳನ್ನು ಯಾರೋ ಕಿಡ್ನಾಪ್ ಮಾಡಿ ಎರಡು ಲಕ್ಷ ಕಿತ್ತ ಘಟನೆ ನಡೆಯಿತು. ಏರ್‌ಪೋರ್ಟ್ ಸಮೀಪದ ಜ್ಯುವೆಲ್ಲರಿ ಅಂಗಡಿಯೊಂದರ ಮಾಲಿಕನನ್ನು ಅಡ್ಡಗಟ್ಟಿ ಇನ್ನಾರೋ ಹತ್ತು ಲಕ್ಷ ದೋಚಿದ ಪ್ರಸಂಗವೂ ನಡೆಯಿತು. ಇದೇ ಥರದ ಒಂದೆರಡು ರಾಬರಿಗಳೂ ವರದಿಯಾದವು. ಮೊದಲೇ ಸಿಂಗ್ ಪೊಲೀಸರಿಂದ ತಲೆ ಮರೆಸಿಕೊಂಡು ಓಡಾಡುತ್ತಿದ್ದನಲ್ಲ; ಬಹುಶಃ ಇದೆಲ್ಲವನ್ನೂ ಆತನೇ ಮಾಡುತ್ತಿರಬೇಕೆಂಬ ಗುಮಾನಿಯೊಂದು ಹಿರಿಯ ಪೊಲೀಸ್ ಅಧಿಕಾರಿ ಅಲೋಕ್‌ಕುಮಾರ್‌ರನ್ನು ಕಾಡತೊಡಗಿತ್ತು. ಪ್ರತಿನಿತ್ಯ ಗ್ಯಾಂಗ್‌ವಾರ್ ಕಾರಣಕ್ಕೆ ಒಂದಲ್ಲ ಒಂದು ಹೆಣ ಬೀಳುತ್ತಿರುವಾಗ ಏನಾದರೂ ಬಿಸಿ ಮುಟ್ಟಿಸಲೇ ಬೇಕಲ್ಲ; ಅದಕ್ಕೆ ಅಜಿತ್‌ಸಿಂಗ್‌ನನ್ನೇ ಎನ್‌ಕೌಂಟರ್ ಮಾಡಿ ತೇಪೆ ಹಾಕುವ ದುಡುಕಿಗೆ ಪೊಲೀಸರು ಬಿದ್ದರೆ?



ಹಿಂದುಮುಂದಿಲ್ಲದ, ಸ್ಥಳೀಯವಾಗಿ ಪ್ರಭಾವಿಯಲ್ಲದ, ಬೆಂಗಳೂರಿಗೆ ಅಪರಿಚಿತನಂತಿರುವ, ಮೇಲುನೋಟಕ್ಕೆ ಯಾರೋ ಮುಂಬಯಿ ಮೂಲದವನಂತೆ ಕಾಣುವ ಅಜಿತ್‌ಸಿಂಗ್‌ನನ್ನೇ ನಿಕಾಲಿ ಮಾಡಿಬಿಟ್ಟರೆ ಪತ್ತೆಯಾಗದ ಒಂದಷ್ಟು ಕೇಸುಗಳನ್ನು ಆತನ ತಲೆಗೆ ಕಟ್ಟಿ ಕೈತೊಳೆದುಕೊಳ್ಳಲು ಟಾಪ್‌ಕಾಪ್‌ಗಳು ನಿರ್ಧರಿಸಿದರೆ?



ಒಂದಂತೂ ಸತ್ಯ, ಅಜಿತ್‌ಸಿಂಗ್‌ನ ಎನ್‌ಕೌಂಟರ್‌ಗೂ ಪೊಲೀಸರು ಹೆಣೆಯುತ್ತಿರುವ ಕತೆಗೂ ಪರಸ್ಪರ ತಾಳೆಯಾಗುತ್ತಿಲ್ಲ. ಸೆಪ್ಟೆಂಬರ್ 8 ರ ರಾತ್ರಿ ಸಂಜಯನಗರದ ಮೆಡಿಕಲ್ ಸ್ಟೋರ್ ಮುಂದೆ ಸಿಂಗ್ ನಿಂತಿದ್ದನಂತೆ. ಹಿಂದಿನಿಂದ ಬಂದ ಫ್ರೇಜರ್‌ಟೌನ್ ಪೇದೆಗಳಾದ ಸಿದ್ದಲಿಂಗ ಮತ್ತು ಕುಮಾರ್ ಆತನನ್ನು ಹಿಡಿದುಕೊಂಡರಂತೆ. ಆದಾಗ್ಯೂ ನುಣುಚಿಕೊಂಡ ಸಿಂಗ್ ತಪ್ಪಿಸಿಕೊಂಡು ಪೊಲೀಸರ ಮೇಲೆ



ತನ್ನ ರಿವಾಲ್ವರ್‌ನಿಂದ ಫೈರ್ ಮಾಡಿದನಂತೆ. ಹಾಗೆ ಹಾರಿದ ಗುಂಡು ಪೊಲೀಸರಿಗೆ ತಾಗದೇ ಯಾರೋ ದಾರಿಹೋಕ ಸುಬ್ಬಾರೆಡ್ಡಿ ಎಂಬಾತನ ಕಾಲಿಗೆ ತಾಗಿತಂತೆ. ಹಾಗಿದ್ದೂ ಆತನ ರಿವಾಲ್ವರಿನಲ್ಲಿ ಇನ್ನೂ ಗುಂಡುಗಳಿರುವುದು ಗೊತ್ತಿದ್ದೂ ಸಾಹಸ ಮಾಡಿದ ಪೇದೆಗಳಾದ ಸಿದ್ದಲಿಂಗ ಮತ್ತು ಕುಮಾರ್ ಆತನನ್ನು ಮತ್ತೆ ಹಿಡಿದು ಡಿ.ಜೆ. ಹಳ್ಳಿ ಠಾಣೆಗೆ ತಂದರಂತೆ. ಮೊದಲು ಪೊಲೀಸರು ಫೈರ್ ಮಾಡಿದ ಸಿಂಗ್ ಅದೇಕ್ಷಣದಲ್ಲಿ ಎರಡನೇ ಬಾರಿಗೆ ಹಿಡಿದಾಗ ಗುಂಡು ಹಾರಿಸಲೇ ಇಲ್ಲವಂತೆ. ಆದರೆ ಮಾರ್ಗ ಮಧ್ಯದಲ್ಲಿ ಪೇದೆ ಸಿದ್ದ ಲಿಂಗನ ಜೇಬಿನಲ್ಲಿದ್ದ ರಿವಾಲ್ವರ್ ಕಿತ್ತು ಕೊಂಡು ಅದರ ಹಿಡಿ ಯಿಂದ ಆತನ ತಲೆಗೆ ಗುದ್ದಿ ಪರಾರಿಯಾದ ನಂತೆ. ಅದೇ ಹೊತ್ತಿಗೆ ಆತನ ಸಹಚರ ಖಲೀಲ್ ನಂಬರ್ ಪ್ಲೇಟ್ ಇಲ್ಲದ ಬಿ ಸ್ಕಾರ್ಪಿಯೋ ಒಂದನ್ನು ತಂದ ನಂತೆ. ಸಿಂಗ್ ಅದೇ ಗಾಡಿಯಲ್ಲಿ ಪರಾರಿ ಯಾದನಂತೆ.

ಹೀಗೆ ಪರಾರಿಯಾದ ಸಿಂಗ್ ಏರ್‌ಪೋರ್ಟ್ ರಸ್ತೆಯ ಹೋಗುತ್ತಿದ್ದಾನೆಂದು ಯಾರೋ ಮಾಹಿತಿದಾರನೊ ಫ್ರೇಜರ್‌ಟೌನ್ ಇನ್ಸ್‌ಪೆಕ್ಟರ್ ಗಿರೀಶ್‌ಗೆ ಮಾಹಿತಿ ಕೊಟ್ಟನಂತೆ. ಆಗ ಚಾಕಲೇಟ್ ಬಾಗಲೂರಿನ ಹೂವಿನಾಯಕನಹಳ್ಳಿ ಕ್ರಾಸ್ ಬಳಿ ಹೊಂಚು ಹಾಕಿ ಕಾದಿದ್ದ ಇನ್ಸ್‌ಪೆಕ್ಟರ್ ಗಿರೀಶ್ ಮೇಲೆ ಸ್ಕಾರ್ಪಿಯೋ ಗಾಡಿಯಲ್ಲಿ ಕೂತೇ ಸಿಂಗ್ ಗುಂಡು ಹಾರಿಸಿದರಂತೆ. ಆದರೆ ಗಿರೀಶ್ ರಿವಾಲ್ವರಿನಿಂದ ಹಾರಿದ ಗುಂಡುಮಾತ್ರ ಗಾಡಿಯಲ್ಲಿ ಕೂತಿದ್ದ ಸಿಂಗ್ ತಲೆ ಹೊಕ್ಕಿತಂತೆ.

ಇದು ಪೊಲೀಸರು ಹೊಸೆದ ಅಸಂಬದ್ಧ ಎನ್‌ಕೌಂಟರ್ ಕತೆ. ಘಟನೆ, ಸಮಯ, ಸ್ಥಳ, ವ್ಯಕ್ತಿಗಳು; ಇತ್ಯಾದಿ ಏನೊಂದಕ್ಕೂ ಪರಸ್ಪರ ತಾಳೆಯಾಗುತ್ತಿಲ್ಲ. ಮೊದಲು ತ ರಿವಾಲ್ವರ್‌ನಿಂದ ಪೊಲೀಸರ ಮೇಲೆ ಗುಂಡು ಹಾರಿಸುತ್ತಾ ಅದೇ ಕ್ಷಣದಲ್ಲಿ ಮತ್ತೆ ಪೊಲೀಸರಿಗೆ ಸಿಕ್ಕುಬಿದ್ದಾಗ ತ ಬಳಿ ರಿವಾಲ್ವರ್ ಇದ್ದೂ ಸುಮ್ಮನಿರುತ್ತಾನೆ. ಆತನ ಡಿಜೆಹಳ್ಳಿಗೆ ತಂದ ಪೊಲೀಸರು ಅಲ್ಲಿ ರಿವಾಲ್ವ ಕಿತ್ತಿಟ್ಟುಕೊಳ್ಳುತ್ತಾರಾದರೂ ಹಾಗೇ ತಪ್ಪಿಸಿಕೊಂಡು ಬಂ ಸಿಂಗ್ ಮತ್ತೆ ಹೂವಿನಾಯಕನಹಳ್ಳಿ ಗೇಟ್ ಬಳಿ ಇನ್ಸ್‌ಪೆಕ್ಟರ್ ಗಿರೀಶ್ ಮೇಲೆ ಗುಂಡು ಹಾರಿಸಲು ಅದೆಲ್ಲಿಂದ ರಿವಾಲ್ವರ್ ತಂದ?


ಸರಿ, ಖಲೀಲ್ ತಂದಿದ್ದ ಸ್ಕಾರ್ಪಿಯೋ ಗಾಡಿಯಲ್ಲಿ ರಿವಾಲ್ವರ್ ಇತ್ತು ಎಂದಿಟ್ಟುಕೊಂಡರೂ ಸಿಂಗ್ ಅಲ್ಲಿಗೆ ಬರುತ್ತಾನೆಂದು ಪೊಲೀಸರಿಗೆ ಗೊತ್ತಾಗಿದ್ದು ಯಾವ ಮಾಯೆಯಿಂದ? ಡಿ.ಜೆ. ಹ ಠಾಣೆಯಿಂದ ಆತನನ್ನು ಕರೆತರುವಾಗ ಕೈಗೆ ಕೋಳ ತೊಡಿಸಿರಲಿಲ್ಲ ಅದೂ ಪರಾರಿಯಾಗು ಸಿಂಗ್‌ನ ಕೈಗೆ ಸಿಗುವಂತೆ ಪೇದೆ ಸಿದ್ದಲಿಂ ರಿವಾಲ್ವರನ್ನು ಜೇಬಿನಲ್ಲಿಟ್ಟುಕೊಂಡಿದ್ದನೆ?

ಕಪಟ ಎನ್‌ಕೌಂಟರ್‌ಗೆ ಇದಕ್ಕಿಂತ ಪುರಾ ಬೇಕೆ?


● ವರದಿಗಾ

ಅಜಿತ್‌ಸಿಂಗ್ ಎನ್‌ಕೌಂಟರ್ ಕುರಿತಂತೆ ಪೊಲೀಸರಲ್ಲೇ ಅಸಮಾಧಾನ ಭುಗಿಲೆದ್ದಿದೆ. ವಿಶೇಷವಾಗಿ ಸಿಸಿಬಿ ಪೊಲೀಸರಿಗೆ ಆತನನ್ನು ಮುಗಿಸುವುದು ಅನೇಕಾನೇಕ ರಿವಾಲ್ವರ್ ಪ್ರಕರಣಗಳನ್ನೂ, ಅಂತರರಾಜ್ಯ ಕಾರುಗಳ್ಳರ ಜಾಲವನ್ನೂ ಸಿಸಿಬಿ ಪೊಲೀಸರು ಭೇದಿಸಿದ್ದರು.

ಒಂದು ಮೂಲದ ಪ್ರಕಾರ ಬೆಂಗಳೂರಿನ ಡಿಸಿಪಿ ಮಟ್ಟದ ಇಬ್ಬರು ಐಪಿಎಸ್ ಅಧಿಕಾರಿಗಳಿಗೆ ತಾನು ರಿವಾಲ್ವರ್ ಕೊಟ್ಟಿದ್ದೇನೆಂದು ಸಿಂಗ್ ಹೇಳಿಕೊಂಡಿದ್ದ. ಸರ್ವೀಸ್ ರಿವಾಲ್ವರ್ ಇದ್ದೂ ಸಿಂಗ್‌ನಿಂದ ಅವರೇಕೆ ರಿವಾಲ್ವರ್ ಪಡೆದಿದ್ದರು? ಇದು ನಿಗೂಢ. ಸದ್ಯ ಪೊಲೀಸ್ ವಲಯದಲ್ಲೇ ಹೊಗೆಯಾಡುತ್ತಿರುವ ಮತ್ತೊಂದು ವದಂತಿಯೆಂದರೆ ಇತ್ತೀಚೆಗೆ ಸಿಂಗ್ ಕೊಟ್ಟ ಮಾಹಿತಿ ಮೇರೆಗೇ ಮುಂಬಯಿ ಮೂಲದ ಇಂಟರ್‌ಸ್ಟೇಟ್ ಕಾರುಗಳ್ಳರ ತಂಡವೊಂದನ್ನು ದಕ್ಷಿಣ ವಲಯದ ಪೊಲೀಸರು ಹಿಡಿದಿದ್ದಾರೆ. ಆದರೆ ಅದು ಸುದ್ದಿಯಾಗದೇ ಹಾಗೇ ಮುಚ್ಚಿಹೋಗಿದೆ. ಅದು ಐದು ಕೋಟಿಯ ಡೀಲು. ಹಿಡಿದು ಕಾರುಗಳ್ಳರ ಜಾಲವನ್ನು ಐದು ಕೋಟಿ ಜೇಬಿಗಿಳಿಸಿ ಬಿಟ್ಟು ಕಳಿಸಿದ ಕೆಲ ಹಿರಿಯ ಅಧಿಕಾರಿಗಳ ವಿರುದ್ಧ ಸಿಂಗ್ ಬಾಯಿಬಿಟ್ಟನೆಂಬುದೇ ಆತನಿಗೆ ಮುಳುವಾಯಿತೆ?



ಉತ್ತರ ಕನ್ನಡ ಮ್ಯಾಗಿ-ದೇಶಪಾಂಡೆ ಸಿವಿಲ್ ವಾರ್



ದೇಶಪಾಂಡೆ ರಾಜ್ಯ ಕಾಂಗ್ರೆಸ್ ಅಧ್ಯಕ್ಷಗಾದಿಯಿಂದ ...ಳಿಯುತ್ತಿದ್ದಾರೆ. ಇನ್ನು ಮುಂದೆ ಅವರದೇನಿದ್ದರೂ ...ಯಾಲ ಉತ್ತರಕನ್ನಡ ಜಿಲ್ಲಾ ರಾಜಕೀಯ ಮಾತ್ರ.

ಉತ್ತರ ಕನ್ನಡದ ರಾಜಕೀಯ ಕುಲಗೆಟ್ಟು ಹೋಗಿದೆ. ...ಳಿತಾರೂಢ ಬಿಜೆಪಿ ಅಥವಾ ಎದುರಾಳಿ ಕಾಂಗ್ರೆಸ್ ...ದಲ್ಲೂ ಜಿಲ್ಲೆಯ ನೋವು-ನಲಿವಿಗೆ ಧ್ವನಿಯಾಗುವಂಥ ...ರ್ಥ ನಾಯಕರೇ ಇಲ್ಲ. ಸ್ವಂತ ವರ್ಚಸ್ಸಿನಿಂದ ಗೆದ್ದ ...ರು ಶಾಸಕರನ್ನು ಹೊಂದಿರುವ ಜೆಡಿಎಸ್ ಜಿಲ್ಲಾ ...ಜಕಾರಣದಲ್ಲಿ ಆಟಕ್ಕುಂಟು ಲೆಕ್ಕಕ್ಕೆ ಇಲ್ಲ. ಬತ್ತಿದರೆ ...ಯದ ಪಕ್ಕಾ ಜೊಳ್ಳುಗಳೇ ಲೀಡರ್ ಗತ್ತಿನಿಂದ ಜಿಲ್ಲೆ ...ಲ್ಲಿ ಅಂಡಲೆಯುತ್ತಿದ್ದಾರೆ. ಬಿಜೆಪಿ ಪರ್ವದಲ್ಲಂತೂ ...ಾದೇವಿದಾರರೇ ನೇತಾಗಳಾಗಿ ಹೋಗಿದ್ದಾರೆ!

ಬಿಜೆಪಿ ಅದೆಷ್ಟೇ ಮತಾಂಧ ಮಸಲತ್ತು ಮಾಡಿದರೂ ...ಯಲ್ಲಿ ಕಾಂಗ್ರೆಸ್ ಗಟ್ಟಿಯಾಗೇ ಇತ್ತು. ಯಾವಾಗ ...ಯಿಂದ ಎಂಪಿಯಾಗುವ ದು(ರೂ)ರಾಲೋಚನೆ ಇಟ್ಟು ...ದು ಮ್ಯಾಗಿ ತಾನು ಉತ್ತರ ಕನ್ನಡ ಸೊಸೆಯೆನ್ನುತ್ತ ಪಾದಾರ್ಪಣೆ ...ಡಿದರೋ ಆಗ ಕಾಂಗ್ರೆಸ್‌ನ ಸ್ಥಿತಿ ಅಯೋಮಯ ...ಹೋಯ್ತು. ಎಲ್ಲಿಂದಲೋ ಬಂದ ...ಯ ವಿರುದ್ಧ ಹಳೆ ಹುಲಿಗಳೆಲ್ಲ ...ಗಿಬಿದ್ದವು. ಅದೇ ಹೊತ್ತಿಗೆ ಬಿಜೆಪಿಯ ...ಾಂಧ ಗಾಳಿ ಜಿಲ್ಲೆಯಲ್ಲಿ ಬೀಸಲಾರಂಭಿ... ಹೀಗಾಗಿ ಎಂಪಿಯಾಗುವ ಮ್ಯಾಗಿಯ ...ಸು ನನಸಾಗಲೇ ಇಲ್ಲ. ಮೂಲ ...ಗ್ರೆಸ್ಸಿಗರನ್ನೆಲ್ಲ ಎದುರುಹಾಕಿ ಕೊಂಡು ...ಾಲಾಗಿದ್ದ ಮ್ಯಾಗಿಗೆ ಆಗ ನೆರವಿಗೆ ...ದಾತ ದಳಪತಿ ಆರ್.ವಿ.ದೇಶ ...ಂಡೆ!



ಮಾರ್ಗರೆಟ್ ಆಳ್ವಾ

...ದೇವೇಗೌಡ-ಜನತಾದಳ-ರಾಮಕೃಷ್ಣ ...ಡೆಜೀಯ ನವನಿರ್ಮಾಣ ವೇದಿಕೆ- ...ಪಿ ಎಂದೆಲ್ಲ ಅಲೆದು ಒಂಥರಾ ...ಶರಪಿಶಾಚಿ ಯಂತಾಗಿದ್ದ ದೇಶ ...ಂಡೆ ಆ ಹೊತ್ತಲ್ಲಿ ಕಾಂಗ್ರೆಸ್ ಸೇರುವುದು ...ವಾರ್ಯವಾಗಿತ್ತು. ದೇಶಪಾಂಡೆಯಂಥ ಗೋಲ್‌ಮಾಲ್ ...ಕ್ ಕಾಂಗ್ರೆಸ್‌ಗೆ ಬಂದರೆ ತನ್ನ ಎಂಪಿಗಿರಿ ಆಸೆ ...ೇರಬಹುದೆಂದು ಮ್ಯಾಗಿಯಮ್ಮ ಲೆಕ್ಕಾಚಾರ ಹಾಕಿದರು. ...ಗಿಯ ಸ್ಥಳೀಯ ವಿರೋಧಿಗಳ ಕೌಂಟರ್ ಮಾಡುವ ...ತ್ತು ಈ ಪಳಗಿದ ಪುಢಾರಿಗಿತ್ತು. ಮ್ಯಾಗಿ ದಿಲ್ಲಿ ಮಟ್ಟದಲ್ಲಿ ...ಬ ಮುತುವರ್ಜಿ ವಹಿಸಿ ದೇಶಪಾಂಡೆ ಯನ್ನು ...ಗ್ರೆಸ್‌ಗೆ ಸೇರಿಸಿಕೊಂಡರು.

...ಒಮ್ಮೆ ಸೋತಿದ್ದ ಮ್ಯಾಗಿ ದೇಶಪಾಂಡೆಯ ತಂತ್ರಗಾರಿಕೆ ...ದ ಲೋಕಸಭೆ ಸದಸ್ಯರೇನೋ ಆದರು. ದೇಶಪಾಂಡೆ ...ಎಂ. ಕೃಷ್ಣರ ಕ್ಯಾಬಿನೆಟ್‌ನಲ್ಲಿ ಸಮೃದ್ಧ ದೊಡ್ಡ ಕೈಗಾರಿಕಾ ...ತ್ರಿಯಾದರು. ಎರಡು-ಮೂರು ದಶಕದಿಂದ ಹಿಂಬಾಗಿಲ ...ಸಭೆ) ರಾಜಕಾರಣ ಮಾಡುತ್ತ ಬಂದಿದ್ದ ಮ್ಯಾಗಿಗೆ ...ಬಾಗಿಲ (ಲೋಕಸಭೆ) ರಾಜಕಾರಣದ ಪಟ್ಟುಗಳು-ಜನರ ...ಮಿಡಿತ ಅರಿವ ಕಲೆ ಅದ್ಯಾಕೋ ಸಿದ್ಧಿಸಲೇ ಇಲ್ಲ. ...ಪಿಯಾದ ಕೆಲವೇ ದಿನದಲ್ಲಿ ಪಾಳೆಗಾರಿ ಪ್ರವೃತ್ತಿಯ ದೇಶಪಾಂಡೆಯೊಂದಿಗಿನ ಆಕೆಯ ಸಂಬಂಧ ಹಳಸಿಹೋಯ್ತು. ಜಿಲ್ಲೆಯ ರಾಜಕಾರಣ-ಆಡಳಿತದ ಮೇಲೆ ಹಿಡಿತ ಸಾಧಿಸಲು ಇಬ್ಬರೂ ನಿರ್ಲಜ್ಜ-ಅನಾಹುತಕಾರಿ ಪೈಪೋಟಿ ಶುರುಹಚ್ಚಿ ಕೊಂಡರು. ಅಂದು ಆರಂಭವಾಗಿದ್ದ ಮೂಲ ನಿವಾಸಿಗರು-ವಲಸಿಗರೆಂಬ ಮ್ಯಾಗಿ-ಆರ್ವಿಡಿ ಬಣಗಳ ಬಡಿದಾಟ ಇವತ್ತಿಗೂ ನಿಂತಿಲ್ಲ. ಈ ಮದ್ದಾನೆಗಳ ಯುದ್ಧದಲ್ಲಿ ಕಾಂಗ್ರೆಸ್ ಬರ್ಬಾದಾಗಿ ಹೋಯ್ತು. ಕಾಂಗ್ರೆಸ್‌ನ ಈ ವೀಕ್‌ನೆಸ್ ಕೋಮುವಾದಿ ಬಿಜೆಪಿಗೆ ವರವಾಯ್ತು. ಮ್ಯಾಗಿ ತಾನು ದಿಲ್ಲಿಯ ಅಧಿನಾಯಕಿ ಸೋನಿಯಾರ ಆಪ್ತ ಸಖಿ ಎಂದು ಅದೆಷ್ಟೇ ಗುಟುರು ಹಾಕಿದರೂ ದೇಶಪಾಂಡೆ ಆಕೆಯನ್ನು ತುಂಬ ಸುಲಭವಾಗಿ ಓವರ್ ಟೇಕ್ ಮಾಡುತ್ತಲೇ ಬಂದಿದ್ದಾರೆ.

ಕಳೆದ ಲೋಕಸಭೆಯಲ್ಲಿ ಮ್ಯಾಗಿ ಪಕ್ಷದ ಒಳಸುಳಿ ಯಿಂದಾಗಿ ಸಣ್ಣ ಅಂತರದಲ್ಲಿ ಅನಾಹುತಕಾರಿ ಅನಂತ್ಕಾಣಿ ಎದುರು ಸೋಲಬೇಕಾಯ್ತು. ಇದಕ್ಕೆ ಎರಡು ಕಾರಣ. ಒಂದು ತನ್ನ ಕುಲಕಂಠಿರವನಿಗೇ ಎಂಪಿ ಕ್ಯಾಂಡಿಡೇಟ್ ಮಾಡಲು ವಿಫಲ ಪ್ರಯತ್ನ ಮಾಡಿದ್ದ ಆರ್ವಿ ಒಳಗೊಳಗೇ ಮ್ಯಾಗಿ ಮುಗಿಸಲು ಮಸಲತ್ತು ಮಾಡಿದ್ದು, ಇನ್ನೊಂದು ಕಾರಣ, ಮ್ಯಾಗಿ ಖಾನಾಪುರ-ಕಿತ್ತೂರು (ಬೆಳಗಾವಿ ಜಿಲ್ಲೆ) ಉಸ್ತುವಾರಿಯನ್ನು ತನ್ನ ಮೂರ್ಖ ಮಗ ನಿವೇದಿತ್ ಆಳ್ವನ ಕೈಗೆ ಕೊಟ್ಟಿದ್ದಾಗಿತ್ತು! ಅಮಾವಾಸೆಗೆ-ಹುಣ್ಣಿಮೆಗೆ ಉತ್ತರ ಕನ್ನಡಕ್ಕೆ ಬಂದು ಹೋಗುವ ಈ ಪೊದ್ಮಣಿ ನಿವೇದಿತ್ ಜಿಲ್ಲೆಯಲ್ಲಿ ಅಪರಿಚಿತ! ಇಂಥ ನಿವೇದಿತ್ ಖಾನಾಪುರ ದಿಂದ ಎಮ್ಮೆಲ್ಲೇ ಆಗಬೇಕೆಂಬ ಹಠದಿಂದ ಅಲ್ಲಿಯ ಜನಪ್ರಿಯ ಮುಸ್ಲಿಮ್ ತರುಣ ರಫಿಕ್ ಖಾನಾಪುರೆಯನ್ನು ಕಾಡಿದ್ದು ಒಂದೆರಡು ಥರವಲ್ಲ. ಜನರ ವಿಶ್ವಾಸ ಗಳಿಸಲಾಗದೆ ಎಡವಿಬಿದ್ದ ನಿವೇದಿತ್ ನಿಂದಾಗಿ ಖಾನಾಪುರ-ಕಿತ್ತೂರಲ್ಲಿ ಮ್ಯಾಗಿಗೆ ಓಟು ಹೆಚ್ಚು ಬರಲಿಲ್ಲ.

ಸೇಡಿನ ರಾಜಕಾರಣದಲ್ಲಿ ಮ್ಯಾಗಿಯೇನೂ ಕಮ್ಮಿಯಿಲ್ಲ. ಮ್ಯಾಗಿ ಕಳೆದ ವಿಧಾನಸಭೆ ಚುನಾವಣೆ ಹೊತ್ತಲ್ಲಿ ಸ್ವಪಕ್ಷದ ಹಿತಶತ್ರು ದೇಶಪಾಂಡೆಗೆ ಪಾಠ ಕಲಿಸಲು ಜೆಡಿಎಸ್‌ನ ಸುನಿಲ್ ಹೆಗಡೆಗೆ ಯಾವ ಸಹಕಾರ ಬೇಕೋ ಅದೆಲ್ಲ ಧಾರಾಳವಾಗಿ ಕೊಟ್ಟಿದ್ದರು. ಅಂತೂ ಸತತ ಆರು ಬಾರಿ ಹಳಿಯಾಳದಿಂದ ಆಯ್ಕೆಯಾಗುತ್ತ ಬಂದಿದ್ದ ಆರ್ವಿಡಿ ತಾನೇ ಬೆಳೆಸಿದ ಸ್ವಜಾತಿ ಕೊಂಕಣಿ ಪೋರನಿಗೆ ಶರಣಾಗುವಂತಾಯ್ತು. ಜನರಿಂದ ತಿರಸ್ಕೃತನಾಗಿದ್ದರೂ ತನ್ನ ಕೊಪ್ಪರಿಗೆ ಕಳ್ಳ ಹಣದ ಮಹಿಮೆಯಿಂದ ದೇಶಪಾಂಡೆ ದಿಲ್ಲಿ ಕಾಂಗ್ರೆಸ್‌ನ ಪವರ್ ಬ್ರೋಕರ್‌ಗಳ ಪುರಸ್ಕಾರಕ್ಕೆ ಪಾತ್ರರಾಗಿದ್ದರು. ಮ್ಯಾಗಿ ಅದೆಷ್ಟೇ ಅಡೆತಡೆಯೊಡ್ಡಿದರೂ ಆರ್ವಿಡಿ ಕೆಪಿಸಿಸಿ ಅಧ್ಯಕ್ಷ ರಾಗಿ ಅವತರಿಸಿಬಿಟ್ಟರು. ನಾಯಕತ್ವ ಗುಣ- ಜಾತಿ- ಸಂಘಟನಾ ಚತುರತೆ ಮಾತುಗಾರಿಕೆ ಯಾವುದೂ ಇಲ್ಲದ ಒಂಥರಾ ಬಫೂನ್ ಕ್ಯಾರೆಕ್ಟರ್‌ನ ದೇಶಪಾಂಡೆ ಕಾಂಗ್ರೆಸ್‌ನಂಥ ವಿಲಕ್ಷಣ ಪಾರ್ಟಿಯ ಪ್ರೆಸಿಡೆಂಟ್ ಆಗಿದ್ದು ಬರೀ ಹಣ ಮತ್ತು ದಗಲ್ಬಾಜಿ ತಂತ್ರಗಾರಿಕೆ ಯಿಂದಷ್ಟೇ.

ಯಾವಾಗ ಆರ್ವಿಡಿ ಕೆಪಿಸಿಸಿ ಪಟ್ಟವೇರಿದರೋ ಆಗ ಮ್ಯಾಗಿಯ ಹೊಟ್ಟೆಕಿಚ್ಚಿಗೆ ಪೆಟ್ರೋಲ್ ಸುರಿದಂತಾಯ್ತು. ದಿಲ್ಲಿಯಲ್ಲಿ ತನ್ನನ್ನು ಹೇಳಹೆಸರಿಲ್ಲದಂತೆ ಮಾಡಿ ಕೆಪಿಸಿಸಿ ಕುರ್ಚಿ ದಕ್ಕಿಸಿಕೊಂಡ ದೇಶಪಾಂಡೆಯನ್ನು ಹೈಕಮಾಂಡ್ ಮಟ್ಟದಲ್ಲಿ ಹಣಿಯಲು ಮಾಡಿದ ಯಾವ ಪ್ರಯತ್ನವೂ ಸಕ್ಸಸ್ ಆಗಲಿಲ್ಲ. ಆರ್ವಿಡಿಯ ಕೆಪಿಸಿಸಿ ಅಧ್ಯಕ್ಷ ಯುಗದಲ್ಲಿ ಉತ್ತರ ಕನ್ನಡದ ಮ್ಯಾಗಿ ಹಿಂಬಾಲಕರೆಲ್ಲ ಅಬ್ಬೇಪಾರಿಗಳಂತಾಗಿ ಹೋದರು. ಮ್ಯಾಗಿಯ ಜಾಯಮಾನವೇ ಹಾಗೇ. ಆಕೆ ಜಿಲ್ಲೆಯಲ್ಲೂ ಆರ್ವಿಡಿ ವಿರುದ್ಧ ಒಂದು ಹಂತದವರೆಗೆ ಹೋರಾಡಿ ನಂತರ ಶಸ್ತ್ರಾಸ್ತ್ರ ಕೆಳಗಿಟ್ಟ ರಣರಂಗದಿಂದ ಓಡಿಹೋಗಿದ್ದೇ ಹೆಚ್ಚು. ತನ್ನನ್ನು ನಂಬಿಕೊಂಡಿದ್ದ ಬೆಂಬಲಿಗರ ಬಲಿಗೊಟ್ಟು ತಾನು ಅಂತಃಪುರ ಸೇರಿಕೊಂಡಿದ್ದು ದೊಡ್ಡ ಇತಿಹಾಸವೇ ಜಿಲ್ಲೆಯಲ್ಲಿದೆ.



ಇವತ್ತು ಮ್ಯಾಗಿ ಉತ್ತರ ಕನ್ನಡದಲ್ಲಿ ಅಸ್ತಿತ್ವ ಉಳಿಸಿಕೊಳ್ಳ ಲಾಗದೇ ದುರಹಂಕಾರಿ ದೇಶಪಾಂಡೆ ಮೆರೆಯಲು ಅವಕಾಶವಾಗಿದ್ದಿದ್ದರೆ, ಅದಕ್ಕೆ ಆಕೆಯ ಸ್ವಯಂಕೃತಾಪರಾಧಗಳೇ ಕಾರಣ. ಮ್ಯಾಗಿ ಜಿಲ್ಲೆಯ ಅಭಿವೃದ್ಧಿಗೆ ರಾಜ್ಯಸಭೆ-ಲೋಕಸಭೆ ಸದಸ್ಯೆ ಇದ್ದಾಗ, ಇಲ್ಲದಿದ್ದಾಗಲೂ ಕೋಟಿ-ಕೋಟಿ ರೂಪಾಯಿ ತಂದು ಸುರಿದಿದ್ದಾರೆ. ಆದರೆ ಜನರಿಗ್ಯಾಕೋ ಈಕೆ ನಮ್ಮವಳೆಂಬ ಭಾವನೆ ಬರಲೇ ಇಲ್ಲ. ದಿಲ್ಲಿಯಲ್ಲೇ ಹೆಚ್ಚುಕಾಲ ಕಳೆಯುತ್ತಿದ್ದ ಈಕೆ ಜನ ಸಾಮಾನ್ಯರಿಗೆ ಸುಲಭವಾಗಿ ಕೈಗೆ ಸಿಗುವುದಿಲ್ಲ; ಆಕೆ ಜಿಲ್ಲೆಗೆ ಬಂದಾಗ ಗಡಿಯಲ್ಲಿ ಸ್ವಾಗತಿಸಿ-ಜಿಲ್ಲೆ ಸುತ್ತಾಡಿಸಿ ಕಳಿಸುವವರು-ಆಕೆಯ ಸುತ್ತು ವರಿದಿರುವವರೆಲ್ಲ ಕ್ರಿಮಿನಲ್‌ಗಳು, ದಗಾ ಕೋರರು-ಮಾಜಿ ಸ್ಮಗ್ಲರ್‌ಗಳು ಮತ್ತು ಹೆಸರು ಕೆಡಿಸಿಕೊಂಡವರು. ಇವರ ಮೂತಿ ಕಂಡರೆ ಮೂರು ಮತವೂ ಬೀಳುವುದಿಲ್ಲ.



ನಿವೇದಿತ್ ಆಳ್ವಾ

ಮ್ಯಾಗಿಯಮ್ಮ ಬೆಳೆಸಿದ್ದಾದರೂ ಯಾರನ್ನು ಗೊತ್ತಾ? ಗಂಡಾಗುಂಡಿ ಪುಂಡ ದೀಪಕ್ ಹೊನ್ನಾವರ್, ಕಳ್ಳ ಸಾಗಾಣಿಕೆ ಕೇಸಲ್ಲಿ ಜೈಲಲ್ಲಿದ್ದ ಪೋಂಟೆ ಫರ್ನಾಂಡಿಸ್, ದಗಾಕೋರ ರವೀಂದ್ರನಾಥ ನಾಯ್ಕ್, ಅಕ್ರಮ ಅದಿರು ದಂಧೆ ದೊರೆಗಳಾದ ಶಿವರಾಮ ಹೆಬ್ಬಾರ್-ಪ್ರಸನ್ನ ಘೊಟಗೆ, ಹೇತ್ಲಾಂಡಿ ಅಶೋಕ್ ನಾಯಕ್, ಗೋಲ್‌ಮಾಲ್ ವೀರರಾಮಾ ಮೊಗೇರ್, ಭ್ರಷ್ಟ ಉಪ್ಪೋಣಿ ರಾಯ್ಕರ್..... ಇಂಥ ಅನಾಹುತಕಾರಿ-ಅವಾಂತರಕಾರಿ- ವಿಶ್ವಾಸಾರ್ಹತೆ ಯಿಲ್ಲದವರೇ ಮ್ಯಾಗಿಗೆ ಅತ್ಯಾಪ್ತರು!! ಹಾಗೆಯೇ ಮ್ಯಾಗಿ ದೇಶಪಾಂಡೆಯಷ್ಟೇ ಡೇಂಜರ್ ಜಾತಿವಾದಿ. ಫಾದರ್‌ಗಳು-ಬಿಷಪ್‌ಗಳು ಹೇಳಿದ ಚಾಡಿಯೇ ಆಕೆಗೆ ದೇವವಾಣಿ! ಮ್ಯಾಗಿ ಜಿಲ್ಲೆಗೆ ಬಂದು ಹತ್ತಿರತ್ತಿರ ಎರಡು ದಶಕ ಕಳೆಯುತ್ತಾ ಬಂದಿದೆ. ಆದರೂ ಆಕೆಗೆ ಇಲ್ಲಿಯ ರಾಜಕೀಯ-ಸಾಮಾಜಿಕ-ಧಾರ್ಮಿಕ-ಆರ್ಥಿಕ-ಸ್ಥಿತಿಗತಿಗಳ ಪರಿಚಯವಾಗಿಲ್ಲ. ಜಿಲ್ಲಾಡಳಿತ ಅಥವಾ ಪಕ್ಷಾಡಳಿತದ ಮೇಲೊಂದು ಹಿಡಿತ ಸಾಧಿಸಲು ಆಗಿಲ್ಲ. ಇದೆಲ್ಲ ಆಕೆ ಉತ್ತರ ಕನ್ನಡದಲ್ಲಿ ವಿಫಲವಾಗಲು ಮುಖ್ಯ ಕಾರಣ.

ದೇಶಪಾಂಡೆಯ ದಾದಾಗಿರಿಯಿಂದ ರೋಸತ್ತು ಹೋಗಿದ್ದ ಜಿಲ್ಲೆಯ ಜನರು ಆತನಿಗೆ ಮ್ಯಾಗಿ ಸಡ್ಡು ಹೊಡೆದು ನಿಂತಾಗ ಹೊಸ ಭರವಸೆ ಮೂಡಿತ್ತು. ಆತನ ಫ್ಯೂಡಲ್ ಪಾಲಿಟಿಕ್ಸ್ ಮ್ಯಾಗಿ ಮುಗಿಸಬಹುದೆಂದು ಭಾವಿಸಿದ್ದರು. ದಿಲ್ಲಿಯಲ್ಲಿ ಪವರ್‌ಫುಲ್ ಆಗಿರುವುದರಿಂದ ಆಕೆ ಸಮರ್ಥ ನಾಯಕತ್ವ ನೀಡಬಹುದೆಂದು ಜನರು ನಿರೀಕ್ಷಿಸಿದ್ದರು. ದೇಶಪಾಂಡೆಯ ಹೊಡೆತಗಳ ತಾಳಲಾಗದೆ ಸದ್ಯಕ್ಕಂತೂ ಮ್ಯಾಗಿ ಕಾಂಗ್ರೆಸ್ ರಾಜಕಾರಣದಿಂದ, ಅದರಲ್ಲೂ ಉತ್ತರ ಕನ್ನಡದಿಂದ ಪಲಾಯನ ಮಾಡಿದ್ದಾರೆ. ನಂಬಿದ ಬಂಟರ-ಬೆಂಬಲಿಗರ ನಡುನೀರಲ್ಲಿ ಬಿಟ್ಟು ಉತ್ತರಾಖಂಡದ ರಾಜ್ಯಪಾಲೆಯಾಗಿ ಹೋಗಿದ್ದಾರೆ. ಮ್ಯಾಗಿಯ ನಿರ್ಗಮನದ ನಂತರ ಇಡೀ ಜಿಲ್ಲಾ ಕಾಂಗ್ರೆಸ್ ದೇಶಪಾಂಡೆಯ ಪಾರುಪತ್ಯಕ್ಕೆ ಒಳಪಟ್ಟಿದೆ. ಹಾಗಂತ ಮ್ಯಾಗಿಯೇನೂ ಉತ್ತರ ಕನ್ನಡದ ನಂಟು ಕಡಿದುಕೊಂಡಿಲ್ಲ. ತನ್ನ ಪೆದ್ದು ಪುತ್ರ ನಿವೇದಿತ್‌ನನ್ನು ಕುಮಟಾದಿಂದ ಎಮ್ಮೆಲ್ಲೆ ಮಾಡುವ ಪ್ಲಾನ್ ಹಾಕಿಕೊಂಡು ಕರಾಮತ್ತು ನಡೆಸಿದ್ದಾರೆ. ಅದಕ್ಕಾಗಿಯೇ ಕುಮಟೆಯಲ್ಲಿ ಹೆಚ್ಚಿರುವ ಬುಡಕಟ್ಟು ಜನಾಂಗದ ಹಾಲಕ್ಕಿ ಒಕ್ಕಲಿಗರ ಸಮುದಾಯ ಪರಿಶಿಷ್ಟ ಜಾತಿಗೆ ಸೇರಿಸಲು ಮ್ಯಾಗಿ ಮುಂದಾಗಿದ್ದಾರೆಂದು ಆಕೆಯ ವಿರೋಧಿಗಳು ಕುಹಕವಾಡು ತ್ತಿದ್ದಾರೆ.

ಹೀಗೆ ಜಿಲ್ಲಾ ಕಾಂಗ್ರೆಸ್‌ನಲ್ಲಿ ದೇಶಪಾಂಡೆ ಬಣ ಕೈಮೇಲಾಗಿರುವುದು ಮ್ಯಾಗಿಯ ನಿಷ್ಠಾವಂತರನ್ನು ಕಂಗಾಲಾಗಿಸಿ ಬಿಟ್ಟಿದೆ. ದಿಲ್ಲಿಯಲ್ಲಿ ತಮ್ಮ ನಾಯಕಿ ವೀಕ್ ಎಂಬುವು ದವರಿಗೆ ಅರ್ಥವಾಗಿಹೋಗಿದೆ. ಈ ವರದಿ ಸಿದ್ಧವಾಗುತ್ತಿರುವ ವೇಳೆಗೆ ಕಾರವಾರಕ್ಕೆ ಖಾಸಗಿ ಕಾರ್ಯಕ್ರಮಕ್ಕೆಂದು ಬಂದಿದ್ದ ಮ್ಯಾಗಿಗೆ ಆಕೆಯ ಬೆಂಬಲಿಗರು ತಮ್ಮನ್ನು ದೇಶಪಾಂಡೆಯ ದಾದಾಗಿರಿಯಿಂದ ಬಚಾವ್ ಮಾಡುವಂತೆ ದುಂಬಾಲು ಬಿದ್ದಿದ್ದಾರೆ. "ಒಂದೋ ರಾಜ್ಯಪಾಲೆ ಹುದ್ದೆ ಬಿಟ್ಟು ರಾಜಕೀ ಯಕ್ಕೆ ಬನ್ನಿ.... ಇಲ್ಲವೇ ಬೇರೆ ಪಕ್ಷಕ್ಕೆ ಹೋಗಲು ನಮ್ಮನ್ನು ಬಿಡಿ...." ಎಂದು ಬೊಬ್ಬೆ ಹಾಕಿದ್ದಾರೆ. ಹೇತ್ಲಾಂಡಿ ಮ್ಯಾಗಿಯೋ "ಕೆಲವೇ ದಿನ ಸಮಾಧಾನದಿಂದಿರಿ... ಆಮೇಲೆ ಆ ದೇಶಪಾಂಡೆಯ ಕೆಪಿಸಿಸಿ ಅಧ್ಯಕ್ಷತೆ ಹೋಗುತ್ತದೆ... ಹೊಸ ಅಧ್ಯಕ್ಷರು ಬಂದಾಗ ನಿಮ್ಮ ಬೇಡಿಕೆ ಈಡೇರಿಸ್ತೇನೆ...." ಎಂದು ಹಲುಬಿದ್ದಾರೆ.

ಈಗ ಮ್ಯಾಗಿ ಹಿಂಬಾಲಕರೇ ಹಲವು ಅನುಮಾನದಲ್ಲಿದ್ದಾರೆ. ತನಗಾಗದ ವರ ನಿರ್ದಯವಾಗಿ ಹೊಸಕಿ ಹಾಕುವ, ಸಾಮ-ಭೇದ-ದಂಡ ಬಳಸಿ ಕಾಡುವ ರಕ್ಕಸ ದೇಶಪಾಂಡೆಗೆ ಅಂಕುಶ ಇಡಲು ಮ್ಯಾಗಿ ಯಿಂದ ಸಾಧ್ಯವೇ? ಕೆಪಿಸಿಸಿ ಅಧ್ಯಕ್ಷತೆ ಇಲ್ಲದಿದ್ದಾಗಲೂ ನಮ್ಮನ್ನು ತಿಳಿದಿರುವ ಈ ದೇಶಪಾಂಡೆಗೆ ಸೆಡ್ಡು ಹೊಡೆಯುವ ತಾಕತ್ತು ನಮ್ಮ ಗಾಡ್‌ಮದರ್‌ಗೆ ಬರಬಹುದೇ? ದಿಲ್ಲಿಯಲ್ಲಿ ಮ್ಯಾಗಿ ಮಾತಿಗಿಂತ ದೇಶ ಪಾಂಡೆಯ ಕರಾಮತ್ತುಗಳಿಗೆ ಕಿಮ್ಮತ್ತು ಹೆಚ್ಚಿಲ್ಲವೆ? ದೇಶ ಪಾಂಡೆ ಶಿಷ್ಯರಂತೂ ತಮ್ಮ ಬಾಸ್ ಎದುರು ಮ್ಯಾಗಿ ಆಟ ನಡೆಯದೆಂದು ಠೇಂಕರಿಸುತ್ತಿದ್ದಾರೆ. ಒಟ್ಟಿನಲ್ಲಿ ದೇಶಪಾಂಡೆ-ಮ್ಯಾಗಿಯ ಬಣಪ್ರತಿಷ್ಠೆಯ ಮೇಲಾಟದಲ್ಲಿ ಕಾಂಗ್ರೆಸ್‌ಗೆ ಕೇಡುಗಾಲ ಬಂದಿದೆ. ಹಾಗಂತ ನಿಷ್ಠಾವಂತ ಕಾಂಗ್ರೆಸಿಗರು ಹಣೆಹಣೆ ಚಪ್ಪಿಕೊಳ್ಳುತ್ತಿದ್ದಾರೆ.

• ನಹುಶ

ಮ್ಯಾಗಿ ಬೆಂಬಲಿಗರನ್ನು ಮುಗಿಸುತ್ತಿರುವ ದೇಶಪಾಂಡೆ

ಈಗ ಮತ್ತೆ ದೇಶಪಾಂಡೆ 'ಅಸ್ತ್ರ' ಕೈಗೆತ್ತಿಕೊಂಡು ಮ್ಯಾಗಿ ಹಿಂಬಾಲಕರ ಸಂಹರಿಸಲಾರಂಭಿಸಿದ್ದಾರೆ. ಜಿಲ್ಲಾ ...ಂಗ್ರೆಸ್ ಸಾಂಸ್ಥಿಕ ಚುನಾವಣೆಯಲ್ಲಿ ದೇಶಪಾಂಡೆ ಬಣದ್ದೇ ಮನೋಪಲಿ. ಜಿಲ್ಲೆಯ 14 ಬ್ಲಾಕ್ ಕಾಂಗ್ರೆಸ್ ...ಮಿಟಿಗಳಲ್ಲಿ ಕಾರವಾರ ಒಂದನ್ನು ಬಿಟ್ಟರೆ ಉಳಿದೆಲ್ಲೆಡೆ ದೇಶಪಾಂಡೆ ಪಡೆಯವರೇ ಅಧ್ಯಕ್ಷರಾಗಿದ್ದಾರೆ. ಇವರಲ್ಲಿ ...ಹುತೇಕರು ಆರ್ವಿಡಿಯ ಪೂರ್ವಾಶ್ರಮದ ಜನತಾದಳದ ದಂಡಪಿಂಡ ದಳವಾಯಿಗಳು. ಜಿಲ್ಲೆಯಿಂದ ಕೆಪಿಸಿಸಿಗೆ ...ಸ್ಯರಾಗಿ ಹೋಗಿರುವವರಲ್ಲಿ ಮ್ಯಾಗಿ ಬಣದ ಒಬ್ಬೇ ಒಬ್ಬನಿಲ್ಲ. ಇವರಲ್ಲಿ ಅನೇಕರು ಕಳೆದ ಅಸೆಂಬ್ಲಿ-ಪಾರ್ಲಿಮೆಂಟ್ ...ಲೆಕ್ಷನ್ ಹೊತ್ತಲ್ಲಿ ದೇಶಪಾಂಡೆಯ ರಹಸ್ಯ ಕಾರ್ಯಸೂಚಿಯಂತೆ ಪಾರ್ಟಿ ಕ್ಯಾಂಡಿಡೇಟ್ ವಿರುದ್ಧ ಕೆಲಸ ...ಾಡಿದವರು ಅಥವಾ ಬಿಜೆಪಿಗೆ ಹೋಗಿಬಂದವರು. ಒಟ್ಟಿನಲ್ಲಿ ದೇಶಪಾಂಡೆ ಮ್ಯಾಗಿ ಬಣವನ್ನು ನಾಮಾವಶೇಷ ...ಾಡಿಬಿಟ್ಟಿದ್ದಾರೆ. ಸಾಕ್ಷಾತ್ ಮ್ಯಾಗಿ ಮಗನಿಗೇ ಶಿರಸಿಯಿಂದ ಕೆಪಿಸಿಸಿ ಸದಸ್ಯನಾಗಲು ಆರ್ವಿಡಿ ಬಿಟ್ಟಿಲ್ಲ.

ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷರಾಗಿ ಮ್ಯಾಗಿ ಬಣದ ವಿರೋಧಿ ಭೀಮಣ್ಣ ನಾಯ್ಕರನ್ನು ತರಲು ದೇಶಪಾಂಡೆ ಸ್ಕೆಚ್ ...ಕಿದ್ದಾರೆ. ಈ ಭೀಮಣ್ಣ 'ಬಂ'ರ ಭಾಮೈದ. ಮೊನ್ನೆ-ಮೊನ್ನೆಯಷ್ಟೇ 'ಬಂ' ಜೊತೆ ಕಾಂಗ್ರೆಸ್ ಸೇರಿರುವಾತ. ...ೊದಲು ಯಲ್ಲಾಪುರದ ಶಿವರಾಮ ಹೆಬ್ಬಾರ್‌ನನ್ನು ಡಿಸಿಸಿ ಕಿಂಗ್ ಮಾಡಲು ದೇಶಪಾಂಡೆ ಯೋಚಿಸಿದ್ದರು. ...ಸಿಸಿ ಬ್ಯಾಂಕಿನ ಅಧ್ಯಕ್ಷ ಆಯ್ಕೆ ಹೊತ್ತಲ್ಲಿ ಹೆಬ್ಬಾರ್‌ಗೆ ಡಿಸಿಸಿ ಅಧ್ಯಕ್ಷನಾಗಿಸುವ ಭರವಸೆ ದೇಶಪಾಂಡೆ ಕೊಟ್ಟಿದ್ದರು. ...ಲಿ ಡಿಸಿಸಿ ಅಧ್ಯಕ್ಷ ಶಾಂತರಾಮ ಹೆಗಡೆ ಎಂಬ ಪಕ್ಕ ದ್ರೋಹಿಂಗೆ ಕೆಪಿಸಿಸಿ ಬ್ಯಾಂಕ್ ಅಧ್ಯಕ್ಷತೆ ಕೊಡಿಸಲು ಈ ...ಟ್ಯಾಸುಸಂಧಾನ ದೇಶಪಾಂಡೆ ಮಾಡಿದ್ದರು. ಆದರೆ ಈ ಹೆಬ್ಬಾರ್ ಮ್ಯಾಗಿಗೂ ಬೇಕಾದವನೆಂಬ ಕಾರಣಕ್ಕೆ ...ೇಶಪಾಂಡೆ ಈಗ ಆತನಿಗೆ ದೋಖಾ ಕೊಟ್ಟಿದ್ದಾರೆ.

▸▸ ಕಾರ್ಟೂನ್ ಕಾರ್ನರ್





ವಿಕೃತ ರಂಜನೆ

ಚಾನೆಲ್‌ಗಳು ಮನುಷ್ಯ ಸಹಜ ದುಃಖ, ತೊಳಲಾಟಗಳನ್ನೇ ಬಂಡವಾಳ ಮಾಡಿಕೊಳ್ಳುತ್ತಿವೆ. ರಿಯಾಲಿಟಿ ಶೋಗಳ ಹೆಸರಲ್ಲಿ ತುಳಿತಕ್ಕೊಳಗಾದವರ ವೈಯಕ್ತಿಕ ಬದುಕನ್ನು ಸಾರ್ವಜನೀಕರಿಸಿ ಅದರಲ್ಲೂ ಲಾಭ ಹೊಂಚುತ್ತಿವೆ. ಇಂಥ ಕಾರ್ಯಕ್ರಮಗಳ ಪೈಕಿ ತೀರಾ ವಿಕೃತವಾದುದು ಸುವರ್ಣ ಚಾನೆಲ್‌ನ 'ಹಳ್ಳಿ ಹೈದ ಪ್ಯಾಟೆಗ್ ಬಂದ' ಎಂಬ ಕಾರ್ಯಕ್ರಮ. ಹಳ್ಳಿಹುಡುಗರು, ಆದಿವಾಸಿ ಹುಡುಗರನ್ನು ನಗರದ ನಾಗರಿಕ(?) ಸಂಸ್ಕೃತಿಯ ಎದುರು ನಿಲ್ಲಿಸಿ, ಆ ಹುಡುಗರು ಯಾವ ಕೆಲಸಕ್ಕೂ ಲಾಯಕ್ಕಲ್ಲ ಎಂದು ತೋರಿಸಿ, ಆ ಹುಡುಗರಲ್ಲಿ ಕೀಳರಿಮೆ ಹುಟ್ಟಿಸಿ ವೀಕ್ಷಕರಿಗೆ ವಿಕೃತ ರಂಜನೆ ಒದಗಿಸುವುದೇ ಈ ಕಾರ್ಯಕ್ರಮದ ತಿರುಳು.

• ಅರುಣ್ ಕುಮಾರ್.ಜಿ
arunodayagc@gmail.com

ಮಾರುಕಟ್ಟೆಯ ಗುಲಾಮಗಿರಿಗಿಳಿದು, ಪಶ್ಚಿಮದ ಕೊಳ್ಳುಬಾಕ ಸಂಸ್ಕೃತಿಯನ್ನು ಪ್ರಮೋಟ್ ಮಾಡುತ್ತಿರುವ ಟಿ.ವಿ. ಚಾನೆಲ್‌ಗಳು ತಮ್ಮ ಟಿಆರ್‌ಪಿ ಹೆಚ್ಚಿಸಿಕೊಳ್ಳಲು ಹೆಣ್ಣನ್ನು ಹರಾಜಿಗಿಟ್ಟದ್ದಾಯಿತು, ಕ್ರೈಂಸ್ಟೋರಿಗಳ ಮುಖಾಂತರ ಅಪರಾಧಗಳಿಗೆ ಕುಮ್ಮಕ್ಕು ಕೊಟ್ಟದ್ದಾಯಿತು, ಮಾಟ-ಮಂತ್ರಗಳನ್ನು ವೈಭವೀಕರಿಸಿ, ಕವಡೆ ಜ್ಯೋತಿಷಿಗಳನ್ನು ಟೀವಿ ಮುಂದೆ ಕೂರಿಸಿ ಮುಗ್ಧ ಜನರ ಮನಸ್ಸನ್ನು ಗಬ್ಬೆಬ್ಬಿಸಿದ್ದೂ ಆಯಿತು... ಈಗ ಅಮಾಯಕ ಹಳ್ಳಿಗರನ್ನು, ಪ್ರಪಂಚವೇ ಗೊತ್ತಿರದ ಬಡಪಾಯಿ ಬುಡಕಟ್ಟು ಹುಡುಗರ ಬದುಕನ್ನೂ ಹಾಳುಮಾಡಿ, ಗಿನ್ನಿಪೆಗ್ ಮಾಡಿಕೊಂಡು ವಿಕೃತ ಶೋ ನೀಡುತ್ತಿವೆ.

ಇದು ಸುವರ್ಣ ವಾಹಿನಿಯ ಹೊಸ ಕೊಡುಗೆ..

ಈ ಹಿಂದೆ ಸುವರ್ಣ ವಾಹಿನಿಯಲ್ಲಿ ಪ್ರಸಾರವಾಗುತ್ತಿದ್ದ 'ಸ್ವಯಂವರ' ಮತ್ತು 'ಪ್ಯಾಟೇ ಹುಡ್ಗೀರ್ ಹಳ್ಳಿಗ್ ಬಂದ್ರು' ಕಾರ್ಯಕ್ರಮಗಳಲ್ಲಿ ಯುವತಿಯರೇ ಬಂಡವಾಳವಾಗಿದ್ದರು. 'ಸ್ವಯಂವರ' ಕಾರ್ಯಕ್ರಮದಲ್ಲಿ ಜೂನಿಯರ್ ಆರ್ಟಿಸ್ಟುಗಳನ್ನು ಕರೆತಂದು ವಧು-ವರರೆಂದು ನಂಬಿಸಿ, ಜನರ ಕಣ್ಣಿಗೆ ಮಣ್ಣೆರಚುವ ಪ್ರಯತ್ನವನ್ನು 'ಲಂಕೇಶ್' ಬಯಲಿಗೆಳೆದಿತ್ತು. 'ಪ್ಯಾಟೇ ಹುಡ್ಗೀರ್..' ಕಾರ್ಯಕ್ರಮದಲ್ಲಿ ಸಿನಿಮಾಗಳಲ್ಲಿ ಸಣ್ಣಪುಟ್ಟ ಪಾರ್ಟ್ ಮಾಡಿಕೊಂಡು, ಕತ್ತಲ ಪಾರ್ಟಿಗಳಲ್ಲಿ ಕುಣಿಯುವ ಒಂದಷ್ಟು ಬೆಂಗಳೂರಿನ ಡಿಂಗೋ ಹುಡುಗಿಯರಿಗೆ ಮೂರಿಂಚಿನ ಬಟ್ಟೆಗಳನ್ನು ಹಾಕಿಸಿ ಹಳ್ಳಿಯಲ್ಲಿ ಅವರು ಹೇಗೆ ಜೀವನ ಮಾಡಬಲ್ಲರು ಎಂಬುದನ್ನು ತೋರಿಸಿದ್ದರು.







ಹಳ್ಳಿಗರ ಮೇಲೆ ಕ್ರೂರ ಕಣ್ಣು!

ಒಂದೆರಡು ವಾರಗಳಿಂದ ಪ್ರಸಾರವಾಗುತ್ತಿರುವ 'ಹಳ್ಳಿಹೈದ ಪ್ಯಾಟೆಗ್ ಬಂದ' ಎಂಬ ದಟ್ಟದರಿದ್ರದ ಕಾರ್ಯಕ್ರಮ ಈಗ ಸಿಕ್ಕಾಪಟ್ಟೆ ಪ್ರಚಾರ ಪಡೆದಿದೆ. ಎಲ್ಲೋ ಕಾಡು ಮೇಡುಗಳಲ್ಲಿ ಸ್ವಚ್ಛಂದವಾಗಿ ಓಡಾಡಿಕೊಂಡು, ನೆಮ್ಮದಿಯ ಜೀವನ ನಡೆಸಿಕೊಂಡಿದ್ದ ಸೋಲಿಗ, ಜೇನುಕುರುಬ, ಸಿದ್ದಿ ದಲಿತ, ಮಾವುತರಂತ ಆರಣ್ಯವಾಸಿ ಹುಡುಗರನ್ನು ಕರೆದುಕೊಂಡು, ಅವರಿಗೆ ಕೊಡಬಾರದ ಕಾಟ ಕೊಟ್ಟು ಜನರಿಗೆ ವಿಕೃತ ಮನರಂಜನೆಯನ್ನು ನೀಡುತ್ತಿದ್ದಾರೆ.



ಕರ್ನಾಟಕದ ಕೆಲವು ಬುಡಕಟ್ಟು ಜನಾಂಗದ ಹುಡುಗರನ್ನು ಬೆಂಗಳೂರಿಗೆ ಕರೆತಂದು ಪ್ರಾಣಿಗಳಿಗಿಂತ ಹೀನವಾಗಿ ಬಳಸಿಕೊಳ್ಳುತ್ತಿದ್ದಾರೆ. ನೀರಿನಲ್ಲಿ ಬದುಕುವ ಮೀನನ್ನು ತೆಗೆದು ಭೂಮಿಗೆ ಬಿಟ್ಟರೆ ಅದೆಂಥಾ ಹಿಂಸೆಯಾಗಬಹುದು... ಈ ಹುಡುಗರ ಸ್ಥಿತಿಯೂ ಹಾಗೇ ಆಗಿದೆ.

ಈ ರಿಯಾಲಿಟಿ ಶೋದಲ್ಲಿ ಪ್ರತಿ ಆದಿವಾಸಿ ಹುಡುಗರಿಗೆ ಒಬ್ಬೊಬ್ಬ ಪ್ಯಾಟೆ ಹುಡುಗಿಯರನ್ನು ಜೊತೆಯಾಗಿ (ಎಜೆ) ನೇಮಿಸಲಾಗಿದೆ, ಈ ಹುಡುಗಿಯರು ಹಾಕುವ ತುಂಡು ಚಡ್ಡಿಗಳು, ವೇಷಭೂಷಣ ಎಲ್ಲವೂ ಚಿತ್ರವಿಚಿತ್ರ. ಇನ್ನು ಆ ಹುಡುಗಿಯರಿಗೆ ನಾಲಗೆ ಮೇಲೆ ಹಿಡಿತವೇ ಇಲ್ಲ, ತಮ್ಮ ಮೂಲ ಪರಿಸರವನ್ನು ಬಿಟ್ಟು ಬೆಂಗಳೂರಿಗೆ ಬಂದಿರುವ ಈ ಹುಡುಗರನ್ನು ಬ್ಯೂಟಿ ಪಾರ್ಲರುಗಳಿಗೆ ಕರೆದೊಯ್ದು ಅವರ ಮೈಮೇಲಿನ ಕೂದಲುಗಳನ್ನು (ವ್ಯಾಕ್ಸ್) ಕೀಳಿಸಿ, ಫೇಷಿಯಲ್ ಮಾಡಿಸಿ, ತಲೆಗೂದಲಿಗೆ ಬಣ್ಣ ಬಳಿಸಿದ್ದಾರೆ.

ತಲೆಕೆಟ್ಟ ಟಾಸ್ಕ್‌ಗಳು

ಈ ಕಾರ್ಯಕ್ರಮವನ್ನು ರೂಪಿಸುತ್ತಿರುವ ಕ್ರಿಯೇಟೀವ್ ಟೀಂನವರ ತಲೆಗೆ ಗೆದ್ದಲು ಹಿಡಿದಿರೋದು ಸ್ಪಷ್ಟವಾಗಿ ಗೋಚರಿಸುತ್ತಿದೆ. ಕಾಡುಮೇಡು, ಬೆಟ್ಟಗುಡ್ಡಗಳಲ್ಲಿ ಓಡಾಡುತ್ತಾ ಪ್ರಾಣಿ, ಪಕ್ಷಿಗಳೊಂದಿಗೆ ಅವಿನಾಭಾವ ಸಂಬಂಧ ಹೊಂದಿರುವ ಈ ಹುಡುಗರನ್ನು ಬೆಂಗಳೂರಿನ ಎಂ.ಜಿ.ರೋಡ್ ಹಾಗೂ ಬ್ರಿಗೇಡ್ ರೋಡುಗಳಿಗೆ ತಂದುಬಿಡುತ್ತಾರೆ. ಜೊತೆಗೆ ಅನತಿ ದೂರದಲ್ಲೇ ನಿಂತು ಮೊಬೈಲ್‌ನಲ್ಲಿ 'ಮಾರ್ಗದರ್ಶನ' ನೀಡಲು ಒಬ್ಬ ಹುಡುಗಿಯೂ ಇರುತ್ತಾಳೆ. ಆಕೆ ರಸ್ತೆಯಲ್ಲಿ ಓಡಾಡುವ ಚೆಂದನೆಯ ಹುಡುಗಿಯರು ಕಂಡಕ್ಷಣ 'ಅವರ ಹತ್ರ ಹೋಗಿ ಮೊಬೈಲ್ ನಂಬರ್ ಕೇಳು' ಎಂದು ಹೇಳುತ್ತಾಳೆ. ತಕ್ಷಣ ಆ ಹುಡುಗ ಹುಡುಗಿಯ ಬಳಿ ಹೋಗಿ 'ನಾನು ಒಂದು ಹುಡುಗೀನ ಲವ್ ಮಾಡ್ತಿದೀನಿ. ಅವಳು ಒಂದಷ್ಟು ಹುಡುಗೀರ ಮೊಬೈಲ್‌ಗಳನ್ನು ಕಲೆಕ್ಟ್ ಮಾಡಿಕೊಂಡು ಬಾ. ಆಗ ನಿನ್ನ ಒಪ್ಕೊತೀನಿ' ಅಂತಾ ಹೇಳಿದ್ದಾಳೆ. ಅದಕ್ಕೆ ನೀವು ನಿಮ್ಮ ಮೊಬೈಲ್ ನಂಬರ್ ನಂಗೆ ಕೊಡಿ' ಎನ್ನುತ್ತಾನೆ. 'ಹಲೋ ಎಕ್ಸ್‌ಕ್ಯೂಸ್ ಮಿ' ಎಂದು ಸಿಕ್ಕ ಸಿಕ್ಕ ಹುಡುಗಿಯರ ಹಿಂದೆ ಬೀಳುತ್ತಾನೆ. ಆ ಹುಡುಗರ ಹಾವ ಭಾವ ನೋಡಿದ ರಸ್ತೆಯಲ್ಲಿನ ಯುವತಿಯರು ಬೆಚ್ಚಿಬೀಳುತ್ತಾರೆ. ಕೆಲವರು ಅವಾಚ್ಯ ಶಬ್ದಗಳಿಂದ ಬೈದು ಕೈಗೆ ಕೆರ ತೆಗೆದುಕೊಂಡು ಹೊಡೆಯಲು ಮುಂದಾಗುತ್ತಾರೆ. ಅಸಲಿಗೆ ಬೆಂಗಳೂರಿನಲ್ಲೂ ಇಂಥ ಸಂಸ್ಕೃತಿ ಇಲ್ಲ. ಈ ಯಾವ ಸಂಸ್ಕೃತಿಯನ್ನೂ ಕನಸಿನಲ್ಲೂ

▶▶ 12

ರಹಸ್ಯ ಕ್ಯಾಮೆರಾ ಎಂಬ ವಿಕೃತಿ


ಲೋಕಿ

ಈ ಕಾರ್ಯಕ್ರಮದಲ್ಲಿ ಈ ಎಲ್ಲ ಹುಡುಗ ಮತ್ತು ಹುಡುಗಿಯರನ್ನು ಒಂದೆಡೆ ಸೇರಿಸಿ ಉಳಿಯಲಿಕ್ಕೆ ಲಾಡ್ಜ್ ವ್ಯವಸ್ಥೆಯನ್ನು ಮಾಡಲಾಗಿದೆ. ಇವರು ಉಳಿದುಕೊಂಡ ರೂಮುಗಳಲ್ಲಿ ಹಿಡನ್ ಕ್ಯಾಮೆರಾಗಳನ್ನು ಅಳವಡಿಸಲಾಗಿದೆ. ಇವು ಅವರಿಗೆ ಗೊತ್ತಾಗದ ಹಾಗೆ ಅವರು ಬೆಳಗ್ಗೆ ಎದ್ದು ಪ್ರಾಥಮಿಕ ಕಾರ್ಯವನ್ನು ಪ್ರಾರಂಭಿಸಿರುವುದರಿಂದ ಹಿಡಿದು ಡ್ರೆಸ್ ಚೇಂಜ್, ಅವರು ತೀರಾ ಖಾಸಗಿಯಾಗಿ ಮಾತಾಡಿಕೊಳ್ಳುವ ಗುಸುಗುಸುಗಳ ತನಕ ರಾತ್ರಿ ಮಲಗುವವರೆಗೂ ಎಲ್ಲವನ್ನೂ ಸೆರೆಹಿಡಿಯುತ್ತಿದ್ದಾರೆ. ಕಡೆಗೆ ಅದನ್ನು ಫಿಲ್ಟರ್ ಮಾಡಿ ಕಾರ್ಯಕ್ರಮದಲ್ಲಿ ಬಿತ್ತರಿಸಲಾಗುತ್ತಿದೆ. ಈ ರೀತಿ ಅಮಾಯಕ ಹುಡುಗರ ಪ್ರೈವೆಸಿಯನ್ನು ಕದ್ದು ಮುಚ್ಚಿ ಸೆರೆಹಿಡಿದು ರಸಗವಳದಂತೆ ಪ್ರಮೋಟ್ ಮಾಡುತ್ತಿದ್ದಾರೆ. ಇದು ಅಪರಾಧವಲ್ಲವೆ?

ಜನ ಮೆಚ್ಚುವ ಕಾರ್ಯಕ್ರಮಗಳೂ ಇವೆ...

ಸುವರ್ಣ ಚಾನೆಲ್‌ನವರು ರಿಯಾಲಿಟಿ ಶೋಗಳನ್ನು ರೂಪಿಸುವಾಗ ಸಾಮಾಜಿಕ ಕಾಳಜಿಗಳನ್ನು ಯದ್ವಾತದ್ವಾ ಮರೆಯುತ್ತಿರುವುದು ನಿಜ. ಆದರೆ ವಾಹಿನಿ ನಿಜಕ್ಕೂ ಜನಪ್ರಿಯತೆ ಗಳಿಸಿರುವುದು ಕೌಟುಂಬಿಕ ಧಾರಾವಾಹಿಗಳಿಂದ...



'ಮಿಲನ' ಖ್ಯಾತಿಯ ನಿರ್ದೇಶಕ ಪ್ರಕಾಶ್ ನಿರ್ದೇಶಿಸುತ್ತಿರುವ 'ಲಕುಮಿ' ಧಾರಾವಾಹಿ ಈಗ ಇಡೀ ಕಿರುತೆರೆ ಪ್ರೇಕ್ಷಕರನ್ನು ಹಿಡಿದಿಟ್ಟುಕೊಂಡಿದೆ. ಹೇಮಂತ್ ಹೆಗಡೆಯ 'ಎಲ್ಲರಂತಲ್ಲ ನಮ್ಮ ರಾಜ' ಧಾರಾವಾಹಿ ಹಿಂದಿಯ ನಕಲಾದರೂ, ಲಕ್ಷ್ಮೀನಾರಾಯಣ ಕಲಗಾರು ಅವರ ಸಂಭಾಷಣೆ, ಕಥಾವಿಸ್ತಾರದಿಂದ ನೋಡುಗರನ್ನು ಆಕರ್ಷಿಸಿದೆ. 'ಸಿಂಧೂರ' ಮೆಗಾ ಸೀರಿಯಲ್ಲು ಕೂಡಾ ಕಳಪೆಯೇನಲ್ಲ, ಎಲ್ಲದಕ್ಕಿಂತ ಬಿ.ಎಲ್. ಸುರೇಶ್ ನಿರ್ದೇಶಿಸಿ, ಎಂ.ಎಸ್. ರಾಮಯ್ಯನವರ ಮಗ ಪಟ್ಟಾಭಿರಾಮ್ ನಿರ್ಮಿಸಿರುವ 'ಗುರು ರಾಘವೇಂದ್ರ ವೈಭವ' ಧಾರಾವಾಹಿಯನ್ನು ಭಕ್ತ ಪ್ರೇಕ್ಷಕರು ಆರಾಧಿಸುತ್ತಿದ್ದಾರೆ.

ಹೀಗೆ ತಮ್ಮ ಫಿಕ್ಷನ್ ವಿಭಾಗದಲ್ಲಿ ಕೌಟುಂಬಿಕ, ಸಾಮಾಜಿಕ ಮತ್ತು ಭಕ್ತಿ ಪ್ರಧಾನ ಧಾರಾವಾಹಿಗಳಿಂದ ಜನರ ಮನಸೆಳೆದಿರುವ ಸುವರ್ಣ ವಾಹಿನಿಗೆ 'ಹಳ್ಳಿ ಹೈದ ಪ್ಯಾಟೆಗ್ ಬಂದ' ಎಂಬ ಕೀಳು ಅಭಿರುಚಿಯ ಕಾರ್ಯಕ್ರಮವನ್ನು ರೂಪಿಸಿ, ಆ ಮೂಲಕ ವೀಕ್ಷಕರನ್ನು ಸೆಳೆಯುವ ಸಣ್ಣ ಬುದ್ಧಿ ಯಾಕೆ ಬಂತೋ ಗೊತ್ತಿಲ್ಲ, ಇನ್ನಾದರೂ ನಾನ್‌ಫಿಕ್ಷನ್ ಮುಖ್ಯಸ್ಥ ರಾಘವೇಂದ್ರ ಹುಣಸೂರು ಇಂಥ ಕಳಪೆ ಕಾನ್ಸೆಪ್ಟುಗಳನ್ನು ಕೈಬಿಟ್ಟು ಸದಭಿರುಚಿಯ ಕಾರ್ಯಕ್ರಮಗಳನ್ನು ರೂಪಿಸುವಂತಾಗಲಿ...

ಹೃದಯಗೆದ್ದ ಶಿವಣ್ಣನ ಶೋ...



ನಿಜಕ್ಕೂ ಆ ಕಾರ್ಯಕ್ರಮವನ್ನು ನೋಡಿದವರಿಗೆ ಕಣ್ತುಂಬಿ ಬರುತ್ತಿದೆ.

ಅದು ಹ್ಯಾಟ್ರಿಕ್ ಹೀರೋ ಶಿವರಾಜ್‌ಕುಮಾರ್ ಝೀ ಟಿವಿಯಲ್ಲಿ ನಡೆಸಿಕೊಡುತ್ತಿರುವ 'ನಾನಿರುವುದೇ ನಿಮಗಾಗಿ' ಕಾರ್ಯಕ್ರಮ. ರಿಯಾಲಿಟಿ ಶೋಗಳನ್ನು ಸಮಾಜಮುಖಿಯಾಗಿಯೂ ರೂಪಿಸಬಹುದು ಎಂಬುದಕ್ಕೆ ಈ ಕಾರ್ಯಕ್ರಮ ಸಣ್ಣದೊಂದು ಉದಾಹರಣೆಯಾಗಿದೆ. ಸಮಾಜದ ಕೆಳಸ್ತರದಲ್ಲಿರುವವರ ಬಾಳನ್ನು ಹಸನು ಮಾಡುವ, ದಶಕಗಟ್ಟಲೆ ದೂರವಾಗಿ ಛಿದ್ರಗೊಂಡ ಸಂಸಾರಗಳನ್ನು ಒಂದುಮಾಡುವ ಈ ಕಾರ್ಯಕ್ರಮದ ಕಾನ್ಸೆಪ್ಟ್ ಬಗ್ಗೆ ಯಾರೊಬ್ಬರೂ ಚಕಾರವೆತ್ತುವಂತಿಲ್ಲ.

ಸಾಮಾನ್ಯವಾಗಿ ಕಾರ್ಯಕ್ರಮದ ಬ್ರಾಂಡ್ ಅಂಬಾಸಡರ್‌ಗಳು ನಿರ್ದೇಶಕ ಕೊಟ್ಟ ಸ್ಕ್ರಿಪ್ಟನ್ನು ಯಥಾವತ್ತು ಓದಿ, ಛಾನೆಲ್‌ನವರು ಕೊಟ್ಟ ಮೊತ್ತವನ್ನು ಜೇಬಿಗಿಳಿಸಿಕೊಂಡು ಹೋಗುತ್ತಾರೆ. ಆದರೆ ಶಿವಣ್ಣ ತಾನೊಬ್ಬ ಬ್ರಾಂಡ್ ಅಂಬಾಸಿಡರ್ ಮಾತ್ರವಲ್ಲ ಎಂಬ ರೀತಿಯಲ್ಲಿ ಕಾರ್ಯಕ್ರಮಕ್ಕೆ ಬರುವವರೊಂದಿಗೆ ಮನಬಿಚ್ಚಿ ಮಾತಾಡುತ್ತಾರೆ, ಅವರ ನೋವು ದುಗುಡಗಳಿಗೆ ಸ್ಪಂದಿಸುತ್ತಾರೆ.

ಶಸ್ತ್ರ ಚಿಕಿತ್ಸೆಯ ಮೂಲಕ ಕಣ್ಣು ದೃಷ್ಟಿ ಪಡೆದ ಪುಟಾಣಿ ಹುಡುಗಿಯೊಬ್ಬಳು 'ನಾನು ಕಣ್ತೆರೆದ ತಕ್ಷಣ ಮೆಗಾಸ್ಟಾರ್ ಚಿರಂಜೀವಿಯವರನ್ನು ನೋಡಬೇಕು' ಎಂದಿದ್ದಳಂತೆ. ಹೀಗಾಗಿ ಚಿರಂಜೀವಿಯವರನ್ನೆ ಕರೆಸಿ ಆ ಪೋರಿಯ ಆಸೆಯನ್ನು ಈಡೇರಿಸಿದ್ದಾರೆ ಶಿವಣ್ಣ. ಶಿವರಾಜ್‌ಕುಮಾರ್ ಅವರ ಪರ್ಸನಲ್ ಕಾಳಜಿ ಇಲ್ಲದಿದ್ದರೆ ಈ ರೀತಿ ಮೆಗಾಸ್ಟಾರ್‌ನ್ನು ಕರೆಸುವುದು ಯಾವ ಛಾನೆಲ್‌ಗೂ ಸಾಧ್ಯವಾಗದ ಮಾತು.

ತಮ್ಮ ಘನತೆ, ಜೀವನಾನುಭವಕ್ಕೆ ಒಪ್ಪುವಂತಹ ರಿಯಾಲಿಟಿ ಕಾರ್ಯಕ್ರಮದಲ್ಲಿ ಶಿವಣ್ಣ ಭಾಗವಹಿಸುತ್ತಿರುವುದಕ್ಕೆ ಅವರಿಗೊಂದು ಹ್ಯಾಟ್ಸ್ ಆಫ್ ಹೇಳೋಣ.

ಟಿವಿಗೂ ಸೆನ್ಸಾರ್ ಬರಲಿ




ಕನ್ನಡ ಟಿವಿ ಉದ್ಯಮ ಇಂದು ತುಂಬ ಬೃಹದಾಕಾರವಾಗಿ ...ು ನಿಂತಿದೆ. ನೂರರಲ್ಲಿ ಶೇ.80ರಷ್ಟು ಜನ ಇಂದು ಮನರಂಜನೆಗಾಗಿ ...ಮನ್ನೇ ಅವಲಂಬಿಸಿದ್ದಾರೆ. ಇಂದು ಭಾರತದಲ್ಲಿ ಸುಮಾರು ...ಕ್ಕೂ ಹೆಚ್ಚು ವಾಹಿನಿಗಳಿವೆ. ಕರ್ನಾಟಕದಲ್ಲೇ 8ಕ್ಕೂ ಹೆಚ್ಚು ವಾಹಿನಿಗಳು, ಇತರ ಭಾಷೆಯ ಸುಮಾರು 30ಕ್ಕೂ ಹೆಚ್ಚು ...ನಿಗಳು ಪ್ರಸಾರವಾಗುತ್ತಿವೆ. ಇಂತಹ ನೂರಾರು ವಾಹಿನಿಗಳಲ್ಲಿ ...ವಾಗಳಿಗೂ ಮೀರಿದ ಅಶ್ಲೀಲ ದೃಶ್ಯಗಳು, ಅಪರಾಧದ ...ವೀಕರಣ, ಕೆಟ್ಟಾ ಕೊಳಕು ಜಾಹೀರಾತುಗಳು ಪ್ರಸಾರವಾಗು...ೂ ಇವುಗಳನ್ನು ನಿಯಂತ್ರಿಸಲು ಯಾವ ಸೆನ್ಸಾರ್ ನಿಯಮಗಳೂ ಇಲ್ಲ. ಎಲ್ಲೋ ಕೆಲವು ಸೂಚನೆಗಳಿದ್ದರೂ ... ಚಿಟಿಕೆಯಷ್ಟೂ ಪಾಲನೆಯಾಗುತ್ತಿಲ್ಲ.

...ನಿಮಾ ಪರದೆಯ ಮೇಲೆ ಪ್ರದರ್ಶನಗೊಳ್ಳುವ ಮುಂಚೆ ಅದರಲ್ಲಿ ಬಳಕೆಯಾದ ಭಾಷೆ, ಡ್ರೆಸ್‌ಕೋಡ್‌ಗಳನ್ನು ...ಂತ್ರಿಸಲು ಸೆನ್ಸಾರ್ ಮಾಡಲಾಗುತ್ತದೆ. ಕಡೆಗೆ ಸಿನಿಮಾ ಕಂಟೆಂಟ್‌ನ ಅನುಸಾರ ಗ್ರೇಡ್‌ಗಳನ್ನು ನೀಡಲಾಗುತ್ತದೆ. ...ವಾಗಳಿಗೆ ಇಷ್ಟೆಲ್ಲಾ ರೂಲ್ಸುಗಳು ಇರುವಾಗ, ಟಿವಿ ರಿಯಾಲಿಟಿ ಶೋಗಳು ಮಾತ್ರ ಈ ಯಾವುದಕ್ಕೂ ...ಡಿಸಿಕೊಳ್ಳದೆ ಮನುಷ್ಯರನ್ನು ಮೃಗೀಯವಾಗಿ ಬಳಸಿಕೊಂಡು ಜನರ ಮನಸ್ಸಿನ ಮೇಲೆ ಅಮೇಧ್ಯವನ್ನು ...ಲು ಮುಂದಾಗಿವೆ.

...ಈ ಚಾನೆಲ್‌ಗಳು ಸ್ವಯಂ ಸೆನ್ಸಾರ್ ಹಾಕಿಕೊಳ್ಳುತ್ತಿಲ್ಲ. ಹಾಗಾಗಿ ಇವುಗಳನ್ನು ತಡೆಯಲು ಸರ್ಕಾರ ಸೆನ್ಸಾರ್ ...ೂ ಬೇಕಲ್ಲವೇ?

...ೆ ಆ ಹುಡುಗರು 'ಬ್ಯಾಡಪ್ಪಾ ಈ ಸವಾಸ. ನಾನು ...ಲ್ಲಿ ಸೋತರೂ ಪರವಾಗಿಲ್ಲ, ಈ ಕೆಲಸ ನನ್ನಿಂದ ...ಲ್ಲ. ದಯವಿಟ್ಟು ನನ್ನ ಬಿಟ್ಟುಬಿಡಿ' ಎಂದು ...ಚುತ್ತಾರೆ. ಆಗ ಜೊತೆಯಲ್ಲಿದ್ದ ಎಜೆ 'ಹೇಗಾದ್ರೂ ... ನಂಬರ್ ಕಲೆಕ್ಟ್ ಮಾಡು' ಎಂದು ಹುಡುಗನ ... ಒತ್ತಡ ಹೇರುತ್ತಾಳೆ. ಆಗ ಮಾನಸಿಕ ಸ್ತಿಮಿತ ...ೂಂಡು ಕೆರಳಿಹೋಗುವ ಹುಡುಗ ನೇರವಾಗಿ ...ನಿಯಂತ್ರಿಸುತ್ತಿದ್ದ ಹುಡುಗಿಯ ಮೇಲೇ ಕೈಮಾಡಲು ...ವಾಗುತ್ತಾನೆ.




... ತಲೆಕೆಟ್ಟ ಟಾಸ್ಕ್‌ಗಳು ಇಷ್ಟೇ ಅಲ್ಲ. ...ುವ ಎಲ್ಲಾ ಸ್ಪರ್ಧಿಗಳಿಗೂ ಹೊಟ್ಟೆ ತುಂಬ ...ಡುತ್ತಾರೆ. ಅದರೊಂದಿಗೆ ಬೇಧಿ ಮಾತ್ರೆಯನ್ನೂ ...ುತ್ತಾರೆ. ಹೊಟ್ಟೆ ಬರಿಯುವಂತೆ ತಿಂದ ಹುಡುಗರು ...ಟ್ಟಿಗೆ ಹೋಗುವಂತಿಲ್ಲ. ಯಾರು ಕೆಳಗೆ ಕಿತ್ತುಕೊಂಡು ... ಶೌಚವನ್ನು ಕೊನೆಯವರೆಗೂ ತಡೆದಿಟ್ಟುಕೊಳ್ಳು...ೆ ಅವರು ಟಾಸ್ಕ್ ಗೆದ್ದಂತೆ. ತಡೆಯಲಾರದೇ ...ಟ್ಟಿಗೆ ನುಗ್ಗಿದರೆ ಅವರು ಎಲಿಮಿನೇಷನ್ ಆಗಬೇಕು. ...ಸುವರ್ಣ ಚಾನೆಲ್ ಟಾಯ್ಲೆಟ್ ಪಾಲಾಗಿರುವುದರ ...ತವಷ್ಟೇ.

...ಂಥದ್ದೇ ಇನ್ನೊಂದು ಟಾಸ್ಕ್ ಬಾಳೆಹಣ್ಣು ಜ್ಯೂಸಿನದ್ದು. ...ಯಲ್ಲಿನ ಹುಡುಗರಿಗೆ ಲೀಟರುಗಟ್ಟಲೆ ಬನಾನಾ ... ಕುಡಿಸಲಾಗುತ್ತದೆ. ಕಂಠಮಟ್ಟ ಕುಡಿದ ಮೇಲೆ ಅದರ ಬಾಧೆಯನ್ನು ತಡೆಯಲಾರದೆ ಆ ಹುಡುಗರು ವಾಂತಿ ಮಾಡಿಕೊಂಡರೆ ಟಾಸ್ಕ್‌ನಲ್ಲಿ ಸೋತ ಹಾಗೆ. ಇದು ಹಿಂಸೆಯ ಪರಾಕಾಷ್ಠೆಯಲ್ಲವೇ? ಛೆ, ಇಂತಹ ವಿಕೃತ ವಾಂತಿಯೇ ಸುವರ್ಣದ ಟಿಆರ್‌ಪಿಗೆ ಮುಖ್ಯಾನ್ನವಾಗುತ್ತಿರುವುದು ದುರಂತವಲ್ಲದೆ ಮತ್ತೇನು?

ಬಡಪಾಯಿ ಹುಡುಗರನ್ನು ಕರೆತಂದು ಅವರಿಗೆ ವಾಂತಿ ತರಿಸಿ, ಬೇಧಿ ಮಾತ್ರೆ ಕೊಟ್ಟು ಹಿಂಸಿಸಿ, ಅದನ್ನೇ ರಿಯಾಲಿಟಿ ಶೋ ಎಂದು ಹೇಳಿ ಹೇರಳವಾಗಿ ಜಾಹೀರಾತು ಪಡೆಯುತ್ತಿರುವ ಚಾನೆಲ್‌ನ ಮುಖ್ಯಸ್ಥ ಅನೂಪ್ ಚಂದ್ರಶೇಖರ್ ಮತ್ತು ಕಾರ್ಯಕ್ರಮದ ನಿರ್ದೇಶಕ ರಾಘವೇಂದ್ರ ಹುಣಸೂರನಿಗೂ ಇದೇ ರೀತಿ ಬೇಧಿ ಮಾತ್ರೆ ಕೊಟ್ಟು, ಬಾಳೆಹಣ್ಣು ಜ್ಯೂಸು ಕುಡಿಸಿದರೆ ಅದನ್ನು ಸಹಿಸುತ್ತಾರಾ?

ಇಂತಹ ಸ್ಪರ್ಧೆಗಿಳಿದ ಹುಡುಗರು ಟಾಸ್ಕ್ ವಿನ್ ಮಾಡದ ಸಂದರ್ಭದಲ್ಲಿ ಜೊತೆಗಿದ್ದ ಮೆಂಟರ್ ಆತನಿಗೆ ಬಾಯಿಗೆ ಬಂದಹಾಗೆ ಬೈಯುತ್ತಾಳೆ. ಇದನ್ನು ಸಹ ಮ್ಯೂಟ್ ಮಾಡಿ ತೋರಿಸಲಾಗುತ್ತದೆ. ಹಿಂದೆ ಒಂದು ಬೆಂಗಾಲಿ ವಾಹಿನಿಯಲ್ಲಿ ಮೂಡಿಬಂದಿದ್ದ ಮ್ಯೂಸಿಕ್ ರಿಯಾಲಿಟಿ ಶೋವೊಂದರಲ್ಲಿ ಭಾಗವಹಿಸಿದ 16 ವರ್ಷದ ಹುಡುಗಿ ಕಾರ್ಯಕ್ರಮದ ಜಡ್ಜ್ ತನಗೆ ಬೈದ ಎಂಬ ಒಂದೇ ಕಾರಣಕ್ಕೇ ಆತ್ಮಹತ್ಯೆ ಮಾಡಿಕೊಂಡಿದ್ದಳು. ಇದೊಂದೇ ಅಲ್ಲ, ರಿಯಾಲಿಟಿ ಶೋದಲ್ಲಿ ಭಾಗವಹಿಸಿ ಮನನೊಂದು ಮಾನಸಿಕವಾಗಿ ಖಿನ್ನರಾದವರ ಸಂಖ್ಯೆ ಸಾಕಷ್ಟಿದೆ. ಮಾನವ ಹಕ್ಕುಗಳ ಪ್ರಕಾರ ಯಾವುದೇ ವ್ಯಕ್ತಿಯ ಮನ ನೋಯಿಸುವ, ಆತನಿಗೆ ಹಿಂಸಿಸುವ ಅಧಿಕಾರ ಯಾರಿಗೂ ಇಲ್ಲ. 'ಹಳ್ಳಿ ಹೈದ' ಕಾರ್ಯಕ್ರಮದಲ್ಲಿ ಭಾಗವಹಿಸಿರುವ ಹುಡುಗರು ಈಗಾಗಲೇ ಮಾನಸಿಕವಾಗಿ ಜರ್ಝರಿತರಾಗಿರುವುದು ಮೇಲ್ನೋಟಕ್ಕೇ ಸ್ಪಷ್ಟವಾಗಿ ಗೊತ್ತಾಗುತ್ತಿದೆ. ತಾವು 'ಸೋತಿದ್ದೇವೆ' ಎಂಬ ಅಳುಕಿಗೆ ಬಿದ್ದ ಹುಡುಗರು ಮುಂದೊಂದು ದಿನ ಮನೋವ್ಯಾಧಿಗೆ ಈಡಾದರೆ ಅದಕ್ಕೆ ಯಾರು ಹೊಣೆ?

ಮತ್ತೆ ಶುರುವಾಯ್ತು ನಿತ್ಯಾನಂದನ ಕಳ್ಳಾಟ




ಜಾಮೀನಿನ ಮೇಲೆ ಜೈಲಿಂದ ಹೊರಬಿದ್ದಿರುವ ಪರಮಹಂಸ ನಿತ್ಯಾನಂದ ಪ್ರತಿನಿತ್ಯ ಮತ್ತೆ ಹೊಸ ಹೊಸ ಆಟಗಳನ್ನು ಶುರು ಹಚ್ಚಿಕೊಂಡಿದ್ದಾನೆ. ಆತನ ಸಕಲ ವಿಕೃತಿಗಳನ್ನು ಜನರ ಮುಂದೆ ಬಿಚ್ಚಿಟ್ಟ ಟಿ.ವಿ. ಮಾಧ್ಯಮಗಳು ಮತ್ತು ಪ್ರಿಂಟ್ ಮೀಡಿಯಾಗಳಿಗೆ ಅರುತ್ ಸೆಲ್ವಮ್ ಎಂಬ ಕಪಟ ಭಕ್ತನಿಂದ ನೋಟಿಸ್ ಕಳಿಸಿದ್ದಾನೆ. ತನ್ನ ಶ್ರೀಮಂತ ಭಕ್ತರನ್ನು ಕಾಪಾಡಿಕೊಳ್ಳಲು ತಾನೇ ದುಡ್ಡು ಕೊಟ್ಟು 'ಇಂಟರ್' ನ್ಯಾಷನಲ್ ಅವಾರ್ಡುಗಳನ್ನು ಪಡೆದುಕೊಳ್ಳುತ್ತಿದ್ದಾನೆ.

ಇವನಿಗೆ ಮೊನ್ನೆ ಒಂದು ವಿಚಿತ್ರ ಪ್ರಶಸ್ತಿ ಬಂದಿದೆ. ಅದರ ಹೆಸರು "ಡಾ. ಎಸ್. ರಾಧಾಕೃಷ್ಣನ್ ಸ್ಮರಣಾರ್ಥ ಅಂತರರಾಷ್ಟ್ರೀಯ ಪ್ರೈಜು" ಅಂತೆ. ಅಂದನಂತೆ ಈ ಪಡಪೋಶಿ ಪರಮಹಂಸ ನಿತ್ಯಾನಂದ ಅದೇನು ಕಿಸಿದ ಅಂತ ಈ ಪ್ರಶಸ್ತಿ ಗೊತ್ತೆ? ಶಿಕ್ಷಣದಲ್ಲಿ ಮಾನವೀಯ ಗುಣಗಳನ್ನು ಅಳವಡಿಸಿದ್ದಕ್ಕಂತೆ! ಇಲ್ಲಿವರೆಗೂ ಈ ನಿತ್ಯಕಾಮಿ ಅದ್ಯಾವ ಸ್ಕೂಲ್ ಅನ್ನು ನಡೆಸಿಲ್ಲ. ಅಂದರೆ ರಾತ್ರೋರಾತ್ರಿ ಹುಟ್ಟಿದ ಈ ಪ್ರಶಸ್ತಿಯನ್ನು ಸ್ವಾಮಿ ಖರೀದಿಸಿಬಿಟ್ಟಿದ್ದಾನೆ!



ವೆಬ್ ಸೈಟ್‌ನಲ್ಲಿರುವ ನಕಲಿ ಜಾದು ಫೋಟೋಗಳು

ಅಂದಂತೆ ಈ ಪ್ರಶಸ್ತಿಯನ್ನು ನಿತ್ಯನಿಗೆ ನೀಡಿದ್ದು ಶ್ರೀಲಂಕಾದ ಓಪನ್ ಇಂಟರ್‌ನ್ಯಾಷನಲ್ ಯುನಿವರ್ಸಿಟಿ ಫಾರ್ ಕಾಂಪ್ಲಿಮೆಂಟರಿ ಮೆಡಿಸಿನ್ ಎಂಬ ಅನಾಮಿಕ ಸಂಸ್ಥೆ. ಇದಕ್ಕೆ ಡೈರೆಕ್ಟರ್ ಆಗಿರುವ ಡಾ. ಎಸ್. ನಾಗೇಂದ್ರನಿಗೆ ನಿತ್ಯಾನಂದನ ಮೇಲೆ ಅದೆಷ್ಟು ಗೌರವ ಎಂದರೆ ಡಾ. ರಾಧಾಕೃಷ್ಣನ್ ಸ್ಮರಣಾರ್ಥ ಪ್ರಶಸ್ತಿ ಕೊಟ್ಟ ಮರುವಾರವೇ ಡಾಕ್ಟರೇಟ್ ಅವಾರ್ಡ್ ಅನ್ನೂ ಕೊಟ್ಟುಬಿಟ್ಟಿದ್ದಾನೆ. ಜಗತ್ತಿನಾದ್ಯಂತ ಮಿಲಿಯನ್‌ಗಟ್ಟಲೇ ಜನರಿಗೆ ಆಧ್ಯಾತ್ಮಿಕ ಸ್ಫೂರ್ತಿ ನೀಡಿದ್ದಾನಂತೆ ನಿತ್ಯಾನಂದ! ನವೆಂಬರ್ 12 ರಿಂದ 14 ರವರೆಗೆ ಕೊಲಂಬೊದಲ್ಲಿ ನಡೆಯುವ 48ನೇ ಜಾಗತಿಕ ವೈದ್ಯಕೀಯ ಸಮಾವೇಶದಲ್ಲಿ ನಿತ್ಯನಿಗೆ ಈ ಅವಾರ್ಡು ಕೊಡಲಿದ್ದಾರಂತೆ.



ತನ್ನ ವಿಕೃತ ಲೈಂಗಿಕ ಚೇಷ್ಟೆಗಳಿಂದ ಜೈಲುಪಾಲಾಗಿದ್ದ ನಿತ್ಯಾನಂದ ಈಗ ಮತ್ತೆ ಬಿಡದಿಯ ತನ್ನ ಆಶ್ರಮಕ್ಕೆ ವಕ್ಕರಿಸಿ ದಿನಕ್ಕೊಂದು ಹೊಸ ಕಾರ್ಯಕ್ರಮವನ್ನು ನಡೆಸುತ್ತ ತನ್ನ ಮೂರ್ಖ ಶ್ರೀಮಂತ ಭಕ್ತರಿಗೆ ಮತ್ತೆ ಮಂಕುಬೂದಿ ಎರಚುತ್ತಿದ್ದಾನೆ.

ಡಿಸೆಂಬರ್ 1ರಿಂದ 21ರವರೆಗೆ 20 ದಿನಗಳ ಕಾಲ ಈತ 'ಇನ್ನರ್ ಅವೇಕ್‌ನಿಂಗ್' ಎಂಬ ಕೋರ್ಸು ನಡೆಸುತ್ತಿದ್ದಾನೆ. ಇದಕ್ಕಾಗಿ ಲಕ್ಷಾಂತರ ರೂ.ಗಳ ನಡೆಸುತ್ತಿದ್ದಾನೆ. ಇದಕ್ಕಾಗಿ ಲಕ್ಷಾಂತರ ರೂ.ಗಳ ಫೀಸನ್ನು ಕೀಳುತ್ತಿದ್ದಾನೆ. ನವೆಂಬರ್ 20 ರಿಂದ ಜನವರಿ 20 ರವರೆಗೆ 60 ದಿನಗಳ ಕಾಲ 'ಲೈಫ್ ಬ್ಲಿಸ್ ಇಂಜಿನಿಯರಿಂಗ್' ಎಂಬ ಮಗದೊಂದು ಕಳ್ಳ ಕೋರ್ಸ್ ಅನ್ನು ಶುರು ಹಚ್ಚಿಕೊಳ್ಳಲಿದ್ದಾನೆ.

ಶ್ರೀಮಂತ ಎನ್‌ಆರ್‌ಐಗಳನ್ನು ಸುಲಿಗೆ ಮಾಡಲೆಂದೇ ಸೆಪ್ಟೆಂಬರ್ 21 ರಿಂದ ಅಕ್ಟೋಬರ್ 5 ರವರೆಗೆ ನಿತ್ಯಾನಂದ ಹಿಮಾಲಯಕ್ಕೆ ಹೋಗುತ್ತಿದ್ದಾನೆ. ಈ ಚಟಚಕ್ರವರ್ತಿ ಜೊತೆ ಹಿಮಾಲಯ ಪ್ರವಾಸ ಮಾಡಲು ಭಕ್ತರು ಮತ್ತೆ ಲಕ್ಷ ಕಕ್ಕಬೇಕಂತೆ. ಇನ್ನು ಇಂಟರ್‌ನೆಟ್‌ನಲ್ಲೇ ತಮ್ಮ ಆಧ್ಯಾತ್ಮಿಕ ಆಶೆ ಪೂರೈಸಿಕೊಳ್ಳುವ ಮೂರ್ಖರಿಗಾಗಿಯೂ ಒಂದು ಡಿಜಿಟಲ್ ಕಾರ್ಯಕ್ರಮವನ್ನು ನಿತ್ಯ ಹಮ್ಮಿಕೊಂಡಿದ್ದಾನೆ. ಅದು 'ಇ-ಪ್ರತ್ಯಕ್ಷ ಪಾದಪೂಜಾ' ಅಂತೆ. ನೆಟ್‌ನಲ್ಲಿ ಇವನ ಪಾದಗಳನ್ನು ನೋಡಲು, ಕಂಪ್ಯೂಟರ್ ಮುಂದೆ ಕುಳಿತು ಈ ಕಪಟ ಸನ್ಯಾಸಿಯ ಪೂಜೆ ಮಾಡಲೂ ಫೀಸು ಭರಿಸಬೇಕಂತೆ.

ಪ್ರತಿನಿತ್ಯ ಮುಂಜಾನೆ ತನ್ನ ಆಶ್ರಮದಲ್ಲಿ ತನ್ನ ಹುಚ್ಚ ಭಕ್ತರೊಂದಿಗೆ ನಡೆಸುವ 'ಪಂಚ್ ತಪಸ್' ಯೋಗದಿಂದ ಜಾಗತಿಕ ಶಾಂತಿ, ಸೌಹಾರ್ದತೆಗಳು ಬೆಳೆಯುತ್ತವೆ ಎಂದು ರೀಲು ಬಿಡುವ ನಿತ್ಯಾನಂದ ಈ ಯೋಗ ಕಾರ್ಯಕ್ರಮದಿಂದಲೂ ಹಣ ಪೀಕುತ್ತಾನಷ್ಟೇ.

ಭಕ್ತರಿಗೆ ರಂಜನೆ ನೀಡಲೆಂದು ಯದ್ವಾತದ್ವಾ ಕೆಲಸಗಳಿಗೆ ಕೈ ಹಾಕುವ ನಿತ್ಯಾನಂದ ಡ್ರಮ್ ಬಡಿಯುತ್ತಾನೆ. ವಿಕಾರ ಸ್ವರದಲ್ಲಿ ಕೀಬೋರ್ಡ್ ನುಡಿಸುತ್ತಾನೆ. ಇಷ್ಟರ ನಡುವೆ ಅವನೊಂದು ಹೊಸ 'ಯೋಗ' ಆರಂಭಿಸಿದ್ದಾನೆ. ಮಹಿಳಾ ಭಕ್ತರ ಕಣ್ಣಿಗೆ ಬಟ್ಟೆ ಕಟ್ಟಿ 'ಜಪ' ಮಾಡಿಸುತ್ತಾನೆ.


ಜೈಲಲ್ಲಿರಬೇಕಾದ ವಿಕೃತ ಸ್ವಾಮಿಯ ಹೊಸ ಹೊಸ ಆಟಗಳಿಗೆ ಶ್ರೀಮಂತ ಗಿರಾಕಿಗಳೇ ಪ್ರೇಕ್ಷಕರಾಗಿರುವುದರಿಂದ ಅವನ ಗಲ್ಲಾಪೆಟ್ಟಿಗೆ ತುಂಬಿತುಳುಕುತ್ತಿದೆ.

ಈ ಗಬ್ಬು ಹಣದಿಂದ ಆತ ಡಾಕ್ಟ'ರೇಟು'ಗಳನ್ನು ಖರೀದಿಸುತ್ತಿದ್ದಾನೆ, ತನ್ನ ಧರ್ಮೋದ್ಯಮವನ್ನು ಭರ್ಜರಿಯಾಗಿಯೇ ನಡೆಸುತ್ತಿದ್ದಾನೆ.

ಸಿರಿವಂತ ಭಕ್ತರು ಈ ದುರುಳನ ಪಾದಪೂಜೆ ಮಾಡಿಕೊಂಡು ಹಾಳಾಗಲಿ. ಆದರೆ ಸರಿಯಾದ ತನಿಖೆ ನಡೆಸಬೇಕಾದ ಸರ್ಕಾರ ಏನು ಮಾಡುತ್ತಿದೆ? ಕಳೆದ ಎರಡು ದಿನಗಳ ಹಿಂದೆಯಷ್ಟೇ ನಿತ್ಯಾನಂದನ ಕೇಸು ಹೈಕೋರ್ಟ್ ಮುಂದೆ ಬಂದಾಗ, ನ್ಯಾಯಮೂರ್ತಿ ಅರಳಿ ನಾಗರಾಜ್ ಸಿ.ಐ.ಡಿ.ಯ ನಿಧಾನಗತಿಯ ತನಿಖೆಯ ವಿರುದ್ಧ ಕಿಡಿಕಾರಿದ್ದಾರೆ. ತನಿಖೆ ಯಾವ ಹಂತದಲ್ಲಿದೆ ಎಂಬ ವಿವರಗಳ ಅಫಿಡ್‌ವಿಟ್ ಅನ್ನು ಸೆಪ್ಟೆಂಬರ್ 23 ರ ಒಳಗಾಗಿ ಸಲ್ಲಿಸಲು ಆದೇಶಿಸಿದ್ದಾರೆ.

ವಿಎಚ್‌ಪಿಯ ಅಶೋಕ್ ಸಿಂಘಾಲರಂತಹ ಭಕ್ತರಿರುವಾಗ, ಅಂತವರು ಆರೋಪಿ ಸ್ವಾಮಿಯ ದರ್ಶನ ಪಡೆಯುವಾಗ ಸಿಐಡಿಯಾದರೂ ಏನು ಮಾಡೀತು! ಯಡ್ಡಿ ಸರ್ಕಾರವೇ ನಿತ್ಯಾನಂದನ ಪರವಿರುವಾಗ ಆತನ ಕಳ್ಳಾಟಗಳಿಗೆ ಕಡಿವಾಣ ಹಾಕುವುದಾದರೂ ಹೇಗೆ?

● ಪಿ.ಕೆ. ಮಲ್ಲನಗೌಡರ್



ರಾಧಿಕಾಳ 'ಸುವರ್ಣ' ಸಂಭ್ರಮ!

ರಾಧಿಕಾ ಪಂಡಿತ್ ಎಂಬ ಸುಂದರಿಯ ಬಗ್ಗೆ ಕನ್ನಡ ಚಿತ್ರರಸಿಕರಲ್ಲಿ ಒಳ್ಳೊಳ್ಳೆ ಭಾವನೆಗಳಿವೆ. ಇತ್ತೀಚಿನ ದಿನಗಳಲ್ಲಿ ನಟನೆಯಲ್ಲಿ ಪಳಗಿದ ಹುಡುಗಿ ಯರೇ ಕನ್ನಡದಲ್ಲಿಲ್ಲ ಎಂಬ ಕೊರಗನ್ನು ನೀಗಿಸಿದವಳು ರಾಧಿಕಾ ಪಂಡಿತ್. ನಟಿಸಿದ ಎಲ್ಲ ಚಿತ್ರಗಳಲ್ಲೂ ನೋಡುಗರನ್ನು ...ರ್ಷಿಸಿರುವ ರಾಧಿಕಾ ಈಗಾಗಲೇ ಎರಡೆರಡು ಫಿಲ್ಮ್‌ಫೇರ್ ಪ್ರಶಸ್ತಿಗಳನ್ನು ಪಡೆದಿದ್ದಾಳೆ. ಹೀಗೆ ಪ್ರಬುದ್ಧ ಕಲಾವಿದೆ ...ಕೊಂಡಿರುವ ರಾಧಿಕಾಳನ್ನು ಕಿರುತೆರೆಯಲ್ಲಿ ನೋಡಿದವರು ಮೈ ಕೈ ಪರಚಿಕೊಳ್ಳುತ್ತಿದ್ದಾರೆ.

...ಸನಿಯಾಗಿ ಬೆಂಗಳೂರಿನ ಕನ್ನಡವೇ ಗೊತ್ತಿಲ್ಲದ ಹಳ್ಳಿ ಹುಡುಗರ ಮುಂದೆ ಈ ಸುಂದರಿ ಲಟಾಪಟಾ ಇಂಗ್ಲಿಷ್ ...ದರಿಸುತ್ತಾಳೆ. 'ಯು ಹ್ಯಾಡ್ ಎ ವಂಡರ್‌ಫುಲ್ ಪರ್‌ಫಾರ್ಮೆನ್ಸ್' ಎಂದು ಶಹಭಾಸು ಬಿಸಾಡುತ್ತಾಳೆ. ಆದರೆ ...ಹುಡುಗರು ಈಕೆ ಏನೋ ಬೈಯುತ್ತಿದ್ದಾಳೇನೋ ಎಂದು ತಲೆತಗ್ಗಿಸಿ ಸಪ್ಪಗೆ ಕೂರುತ್ತಾರೆ. ಇನ್ನು ಅರೆಬರೆ ನಟ ...ಪಾರ್ಟ್ ಟೈಂ ನಿರೂಪಕ ಅಕುಲ್ ಬಾಲಾಜಿಯ ಮಾತುಗಳು, ಅವನ ಬಾಡಿ ಲಾಂಗ್ವೇಜು ನೋಡಿದರೆ ಹೆಂಡ ...ದ ಮಂಗನಂತೆ ಭಾಸವಾಗುತ್ತದೆ.

...ಸದ ಲೆಕ್ಕದಲ್ಲಿ ದುಡ್ಡು ಎಣಿಸುವ ದುರಾಸೆಗೆ ಬಿದ್ದು ರಾಧಿಕಾ ಪಂಡಿತ್‌ಳಂಥ ನಟಿ ಇಂಥ ಜನವಿರೋಧಿ ...ರ್ಯಕ್ರಮಗಳಲ್ಲಿ ಮುಖ ತೋರಿಸುವುದು ತರವೇ? ಇನ್ನೂ ಹೆಚ್ಚು ಕಾಸು ಕೊಡುತ್ತೇವೆ ಎಂದರೆ ಇದೇ ರಾಧಿಕಾ ...ಶ ಪೋಷಾಕ್ ಪಾತ್ರೆ, ಸುಂಗಿ ಇದೀ ದಿನ ಕೂತು ರಿಯಾಲಿಟಿ ಶೋ ಮಾಡುತ್ತಾಳಾ? ರಾಧಿಕಾಗೆ ಇಂತಹ ...ರ್ಣ' ಸಂಭ್ರಮ ಯಾತಕಾದರೂ ಬೇಕಿತ್ತು?

ಲಾಡ್ಜ್‌ಗಳಲ್ಲಿ ರಂಗೀನ್ ದಂಧೆ!

ತಳವಾರನ ಅರಾಜಕ ದರ್ಬಾರಿನಲ್ಲಿ ಗುಂಡ್ಲುಪೇಟೆ ಅದೆಷ್ಟು ಕುಲಗೆಟ್ಟು ಹೋಗಿದೆಯೆಂದರೆ, ಇಲ್ಲಿನ ಹಲವಾರು ಲಾಡ್ಜ್‌ಗಳಲ್ಲಿ ವೇಶ್ಯಾ ದಂಧೆ ಎಗ್ಗಿಲ್ಲದೆ ನಡೆಯುತ್ತಿದೆ.

ಗುಂಡ್ಲುಪೇಟೆಯ ಪಕ್ಕದಲ್ಲಿರುವ ಹಂಗಳ ಹಾಗೂ ಬೇಗೂರು ಸುತ್ತಲ್ಲ ವೇಶ್ಯಾವಾಟಿಕೆ ಅತಿಯಾಗಿದೆ. ... ಹೋಟೆಲ್, ಹಿಮಗಿರಿ ಹೋಟೆಲ್‌ಗಳೊಳಗೆ ವಶ್ಯಾ ... ನಡೆಯುತ್ತದೆ. ಹೊರಗೆ ಮಸಾಜ್ ಪಾರ್ಲರ್, ಲಾಡ್ಜ್ ಅಂತೆಲ್ಲ ಬೋರ್ಡು ತಗುಲಿಸಿ ಒಳಗೆ ಅನಾತಿ ದಂಧೆ ನಡೆಸುತ್ತಿರುವ ವಿಚಾರ ತಿಳಿದು ಸಾರ್ವಜನಿಕರೇ ಒಮ್ಮೆ ಪ್ರತಿಭಟಿಸಿದ್ದರು. ಈ ಬಗ್ಗೆ ದಕ್ಷಿಣ ವಲಯ ಡಿಜಿಪಿ ... ಮೂರ್ತಿಯವರಿಗೂ ಮನವಿ ಸಲ್ಲಿಸಿದ್ದರು.

...ವಾಗಿ ಪೊಲೀಸರು ದಂಧೆ ನಡೆಸುತ್ತಿದ್ದ ಲಾಡ್ಜ್-ಮಸಾಜ್ ಪಾರ್ಲರ್‌ಗಳ ಮೇಲೆ ರೇಡು ಬಿದ್ದರು. ... ಎತ್ತಂಗಡಿಯಾದ ವೇಶ್ಯಾ ದಂಧೆಯ ಜಾಲ ಗುಂಡ್ಲುಪೇಟೆಯೊಳಗಿನ ಗಿರಿ ಲಾಡ್ಜ್, ಆಶೀರ್ವಾದ್ ಲಾಡ್ಜ್, ... ಲಾಡ್ಜ್ ಹಾಗೂ ಕಾವೇರಿ ಕಂಫರ್ಟ್‌ಗಳಲ್ಲಿ ನೆಲ ಕಂಡುಕೊಂಡಿತು.

ಈ ಲಾಡ್ಜುಗಳ ಮಾಲೀಕರು ಮತ್ತು ಮ್ಯಾನೇಜ್‌ಮೆಂಟ್‌ನ ಮಂದಿ ಕೇರಳದಿಂದ ಹುಡುಗಿಯರನ್ನು ಕರೆಸಿಕೊಂಡು ಅಂತರ್‌ರಾಜ್ಯ ಉದ್ಯಮಿಗಳನ್ನು ಸೆಳೆಯತೊಡಗಿದರು. ಇವೆಲ್ಲಾ ಇದರಿಂದಲೇ ಕೊಬ್ಬಿಹೋದದ್ದೂ ದಿಟ. ಆದರೆ ತಳವಾರ್ ಸಾಹೇಬರು ಮಾತ್ರ ಲಾಡ್ಜ್ ಮಾಲೀಕರ ಕೂಳು ತಿಂದು ಲಾಠಿ ಕೆಳಗಿಟ್ಟು ಬಾಲ ಮುದುರಿಕೊಂಡರು!

ಇಂಥ ಪೊಲೀಸ್ ಅಧಿಕಾರಿಯಿಂದ ಯಾವ ಊರಾದರೂ ಹೇಗೆ ಉದ್ಧಾರವಾದೀತು?

ಗುಂಡ್ಲುಪೇಟೆ: ಕರ್ತವ್ಯ ಮರೆತ ಪೊಲೀಸರು



ಲಕ್ಷ್ಮಿಕಾಂತ ತಳವಾರ್

ಪೊಲೀಸು ಮಂದಿ ಕರ್ತವ್ಯ ಮರೆತು ತೂಕಡಿಸಿದರೆ, ಕಳ್ಳದಂಧೆಗಳೊಂದಿಗೆ ಕೈಜೋಡಿಸಿದರೆ ಏನೇನು ಅನಾಹುತಗಳಾಗಬಹುದೋ ಅದೆಲ್ಲದವೂ ಗಡಿಭಾಗದ ಗುಂಡ್ಲುಪೇಟೆಯಲ್ಲಾಗುತ್ತಿವೆ.

ಚಾಮರಾಜನಗರ ಜಿಲ್ಲೆಯಲ್ಲೇ ಅತ್ಯಂತ ಸೂಕ್ಷ್ಮ ಪ್ರದೇಶ ಅಂತ ಗುಂಡ್ಲುಪೇಟೆ ಗುರುತಿಸಿಕೊಂಡಿದೆ. ಯಾಕೆಂದರೆ ಇದು ತಮಿಳುನಾಡು, ಕೇರಳಗಳ ಗಡಿ ಪ್ರದೇಶ. ಇದರ ಜೊತೆಗೆ ಇಲ್ಲಿ ಹಲವಾರು ಕಾನೂನುಬಾಹಿರ ದಂಧೆ ಹಾಗೂ ಮಾಫಿಯಾಗಳು ಭೂತಾಕಾರ ಪಡೆದಿವೆ. ಇಂಥಾ ಜಾಗಕ್ಕೆ ಸಬ್ ಇನ್ಸ್‌ಪೆಕ್ಟರ್ ಆಗಿರುವಾತ ಭ್ರಷ್ಟನಾದರೆ ಎಲ್ಲವೂ ತಿರುವುಮುರುವಾಗುತ್ತದೆ. ಸದ್ಯ ಗುಂಡ್ಲುಪೇಟೆ ಠಾಣೆಯ ಸಬ್‌ಇನ್ಸ್‌ಪೆಕ್ಟರ್ ಆಗಿರುವ ಲಕ್ಷ್ಮಿಕಾಂತ ತಳವಾರ್ ಹಣದ ಹಪಾಹಪಿಗೆ ಬಿದ್ದು ಕಾನೂನು ವ್ಯವಸ್ಥೆಯನ್ನೇ ಬುಡಮೇಲಾಗಿಸಿದ್ದಾನೆ.

ಉತ್ತರ ಕರ್ನಾಟಕದ ಕಡೆಯವನಾದ ತಳವಾರ್ ಈ ಹಿಂದೆ ನಂಜನಗೂಡಿನಲ್ಲಿ ಕಾರ್ಯನಿರ್ವಹಿಸಿದ್ದ. ಅಲ್ಲೂ ಸಹ ಕೈಬಾಯಿ ಕೆಡಿಸಿಕೊಂಡು ಸರ್ವಾಧಿಕಾರಿಯಂತೆ ಮೆರೆದಾಡಿದ್ದನಲ್ಲದೆ ಶಾಸಕ ವಿ. ಶ್ರೀನಿವಾಸ ಪ್ರಸಾದ್‌ರ ಕೆಂಗಣ್ಣಿಗೂ ಗುರಿಯಾಗಿದ್ದ. ಅಲ್ಲಿಂದ ವರ್ಗವಾಗಿ ಗುಂಡುಪೇಟೆಗೆ ವಕ್ಕರಿಸಿದವನೇ ಎಲ್ಲ ಅಕ್ರಮ ದಂಧೆಗಳಿಗೂ ನೆರಳಾಗಿ ನಿಂತು ಕರ್ತವ್ಯವನ್ನೇ ಮರೆಯುವಂತೆ ಹಣ ಎಣಿಸುವುದರಲ್ಲಿ ಬ್ಯುಸಿಯಾಗಿ ಹೋದ.

ಗುಂಡ್ಲುಪೇಟೆಯಲ್ಲಿ ಹಾದು ಹೋಗುವ ಕೇರಳ-ತಮಿಳುನಾಡು ಹೆದ್ದಾರಿಗಳಲ್ಲಿ ದಿನನಿತ್ಯ ಅಪಘಾತಗಳಾಗುತ್ತಿರುತ್ತವೆ. ಇದನ್ನೇ ದಂಧೆಯನ್ನಾಗಿ ಮಾರ್ಪಡಿಸಿಕೊಂಡಿರುವ ತಳವಾರ್ ತಪ್ಪಿತಸ್ಥ ಚಾಲಕರಿಂದ ಹಣ ಕಸಿದುಕೊಂಡು ಕಳಿಸುತ್ತಿದ್ದಾನೆ. ಈತನ ವ್ಯಾಪ್ತಿಗೆ ನೂರು ಚಿಲ್ಲರೆ ಹಳ್ಳಿಗಳು ಬರುತ್ತವೆ. ಇವುಗಳಲ್ಲಿ ನಾನಾ ಕಾರಣಗಳಿಗಾಗಿ ಜನರ ಮಧ್ಯೆ ಮಾರಾಮಾರಿಗಳಾಗುತ್ತವೆ. ಮೋಸ-ವಂಚನೆಗಳೂ ನಡೆಯುತ್ತವೆ. ಈ ಬಗ್ಗೆ ನ್ಯಾಯ ಕೇಳಿಕೊಂಡು ಬಡಬಗ್ಗರು ಬಂದರೆ ತಳವಾರನೊಳಗಿನ ಪೌರುಷ ಪುಟಿದೆದ್ದು ಬೆದರಿಸಿ ಅಟ್ಟುತ್ತಾನೆ. ಇದಲ್ಲದೆ ಠಾಣೆಗೆ ದೂರು ನೀಡಲು ಬಂದವರ ವಿರೋಧಿಗಳನ್ನ ಕರೆಸಿಕೊಂಡು ಹಣ ವಸೂಲಿ ಮಾಡಿ ಕೇಸು ದಾಖಲಿಸದೆ ಕಳಿಸಿದ ಪ್ರಕರಣಗಳೂ ಸಾಕಷ್ಟಿವೆ.

ಇದೀಗ ಗುಂಡ್ಲುಪೇಟೆಯೆಂಬುದು ಅಕ್ಷರಶಃ ನಕಲಿ ಮದ್ಯದ ಗಟಾರವಾಗಿ ಬದಲಾಗಿದೆ. ಅಕ್ರಮ ಮದ್ಯ ಸಾಗಣೆ ಹಾವಳಿಯೂ ವಿಪರೀತವಾಗಿದೆ. ಇನ್ನು ಆಘಾತಕಾರಿ ಅಂಶವೆಂದರೆ, ನೆರೆಯ ತಮಿಳುನಾಡಿನಿಂದ ಬರುವ ವ್ಯಾಪಾರಿಗಳು ದಂಡಿ ದಂಡಿ ಖೋಟಾನೋಟುಗಳನ್ನು ಕರ್ನಾಟಕದ ತುಂಬಾ ಹರಿದಾಡಿಸುತ್ತಿದ್ದಾರೆ. ಇಷ್ಟಲ್ಲದೇ ಗುಂಡ್ಲುಪೇಟೆಯ ಗಲ್ಲಿಗಲ್ಲಿಗಳಲ್ಲಿ ಇಸ್ಪೀಟ್ ಅಡ್ಡೆಗಳು ತಲೆಯೆತ್ತಿವೆ. ಇವುಗಳನ್ನೆಲ್ಲ ತಡೆಯೋರ್‍ಯಾರು ಅಂದರೆ ಗುಂಡ್ಲುಪೇಟೆಯ ಮಂದಿ ತಳವಾರನತ್ತ ಬೆಟ್ಟು ಮಾಡಬಹುದು. ವಾಸ್ತವವೆಂದರೆ, ಖುದ್ದು ಈತನೇ ದಂಧೆಕೋರರೊಂದಿಗೆ ಕೈಜೋಡಿಸಿ ಲಕ್ಷ ಲಕ್ಷ ಕಮಾಯಿಸುತ್ತಿದ್ದಾನೆ.

ತಳವಾರನ ಕಾಯಿಲೆಗಳೆಲ್ಲ ಇತರೆ ಪೊಲೀಸ್ ಸಿಬ್ಬಂದಿಗೂ ಹರಿಸಿದಂತಿದೆ. ಯಾಕೆಂದರೆ ಗುಂಡ್ಲುಪೇಟೆಯಲ್ಲಿ ಒಂದರ ಹಿಂದೊಂದರಂತೆ ಕಳ್ಳತನ ಪ್ರಕರಣಗಳು ನಡೆಯುತ್ತಲೇ ಇವೆ. ಪೇಟೆಯ ತುಂಬಾ ಗಸ್ತು ತಿರುಗಬೇಕಾದ ಪೊಲೀಸರು ಕತ್ತಲಾದೇಟಿಗೆ ಕಂಠಪೂರ್ತಿ ಕುಡಿದು ಕಂಡಲ್ಲಿ ಕುಕ್ಕರಿಸಿರುವುದೇ ಇದಕ್ಕೆ ಪ್ರಮುಖ ಕಾರಣ. ಕೆಲ ಮಂದಿ ಪೊಲೀಸರು ಕುಡಿದು ಮನೆ ಸೇರಿಕೊಳ್ಳುವುದೂ ಇದೆ. ಇದನ್ನೇ ವರವಾಗಿಸಿಕೊಂಡು ನೂರಾರು ಲಾರಿಗಳು ಕತ್ತಲಲ್ಲಿ ಕೇರಳಕ್ಕೆ ಮರಳು ಸಾಗಿಸುವುದೂ ಸಹ ಈಗ ಗುಟ್ಟಾಗುಳಿದಿಲ್ಲ.

ಒಟ್ಟಾರೆಯಾಗಿ ತಳವಾರನ ಹಣದ ಹಪಾಹಪಿಗೆ ಸಿಕ್ಕು ಒಂದಿಡೀ ಗುಂಡ್ಲುಪೇಟೆ ಗಬ್ಬೆದ್ದು ನಾರುತ್ತಿದೆ. ಕಾನೂನೆಂಬುದನ್ನು ಇಲ್ಲಿನ ದಂಧೆಕೋರರು ತಳವಾರನ ದಯೆಯಿಂದ ಖರೀದಿಸಿ ಬಿಟ್ಟಿದ್ದಾರೆ. ಈತ ಇಷ್ಟೆಲ್ಲಾ ಭಾನಗಡಿ ಮಾಡಿದರೂ ಯಾರೂ ಮಾತಾಡುತ್ತಿಲ್ಲ, ಸ್ಥಳೀಯ ಶಾಸಕ ಮಹದೇವ ಪ್ರಸಾದ್ ತಳವಾರನ ಬಕೀಟುಗಿರಿಗೆ ಮಾರುಹೋದಂತಿದೆ. ದಕ್ಷ ಸರ್ಕಲ್ ಇನ್ಸ್‌ಪೆಕ್ಟರ್ ಅಶೋಕ್ ಕುಮಾರ್ ಯಾಕೋ ಈತನ ಅಂದಾದುಂದಿಗಳನ್ನು ಕಂಡೂ ಕಾಣದಂತೆ ಸುಮ್ಮನಿದ್ದಾರೆ. ಇದು ಜನರ ನಡುವೆ ಸಹಜವಾಗಿ ಗುಮಾನಿ ಹುಟ್ಟಿಸಿದೆ.




ತಳವಾರ ಗುಂಡ್ಲುಪೇಟೆಯನ್ನು ಗುಡಿಸಿ ಗುಂಡಾಂತರ ಮಾಡುತ್ತಿರುವುದನ್ನು ಕಂಡು ಕಂಗಾಲಾಗಿರುವ ಜನತೆ ಒಂದಷ್ಟು ನೆಮ್ಮದಿಯಾಗಿ ಹಪಾಹಪಿಸುತ್ತಿದ್ದಾರೆ.

ತಳವಾರನನ್ನು ಕಿತ್ತೊಗೆದು ದಕ್ಷನನ್ನು ನೇಮಿಸಿದರೆ ಜನರ ಮನದಿಂಗಿತಕ್ಕೆ ಬೆಲೆಕೊಟ್ಟು ಗುಂಡ್ಲುಪೇಟೆಯನ್ನು ಕಾಪಾಡಿದಂತಾಗುತ್ತದೆ!

ಈ ಗೂಳಿಹಟ್ಟಿ ಗೋಳ ಯಾರ್ ಕೇಳ್ತಾರೆ ಸಾರ್

ರಾಜಕಾರಣ ಮತ್ತು ಧರ್ಮಕಾರಣದಲ್ಲಿ ಅಲ್ಲೋಲಕಲ್ಲೋಲಗಳೇ ಜರುಗುತ್ತಿವೆಯಂತಲ್ಲಾ, ದಲಿತರು ಮಠಾಂತರವ... ಗತಿಯೇನೆಂದು ಹೆದರಿ ಕೂತಿರುವ ಪೇಜಾವರಶ್ರೀಗಳು ಹುಲ್ಲಿಲ್ಲದ ಕೊಟ್ಟಿಗೆಗೆ ನುಗ್ಗಿದ ಬಡಕಲು ದನದಂತೆ ದ... ಕೇರಿಗೆ ನುಗ್ಗಿ, ಮಾಂಸ ತಿನ್ನಬೇಡಿ, ಮದ್ಯ ಸೇವಿಸಬೇಡಿ, ನೀವಿರುವ ಬಣದಲ್ಲೆ ಸುಖವಾಗಿರಿ ಎಂದರಂತಲ್ಲಾ, ಇದ... ತೀರಾ ಸಿಟ್ಟಾಗಿರುವ ಉಡುಪಿ ಕಡೆಯ ಕಂದಾಚಾರಿಗಳು ಪೇಜಾವರರ ನಡವಳಿಕೆಯಿಂದ ವಿಪ್ರಸಮೂಹ ಅಪ... ಸ್ಥಾನಕ್ಕೆ ತಾನೇ ಹೋಗಿ ನಿಂತಂತಾಗಿದೆ. ಇಂತಹ ಕೃತ್ಯಕ್ಕೆ ನಾವು ಮಾಡಿದ ಅಪರಾಧವೇನೂ, ಶತಮಾನಗಳಿಂದ ... ದೇಶವನ್ನೇ ಬಾಳೆಎಲೆಯಂತೆ ಹಾಸಿಕೊಂಡು ಊಟಮಾಡಿ, ಪುರಾಣದ ಕತೆ ಹೇಳುವುದನ್ನು ಮುಂದುವರೆಸು... ಬಿಟ್ಟು, ಮಾದಿಗರ ಮಾರಿಯನ್ನ ಕೇರಿಯೊಳಕ್ಕೆ ಬಿಟ್ಟುಕೊಂಡಿದ್ದೇ ಅಲ್ಲ ಎಂದು ಮಾದಾರ ಚನ್ನಯ್ಯ ಮಠದ ... ಗಳನ್ನು ನಿಂದಿಸಿದೆಯಂತಲ್ಲಾ, ಅಲ್ಲದೆ ನಮ್ಮ ಸಂವಿಧಾನದಂತೆ ನಾವು ಬದುಕಬೇಕೆ ಹೊರತೂ, ಆಗಿಹೋದದ್ದಕ್ಕೆ ... ಪ್ರಶ್ನೆ ಇರಕೂಡದೆಂದು ವಾದಿಸುತ್ತಿವೆಯಂತಲ್ಲಾ, ಥೂತ್ತೇರಿ.

* * * *



ಕಂದಾಚಾರಿ ವಿಪ್ರಸಮೂಹದ ಸಂವಿಧಾನ ಯಾವುದು, ಪುರೋಹಿತಶಾಹಿಗಳಂತೂ ಅಂಬೇಡ್ಕರ್ ಸಂವಿಧಾನವನ್ನು ಒಪ್ಪುತ್ತಿಲ್ಲ, ಅಷ್ಟೇ ಅಲ್ಲ, ಕೋರ್ಟುಗಳಿಗೂ ಬೆಲೆ ಕೊಡುತ್ತಿಲ್ಲ, ಹಾಗಾದರೆ ಮನುಧರ್ಮ ಶಾಸ್ತ್ರವೇ ಇವರ ಸಂವಿಧಾನವಿರಬೇಕು ಎಂದು ದೇವನೂರು ಶಿಷ್ಯರು ತರ್ಕಿಸುತ್ತ ಇರಬೇಕಾದರೆ, ಸರ್ವೋದಯ ಕರ್ನಾಟಕ ಪಾರ್ಟಿ ಅಧ್ಯಕ್ಷರಾದ ದೇವನೂರು ಈ ದ್ವಿಜರನ್ನ ಹತ್ತಿಕ್ಕಬೇಕಾದರೆ ನಮಗೆ ತ್ರಿಜ ದೀಕ್ಷೆಯೇ ಸರಿ ಎಂದು ಪೇಜಾವರ ಸ್ವಾಮಿಗೆ ಸಲಹೆ ಕೊಟ್ಟರಂತಲ್ಲಾ, ಹಿಂದೂ ಧರ್ಮದ ಆ ತುದಿಯೆಂದರೆ ಪೇಜಾವರ, ಈ ತುದಿಯೆಂದರೆ ಮಾದಾರ ಮಠದ ಸ್ವಾಮಿ ಇವರಿಬ್ಬರೂ ಪರಸ್ಪರ ಕೇರಿಗೆ ಹೋಗಿ ಪಾದ ತೊಳೆಸಿಕೊಂಡ ಕೂಡಲೇ ಜಾತಿ ತಾರತಮ್ಯವೇ ಸರ್ವನಾಶವಾಗಿ ಹೋಯ್ತು ಎಂಬಂತೆ ಕೂಗಾಡುತ್ತಿರುವ ಅರೆಬೆಂದ ಜನರಿಗೆ ಉತ್ತರರೂಪವಾಗಿ ಸಾಣೆಹಳ್ಳಿ ಶ... ಈ ತೋರಿಕೆ ಪಾದಪೂಜೆಯಿಂದ ಯಾವ ಬದಲಾವಣೆಯೂ ಆಗಲ್ಲ ಕಂಡ್ರಿ, ಇಂತಹ ಪ್ರಹಸನಗಳಿಲ್ಲದೆ ಮ... ಮನುಷ್ಯನಾಗಿ ಬದಲಾಗಬಹುದು ಎಂದು ಗೊಣಗಿದರಂತಲ್ಲಾ ಥೂತ್ತೇರಿ!

* * * *

ಹನ್ನೊಂದು ಜನ ಲಿಂಗವಂತರನ್ನು ಸಂಪುಟಕ್ಕೆ ಸೇರಿಸಿಕೊಂಡಿರುವ ಎಡೂರಪ್ಪ ಹೆಚ್ಚುಕಮ್ಮಿ ವಿಧಾನಸೌಧಕ್ಕೇ ... ಕಟ್ಟಬಿಟ್ಟರಂತಲ್ಲಾ, ಜಾತಿತಾರತಮ್ಯವನ್ನ ಬಹು ಸೂಕ್ಷ್ಮವಾಗಿ ಗಮನಿಸಿ ಒಳಗಿಂದೊಳಗೇ ಮಸಲತ್ತು ನಡೆಸುವ ಚೆಡ್ಡಿ... ತಮ್ಮ ವಿಪ್ರ ಜನಾಂಗಕ್ಕೆ ಕರ್ನಾಟಕದಲ್ಲಿ ಮೊದಲಬಾರಿಗೆ ಸಿಕ್ಕ ಅವಕಾಶ ನೆನೆದು ಬಿರುಸಿನಿಂದಲೇ ಲಾಠಿ ಬೀಸುತ್ತಿವೆಯಂ... ಇದೆಲ್ಲಕ್ಕಿಂತ ಮುಖ್ಯವಾಗಿ ವಿಧಾನಸೌಧದಲ್ಲಾಗಲಿ ಸರ್ಕಾರಿ ಕಚೇರಿಯಲ್ಲಾಗಲಿ ಅಡ್ಡ ವಿಭೂತಿ, ಉದ್ದ ಕುಂ... ಹಚ್ಚಿಕೊಂಡ ಕೆಳದರ್ಜೆ ನೌಕರರನ್ನು ಮೇಲಾಫೀಸರು ಮಾತನಾಡಿಸಲಾಗುತ್ತಿಲ್ಲವಂತಲ್ಲಾ, ತಪ್ಪು ಮಾಡಿದರೆ ಮ... ಕೊಡುವುದು ಹೋಗಲಿ, ಅಕಸ್ಮಾತ್ ಕೊಟ್ಟರೆ ಜವಾನರು ತಮ್ಮ ಆಫೀಸರುಗಳನ್ನೆ ಎತ್ತಂಗಡಿ ಮಾಡಿಸುತ್ತಿದ್ದಾರಂ... ಇಂತಹದ್ದೊಂದು ಸ್ಥಿತಿ ಕರ್ನಾಟಕಕ್ಕೆ ಯಾವಾಗಲೂ ಬಂದಿರಲಿಲ್ಲ, ಆದರಲ್ಲೂ ಕೆಳಜಾತಿ ಅಧಿಕಾರಿಗಳು, ನೌ... ಅನುಭವಿಸುತ್ತಿರುವ ಯಾತನೆಗೆ ಕೊನೆ ಮೊದಲಿಲ್ಲದಂತಾಗಿದೆಯೆಂದು ಆಫೀಸರುಗಳು ಅಳಲು ತೋಡಿಕೊ... ಮುನ್ನ ಸುತ್ತಲೂ ನೋಡಿ ಇಳಿದನಿಯಲ್ಲಿ ಮಾತನಾಡುತ್ತಿವೆಯಂತಲ್ಲಾ, ಥೂತ್ತೇರಿ!

******

ಎಡೂರಪ್ಪನ ಅಟ್ಟಹಾಸದ ನಡುವೆ ಗೂಳಿಹಟ್ಟಿಯ ಗೋಳಿನ ಮುಖ ನೆನಪಿಗೆ ಬಂದು ಮಾತನಾಡಿಸಬೇಕೆನಿಸಿತಲ್ಲಾ, ಆ ಕೂಡಲೇ ಫೋನ್ ಮಾಡಲಾಗಿ ರಿಂಗಾಯ್ತು, ರಿಂಗ್ ಟೋನ್: ನಿನಗ್ಯಾರಿದ್ದರೇನು ಸುಖವಿಲ್ಲ ಪ್ರಭುವೇ ದಾರಿ ಸುಖವಿಲ್ಲ...."

ಥೂತ್ತೇರಿ

"ಹಲೋ ಯಾರು."

"ನಾನು ಸಾರ್ ಪತ್ರಕರ್ತ, ನಿಮ್ಮನ್ನ ಮಾತನಾಡಸೋದಕ್ಕೆ ಫೋನ್ ಮಾಡಿದೆ ಸಾ."

"ನಮ್ಮನ್ನ ಯಾಕ್ ಮಾತಾಡುಸ್ತೀರಿ ಸಾರ್..." (ಅಳು)

"ಅಳಬೇಡಿ ಸಾರ್ ಸಮಾಧಾನ ಮಾಡಿಕಳಿ, ಅಳೋದಕ್ಕೆ ನಿಮ್ಮ ತಂದೆ ತೀರಿಕಂಡಿಲ್ಲ. ನಿಮ್ಮ ತಾಯಿ ತೀರಿಕ... ಅಥವಾ....."

"ಬೇಡಿ ಸಾರ್, ಇನ್ನೊಂದು ಸಾರಿ ಮಾತಡಾನ."

"ಅಂಗನ್ನಬೇಡಿ ಸಾರ್ ನಿಮ್ಮನ್ನ ಮಾತಾಡಿಸಿ ಬರೀರಿ ಅಂತ ನಮ್ಮ ಸಂಪಾದಕರು ಕಾಲುಪುಟ ಬಿಟಗ... ಕಾಯ್ತಾಯಿದಾರೆ."

"ಏನೇ ಆಗ್ಲಿ ದಲಿತರಾಗಿ ಹುಟ್ಟಬಾರ್ದು ಸಾರ್."

"ನೀವು ದಲಿತರಾಗಿ ಹುಟ್ಟದ್ಕೆ ದಿಢೀರನೆ ಯಲಕ್ಷನ್ನಲಿಗೆದ್ದು ಪಟ್ಟಂತ ಮಂತ್ರಿಯಾಗಿದ್ದು ಗೊತ್ತ?"

"ಅಂಗಲ್ಲ ಕಂಡ್ರೀ ಈ ಟೈಮಲ್ಲಿ ಯಾರೂ ನನ್ನ ಸಹಾಯಕ್ಕೆ ಬರಲಿಲ್ಲ."

"ನೀವು ಆಗ ರೆಡ್ಡಿಗಳ ಜೊತೆ ಹೋದದ್ಕೇ ಅಲ್ಲ."

"ಹೋಗದೆ ಇರಕ್ಕಾಗ್ತೇನ್ರಿ"... (ಅಳು)

"ಅಳಬೇಡಿ ಮಾತಾಡಿ ಸಾರ್."

"ಸಾರಿ ಇನ್ನೊಂದು ಸಾರಿ ಫೋನ್ ಮಾಡಿ."

"ಸಮಾಧಾನ ಮಾಡಿಕೊಳ್ಳಿ." (ಅಳು)

"ಮುಂದೇನು ಮಾಡ್ತಿರಿ ಸಾರ್."

"ಅಳು".

"ಎಷ್ಟೇ ಆಗ್ಲಿ ನೀವು ಅಳುಬುರಕನ ಸಂಪುಟದಲ್ಲಿ ಇದ್ರಲವೆ."

"ಆದ್ಕೆ ಅಳು".


"ಥೂತ್ತೇರಿ."

...ಬ್ಬಳ್ಳಿ: ಕಿಮ್ಸ್ ಸುವರ್ಣ ಸಂಭ್ರಮ ...ಕೋಟಿ ಗುಳುಂ



...ಒಂದಲ್ಲಾ ಒಂದು ರಗಳೆಗಳನ್ನು ಹೊರ ತರುವ ...ಡಿಕಲ್ ಕಾಲೇಜು ಈಗ ಸುವರ್ಣ ಸಂಭ್ರಮದ ... ಅದೂ ಸರ್ಕಾರಿ ಶೋಕಾಚರಣೆ ಸಂದರ್ಭದಲ್ಲಿ ...ಪಾರ್ಟಿ ಆಯೋಜಿಸಿ ಪೇಚಿಗೆ ಸಿಲುಕಿದೆ. ಕಿಮ್ಸ್ ... ಎಂ.ಜಿ. ಹಿರೇಮಠನ ಘನ ಅಧ್ಯಕ್ಷತೆಯಲ್ಲಿ ...ಗೋಕುಲ್ ಗಾರ್ಡನ್‌ನಲ್ಲಿ ಆಯೋಜಿಸಲಾಗಿದ್ದ ...ಸಮಾರಂಭ ಪಾನಗೋಷ್ಠಿಯಾಗಿ ಪರಿವರ್ತನೆ ...ಇಡೀ ಕಿಮ್ಸ್‌ನ ವೈದ್ಯ ಸಮೂಹ ಕಂಠಪೂರ್ತಿ ...ಸರ್ಕಾರಿ ಕಾರ್ಯಕ್ರಮಕ್ಕೆ ಲೈವ್‌ಬ್ಯಾಂಡ್ ರೂಪ ...ತಮ್ಮ ಅನಾಗರಿಕ ತೆವಲನ್ನು ತೆರೆದಿಟ್ಟಿದ್ದಾರೆ.

...ಗೆ ಈಗ 53 ವರ್ಷ. 50 ವಸಂತ ಕಳೆದರೂ ...ಸಮಾರಂಭ ಮಾಡಲಿಲ್ಲಾ ಎಂಬ ಆರೋಪಗಳು ... ವ್ಯಕ್ತವಾಗುತ್ತಿದ್ದ ಹಿನ್ನೆಲೆಯಲ್ಲಿ ಕಳೆದ 17 ರಿಂದ ...ನಗಳ ಕಾಲ ಇದಕ್ಕೆ ಮುಹೂರ್ತ ಇಡಲಾಗಿತ್ತು. ...ಂದೇ ಗದುಗಿನ ಪುಟ್ಟರಾಜ ಗವಾಯಿಗಳು ...ರೆಂದು ಸರಕಾರ ಶೋಕಾಚರಣೆ ಘೋಷಿಸಿತ್ತು. ...ಉದ್ಘಾಟನಾ ಕಾರ್ಯಕ್ರಮ ಕೂಡಾ ರದ್ದಾಯಿತಾ ... ಗುಂಡು ಪಾರ್ಟಿಯನ್ನು ಮಾತ್ರ ಬರಫೂರಾಗೆ ...ಯಿತು. ತಮ್ಮ ಹುದ್ದೆ ಘನತೆ ಗೌರವವನ್ನು ...ದ್ಯರು ಸರ್ಕಾರಿ ಬ್ಯಾನರ್ ಮುಂದೆ ಕೈಯಲ್ಲೊಂದು ...ಡಿದು ಥಕಥೈ ಎಂದು ಕುಣಿದಾಡಿ ಉರುಳಾಡಿ ...ಮಾನಕ್ಕೆ ಧೂಳು ಅಂಟಿಸಿಕೊಂಡಿದ್ದಾರೆ. ಆದರೆ ...ರ್ದೇಶಕ ಎಂ.ಜಿ. ಹಿರೇಮಠ ತನಗೂ ...ಗೂ ಸಂಬಂಧನೇ ಇಲ್ಲ ಎಂದು ...ದು ತಿರುಗಿ ಈಗ ನೈತಿಕಹೊಣೆಯ ...ಯೇಟ್ ಮಾಡಿ ನಿರ್ದೇಶಕ ಹುದ್ದೆಗೆ ... ಕೊಟ್ಟು ಸೈಡ್ ಹಚ್ಚಿದ್ದಾನೆ.



...ಮಾನವ್ವೋ... ಗುಂಡು ಪಾರ್ಟಿಯೋ......!

...ಸ್ ವಿದ್ಯಾಲಯದಲ್ಲಿ ಓದಿರುವ ... 15 ಸಾವಿರಕ್ಕೂ ಹೆಚ್ಚು ವೈದ್ಯರು ...ನಕ್ಕಾಗಿ ತಮ್ಮ ಯೋಗ್ಯತೆಗೆ ತಕ್ಕಂತೆ ...ಹೋಳೆಯನ್ನೇ ಹರಿಸಿದ್ದರು. ಹೀಗಾ ...ಸಾವಿರಾರು ಜನ ವೈದ್ಯರು ತಮ್ಮ ಹೆಂಡತಿ ...ದಿಗೆ ಸುವರ್ಣ ಮಹೋತ್ಸವ ಸಂಭ್ರಮಕ್ಕಾಗಿ ... ಬಂದು ಠಿಕಾಣಿ ಹೂಡಿದ್ದರು. ಕಿಮ್ಸ್ ...ಸುದಲ್ಲಿ ಕಲಿತು ದೊಡ್ಡ ವೈದ್ಯರೆನಿಸಿಕೊಂಡ ... ಈ ಸಂದರ್ಭದಲ್ಲಿ ನಾಡೋಜಾ ಪಾಟೀಲ ...ಅವರಿಂದ ಸನ್ಮಾನಿಸಲಾಯಿತು. ಮುಂದೆ ಇದೇ ...ಲ್ಲಿ ಪುಂಡುಪೋಕರಿಗಳಂತೆ ಕೈಯಲ್ಲೊಂದು ...ಡಿದು ಮತ್ತಿನಲ್ಲಿ ಮನಬಂದಂತೆ ಮೈ ಕುಣಿಸಿದ ... ಇಡೀ ವೇದಿಕೆಯನ್ನು ಲೈವ್‌ಬ್ಯಾಂಡ್ ರೂಪಕ್ಕೆ ...ಲ್ಲಿಸಿದ್ದರು. ಈ ಗುಂಡು ಪಾರ್ಟಿ ಪ್ರಾರಂಭದಲ್ಲಿ ... ಎಂ.ಜಿ. ಹಿರೇಮಠ ಸೇರಿದಂತೆ ಕಿಮ್ಸ್‌ನ ಅನೇಕ ...ವೈದ್ಯರು ಅಲ್ಲೆ ಇದ್ದರು. ತಮ್ಮ, ತಮ್ಮ ಬ್ಯಾಚಿನ ...ಗಳೊಂದಿಗೆ ಇವರು ಸಹ ಕುಣಿದು ಕುಪ್ಪಳಿಸಿದ್ದರು. ...ಈ ಗುಂಡು ಪಾರ್ಟಿಯ ಸುದ್ದಿ ಮೀಡಿಯಾದ ...ದ್ದು, ಅವರು ಕ್ಯಾಮರಾ ಹಿಡಿದು ಪಾರ್ಟಿಗೆ ...ಗುತ್ತಾರೆ ಅಂದು ತಿಳಿದಿದ್ದೇ ತಡ ಡಾ.ಎಂ.ಜಿ. ಗೋಕುಲ ಗಾರ್ಡನ್‌ನಿಂದ ಎಸ್ಕೇಪ್ ಆಗಿದ್ದಾನೆ. ಗುಂಡು ಪಾರ್ಟಿಯಲ್ಲಿ ಕಿಮ್ಸ್‌ನ ವೈದ್ಯ ಶಿಖಾಮಣಿಗಳಾದ ಡಾ. ಪ್ರಶಾಂತ ಕುಮಾರ, ಡಾ. ವಿಜಯ ಮುಳಗುಂದ, ಡಾ. ರುದ್ರಪ್ಪ ಡಾ. ವಿಜಯ ಕಾಮತ ಸೇರಿದಂತೆ ಹೊರಗಿನಿಂದ ಬಂದಿದ್ದ ಡಾ. ಕೃಷ್ಣಪ್ರಸಾದ, ಡಾ. ಪ್ರಕಾಶ ಬಿರನೂರ, ಮೈ ಮೇಲಿನ ಬಟ್ಟೆಗಳ ಅರಿವು ಇಲ್ಲದಂತೆ ಮಾನಗೇಡಿಗಳ ತರ ಥಕ್‌ಥೈ ಎಂದಿದ್ದಾರೆ. ಇನ್ನೂ "ಡಿ" ದರ್ಜೆಯ ನೌಕರ ನಾಗರಾಜ ಕಾರ್ಪೆಟ್ ಮೇಲೆ ಊರುಳಾಡಿ ನಗೀನಾ ನೃತ್ಯ ಮಾಡಿದ್ದಂತೂ ಮೂಲ ಡ್ಯಾನ್ಸರ್‌ಗಳನ್ನು ಮೀರಿಸುವಂತಿತ್ತು.

ಹಾಗಾದರೆ ಈ ಗುಂಡು ಪಾರ್ಟಿಯನ್ನು ಯಾರು ಆಯೋಜಿಸಿದ್ದರು ಎಂಬ ಪ್ರಶ್ನೆ ಈಗ ಹೊರ ಬಿದ್ದಿದೆ. ಡಾ.ಎಂ.ಜಿ. ಈ ಪ್ರಕರಣದಿಂದ ಹೊರಬರಲು ತಾನು ಇದನ್ನೆಲ್ಲಾ ಆಯೋಜಿಸಿರಲಿಲ್ಲ ಅಂತಾ ಹೇಳಿ, ಇದಕ್ಕೆಲ್ಲಾ ಹಳೇ ವಿದ್ಯಾರ್ಥಿಗಳೇ ಕಾರಣ ಎಂದು ಬೊಗಳೆ ಶುರು ಹಚ್ಚಿಕೊಂಡಿದ್ದಾನೆ. ಅಸಲಿಗೆ ಹಣ ವಸೂಲಿಯಿಂದ ಹಿಡಿದು ಹುಬ್ಬಳ್ಳಿಯ ಉಮಾ ಕ್ಯಾಟ್ರಿಂಗ್‌ನವರಿಗೆ ಕಾಂಟ್ರಾಕ್ಟ ಕೊಡುವವರೆಗೂ ಎಲ್ಲಾ ಎಂ.ಜಿ. ಹಿರೇಮಠನೇ ನೋಡಿಕೊಂಡಿದ್ದು.

ಪಾರ್ಟಿ ಹೆಸರಲ್ಲಿ ಪೀಕಿದ್ದೆಷ್ಟು...?

ಸುವರ್ಣ ಮಹೋತ್ಸವ ಸಂಭ್ರಮಕ್ಕೆಂದೇ ರಾಜ್ಯ ಸರಕಾರ ರೂ. 4 ಕೋಟಿ ನೀಡಿದೆ. ವಿದ್ಯಾರ್ಥಿಗಳಿಂದ ಹಾಗೂ ದಾನಿಗಳಿಂದ 2.30 ಕೋಟಿ ದೇಣಿಗೆ ಸಂಗ್ರಹಿಸಲಾಗಿದೆ ಅಂತಾ ಕಿಮ್ಸ್ ನ ಕಚೇರಿ ರಾಮನ ಲೆಕ್ಕ ಹೊರ ಹಾಕಿದೆ. ಆದ್ರೆ ಡಾ. ಎಂ.ಜಿ.ಯ ಉಸ್ತುವಾರಿಯಲ್ಲಿಯ ಸಮಿತಿಯಿಂದ ತೆರೆಯಲಾದ ವಿವಿಧ ನಮೂನೆಯ ಸ್ಕೀಂಗಳಿಂದ ಸುಮಾರು 8 ರಿಂದ 10 ಕೋಟಿ ವಸೂಲಿ ನಡೆದಿದೆ ಎಂದು ಹೇಳಲಾಗುತ್ತಿದೆ. 10 ಲಕ್ಷ ಕೊಟ್ಟವರಿಗೆ ಪ್ಲಾಟಿನಂ ಡೋನರ್, 5 ಲಕ್ಷಕ್ಕೆ ಡೈಮಂಡ್ ಡೋನರ್, 50 ಸಾವಿರಕ್ಕೆ ಗೋಲ್ಡನ್ ಡೋನರ್, 25 ಸಾವಿರಕ್ಕೆ ಸಿಲ್ವರ್ ಡೋನರಗಳೆಂದು ಹುಬ್ಬಳ್ಳಿ ಸೇರಿದಂತೆ ಹೊರ ಜಿಲ್ಲೆಗಳಿಂದಲೂ ದೊಡ್ಡ ಶ್ರೀಮಂತರುಗಳಿಂದ ವಸೂಲಿ ಮಾಡಲಾಗಿದೆ.

ಗೋಕುಲ್ ಗಾರ್ಡನಲ್ಲಿ ನಡೆಸಿದ ಗುಂಡು ಪಾರ್ಟಿಗೂ ವಸೂಲಿ ಮಾಡಲಾಗಿದೆ. ಒಬ್ಬರಿಗೆ 2 ಸಾವಿರ, ಹೆಂಡತಿಗೆ 1 ಸಾವಿರ, ಮಕ್ಕಳಿಗೆ 500 ರೂ. ಅಲ್ಲದೆ ಪಿಜಿ ಸ್ಟೂಡೆಂಟ್ ಹೌಸ್ ಸರ್ಜನ್‌ಗಳಿಂದ 800 ರೂ, ಎಂಬಿಬಿಎಸ್ ವಿದ್ಯಾರ್ಥಿಗಳಿಂದ 500 ರೂ.ಗಳಂತೆ ಪೀಕಲಾಗಿದೆ. ಆದರೆ ಗುಂಡು ಪಾರ್ಟಿಯಲ್ಲಿ ನಡೆದ ರಾದ್ಧಾಂತದ ಹಿಂದೆ ವ್ಯವಸ್ಥಿತ ರಾಜಕೀಯ ಅಡಗಿದೆ ಎಂಬ ಚಿತ್ರಣ ಕೂಡಾ ಈಗ ಹೊರಗೆ ಬರುತ್ತಿದೆ. ಯಾಕೆಂದರೆ ಸಪ್ಟಂಬರ್ 31 ಕ್ಕೆ 3 ವರ್ಷದ ಅವಧಿ ಮುಗಿಯಲಿದ್ದು ಮತ್ತದೇ ಹುದ್ದೆಗೆ ಬರಲು ಡಾ. ಎಂ.ಜಿ ನಡೆಸುತ್ತಿದ್ದ ಪ್ರಯತ್ನವೇ ಇದಕ್ಕೆಲ್ಲಾ ಕಾರಣವಾಗಿರಬಹುದೇ? ಎಂಬ ಚರ್ಚೆ ಕೂಡಾ ಈಗ ಜೋರಾಗಿದೆ.

ಗುಂಡು ಪಾರ್ಟಿ ಕಿಕ್ಕಿಗೆ ಡಾ.ಎಂ.ಜಿ ಔಟ್...!

ಕೊನೆಘಳಿಗೆಯಲ್ಲಿ ಕ್ಯಾಕರಿಸಿ ಉಗಿಸಿಕೊಂಡು ಡಾ. ಎಂ.ಜಿ ಹಿರೇಮಠ ನಿರ್ದೇಶಕ ಹುದ್ದೆಯಿಂದ ಹೊರ ಬಂದಿದ್ದಾನೆ. ಇದೇ ತಿಂಗಳ 31ಕ್ಕೆ ಇವನ ನಿರ್ದೇಶಕ ಅವಧಿ ಅಂತ್ಯಗೊಳ್ಳಲಿತ್ತು. ಅಸಲಿಗೆ ಎಂ.ಜಿ. ಕಳೆದ 5 ತಿಂಗಳ ಹಿಂದೆಯಷ್ಟೆ ನಿರ್ದೇಶಕ ಹುದ್ದೆಗೆ ಬಂದು ಕುಳಿತಿದ್ದ. ಈ ಹಿಂದೆ ಡಾ. ದೊಡ್ಡಮನಿ ಶೂಟೌಟ್ ಪ್ರಕರಣದಲ್ಲಿ ಜೈಲುವಾಸ ಅನುಭವಿಸಿ ಕೊನೆಗೆ ದೋಷಮುಕ್ತನಾಗಿ ಹೊರಬಂದು ಈ ಸೀಟಿಗೆ ಕುಳಿತಿದ್ದ. ಆಗಲೂ ವೈದ್ಯಕೀಯ ಶಿಕ್ಷಣ ಮಂತ್ರಿ ರಾಮಚಂದ್ರಗೌಡ ಮತ್ತು ಆಗಿನ ಉಸ್ತುವಾರಿ ಮಂತ್ರಿಯಾಗಿದ್ದ ನಿರಾಣಿ, ಬೊಮ್ಮಾಯಿಗಳಿಗೆ 30 ಲಕ್ಷ ಪೇಮೆಂಟ್ ಮಾಡಿದ್ದ. ಆದರೆ ಎಂ.ಜಿ. ನಸೀಬ ಖೋಟಾ ಇತ್ತು ಅಂತಾ ಕಾಣುತ್ತೆ. ಅಸಲಿನ ಜೊತೆ ಬಡ್ಡಿ ಬಾಚುವ ಮುನ್ನವೇ ಹುದ್ದೆಗೆ ರಾಜೀನಾಮೆ ನೀಡುವಂತಹ ಸ್ಥಿತಿ ಬಂದೊದಗಿದೆ. ಇನ್ನೊಂದು ಅವಧಿ ನಿರ್ದೇಶಕ ಹುದ್ದೆಗೆ ಕೂಡಾ ಎಂ.ಜಿ. ಪ್ರಯತ್ನಕ್ಕೆ ಇಳಿದಿದ್ದ ಆದಕ್ಕಾಗಿ ರಾಮಚಂದ್ರ ಗೌಡರಿಗೆ ಔಷಧಿ ಗುತ್ತಿಗೆದಾರರ ಮೂಲಕ ಮೊದಲ ಕಂತು ಪೇಮೆಂಟು ಮಾಡಿದ್ದನಂತೆ. ಆದರೆ ಇಲ್ಲೂ ಎಂ.ಜಿ.ಗೆ ಧೋಕಾ ಆಗಿದೆ. ಹಣ ತಗೊಂಡ ಮಂತ್ರಿ ಪದವಿ ಕಳೆದುಕೊಂಡು ಮನೆ ಸೇರಿದ್ದಾನೆ. ಆದ್ರೂ ಈಗಿನ ವೈದ್ಯಕೀಯ ಶಿಕ್ಷಣ ಮಂತ್ರಿ ಡಾ. ವ್ಹಿ.ಎಸ್. ಆಚಾರ್ಯ ಇವನಿಗೆ ಹಳೇ ಸ್ನೇಹಿತ. ಹೀಗಾಗಿ ಎಂ.ಜಿ.ಗೆ ಬಗಲಿಗೆ 2 ರೆಕ್ಕೆಗಳು ಬಂದಂತಾಗಿದೆ. ಸದ್ಯ ರಾಜೀನಾಮೆ ಕೊಟ್ಟರೂ ಆಚಾರ್ಯನ ಆಶೀರ್ವಾದದಿಂದ ನಿರ್ದೇಶಕ ಹುದ್ದೆಗೆ ಮತ್ತೆ ಎಂ.ಜಿ. ಬಂದು ಕುಳಿತರು ಆಶ್ಚರ್ಯ ಪಡಬೇಕಾಗಿಲ್ಲ.

ಔಷಧಿ ಹಗರಣದಲ್ಲಿ ಕೋಟ್ಯಂತರ ಹಣ ಗುಳುಂ ಮಾಡಿ ಅದೇ ಹಣದಲ್ಲಿ ಮಂಗಳಾ ನರ್ಸಿಂಗ್ ಹೋಂಅನ್ನು ಪರ್ಚೇಸ್ ಮಾಡಿದ್ದ ಹಿರೇಮಠ ಲೋಕಾಯುಕ್ತ ಹಿಡಿತದಲ್ಲಿ ಸಿಕ್ಕಿಹಾಕಿಕೊಂಡು ಡೀಲ್ ಕುದುರಿಸಿ ಹೊರ ಬಂದಿದ್ದ.

ಹುದ್ದೆಗಾಗಿ ಹಲ್ಕಾಗಳ ದಂಡು


ಎಂ.ಜಿ. ಹಿರೇಮಠನ ಹುದ್ದೆಗೆ ಈಗ ಪೈಪೋಟಿ ಶುರುವಾಗಿದೆ. ಡಾ. ಕಲಾದಗಿ, ಡಾ. ಮಧುಕಟ್ಟಿ, ಡಾ. ಶಿವಾನಂದ ದೊಡ್ಡಮನಿ, ಡಾ. ವಿಜಯಚಂದ್ರ ನಿರ್ದೇಶಕ ಹುದ್ದೆಗೆ ಎಲ್ಲಿಲ್ಲದ ಪ್ರಯತ್ನ ನಡೆಸುತ್ತಿದ್ದಾರೆ. ಪಕ್ಕಾ ಬಾಯಿ ಹರುಕ ಅಷ್ಟೇ ಜಗಳ ಗಂಟ ಇದೆಲ್ಲಕ್ಕಿಂತ ಹೆಚ್ಚಾಗಿ ಬ್ರಹ್ಮಾಂಡ ಭ್ರಷ್ಟ ಎಂಬ ಕಾರಣಕ್ಕಾಗಿ ಕಿಮ್ಸ್‌ನಿಂದ ಹೊರ ದಬ್ಬಿಸಿಕೊಂಡು ಮೈಸೂರಿನ ವೈದ್ಯಕೀಯ ಕಾಲೇಜಿನಲ್ಲಿ ಉಪನ್ಯಾಸಕನಾಗಿರುವ ಡಾ. ಕಲಾದಗಿ ನಿರ್ದೇಶಕ ಹುದ್ದೆಗಾಗಿ ಉಸ್ತುವಾರಿ ಸಚಿವ ಜಗದೀಶ ಶೆಟ್ಟರಗೆ ಪೇಮೆಂಟ್ ಕೊಟ್ಟು ಲೇಟರ್ ತಗೊಂಡಿದ್ದಾನಂತೆ. ಪಕ್ಕಾ ಜಾತಿವಾದಿಯಾದ ಕಲಾದಗಿಗೆ ಸ್ವ ಜಾತಿಯ ಈಶ್ವರಪ್ಪ ಕೂಡ ಬೆನ್ನಿಗೆ ನಿಂತಿದ್ದಾನೆ.

ಶೂಟೌಟ್ ಮಾಡಿಸಿಕೊಂಡು ಕಿಮ್ಸ್ ಅನ್ನು ಅಂತರ ರಾಷ್ಟ್ರೀಯ ಕುಖ್ಯಾತಿಗೆ ಹೊತ್ತೊಯ್ದ ಶಿವಾನಂದ ದೊಡ್ಡಮನಿ ಮತ್ತೆ ಹುಬ್ಬಳ್ಳಿಗೆ ಬರುತ್ತಾನಂತೆ. ಕಿಮ್ಸ್ ಅಂಗಳದಿಂದ ಹೊರ ದಬ್ಬಿಸಿಕೊಂಡ ದೊಡ್ಡಮನಿ ಧಾರವಾಡದ ಮೆಂಟಲ್ ಹಾಸ್ಪಿಟಲ್‌ಗೆ ಈಗ ನಿರ್ದೇಶಕನಾಗಿದ್ದಾನೆ. ಮಂತ್ರಿ ಉದಾಸಿಯ ಪರಮಾಪ್ತನೆನಿಸಿಕೊಂಡಿರುವ ದೊಡ್ಡಮನಿ ಅಣ್ಣಾರ ಆಶೀರ್ವಾದದಿಂದ ಮತ್ತೆ ನಿರ್ದೇಶಕನಾಗುತ್ತಾನಂತೆ. ಇದಕ್ಕೆ ಸಂಸದ ಪ್ರಲ್ಹಾದ ಜೋಶಿ ಕೂಡಾ ಸೈ ಎಂದಿದ್ದಾನೆ. ಯಾವಾಗಲೂ ಕೀಪು, ಪಿಂಪು ಎಂದೇ ಬಾಯಿ ತೆರೆಯುವ ಡಾ. ವಿಜಯ ಚಂದ್ರ ಕೂಡಾ ನಿರ್ದೇಶಕನಾಗಿ ಮಧುಚಂದ್ರ ನಡೆಸುವ ಖಯಾಲಿಯಲ್ಲಿದ್ದಾನೆ. ಕಡಿಮೆ ದುಷ್ಟ ಎಂದು ಕರೆಯಿಸಿಕೊಳ್ಳುವ ಡಾ. ಮುದಕಟ್ಟಿ ನಿರ್ದೇಶಕನಾಗಿ ಅದೇನು ಕಿಸಿತಾನೋ ಗೊತ್ತಿಲ್ಲಾ. ಈ ಹಿಂದೆ ಕಿಮ್ಸ್‌ನಲ್ಲಿ ಲೇಡಿಸ್ ಹಾಸ್ಟೆಲ್ ವಾರ್ಡನ್ ಆಗಿದ್ದಾಗ ಕುಡಿದ ಅಮಲಿನಲ್ಲಿ ವಿದ್ಯಾರ್ಥಿಗಳಿಂದ ಒದೆ ತಿಂದಿದ್ದ ಎನ್ನುವುದಂತೂ ಸತ್ಯ.

50 ವಸಂತಗಳನ್ನು ಪೂರೈಸಿ ಸಂಭ್ರಮದ ಸಾರ್ಥಕ ಸುವರ್ಣ ಮಹೋತ್ಸವ ಆಚರಿಸಿಕೊಳ್ಳಬೇಕಾದ ಕಿಮ್ಸ್ ಗುಂಡಿನ ಪಾರ್ಟಿಯಿಂದ, ಒಳ ರಾಜಕೀಯದಿಂದ ಬೀದಿಗೆ ಬಿದ್ದಂತಾಗಿದೆ.

• ಹುರುಳಿಕುಪ್ಪಿ ವಿನಯ
vinaylankeshgmail.com

ಗುಂಡು ಪಾರ್ಟಿಗೆ ಹೊರಟ್ಟಿಯನ್ನು ಎಳೆದುತಂದ ಹಿರೇಮಠ



ಅದ್ಯಾವ ಜನುಮದ ದ್ವೇಷ ಇದೆಯೋ ಗೊತ್ತಿಲ್ಲಾ ಡಾ. ಎಂ.ಜಿ. ಹಿರೇಮಠನ ರಗಳೆಗಳು ಆದಾಗಲೆಲ್ಲಾ ಮಾಜಿ ಮಂತ್ರಿ ಬಸವರಾಜ ಹೊರಟ್ಟಿಯನ್ನು ಅದರಲ್ಲಿ ಸೇರಿಸಲಾಗುತ್ತದೆ. ಈಗಲೂ ಅದೇ ನಡೆದಿದೆ. ಗೋಕುಲ ಗಾರ್ಡನ್‌ನಲ್ಲಿ ನಡೆದ ಗುಂಡು ಪಾರ್ಟಿ ರಾದ್ಧಾಂತಕ್ಕೆ ಹೊರಟ್ಟನೇ ಕಾರಣ, ನನ್ನ ಸೀಟು ಬಿಟ್ಟು ಕೆಳಗಿಳಿಸಲು ಹೊರಟ್ಟಿ ನಡೆಸಿದ ರಾಜಕೀಯ ಪಿತೂರಿ ಇದಾಗಿದೆ ಎಂದು ಡಾ. ಎಂ.ಜಿ. ಮೀಡಿಯಾಗಳ ಮುಂದೆ ಓಪನ್ನಾಗಿ ಆರೋಪಿಸುತ್ತಾನೆ. ಈ ಹಿಂದೆ ದೊಡ್ಡಮನಿ ಶೂಟೌಟ್ ಪ್ರಕರಣದಲ್ಲಿ ಪೊಲೀಸರಿಗೆ ಹೇಳಿ ಹೊರಟ್ಟಿ ಹಿರೇಮಠನನ್ನು ಬೂಟ್ ನಿಂದ ಒದೆಸಿದ್ದರಂತೆ. ಮೊನ್ನೆ ಗುಂಡು ಪಾರ್ಟಿ ಪ್ರಹಸನ ನಡೆಸಿ ನನ್ನನ್ನು ಸಿಲುಕಿಸುವ ಸಂಚು ಹೊರಟ್ಟಿ ಮಾಡಿದ್ದಾರೆ ಎಂದು ಎಂ.ಜಿ. ಹೇಳುತ್ತಿದ್ದಾನೆ. ಅಸಲಿಗೆ ಎಂ.ಜಿ. ಹೊರಟ್ಟಿಯ ಪರಮ ಆಪ್ತರಲ್ಲಿ ಒಬ್ಬನಾಗಿದ್ದ. ಶೂಟೌಟ್ ಪ್ರಕರಣದಲ್ಲಿ ಆಗಿನ ಆಯುಕ್ತ ನಡಮನಿಗೆ ಫೋನ್ ಮಾಡಿ ಹಿರೇಮಠನನ್ನು ಕೇಸಿನಲ್ಲಿ ಎಳೆದು ತಂದು ಅವಮಾನಿಸಬೇಡಿ ಎಂದು ಹೇಳಿದ್ದು ಎಲ್ಲರಿಗೂ ಗೊತ್ತಿರುವ ಸಂಗತಿಯೇ. ಈಗ ಹೊರಟ್ಟಿಯೊಂದಿಗೆ ಸಂಬಂಧ ಹರಿದುಕೊಂಡು ಹಾರಾಡುತ್ತಿದ್ದಾನೆ ಹಿರೇಮಠ. ●


...2 ಮಸೀದಿಯಲ್ಲಿಲ್ಲದ ರಾಮ ಮಂದಿರದಲ್ಲೂ ಇರುವುದಿಲ್ಲ!

...ಸಬೇಕೆಂಬುದು ಇದರ ಹಿಂದಿನ ಆಶಯ. ಜನರ ...ಕ ಭಾವನೆಗಳನ್ನು ದುರುಪಯೋಗಪಡಿಸಿಕೊಂಡು ...ವಿವಾದವನ್ನು ಹುಟ್ಟುಹಾಕುವ ಯಾವುದೇ ...ವನ್ನು ನಿಭಾಯಿಸಲು ಇದಕ್ಕಿಂತ ಉತ್ತಮ ...ಂಡ ಮತ್ತೊಂದು ಇರಲು ಸಾಧ್ಯವಿಲ್ಲ. ...ವರೆ ಈ ದೇಶದ ರಾಜಕೀಯ ವರ್ಗ ಎಷ್ಟು ...ರರೆಂದರೆ ಬಾಬ್ರಿ ಮಸೀದಿ ವಿವಾದದ ಹಿನ್ನೆಲೆ ...ಇಡೀ ದೇಶವೇ ಹತ್ತಿ ಉರಿಯುತ್ತಿದ್ದರೂ ಮತ್ತು ... ನಿಭಾಯಿಸಲು ಈ ಕಾಯಿದೆಯ ಅವಕಾಶಗಳೇ ... ಸೂಕ್ತವಾಗಿದ್ದರೂ ಬಾಬ್ರಿ ಮಸೀದಿ-ರಾಮ ...ಭೂಮಿ ವಿವಾದವನ್ನು ಮಾತ್ರ ಈ ಕಾಯಿದೆಯ ...ಯಿಂದ ಹೊರಗಿಡಲಾಗಿದೆ. ಹೀಗಾಗಿಯೇ ವಿವಾದ ... ಮುಂದುವರೆಯುವಂತೆ ನೋಡಿಕೊಳ್ಳಲಾಗಿದೆ. ...ಗಾಗಿಯೇ ಈಗ ಬಾಬ್ರಿ ಮಸೀದಿ-ರಾಮಜನ್ಮ ... ವಿವಾದದ ಬಗ್ಗೆ ಬೇರೆ ಬೇರೆ ಸಂದರ್ಭಗಳಲ್ಲಿ ...ರೆ ನ್ಯಾಯಾಲಯಗಳಲ್ಲಿ ದಾಖಲಾಗಿದ್ದ ಎಲ್ಲಾ ...ವನ್ನು ಒಟ್ಟಾಗಿಸಿ ಅಲಹಾಬಾದ್ ಹೈಕೋರ್ಟಿನ ... ಪೀಠದ ತ್ರಿಸದಸ್ಯರ ಪೀಠದ ಮುಂದೆ ಒಟ್ಟಾಗಿ ... ವಿಚಾರಣೆಗೆತ್ತಿಕೊಳ್ಳಲಾಗಿದೆ. ಸೆಪ್ಟೆಂಬರ್ 24ರಂದು ನ್ಯಾಯಾಲಯವು ಮುಖ್ಯವಾಗಿ:

1. ಬಾಬ್ರೀ ಮಸೀದಿಯನ್ನು ಅಲ್ಲಿ ಈ ಹಿಂದೆ ಇದ್ದ ಹಿಂದೂ ದೇವಸ್ಥಾನವನ್ನು ಕೆಡವಿ ಕಟ್ಟಲಾಗಿದೆಯೇ?
2. ಬಾಬ್ರಿ ಮಸೀದಿ ಎಂದು ಕರೆಯಲಾಗಿರುವ ಕಟ್ಟಡವು ನಿಜಕ್ಕೂ ಮಸೀದಿಯಾಗಿತ್ತೇ?
3. ಆ ಕಟ್ಟಡದಲ್ಲಿ ಲಾಗಾಯ್ತಿನಿಂದಲೂ ಮುಸ್ಲಿಮರು ಪ್ರಾರ್ಥನೆ ಸಲ್ಲಿಸುತ್ತಿದ್ದರೇ?
4. ಆವರಣದಲ್ಲಿ ಇರುವ ವಿಗ್ರಹಗಳನ್ನು ಯಾರಾದರೂ ತಂದಿಟ್ಟದ್ದೋ ಅಥವಾ ಅದು ಮೊದಲಿಂದಲೂ ಅಲ್ಲಿತ್ತೋ?
5. ಇದರೊಡನೆ ಭಗವಾನ್ ಶ್ರೀರಾಮಚಂದ್ರ ಅಲ್ಲಿ ಜನ್ಮ ತಳೆದದ್ದು ನಿಜವೇ?

ಎಂಬ ಮೇಲ್ಕಂಡ ವಿಷಯಗಳ ಬಗ್ಗೆ ಕೋರ್ಟು ತೀರ್ಪು ನೀಡಲಿದೆ.

ದೇಶದ ಅತ್ಯುನ್ನತ ವಿಶ್ವವಿದ್ಯಾಲಯವಾದ ಜವಾಹರ್ ಲಾಲ್ ನೆಹರೂ ವಿಶ್ವವಿದ್ಯಾಲಯದ 25 ಜನ ಇತಿಹಾಸಕಾರರು ಇವುಗಳಲ್ಲಿ ಕೆಲವು ಅಂಶಗಳ ಬಗ್ಗೆ ಸಾಕಷ್ಟು ಸಂಶೋಧನೆ ನಡೆಸಿ ಅನುಮಾನಕ್ಕೆಡೆಯಿಲ್ಲದಂತೆ ಕೆಲವು ಅಂಶಗಳನ್ನು ಬಯಲಿಗೆ ತಂದಿದ್ದಾರೆ. ಅದರಲ್ಲಿ ಮುಖ್ಯವಾದದ್ದು:



ಶ್ರೀ ರಾಮಚಂದ್ರನ ಕಾಲಮಾನ ಎಂದು ಹೇಳುವ ತ್ರೇತಾಯುಗದ ಕಾಲಮಾನ ಕ್ರಿ.ಪೂ.4000. ಆ ಸಂದರ್ಭದಲ್ಲಿ ಅಯೋಧ್ಯೆಯಲ್ಲಿರಲಿ ಅದರ ಸುತ್ತಮುತ್ತಲೂ ಮಾನವ ವಸತಿ ಇರಲಿಲ್ಲ. ಆ ನಂತರವೂ ಮಾನವ ವಸತಿ ಪ್ರಾರಂಭವಾದದ್ದು ಗಂಗಾ ಬಯಲಿನಲ್ಲೇ ವಿನಃ ಅಯೋಧ್ಯೆ ಇರುವ ಸರಯೂ ನದಿಯ ತೀರದಲ್ಲಲ್ಲ. ಅಯೋಧ್ಯೆಯ ಬಗ್ಗೆ ಇರುವ ಪ್ರಸ್ತಾಪಗಳು ಗಂಗೆ ನದೀ ತೀರದಲ್ಲಿರುವ ಊರನ್ನು ಪ್ರಸ್ತಾಪಿಸುತ್ತದೆಯೇ ವಿನಃ ಸರಯೂ ನದಿ ತೀರದ ಅಯೋಧ್ಯೆಯ ಪ್ರಸ್ತಾಪವೇ ಇತ್ತೀಚಿನವರೆಗೆ ಇಲ್ಲ. ಅಯೋಧ್ಯೆಯಲ್ಲಿ ಶ್ರೀರಾಮದೇವಸ್ಥಾನದ ಪ್ರಸ್ತಾಪ 18ನೇ ಶತಮಾನದವರೆಗೂ ಕಂಡು ಬರುವುದಿಲ್ಲ!!

ಅದೇನೇ ಇರಲಿ, ಇಂದು ಕೋರ್ಟುಗಳ ಮುಂದೆ ದೊಡ್ಡ ಜವಾಬ್ದಾರಿ ಇದೆ. ಈಗಲಾದರೂ ಸತ್ಯದ ಗೆಲುವನ್ನು ಖಾತರಿಪಡಿಸಿ ಈ ದೇಶದ ಸಂವಿಧಾನವನ್ನೂ ,ಮತ್ತು ಪ್ರಜಾತಂತ್ರವನ್ನೂ ಉಳಿಸುವ ಗುರುತರವಾದ ಹೊಣೆಗಾರಿಕೆ ಇದೆ. ಇಡೀ ಜಗತ್ತು ಅವರ ಕಡೆ ನೋಡುತ್ತಿದೆ.

ರಾಮಮಂದಿರ ವಿವಾದದಲ್ಲಿ ಸಂಘಪರಿವಾರ ಹೇಳುವಂತೆ ಭಕ್ತಿಯೂ ಅಲ್ಲ, ಧಾರ್ಮಿಕತೆಯೂ ಅಲ್ಲ. ಆದ್ದರಿಂದಲೇ ಇದು ರಾಮನಿಗೆ ಮಂದಿರ ಕಟ್ಟಿಕೊಡುವ ಧಾರ್ಮಿಕ ಮತ್ತು ಆಧ್ಯಾತ್ಮಿಕ ವಿಷಯ ಎಂದು ತಿಳಿದುಕೊಂಡರೆ ತಪ್ಪಾದೀತು. ಏಕೆಂದರೆ ನಿಜವಾದ ಧಾರ್ಮಿಕನಿಗೆ ಮಸೀದಿಯಲ್ಲೂ ರಾಮ ಕಾಣುತ್ತಾನೆ. ಮಂದಿರದಲ್ಲೂ ಅಲ್ಲಾ ಕಾಣುತ್ತಾನೆ. ಮಸೀದಿಯಲ್ಲಿ ಕಾಣದ ರಾಮ ಮಂದಿರದಲ್ಲೂ ಕಾಣುವುದಿಲ್ಲ.

ಇದು ಜನರ ಮುಗ್ಧ ಧಾರ್ಮಿಕ ನಂಬಿಕೆಗಳನ್ನು ಬಳಸಿಕೊಂಡು ದ್ವೇಷದ ರಾಜಕಾರಣ ಮಾಡಿ ಮತ್ತೆ ಸಮಾಜವನ್ನು ತಮ್ಮ ಹಿಡಿತಕ್ಕೆ ತೆಗೆದುಕೊಳ್ಳುವ ರಾಜಕೀಯ ಷಡ್ಯಂತ್ರವೇ ಹೊರತು ಬೇರೇನೂ ಅಲ್ಲ. ಇದು ಸೋಲಲೇಬೇಕು. ನಾವೆಲ್ಲರೂ ಒಗ್ಗಟ್ಟಾಗಿ ಸೋಲಿಸಬೇಕು. ●

ಖೈರ್ಲಾಂಜಿ ಪ್ರಕರಣದ ಹೈಕೋರ್ಟ್ ತೀರ್ಪು:
ಕುಗ್ಗಿಹೋದ ನ್ಯಾಯ



ಬಹಳ ದಿನಗಳಿಂದ ಎಲ್ಲರೂ ಕಾತುರದಿಂದ ಕಾಯುತ್ತಿದ್ದ ಖೈರ್ಲಾಂಜಿ ಹತ್ಯಾಕಾಂಡ ಕುರಿತ ಹೈಕೋರ್ಟ್ ತೀರ್ಪು ಹೊರಬಿದ್ದಿದೆ. ನಾಗಪುರದ ಹೈಕೋರ್ಟ್ ಪೀಠ, ಭಂಡಾರದ ತ್ವರಿತ ನ್ಯಾಯಾಲಯ ಆರು ಜನ ಆರೋಪಿಗಳಿಗೆ ನೀಡಿದ್ದ ಮರಣದಂಡನೆ ಶಿಕ್ಷೆಯನ್ನು ಕಾಯಂಗೊಳಿಸುತ್ತದೆ ಎಂದು ಭಾವಿಸಲಾಗಿತ್ತು. ಆರು ಜನ ಆರೋಪಿಗಳಿಗೆ ಭಂಡಾರದ ತ್ವರಿತ ನ್ಯಾಯಾಲಯ ನೀಡಿದ್ದ ಮರಣದಂಡನೆ ತೀರ್ಪನ್ನು ಪುನರ್‌ಪರಿಶೀಲಿಸಲು ಆರೋಪಿಗಳು ನಾಗಪುರದ ಹೈಕೋರ್ಟ್ ಪೀಠಕ್ಕೆ ಎರಡು ಅರ್ಜಿಗಳನ್ನು ಸಲ್ಲಿಸಿದ್ದರು. ಇದರ ಜೊತೆಗೆ ಪ್ರಕರಣಕ್ಕೆ ಸಂಬಂಧಿಸಿದಂತೆ ಸಿಬಿಐ ಸಹ ಹೈಕೋರ್ಟ್‌ಗೆ ಎರಡು ಅರ್ಜಿಗಳನ್ನು ಸಲ್ಲಿಸಿತ್ತು. ಈ ನಾಲ್ಕು ಅರ್ಜಿಗಳನ್ನು ವಿಚಾರಣೆಗೆ ತೆಗೆದುಕೊಂಡ ಹೈಕೋರ್ಟ್ ಜುಲೈ 14 ರಂದು ತನ್ನ ತೀರ್ಪನ್ನು ಪ್ರಕಟಿಸಿದೆ. ನಿರೀಕ್ಷೆಯಂತೆ ಬಾಂಬೆ ಹೈಕೋರ್ಟ್‌ನ ನಾಗಪುರ ಬೆಂಚಿನ ನ್ಯಾಯಾಧೀಶರಾದ ಎ.ಪಿ.ಲಾವಂಡೆ ಮತ್ತು ಆರ್.ಸಿ.ಚವ್ಹಾಣ್ ಖೈರ್ಲಾಂಜಿಯಲ್ಲಿ ನಾಲ್ಕು ಜನ ದಲಿತರನ್ನು ಕೊಂದ ಆರು ಜನ ಪಾತಕಿಗಳಿಗೆ ವಿಧಿಸಿದ್ದ ಮರಣದಂಡನೆಯನ್ನು ರದ್ದುಪಡಿಸಿ, 25 ವರ್ಷದ ಜೀವಾವಧಿ ಶಿಕ್ಷೆಯನ್ನು ನೀಡಿ ತೀರ್ಪಿತ್ತಿದ್ದಾರೆ.

ನಾಗಪುರದ ಗೌರವಾನ್ವಿತ ಹೈಕೋರ್ಟ್ ಈ ಪ್ರಕರಣವನ್ನು 'ಅಪರೂಪದಲ್ಲಿಯೇ ಅಪರೂಪದ್ದು' ಎಂದು ಪರಿಗಣಿಸಲೇ ಇಲ್ಲ, ಈ ಹತ್ಯೆಗಳ ಹಿಂದಿದ್ದ ಜಾತಿವೈಷಮ್ಯ ಮತ್ತು ನಿಶ್ಚಿತ ಕೊಲೆ ಸಂಚಿನ ಕ್ರೂರ ಪಾತಕದ ಹುನ್ನಾರವನ್ನು ಕೋರ್ಟ್ ಅರ್ಥಮಾಡಿಕೊಳ್ಳಲಿಲ್ಲ. ಈ ಹಿಂದೆ ಭಂಡಾರ ತ್ವರಿತ ನ್ಯಾಯಾಲಯ ಎಂಟು ಜನ ಆರೋಪಿಗಳಲ್ಲಿ ಆರು ಜನಕ್ಕೆ ಮರಣದಂಡನೆಯನ್ನು ವಿಧಿಸಿತ್ತು.




ನ್ಯಾಯಾಲಯದ ಈ ತೀರ್ಪು ದಲಿತರಲ್ಲಿ ಸಹಜವಾಗಿಯೇ ಹರ್ಷವನ್ನುಂಟುಮಾಡಿತ್ತು, ಆದರೆ ಆರೋಪಿಗಳಿಗೆ ಮರಣ ದಂಡನೆಯನ್ನು ರದ್ದು ಮಾಡಿರುವ ಹೈಕೋರ್ಟ್‌ನ ತೀರ್ಪು ಇವರಲ್ಲಿ ತಲ್ಲಣವನ್ನುಂಟುಮಾಡಿದೆ. ಎಲ್ಲಾ ಪ್ರಕರಣಗಳಂತೆ ಇಲ್ಲಿಯೂ ಕೋರ್ಟ್ ಮೂಲಕ ನ್ಯಾಯ ಪಡೆಯುವ ಸಲುವಾಗಿ ಈ ಪ್ರಕರಣವೂ ಸುಪ್ರೀಂಕೋರ್ಟ್ ಮೆಟ್ಟಿಲು ಹತ್ತಲಿದೆ. ಇದು ತಾತ್ಕಾಲಿಕವಾಗಿ ದಲಿತರ ದುಗುಡಗಳನ್ನು ಸ್ವಲ್ಪಮಟ್ಟಿಗೆ ಶಮನಗೊಳಿಸಲಿದೆ. ಆದರೆ ಖೈರ್ಲಾಂಜಿಯು ನಮ್ಮ ವ್ಯವಸ್ಥೆಯ ಅಂತರ್ಗತ ಕರಾಳ ಮುಖಗಳನ್ನು ತೆರೆದಿಡುತ್ತಲೇ ಹೋಗುತ್ತಿದೆ.

ಊರ್ಜಿತಗೊಳ್ಳದ ಮರಣದಂಡನೆ

ಒಬ್ಬ ದಲಿತ ತಾಯಿ, ಆಕೆಯ ಮಗಳು ಮತ್ತು ಉಳಿದ ಇಬ್ಬರು ಗಂಡು ಮಕ್ಕಳನ್ನು ಖೈರ್ಲಾಂಜಿಯಲ್ಲಿ ಹತ್ಯೆ ಮಾಡಲಾಗಿತ್ತು. ಸವರ್ಣೀಯ ಜಾತ್ಯಾಂಧರ ಉನ್ಮತ್ತ ಅಹಂಕಾರ ಮತ್ತು ನಿರಂತರವಾಗಿ ಸಾಕಿಕೊಂಡು ಬಂದ ಜಾತಿ ವೈಷಮ್ಯಗಳು ಖೈರ್ಲಾಂಜಿಯ ನಾಲ್ಕು ಜನ ಸ್ವಾಭಿಮಾನಿ, ಅಸಹಾಯಕ ದಲಿತರ ಹತ್ಯೆಗೆ ಕಾರಣವಾಗಿದ್ದವು. ಹತ್ಯೆಗಳು ನಡೆದು ಬಹಳ ದಿನಗಳ ಕಾಲ ಯಾರ ಗಮನಕ್ಕೂ ಬಾರದ ಈ ಪ್ರಕರಣ ಆನಂತರ ಭುಗಿಲೆದ್ದ ಸ್ವಯಂಪ್ರೇರಿತ ಪ್ರತಿಭಟನೆಗಳಿಂದ ರಾಜ್ಯಾದ್ಯಂತ ಎಲ್ಲರೂ ಈ ಕಡೆ ಗಮನ ಹರಿಸುವಂತಾಯ್ತು, ಜನರ ಸ್ವಯಂಪ್ರೇರಿತ ಪ್ರತಿಭಟನೆಗಳನ್ನು ಪ್ರಭುತ್ವ ಹತ್ತಿಕ್ಕಲು ತನ್ನೆಲ್ಲ ಶಕ್ತಿಯನ್ನು ಬಳಸಿತು. ಈ ಪ್ರತಿಭಟನೆಗಳ ಹಿಂದೆ ನಕ್ಸಲೀಯರಿದ್ದಾರೆ ಎಂದು ಪ್ರಭುತ್ವ ಎಲ್ಲರನ್ನು ದಾರಿ ತಪ್ಪಿಸಲು ನೋಡಿತು. ಜನರ ಪ್ರತಿಭಟನೆಗಳ ಒತ್ತಡ ತಾಳಲಾರದೆ ಪ್ರಕರಣವನ್ನು ಸಿಬಿಐಗೆ ವಹಿಸಿದ್ದಲ್ಲದೆ, ಈ ಪ್ರಕರಣದ ವಿಚಾರಣೆ ನಡೆಸಲು ಭಂಡಾರ ಸೆಷನ್ ಕೋರ್ಟ್‌ನಲ್ಲಿ ತ್ವರಿತ ನ್ಯಾಯಾಲಯವನ್ನು ಸರಕಾರ ಸ್ಥಾಪಿಸಿತು. ಇಷ್ಟಾಗಿಯೂ ಈ ಪ್ರಕರಣವು ತನ್ನ ಕೈತಪ್ಪಿಹೋಗದಂತೆ ನೋಡಿಕೊಳ್ಳಲು ಸರಕಾರ ತನ್ನದೇ ಆದ ಒಬ್ಬ ಪ್ರಾಸಿಕ್ಯೂಟರನ್ನು ನೇಮಿಸಿತು. ಖೈರ್ಲಾಂಜಿ ಪ್ರಕರಣವನ್ನು ಪತ್ತೆ ಹಚ್ಚಿ ಇದರ ವಿರುದ್ಧ ರಾಜ್ಯವ್ಯಾಪಿ ಹೋರಾಟಕ್ಕೆ ಕಾರಣವಾದ ಸಂಸ್ಥೆಯೊಂದು ಹತ್ಯೆಯಾದ ದಲಿತರ ಪರವಾಗಿ ನ್ಯಾಯಾಲಯದಲ್ಲಿ ವಾದಿಸಲು ಪ್ರಸಿದ್ಧ ವಕೀಲರಾದ ಶಶಿಭೂಷಣ್ ವಹಾನೆಯವರನ್ನು ನೇಮಿಸಲು ಕೋರಿತ್ತು, ಆದರೆ ಪ್ರಭುತ್ವ ತನ್ನದೇ ಆದ ಪ್ರಾಸಿಕ್ಯೂಟರನ್ನು ನೇಮಿಸಿಬಿಟ್ಟಿತು.

ಇದಾದನಂತರ ತ್ವರಿತ ನ್ಯಾಯಾಲಯ ಖೈರ್ಲಾಂಜಿ ಪ್ರಕರಣವನ್ನು ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡದ ಅಟ್ರಾಸಿಟಿ ಕಾಯ್ದೆಯ (Scheduled Caste and Scheduled tribe prevention of Atracity Act 1989) ಅಡಿಯಲ್ಲಿ ಪರಿಗಣಿಸಬೇಕಿತ್ತು. ಆದರೆ ತ್ವರಿತ ನ್ಯಾಯಾಲಯ ಒಂದು ತೀರ್ಮಾನಕ್ಕೆ ಬಂತು. ಖೈರ್ಲಾಂಜಿಯ ಸದರಿ ಪ್ರಕರಣವು ಜಾತಿ ದ್ವೇಷದ ಹಿನ್ನೆಲೆಯಲ್ಲಿ ನಡೆದಿಲ್ಲ (ಈ ಕಾರಣಕ್ಕೆ Atracity Act ನ್ನು ಅನ್ವಯಿಸಲಾಗುವುದಿಲ್ಲ). ಜೊತೆಗೆ ಹೆಣ್ಣಿನ ಶೀಲದ ಮೇಲೆ ಅತ್ಯಾಚಾರ ನಡೆದಿಲ್ಲ, ಆದ್ದರಿಂದ ಈ ಹತ್ಯೆಗಳು ಪೂರ್ವ ನಿಯೋಜಿತವಲ್ಲ ಎಂಬ ತೀರ್ಮಾನಕ್ಕೆ ತ್ವರಿತ ನ್ಯಾಯಾಲಯ ಬಂದಿತು. ಇದರಿಂದಾಗಿ ಖೈರ್ಲಾಂಜಿಯ ಜಾತ್ಯಾಂಧ ರಕ್ತಸಿಕ್ತ ಹಿಂಸಾಕೃತ್ಯವು ಕೇವಲ ಸಾಮಾನ್ಯ ಅಪರಾಧದ ಮಟ್ಟಕ್ಕೆ ಇಳಿದು ಹೋಯ್ತು, ಈ ವ್ಯವಸ್ಥಿತ ಹಿಂಸಾಕೃತ್ಯ ತಕ್ಷಣಕ್ಕೆ ಆವೇಶಕ್ಕೊಳಗಾದ ಗುಂಪಿನ ಅನುಚಿತ ಅಪರಾಧವಾಗಿ ಪರಿಗಣಿಸಲ್ಪಟ್ಟಿತು. ಆದರೆ ಭಂಡಾರದ ತ್ವರಿತ ನ್ಯಾಯಾಲಯ ಎಂಟು ಜನ ಆರೋಪಿಗಳಲ್ಲಿ ಆರು ಜನರಿಗೆ ಮರಣದಂಡನೆ ಮತ್ತು ಇಬ್ಬರಿಗೆ (ಈ ಇಬ್ಬರು ವಯಸ್ಸಿನಲ್ಲಿ ಚಿಕ್ಕವರು ಎಂಬ ಕಾರಣಕ್ಕೆ) ಜೀವಾವಧಿ ಶಿಕ್ಷೆ ವಿಧಿಸಿತು. ನ್ಯಾಯಾಲಯ ಖೈರ್ಲಾಂಜಿಯ ಪ್ರಕರಣವನ್ನು ಸರಳವಾಗಿ ಪರಿಗಣಿಸಿದರೂ ಅಪರಾಧಿಗಳಿಗೆ ಮರಣದಂಡನೆ ವಿಧಿಸಲ್ಪಟ್ಟಿದ್ದರಿಂದ, ದಲಿತರು ಮತ್ತು ಪ್ರತಿಭಟನೆಯಲ್ಲಿ ಪಾಲ್ಗೊಂಡ ಎಲ್ಲರೂ ನಿಟ್ಟುಸಿರು ಬಿಡುವಂತಾಯ್ತು.



ಭಾರತದ ಚರಿತ್ರೆಯಲ್ಲಿ ನ್ಯಾಯಾಲಯದ ಈ ತೀರ್ಪನ್ನು ಒಂದು ಮೈಲಿಗಲ್ಲೆಂದೇ ಭಾವಿಸಲಾಯಿತು. ಕಾರಣ ಭಾರತದಲ್ಲಿ ಜಾತಿ ದೌರ್ಜನ್ಯದ ಪ್ರಕರಣದಲ್ಲಿ ಮರಣದಂಡನೆ ವಿಧಿಸಿದ ಮೊದಲ ಪ್ರಕರಣ ಇದಾಗಿತ್ತು, ತಮಗೆ ನ್ಯಾಯ ಸಿಕ್ಕಿತೆಂದು ದಲಿತ ನಾಯಕರು ಸಾರ್ವಜನಿಕವಾಗಿ ಸಿಹಿ ಹಂಚಿ ಸಂತೋಷಪಟ್ಟರು. ಈ ಕೇಸಲ್ಲಿ ವಾದ ಮಾಡಿದ ಅತ್ಯಂತ ಪ್ರಭಾವಿ ಪ್ರಾಸಿಕ್ಯೂಟರಾದ ಉಜ್ವಲ್ ನಿಕ್ಕಮ್ ಅವರನ್ನು ರಾಮದಾಸ್ ಅಠವಾಲೆ ಸನ್ಮಾನಿಸಿದರು. ಆದರೆ ಇದೇ ಉಜ್ವಲ್ ನಿಕ್ಕಮ್ ಕೆಲವೇ ವರ್ಷಗಳ ಹಿಂದೆ ರಾಮಬಾಯಿ ನಗರದಲ್ಲಿ ದಲಿತರ ಮೇಲೆ ವಿನಾಕಾರಣ ಗೋಲಿಬಾರ್ ಮಾಡಿಸಿ 10 ಜನ ದಲಿತರನ್ನು ಕೊಂದ ಕ್ರೂರ ಪಾತಕಿ ಮನೋಹರ್ ಕದಮ್‌ನನ್ನು ನ್ಯಾಯಾಲಯದ ಶಿಕ್ಷೆಯಿಂದ ಕಾಪಾಡಿದ್ದರು ಎಂಬ ಸತ್ಯವನ್ನು ಅವರು ಮರೆತಿದ್ದರು.

(1997ರ ಜುಲೈ 4ರಂದು ಮನೋಹರ್ ಕದಮ್ ಎಂಬ ಸಬ್‌ಇನ್‌ಸ್ಪೆಕ್ಟರ್ ರಾಮಾಬಾಯಿ ನಗರದಲ್ಲಿ ಬೆಳಗ್ಗೆ 7.45ರ ಹೊತ್ತಿಗೆ ದಲಿತರ ಮೇಲೆ ಅಕಾರಣವಾಗಿ ಗೋಲಿಬಾರ್ ಮಾಡಿಸಿದ್ದ ರಾಮಾಬಾಯಿ ನಗರದ ದಲಿತರು ಅಲ್ಲಿನ ಅಂಬೇಡ್ಕರ್ ಪ್ರತಿಮೆಗೆ ಯಾರೋ ಅವಮಾನ ಮಾಡಿದ್ದರಿಂದ ಆರೋಪಿಗಳನ್ನು ಬಂಧಿಸಲು ಕೆಲವು ದಿನಗಳಿಂದ ಚಳವಳಿ ನಡೆಸಿದ್ದರು. ಯಾವ ಪ್ರಚೋದನೆ, ದೊಂಬಿ, ಆಕ್ರಮಣ ಮತ್ತು ಗಲಭೆಗಳೇ ಇಲ್ಲದ ಒಂದು ಮುಂಜಾವಿನಲ್ಲಿ ಈ ಮನೋಹರ್ ಕದಮ್ ನಿರಾಯುಧರಾಗಿದ್ದ ದಲಿತರ ಮೇಲೆ ಗೋಲಿಬಾರ್ ಮಾಡಿಸಿದ್ದ, ಈ ಗೋಲಿಬಾರ್‌ನಲ್ಲಿ 10 ಜನ ಸಾವನ್ನಪ್ಪಿದ್ದರು. 25 ಜನ ದಲಿತರು ಗಾಯಗೊಂಡಿದ್ದರು. ಈ ಮನೋಹರ್ ಕದಮ್‌ನನ್ನು ಈ ಪ್ರಕರಣದಲ್ಲಿ 2007ರವರೆಗೆ ಆರೋಪಿಯೆಂದು ಪೋಲೀಸರು ಬಂಧಿಸಿರಲಿಲ್ಲ, ಆದರೆ ತನಿಖಾ ತಂಡಗಳ ವರದಿಯ ಆಧಾರದ ಮೇಲೆ ಅವನನ್ನು ಬಂಧಿಸಿ ವಿಚಾರಣೆಗೊಳಪಡಿಸಿದ ಮೇಲೆ ಮೇ 7 2009 ರಂದು ಈತನಿಗೆ ನ್ಯಾಯಾಲಯ ಜೀವಾವಧಿ ಶಿಕ್ಷೆ ವಿಧಿಸಿತ್ತು, ಆದರೆ ಮೇ 22ರಂದೇ ಆತನಿಗೆ ಹೈಕೋರ್ಟ್‌ನಲ್ಲಿ ಮೇಲ್ಮನವಿಗೆ ಅವಕಾಶ ಸಿಕ್ಕು ಬೇಲ್ ಮೇಲೆ ಬಿಡುಗಡೆಯಾಗಿದ್ದ -(ಅನುವಾದಕ).

ಅಂದಿನಿಂದ ಈ ಹತ್ಯಾಕಾಂಡದ ನೆನಪಿಗೆ ಪ್ರತಿ ವರ್ಷ ರಾಮಾಬಾಯಿ ನಗರದ ದಲಿತರು, ಗೋಲಿಬಾರ್‌ನಲ್ಲಿ ಸತ್ತವರ ನೆನಪಿಗೆ ಹುತಾತ್ಮ ದಿನಾಚರಣೆಯನ್ನು ಆಚರಿಸುತ್ತಲೇ ಬಂದಿದ್ದಾರೆ. ಈಗ ಇದೇ ದಲಿತರು ತಮ್ಮ ನಾಯಕನ ಈ ವರ್ತನೆಯನ್ನು ಉದಾರ ಹೃದಯದಿಂದ ಕ್ಷಮಿಸಿಬಿಟ್ಟರು. ದಲಿತರು ರಾಮಾಬಾಯಿ ನಗರದಲ್ಲಿ ಘಟಿಸಿದ ಕೃತ್ಯವನ್ನು ಸರಳವಾಗಿ ಪರಿಗಣಿಸಿದರೇ? ಖೈರ್ಲಾಂಜಿಯ ಹತ್ಯಾಕಾಂಡವನ್ನು ಶತಮಾನಗಟ್ಟಲೆ ಸಾಕಿಕೊಂಡು ಬಂದ ಜಾತಿ ಸಂಘರ್ಷದ ಪರಿಣಾಮ ಎಂದು ಅರ್ಥಮಾಡಿಕೊಳ್ಳಲು ಕಷ್ಟಪಡಬೇಕಿಲ್ಲ, ದುರಾದೃಷ್ಟದ ಸಂಗತಿಯೆಂದರೆ ಪ್ರಾಸಿಕ್ಯೂಷನ್‌ನವರು ಈ ಜಾತಿ ಸಂಘರ್ಷದ ವಿಷಯವನ್ನು ನ್ಯಾಯಾಲಯಕ್ಕೆ ಮನವರಿಕೆ ಮಾಡಿಕೊಡಲೇ ಇಲ್ಲ.

ಇಬ್ಬರು ದಲಿತ ಹೆಣ್ಣುಮಕ್ಕಳ ಮೇಲೆ ನಡೆದ ಕ್ರೂರ ಅತ್ಯಾಚಾರವನ್ನು ಸತ್ಯಶೋಧನಾ ತಂಡಗಳು ಬೆಳಕಿಗೆ ತಂದವು. ಆದರೆ ಪೋಸ್ಟ್‌ಮಾರ್ಟಂನಲ್ಲಿ ಆದ ತಪ್ಪುಗಳಿಂದಾಗಿ ಅತ್ಯಾಚಾರಗಳು ನಡೆದಿವೆ ಎಂದು ಕೋರ್ಟ್‌ನಲ್ಲಿ ಪ್ರೂವ್ ಮಾಡಲಾಗಲಿಲ್ಲ, ಆದರೆ ಅರೆಬೆತ್ತಲಾಗಿ ಬಿದ್ದಿದ್ದ ಆ ಅಮಾಯಕ ಹೆಣ್ಣುಮಕ್ಕಳ ಶವಗಳು ತಮ್ಮ ಮೇಲೆ ಅತ್ಯಾಚಾರವಾಗಿದೆ ಎಂದು ಗಟ್ಟಿಯಾಗಿ ಕೂಗುತ್ತಿದ್ದವು ಈ ಎಲ್ಲಾ ಸ್ಪಷ್ಟ ವಿಚಾರಗಳನ್ನು ಪ್ರಾಸಿ ಕ್ಯೂಷನ್‌ವರು ಕೋರ್ಟ್‌ಗೆ ಹೇಳಲೇ ಇಲ್ಲ.-ಸಿದ್ಧಾರ್ಥ್ ಗಜಬೆ ಮೇಲೆ ಹಲ್ಲೆ ಮಾಡಿದವರನ್ನು ಪೊಲೀಸರ ಮುಂದೆ ಪ್ರಿಯಾಂಕ ಮತ್ತು ಸುರೇಖ ಗುರುತಿಸಿದ್ದರು. ಈ ಕಾರಣಕ್ಕಾಗಿಯೇ ಸುರೇಖ ಮತ್ತು ಪ್ರಿಯಾಂಕರ ಮೇಲೆ ಖೈರ್ಲಾಂಜಿಯ ಗ್ರಾಮಸ್ಥರು ಯೋಜಿತ ಕೃತ್ಯ ಎಸಗಿದ್ದಾರೆ ಎಂಬುದನ್ನು ಪ್ರಾಸಿಕ್ಯೂಷನ್‌ನವರು ಕೋರ್ಟ್‌ಗೆ ಮನವರಿಕೆ ಮಾಡಿಕೊಡಲಿಲ್ಲ, ಆದರೂ ಭಂಡಾರದ ತ್ವರಿತ ನ್ಯಾಯಾಲಯ ಆರು ಜನ ಆರೋಪಿಗಳಿಗೆ ಮರಣದಂಡನೆ ವಿಧಿಸಿ ತೀರ್ಪಿತ್ತಿತು. ಒಟ್ಟಾರೆ ಈ ಪ್ರಕರಣ ತ್ವರಿತ ನ್ಯಾಯಾಲಯದಲ್ಲಿ ನಿರ್ವಹಿಸಲ್ಪಟ್ಟ ರೀತಿಯಿಂದಲೇ ಅಪರಾಧಿಗಳಿಗೆ ವಿಧಿಸಿದ್ದ ಮರಣದಂಡನೆ ಮೇಲಿನ ಕೋರ್ಟ್‌ಗಳಲ್ಲಿ ಊರ್ಜಿತವಾಗುವುದಿಲ್ಲ ಎಂಬುದು ಸ್ಪಷ್ಟವಾಗಿತ್ತು, ಆದರೂ ಈ ತೀರ್ಪು ತಮಗೆ ಸಿಕ್ಕ ಜಯ ಎಂದು ದಲಿತರು ಸಿಹಿ ಹಂಚಿ ಸಂತೋಷಪಟ್ಟರು.

ವಿಶೇಷ ಲೇಖನ

ಮೂಲ: ಆನಂದ ತೇಲ್‌ತುಂಬ್ಡೆ

ಅನು: ಎ.ಎಸ್.ಪ್ರಭಾಕರ

ಖೈರ್ಲಾಂಜಿ ಪ್ರಕರಣವನ್ನು ನ್ಯಾಯಾಲಯದ ಮುಂದೆ ಮಂಡಿಸಿದ ವಿಧಾನದಲ್ಲಿಯೇ ಲೋಪಗಳಿದ್ದವು. ಖೈರ್ಲಾಂಜಿಯ ದಲಿತ ಕುಟುಂಬದ ಮೇಲೆ ನಡೆದ ರಾಕ್ಷಸೀ ಅತ್ಯಾಚಾರ ಮತ್ತು ಕೊಲೆಗಳು ನಡೆದದ್ದು ಜಾತಿ ವೈಷಮ್ಯದ ಕಾರಣಕ್ಕೆ ಎಂಬ ಸತ್ಯವನ್ನು ಪ್ರಾಸಿಕ್ಯೂಷನ್‌ನವರು ಮರೆಮಾಚಿದರು. ಜಾತಿ ದೌರ್ಜನ್ಯ ಕಾಯ್ದೆಯ (Caste Atracity Act) ಅಡಿಯಲ್ಲಿ ಈ ಪ್ರಕರಣವನ್ನು ಪರಿಗಣಿಸುವುದೇ ಅಸಂಗತ ಎಂಬ ಸನ್ನಿವೇಶವನ್ನು ಸೃಷ್ಟಿಸಲಾಯಿತು. ಖೈರ್ಲಾಂಜಿಯಲ್ಲಿ ನಡೆದ ಕೊಲೆಗಳು ಕೇವಲ ದ್ವೇಷದಿಂದಾಗಿ ನಡೆದಿವೆ, ಇದರಲ್ಲಿ ಜಾತಿಯ ವೈಷಮ್ಯ ಭಾಗಶಃ ಇರಬಹುದಾದರೂ ಅದು ಅಪ್ರಸ್ತುತ ಎಂದು ನ್ಯಾಯಾಲಯದಲ್ಲಿ ವಾದಿಸಲಾಯಿತು. ಇಂತಹ ವಿತಂಡವಾದಕ್ಕೆ, ಜಾತಿಯ ಕಾರಣದಿಂದಲೇ ಈ ಹೀನಕೃತ್ಯ ಸಂಭವಿಸಿತು ಎಂದು ಯಾರಾದರೂ ಸಾಧಿಸಿ ತೋರಿಸಲು ಹೇಗೆ ಸಾಧ್ಯ?

ಜಾತಿ ದೌರ್ಜನ್ಯ ಕಾಯ್ದೆಯನ್ನು ಎಸ್‌ಸಿ, ಎಸ್‌ಟಿ ಸಮುದಾಯಕ್ಕೆ ಸೇರದವರು, ಎಸ್‌ಸಿ, ಎಸ್‌ಟಿ ಸಮುದಾಯಕ್ಕೆ ಸೇರಿದ ವ್ಯಕ್ತಿಯ ಮೇಲೆ ನಡೆಸುವ ದೌರ್ಜನ್ಯ ಒಂದು ಅಪರಾಧ ಎಂದು ವ್ಯಾಖ್ಯಾನಿಸುವ ಸರಳ ಕಾಯ್ದೆ ಎಂದು ಇದನ್ನು ಪರಿಗಣಿಸಿಬಿಡಬಹುದು. ಜಾತಿ ದೌರ್ಜನ್ಯಗಳನ್ನು ತಡೆಯುವ 'ಅತ್ಯಂತ ಪ್ರಬಲ ಕಾಯ್ದೆ' ಎಂದು ಪರಿಗಣಿತವಾಗಿರುವ ಈ ಕಾಯ್ದೆ ನ್ಯಾಯಾಲಯದಲ್ಲಿ ಅನ್ವಯವಾಗುವಾಗ ದುರ್ಬಲವಾಗಿಬಿಡುತ್ತದೆ. ಇಂತಹ ಅಪರೂಪದ ಸಂದರ್ಭದಲ್ಲೂ ನ್ಯಾಯಾಧೀಶರೂ ಸಹ ಜಾತಿ ದೌರ್ಜನ್ಯಗಳನ್ನು ಅಟ್ರಾಸಿಟಿ ಕಾಯ್ದೆ ಅಡಿಯಲ್ಲಿ ನೋಡಬೇಕೋ ಬೇಡವೋ ಎಂಬ ಸಂದಿಗ್ಧಕ್ಕೆ ಬೀಳುತ್ ಖೈರ್ಲಾಂಜಿ ಪ್ರಕರಣ ಜಾತಿ ದೌರ್ಜನ್ಯದ ತೆರೆದ ಪುಸ್ತಕದಂತೆ ಕಾಣದೇಹೋ ಜಾತಿ ದ್ವೇಷದ ಕಾರಣಕ್ಕಾಗಿ ಇಲ್ಲಿಯ ಅಪರಾಧಗಳು ನಡೆದಿವೆ ಎಂ ಪರಿಗಣಿಸದೇ ಹೋದರೆ, ಜಾತಿ ದೌರ್ಜನ್ಯ ತಡೆ ಕಾಯ್ದೆ (Prevention Atracity Act) ಯನ್ನು ತಿಪ್ಪೆಗೆ ಎಸೆಯುವುದು ಒಳಿತು. ಇದರಿಂದ ಕ ಪಕ್ಷ ದಲಿತರು ಪ್ರಭುತ್ವ ತಮ್ಮನ್ನು ರಕ್ಷಿಸಲು ಕಾಯ್ದೆಯೊಂದನ್ನು ರೂಪ ಎಂಬ ಮೂಢನಂಬಿಕೆಯಿಂದಾದರೂ ಹೊರಬಂದಂತಾಗುತ್ತದೆ.

ಮೊದಲು ಜಾತಿದೌರ್ಜನ್ಯ ತಡೆ ಕಾಯ್ದೆಯನ್ನು ದಲಿತರು ಸಂಭ್ರಮದಿ ಸ್ವಾಗತಿಸಿದರು. ಅಷ್ಟೇ ಖಾರವಾಗಿ ಸವರ್ಣೀಯರು ಈ ಕಾಯ್ದೆಯನ್ನು ದ್ವೇಷಿಸಿದ ಈ ಕಾಯ್ದೆ ಅನ್ವಯವಾಗುವ ಆರಂಭದ ಹಂತದಿಂದಲೇ ಒಂದು ವಿವಾದಾ ಕಾಯ್ದೆಯಾಗಿ ಪರಿಗಣಿಸಲ್ಪಟ್ಟಿದೆ. ಆಗಲೇ ಇಪ್ಪತ್ತು ವರ್ಷಗಳನ್ನು ಪೂರೈಸಿರ ಈ ಕಾಯ್ದೆ ಈ ಮಟ್ಟಿನ ಆಯುಷ್ಯವನ್ನು ಕೇವಲ ಅರಚಾಟಗಳಲ್ಲಿ ಕಳೆದಿದೆ. ಬಹಳ ಜನ ಮರೆತಂತಿದೆ, 1989 ರಲ್ಲಿ ಜಾತಿ ದೌರ್ಜನ್ಯ ಮಸೂದೆ ಕಾಯ್ದೆ (Prevention of Atracity Act) ಯಾದರೂ ಅ ಕಾನೂನಿನ ರೂಪುರೇಷಗಳು ರಚನೆಯಾದದ್ದು (1995) ಆರು ವರ್ಷ ನಂತರ. ಮಹಾರಾಷ್ಟ್ರದಲ್ಲಿ ಶಿವಸೇನೆ, ಉತ್ತರ ಪ್ರದೇಶದಲ್ಲಿ ಸಮಾಜವಾ ಪಕ್ಷದಂತಹ ರಾಜಕೀಯ ಪಕ್ಷಗಳು ಎಲ್ಲೆಂದರಲ್ಲಿ ಈ ಕಾಯ್ದೆಯ ವಿರುದ್ಧ ದಂಗೆ ಏಳುವಂತೆ ಮಾಡಿದವು. ಈ ಪಕ್ಷಗಳು ಸದರಿ ಕಾಯ್ದೆಯನ್ನು ರ ಮಾಡುವಂತೆ ಸಂಚು ಮಾಡಿದವು.

ಈ ಕಾಯ್ದೆಯ ಪ್ರಕಾರ ದಾಖಲಾದ ಪ್ರಕರಣಗಳನ್ನು ಬಗೆಹರಿಸಲು ಸರಕ ಪ್ರತ್ಯೇಕ ನ್ಯಾಯಾಲಯಗಳನ್ನು ಸ್ಥಾಪಿಸಬೇಕಾಗುತ್ತದೆ. ಈ ಕಾಯ್ದೆಯಡಿ ದಾಖಲ ಪ್ರಕರಣಗಳನ್ನು ನಿರ್ವಹಿಸಲು ವಿಶೇಷ ಕಾರ್ಯಪಡೆಯನ್ನು ಮತ್ತು ನ್ಯಾಯಾಲಯದ ಪ್ರಾಸಿಕ್ಯೂಷನ್‌ಗಾಗಿ ವಕೀಲರನ್ನು ನೇಮಕ ಮಾಡಬೇಕಾಗುತ್ತದೆ. ಆದರೆ ಇಂದಿಗ ಈ ಕಾಯ್ದೆಯ ಅನ್ವಯಕ್ಕಾಗಿ ಮೇಲಿನವರ ಸಮ್ಮತಿಯನ್ನು ಕಾಯುವಂತ ಸ್ಥಿತಿ ಬಂದೊದಗಿದೆ. ಇದರಿಂದಾಗಿ ಪ್ರಧಾನ ಮಂತ್ರಿಗಳೂ ಸಹ ಜಾತಿ ದೌರ್ಜನ ಪ್ರಕರಣಗಳಲ್ಲಿ ಅಪರಾಧಿಗಳಿಗೆ ಶಿಕ್ಷೆಯಾಗದೇ ಇರುವುದಕ್ಕೆ ಕಳವಳ ವ್ಯಕ್ತಪಡಿಸಿದ ಜಾತಿ ದೌರ್ಜನ್ಯದ ಪ್ರಕರಣಗಳನ್ನು ಅಟ್ರಾಸಿ ಕಾಯ್ದೆ ಯಡಿಯಲ್ಲಿ ದಾಖಲಿಸಿಕೊಳ್ಳ ಪೊಲೀಸರೂ ಇದನ್ನು ದುರ್ಬಲಗೊಳಿಸಿದ್ದ ಈ ಎಲ್ಲ ವಿದ್ಯಮಾನಗಳನ್ನು ಗಮನಿಸಿದರೆ, ಪ್ರಭ ಈ ಕಾಯ್ದೆಯನ್ನು ಮುಂದಿಟ್ಟುಕೊಂ ದಲಿತರನ್ನು ಮೂರ್ಖರನ್ನಾಗಿಸುವ ಚಿಲ್ಲ ರಾಜಕಾರಣದಲ್ಲಿ ತೊಡಗಿದಂತೆ ಕಾಣುತ್ತದೆ. ಎಸ್ ಮತ್ತು ಎಸ್‌ಟಿಗಳ ಮೇಲೆ ನಡೆಯು ದೌರ್ಜನ್ಯಗಳನ್ನು ಇಂಡಿಯನ್ ಪಿನಲ್ ಕೋಡ್‌ಗಳಿಗಿಂತ ಈ ಕಾಯ್ದೆ ಕಠೋರವಾ ಪರಿಗಣಿಸುತ್ತದೆ ಎಂದು ಮೇಲುನೋಟಕ್ಕೆ ಕಾಣುತ್ತದೆ. ಯಾವುದಾದರೊಂ ಅಟ್ರಾಸಿಟಿ ಪ್ರಕರಣದಲ್ಲಿ ಸಿಬಿಐ ಈ ಕಾಯ್ದೆಯನ್ವಯ ಅಪರಾಧಿಗಳನ್ನು ಬಂಧಿ ನ್ಯಾಯಾಲಯಕ್ಕೆ ಒಪ್ಪಿಸಿದ ಮೇಲೆ ಕಾನೂನು ಕ್ರಮಗಳನ್ನು ಬಿಗಿಯಾ ತೆಗೆದುಕೊಳ್ಳದೇ ಹೋದರೆ, ಆಪಾದಿತರು ಜೀವಾವಧಿ ಅಥವಾ ಮರಣದಂಡ ಯಿಂದ ಸುಲಭವಾಗಿ ಪಾರಾಗಿ ಬಿಡಬಹುದು.

ಖೈರ್ಲಾಂಜಿ ಪ್ರಕರಣ ಪ್ರಭುತ್ವವನ್ನಷ್ಟೇ ಅಲ್ಲ, ನಾಗರಿಕ ಸಮಾಜವನ ಅನುಮಾನದಿಂದ ನೋಡುವಂತೆ ಮಾಡಿದೆ. ಎಲ್ಲರಿಗೂ ಗೊತ್ತಿರುವಂತೆ ಸರಕಾರ ಆಡಳಿತ ಯಂತ್ರ ಯಾವ ಹಂತದಲ್ಲೂ ದಲಿತರಿಗೆ ನ್ಯಾಯ ಸಿಗುವಂತ ಪೂರಕ ವಾತಾವರಣವನ್ನು ಸೃಷ್ಟಿಸುವುದಿಲ್ಲ. ಖೈರ್ಲಾಂಜಿಯ ಪ್ರಕರಣದ ಭಾಗಿಯಾದ ಪಾತಕಿಗಳನ್ನು ಕೋರ್ಟ್‌ನಲ್ಲಿ ವಿಚಾರಣೆಗೆ ಒಳಪಡಿಸಿ ತಕ್ಕ ಶಿ ವಿಧಿಸಬಹುದಾದ ಎಲ್ಲ ಕ್ರಮಗಳನ್ನೂ ಅಟ್ರಾಸಿಟಿ ಕಾಯ್ದೆ ಹೊಂದಿದೆ. ಎಲ್ಲದಕ್ಕಿ ಹೆಚ್ಚಾಗಿ ಸತ್ಯಶೋಧನಾ ತಂಡಗಳು ಈ ಪ್ರಕರಣ ಕುರಿತು ದಾಖಲಿಸಿರು ವರದಿಗಳು ಸರಕಾರದ ಅಧಿಕಾರಿಗಳೂ ಈ ಕೃತ್ಯಗಳಲ್ಲಿ ಶಾಮೀಲಾಗಿರುವುದನ ದಾಖಲಿಸಿವೆ. ಆದರೆ ಪ್ರಾಸಿಕ್ಯೂಷನ್‌ನವರು ಈ ಎಲ್ಲ ಸತ್ಯಗಳನ್ನು ನ್ಯಾಯಾಲಯ ಮುಂದೆ ತರಲೇ ಇಲ್ಲ. ಇದಲ್ಲದೆ ಈ ಪ್ರಕರಣದಲ್ಲಿ ಭಾಗಿಯಾಗಿದ್ದ ಮೂವ ಪಾತಕಿಗಳು ಆಪಾದಿತರ ಪಟ್ಟಿಯಿಂದ ಹೊರಬರುವಂತಾದರು. ನಂತರ ಇವರನ ಆಪಾದಿತರ ಪಟ್ಟಿಯಲ್ಲಿ ಸೇರಿಸುವ ಯಾವ ಪ್ರಯತ್ನಗಳೂ ನಡೆಯಲಿ ಕಾನೂನಿನ ಕೈಯಿಂದ ಹೀಗೆ ತಪ್ಪಿಸಿಕೊಂಡ ಮೂವರಲ್ಲಿ ಒಬ್ಬ ರಾಷ್ಟ್ರೀಯವಾ ಕಾಂಗ್ರೆಸ್ ಪಕ್ಷದ ಸ್ಥಳೀಯ ರಾಜಕೀಯ ಮುಖಂಡನ ಸಂಬಂಧಿಯೂ ಆಗಿ

ಮರಣದಂಡನೆ ಎಂಬ ಬೆದರುಬೊಂಬೆ

ಖೈರ್ಲಾಂಜಿಯ ದಲಿತರನ್ನು ಹತ್ಯೆ ಮಾಡಿದ ಆರೋಪಿಗಳಿಗೆ ಕೋರ್ ಮರಣದಂಡನೆಯನ್ನು ವಿಧಿಸಿದಾಗ ಸಂಭ್ರಮಿಸಿದ್ದ ದಲಿತ ನಾಯಕರು, ಶಿಕ್ಷೆಯನ್ನು ಜೀವಾವಧಿ ಶಿಕ್ಷೆಗೆ ಇಳಿಸಿದ್ದಕ್ಕಾಗಿ ಹತಾಶೆಗೆ ಒಳಗಾಗಿದ್ದಾರೆ. ಬರ್ಬರವಾ

ನ ಮೇಲೆ ಸೇಡು ತೀರಿಸಿಕೊಳ್ಳುವ ಪುರಾತನ ಮನೋಭಾವಕ್ಕಿಂತ, ಮಾಡಿದವರಿಗೆ ಹೀಗೆ ಮರಣದಂಡನೆ ವಿಧಿಸುವುದೇ ಅಪರಾಧಗಳನ್ನು ವ ದೊಡ್ಡ ಅಸ್ತ್ರ ಎಂದು ಕುರುಡಾಗಿ ನಂಬಿಕೊಂಡು ಬರಲಾಗಿದೆ. ಗಿನ ಸ್ಥಾಪಿತ ಸತ್ಯ ಯಾವುದೆಂದರೆ, ಮರಣದಂಡನೆಗಳು ಸಮಾಜದಲ್ಲಿ ತ್ತಿರುವ ಅಪರಾಧಗಳನ್ನು ತಡೆಯುವ ಅಸ್ತ್ರವಾಗಿ ಉಳಿದಿಲ್ಲ ಎಂಬುದು. ಹೊಂದಿದ ಬಹುತೇಕ ರಾಷ್ಟ್ರಗಳು ಮರಣದಂಡನೆ ಶಿಕ್ಷೆಯನ್ನು ಸಿವೆ ಮತ್ತು ಯಾವ ರಾಷ್ಟ್ರಗಳು ಮರಣದಂಡನೆಯನ್ನು ಜಾರಿಯಲ್ಲಿ ೋ ಆ ರಾಷ್ಟ್ರಗಳಿಗಿಂತ ರದ್ದುಪಡಿಸಿದ ರಾಷ್ಟ್ರಗಳಲ್ಲಿ ಅಪರಾಧಗಳ ಗಣನೀಯವಾಗಿ ಇಳಿಮುಖವಾಗಿರುವುದು ಕಂಡುಬರುತ್ತದೆ.

ರಿಕಾ ಸಂಯುಕ್ತ ಸಂಸ್ಥಾನದಂತಹ ಪ್ರಮುಖ ಮೂರು ಬಂಡವಾಳಶಾಹಿ ತ್ವ ಹೊಂದಿರುವ ರಾಷ್ಟ್ರಗಳು ಇನ್ನೂ ಮರಣದಂಡನೆಯನ್ನು ಒಂದು ಉಳಿಸಿಕೊಂಡಿವೆ. ಇನ್ನುಳಿದ ಎರಡು ರಾಷ್ಟ್ರಗಳೆಂದರೆ ಜಪಾನ್ ದಕ್ಷಿಣ ಕೊರಿಯಾ. ಆದರೆ ಅಮೆರಿಕಾ ಸಂಯುಕ್ತ ಸಂಸ್ಥಾನದ ಕೆಲವು ಮರಣದಂಡನೆಯನ್ನು ರದ್ದುಪಡಿಸಿವೆ. ಅಮೆರಿಕಾದಲ್ಲಿ ಯಾವ ಮರಣದಂಡನೆಯನ್ನು ರದ್ದುಪಡಿಸಿವೆಯೋ ಆ ರಾಜ್ಯಗಳಲ್ಲಿ ಗಳ ಸಂಖ್ಯೆ ಮರಣದಂಡನೆಯನ್ನು ಜಾರಿಯಲ್ಲಿಟ್ಟಿರುವ ರಾಜ್ಯಗಳ ಗಳ ಸಂಖ್ಯೆಗಿಂತ ಕಡಿಮೆ ಇದೆ. 1990 ರಿಂದ 2007 ರ ೊಂದರ ಪ್ರಕಾರ ಅಮೆರಿಕಾ ಸಂಯುಕ್ತ ಸಂಸ್ಥಾನದ ಮರಣದಂಡನೆಯನ್ನು ಸಿರುವ ರಾಜ್ಯಗಳಿಗಿಂತ, ರದ್ದು ಮಾಡದೇ ಇರುವ ರಾಜ್ಯಗಳಲ್ಲಿ ಶೇ ಕೊಲೆಗಳು ಹೆಚ್ಚಾಗಿವೆ. ನೈತಿಕವಾಗಿ ಮರಣದಂಡನೆ ಸಮರ್ಥನೀಯವಲ್ಲ, ನ್ಯಾಯಶಾಸ್ತ್ರದಲ್ಲಿ ಮರಣದಂಡನೆ ಶಿಕ್ಷೆ ಅಸಂಗತವಾಗಿಯೇ ಕೊಂಡು ಬಂದಿದೆ. ಯಾವ ಪ್ರಭುತ್ವಕ್ಕೂ ಜೀವವೊಂದನ್ನು ನಾಶ ಅಧಿಕಾರವಿರುವುದಿಲ್ಲ, ಅಂತಾದರೂ ಜಾತಿ ದೌರ್ಜನ್ಯಕ್ಕೆ ಒಳಗಾಗುವ ಮುಕ ದಲಿತರಿಗೆ ತಮ್ಮ ಮೇಲೆ ನಡೆವ ಅಪರಾಧಿ ಕೃತ್ಯಗಳಿಗೆ ಪ್ರತಿಯಾಗಿ ಗೆ ಗರಿಷ್ಟ ಶಿಕ್ಷೆಯನ್ನು ಆಗ್ರಹಿಸುವ ನೈತಿಕ ಹಕ್ಕಿದೆ.

ಲ್ಲ ಇರಲಿ, ದಲಿತರು ಮರಣದಂಡನೆ ಶಿಕ್ಷೆಯನ್ನು ಸಮರ್ಥಿಸುವುದನ್ನು ಸಂಕಟವಾಗುತ್ತದೆ. ಭಾರತದಲ್ಲಿ ಮರಣದಂಡನೆಯನ್ನು ಮೀಸಲಾಗಿಟ್ಟಿ ದಲಿತರಿಗೆ ಎಂಬುದನ್ನು ಹಲವು ಸಂದರ್ಭಗಳು ಸಾಬೀತುಪಡಿಸುತ್ತವೆ. ರ್ಷಗಳ ಹಿಂದೆ ಗಯಾ ಮೂಲದ ಮಾನವ ಹಕ್ಕುಗಳ ಹೋರಾಟಗಾರ ಮಾನವ ಹಕ್ಕುಗಳ ಜನ ಸಂಘಟನೆಯ ಸದಸ್ಯರಾದ ಪ್ರಭಾತ್‌ಕುಮಾರ್ ಒಂದು ಮಹತ್ವದ ವಿಷಯವನ್ನು ನನ್ನ ಗಮನಕ್ಕೆ ತಂದರು. ದಲಿತರು, ಗಳಿಗೆ ಸೇರಿದವರು, ಆದಿವಾಸಿಗಳು ಮತ್ತು ಅಲ್ಪಸಂಖ್ಯಾತ ಸಮುದಾಯಕ್ಕೆ ರು ಮಾತ್ರ ಸ್ವಾತಂತ್ರ್ಯಾನಂತರ ಗಲ್ಲು ಶಿಕ್ಷೆಗೆ ಒಳಗಾಗಿದ್ದಾರೆ. ಸ್ವಾತಂತ್ರ್ಯಾನಂತರ ಗೆ ಸೇರಿದ ಅಪರಾಧಿಗಳು ಗಲ್ಲು ಶಿಕ್ಷೆಗೆ ಒಳಗಾಗಿಲ್ಲ, ಇದಕ್ಕೆ ಪವೆಂದರೆ, ಮಹಾತ್ಮ ಗಾಂಧಿಯನ್ನು ಕೊಂದ ನಾಥೂರಾಮ್ ಗೋಡ್ಸೆ, ಣ ಆಪ್ಟೆ ಮತ್ತು ಕೋಲ್ಕೊತ್ತಾದಲ್ಲಿ 14 ವರ್ಷದ ಅಪ್ರಾಪ್ತ ಬಾಲಕಿಯ ಅತ್ಯಾಚಾರ ಮಾಡಿ ಆಕೆಯನ್ನು ಕೊಂದ ಧನಂಜಯ ಚಟರ್ಜಿ ಮಾತ್ರ. ಗಲ್ಲು ಶಿಕ್ಷೆಯಲ್ಲಿ ಮಾತ್ರ ದಲಿತರಿಗೆ ಮತ್ತು ಅಲ್ಪಸಂಖ್ಯಾತರಿಗೆ ಶೇಕಡ ನೂರು ಮೀಸಲಾತಿ ದೊರಕಿಬಿಟ್ಟಿದೆ.

ಖೈರ್ಲಾಂಜಿಗೆ ಪ್ರಭುತ್ವದ ಕೊಡುಗೆ

ತಿ ದೌರ್ಜನ್ಯಗಳು ಸಾಮಾನ್ಯ ಅಪರಾಧಗಳೇನಲ್ಲ. ಈ ದೌರ್ಜನ್ಯಗಳ ಣೀಕೃತ ವ್ಯವಸ್ಥೆಯ ತಾರತಮ್ಯದ ಸಂಸ್ಕೃತಿ ಮತ್ತು ಜಾತಿ ಸಿದ್ಧಾಂತಗಳು ಾಡುತ್ತಿರುತ್ತವೆ. ಇಂತಹ ಅಪರಾಧಗಳನ್ನೆಸಗುವವರು ತಾವೆಷ್ಟೇ ದೈವಾಂಶ ರು, ಧರ್ಮನಿಷ್ಟರು ಎಂಬ ಅಹಂಭಾವನೆಯಿಂದ ಕೂಡಿರುತ್ತಾರೆ. ಅಹಂ ನಿಷ್ಠತೆ ಮತ್ತು ಪಾರಂಪರಿಕ ನಂಬಿಕೆಗಳ ಮೇಲೆ ಬದುಕುತ್ತಿರು ಅವರ ಸನಾತನ ಜಗತ್ತಿನಿಂದ ಹೊರತರಬೇಕಾಗುತ್ತದೆ. ಇಂತಹ ಳ ಜಗತ್ತಿನಿಂದ ಈ ಜನರನ್ನು ಹೊರತರುವ ಹೊಣೆಗಾರಿಕೆಯನ್ನು ಭುತ್ವ ಜಾರಿ ಮಾಡಬೇಕಾಗುತ್ತದೆ. ಪ್ರಭುತ್ವದ ಇಂತಹ ಸಾಮಾಜಿಕ ರಿಕೆಯೇ ನಿರ್ಣಾಯಕವಾದದ್ದು. ಈ ಸಾಮಾಜಿಕ ಜವಾಬ್ದಾರಿಯನ್ನು ಸಲು ಮತ್ತು ಕಾರ್ಯಗತಗೊಳಿಸಲು ಪ್ರಭುತ್ವಕ್ಕೆ ಇಚ್ಛಾಶಕ್ತಿಯೂ ುತ್ತದೆ. ಆದರೆ ಪ್ರಭುತ್ವವು ಇಂತಹ ಹೊಣೆಗಾರಿಕೆಯನ್ನು ನಿಭಾಯಿಸಿದ ರಣೆಗಳು ಸಿಗುವುದಿಲ್ಲ. ಜಾತಿ ದೌರ್ಜನ್ಯಗಳನ್ನು ನಿಗ್ರಹಿಸುವುದಿರಲಿ, ೇ ಜಾತಿ ದೌರ್ಜನ್ಯಗಳೆನ್ನೆಸಗುವ ಪಾತಕಿಗಳಿಗೆ ಬೆಂಗಾವಲಾಗಿ ನಿಂತು, ತಮ್ಮ ರಾಕ್ಷಸೀಕೃತ್ಯಗಳನ್ನು ಮುಂದುವರಿಸಲು ಬೇಕಾದ ಎಲ್ಲ ಲಗಳನ್ನು ಒದಗಿಸುತ್ತಿದೆ.

ರ್ಲಾಂಜಿಯಲ್ಲಿ ಅತ್ಯಾಚಾರವೆಸಗಿ, ಬರ್ಬರ ಹತ್ಯೆಗಳನ್ನು ನಡೆಸಿದ ಪಾತಕಿ ತಾವು ಎಂತಹ ಅಪರಾಧವೆಸಗಿದ್ದೇವೆ ಎಂದು ಸ್ಪಷ್ಟವಾಗಿ ಗೊತ್ತಿದೆ. ವರಿಗೆ ತಾವು ಕಾನೂನಿನ ಗೊಂದಲಮಯ ವಕ್ರಸುಳಿಯಿಂದ ನಿಶ್ಚಿತವಾಗಿ ಬರುತ್ತೇವೆ ಎಂಬ ನಂಬಿಕೆಯೂ ಇದೆ. ಈ ಹತ್ಯೆಗಳ ಕುರಿತು ನಿಕ ಪ್ರತಿಭಟನೆಗಳಿಂದ ಸ್ಥಳೀಯವಾಗಿ ಜನರಲ್ಲಿ ಮೂಡಿದ್ದ ಭಾವನೆಗಳನ್ನು ನೂರಕ್ಕೆ ನೂರು ಹೋಗಲಾಡಿಸಿದ್ದಾರೆ. ಸ್ಥಳೀಯರ ಪ್ರಕಾರ ಖೈರ್ಲಾಂಜಿಯ ಗೆ ಕಾರಣರಾದ ಮುಖ್ಯ ವ್ಯಕ್ತಿಗಳಾಗಲೇ ಕಾನೂನಿನ ಕಪಿಮುಷ್ಠಿಯಿಂದ ನ್ಯಾಯಾಲಯ ವಿಧಿಸಬಹುದಾದ ಶಿಕ್ಷೆಯಿಂದ ಪಾರಾಗಿಬಿಟ್ಟಿದ್ದಾರೆ. ಈ ಪ್ರಕರಣ ಸೂಕ್ಷ್ಮವಾಗಿ ದಲಿತರು ವರ್ಸಸ್ ಪ್ರಭುತ್ವ ಎಂಬ ತನ್ನ ವನ್ನು ತೆರೆದಿಡುತ್ತಿದೆ.

ರ್ಲಾಂಜಿ ಸ್ಪಷ್ಟವಾಗಿ ನಮ್ಮ ಮುಂದೆ ಜಾತಿ ಸಂಘರ್ಷದ ಇತಿಹಾಸವನ್ನು ದೆ. ಅಲ್ಲಿ ಭೋತಮಾಂಗೆ ಕುಟುಂಬವನ್ನು ಈಗಾಗಲೇ ನಿರ್ನಾಮ ಾಗಿದೆ. ಆ ಗ್ರಾಮದಲ್ಲಿ ಬದುಕಿರುವ ಎರಡು ದಲಿತ ಕುಟುಂಬಗಳು ನ ಕಂತಿನ ನರಮೇಧಕ್ಕೆ ಬಾಕಿ ಉಳಿದಿವೆ. ಖೈರ್ಲಾಂಜಿ ಗ್ರಾಮ ಈಗ ಪೊಲೀಸರ ಶಿಬಿರವಾಗಿ ಮಾರ್ಪಟ್ಟಿದೆ. ಈ ಗ್ರಾಮದಲ್ಲಿಯ ಹತಭಾಗ್ಯ ನ್ನು ಕ್ರೂರವಾಗಿ ಕೊಂದ ಪಾತಕಿಗಳು ನಾಶವಾಗುವ ಮುನ್ನ ಆ ಜಗತ್ತು ಅಸಹ್ಯಪಟ್ಟುಕೊಳ್ಳುತ್ತಿರುವಾಗಲೇ ಸರಕಾರ ಈ ವರ್ಷ ಂಜಿಗೆ ವ್ಯಾಜ್ಯಮುಕ್ತ ಅಭಿಯಾನದಡಿ (Dispute Free Camp ಒಂದು ಲಕ್ಷ ರೂಪಾಯಿಗಳ ಬಹುಮಾನ ಘೋಷಿಸಿದೆ. ಇದರ ುಂಬಾ ಸ್ಪಷ್ಟವಾಗಿದೆ. ಪ್ರಭುತ್ವವು ದಲಿತರ ರಕ್ಷಣೆಯನ್ನೇ ಕಾಲಕಸವಾಗಿಸಿದೆ



ಲಲಿತ್‌ಮೋದಿ

ಫಿಕ್ಸಿಂಗ್ ಭೂತ ಹಾಗೂ ತಲೆಕೆಳಗಾದ ವಿವೇಕ

ಕೇವಲ 8-10 ರಾಷ್ಟ್ರಗಳು ಆಡುವ 'ಅಂತರರಾಷ್ಟ್ರೀಯ' ಕ್ರೀಡೆ ಕ್ರಿಕೆಟ್ ಪುನಃ ಫಿಕ್ಸಿಂಗ್ ಮೋಸದಾಟದ ಬಲೆಗೆ ಸಿಲುಕಿದೆ. ಇತಿಹಾಸದಿಂದ ನಾವು ಏನನ್ನೂ ಕಲಿಯುವುದಿಲ್ಲವೆಂಬುದು ಇದರಿಂದ ಮತ್ತೊಮ್ಮೆ ಸಾಬೀತಾಗಿದೆ. ಒಂದು ದಶಕದ ಕೆಳಗೆ ದಕ್ಷಿಣ ಆಫ್ರಿಕಾದ ಹ್ಯಾನ್ಸಿ ಕ್ರೋನಿಯೆ ಅನಿರೀಕ್ಷಿತವಾಗಿ ಮೋಸದಲ್ಲಿ ಸಿಕ್ಕಿಬಿದ್ದಾಗ ಈ ಜಾಲಕ್ಕಿರುವ ಆಳ-ಅಗಲ ಸುಮಾರಾಗಿ ಪರಿಚಯವಾಗಿತ್ತು. ಈತನ ನಂತರ - ಮುಖ್ಯವಾಗಿ ಪಾಕಿಸ್ತಾನ ಪಂದ್ಯಗಳನ್ನು ಸೋತಾಗ - ರೂಮರ್‌ಗಳು ಅಲ್ಲಲ್ಲಿ ಕೇಳಿಬಂದಿತ್ತಾದರೂ ಮೊನ್ನೆಯ ಸಲ್ಮಾನ್ ಭಟ್, ಆಸೀಫ್ ಹಾಗೂ ಕಿರಿಯ ಬೌಲರ್ ಮೊಹಮ್ಮದ್ ಅಮೀರ್ ಪ್ರಕರಣದವರೆಗೆ ಗಾಸಿಪ್‌ಗಳಿಗೆ ಗಟ್ಟಿಯಾದ ಸಾಕ್ಷ್ಯ ದೊರೆತಿರಲಿಲ್ಲ. ಈಗಲೂ ಸಾಕ್ಷ್ಯ ಸಿಕ್ಕೇಬಿಡುತ್ತದೆ ಎನ್ನುವ ಗ್ಯಾರಂಟಿ ಇಲ್ಲದಿದ್ದರೂ ನಂಬಲರ್ಹವಾದ ವೀಡಿಯೋ ರೆಕಾರ್ಡಿಂಗ್ ಇರುವುದರಿಂದ ಮತ್ತು ಇಂಗ್ಲೆಂಡ್‌ನ ಸ್ಕಾಟ್‌ಲೆಂಡ್‌ಯಾರ್ಡ್ ಇದರ ತನಿಖೆ ನಡೆಸುತ್ತಿರುವುದರಿಂದ ಒಂದಿಷ್ಟು ಬಿಡಿ ತಲೆಗಳು ಉರುಳುವ ಸಾಧ್ಯತೆಗಳಿವೆ.

ಪಾಕಿಸ್ತಾನದ ಯುವ ಆಟಗಾರರೇ ಬೆಟ್ಟಿಂಗ್, ಫಿಕ್ಸಿಂಗ್ ಹಾಗೂ ಡ್ರಗ್ ಮಾಫಿಯಾದಲ್ಲಿ ನೇರವಾಗಿ ಭಾಗಿಯಾಗಿದ್ದಾರೆಂದರೆ ಈ ಪಾಪಕೂಪದ ಅಗಾಧತೆ ದಿಗ್ಭ್ರಮೆ ಮೂಡಿಸುತ್ತದೆ. ಮೊದಲಿಗೆ ಹೇಗೆ ಪ್ರತಿಕ್ರಿಯಿಸಬೇಕೆಂದು ತಿಳಿಯದ ಪಾಕಿಸ್ತಾನ ಕ್ರಿಕೆಟ್‌ಮಂಡಳಿ ಈಗ ಭಂಡತನದಿಂದ 'ಆರೋಪವನ್ನು ಸಾಬೀತು ಮಾಡಿ' ಎಂದು ಒತ್ತಾಯಿಸುತ್ತಿದೆ. ಇವರ ಪ್ರಕಾರ ಐಸಿಸಿ ಮೂವರು ಆಟಗಾರರನ್ನು ಸಸ್ಪೆಂಡ್ ಮಾಡಿರುವುದೇ ದೊಡ್ಡ ಅಪರಾಧ ಹಾಗೂ ಹುನ್ನಾರ!!

ಅನೇಕರು ಇಡೀ ಪಾಕಿಸ್ತಾನ ತಂಡವನ್ನು ನಿಷೇಧಿಸಬೇಕೆಂದು ಕರೆಕೊಟ್ಟರೆ, ಇನ್ನು ಕೆಲವರು ಪಾಕಿಗಳು ಶುದ್ಧವಾಗಿ ಹೊರಬರುವವರೆಗೆ ತಾವು ಅವರೊಂದಿಗೆ ಆಟವಾಡುವುದಿಲ್ಲವೆಂಬ 'ನೈತಿಕ' ತೀರ್ಮಾನಕ್ಕೆ ಬಂದಿದ್ದಾರೆ. ತಪ್ಪಿತಸ್ಥರಿಗೆ ತೀವ್ರ ಶಿಕ್ಷೆ ಆಗಬೇಕೆಂಬುದಂತೂ ನಿಜ. ಪಾಕಿಗಳಂತೂ ಭಂಡರು ಸರಿ 'ಇದು ಇನ್ನೂ ಸಾಬಿತಾಗಬೇಕಾಗಿದೆ'. ಆದರೆ ಇಡೀ ಕ್ರಿಕೆಟ್ ಎಂಬ ಆಟದ ಮೈದಾನ, ಆಟಗಾರರು, ಆಡಳಿತ ಮಂಡಳಿಗಳು, ನಿರ್ದೇಶಕರುಗಳು ಹಾಗೂ ಐಸಿಸಿಯ ಬಂಡವಾಳಶಾಹಿ ಕಾರ್ಪೊರೆಟ್ ವಲಯದ ಕರಾಳ ಹಸ್ತದಲ್ಲಿ ಸಿಕ್ಕಿ ಹಣದಾಸೆಗಾಗಿ ಹಪಹಪಿಸುತ್ತಿರುವಾಗ ಕರಾಳ ಬೆಟ್ಟಿಂಗ್ ಮಾಫಿಯಾ ತನ್ನ ಪಾಲನ್ನು ಕೇಳುತ್ತಿರುವುದು ಕಾಕತಾಳೀಯವಲ್ಲ. ನೈತಿಕತೆಯನ್ನು ಹಾಗೂ ಸೌಮ್ಯತೆಯನ್ನು ತಲೆತಲಾಂತರದಿಂದ ಪ್ರತಿಪಾದಿಸುತ್ತಾ ಬಂದಿದ್ದ ಕ್ರಿಕೆಟ್ ಇವತ್ತು ಮಧ್ಯವರ್ತಿಗಳ, ಕಮಿಷನ್ ಏಜೆಂಟರ್‌ಗಳ, ಕಾರ್ಪೋರೆಟ್ ಉದ್ಯಮಿಗಳ ತೆವಲು ತೀರಿಸಿಕೊಳ್ಳುವ ಹಾಗೂ ಲಾಭ ಮಾಡುವ ಒಂದು ಗ್ಲಾಮರ್ ಜಗತ್ತಾಗಿ ಮಾರ್ಪಟ್ಟಿದೆ. ಶೇಕ್ಸ್‌ಪಿಯರ್‌ನ ಪರಿಭಾಷೆಯಲ್ಲೇ ಹೇಳುವುದಾದರೆ **What is done cannot be undone.**

ಕರಾಳ ಜಗತ್ತಿನ ಅದೃಶ್ಯದ ಕೈಗಳು ಕ್ರಿಕೆಟ್‌ಗೆ ಮುತ್ತಿಗೆಹಾಕಿರುವುದಕ್ಕೂ ಒಂದು ದೊಡ್ಡ ಇತಿಹಾಸವೇ ಇದೆ. ಈ ಫಿಕ್ಸಿಂಗ್ ಮಾಫಿಯಾಕ್ಕೂ ಕಾರ್ಪೊರೇಟ್ ಕ್ರಿಕೆಟ್‌ಗೂ ಇರುವ ಸಂಬಂಧವನ್ನು ಸ್ಪಷ್ಟಪಡಿಸಿಕೊಳ್ಳದಿದ್ದರೆ, ಏಕೆ ಹ್ಯಾನ್ಸಿಕ್ರೋನಿಯೇ, ಮಾರ್ಕ್ ವಾ, ಅಜುರುದ್ದೀನ್, ಜಡೇಜಾರಿಂದ ಹಿಡಿದು ಕಿರಿಯ ಬೌಲರ್ ಮೊಹಮ್ಮದ್ ಅಮೀರ್‌ವರೆಗೆ ಆಟಗಾರರು ಮ್ಯಾಚ್ ಫಿಕ್ಸಿಂಗ್ ಭ್ರಷ್ಟಾಚಾರದಲ್ಲಿ ತೊಡಗುತ್ತಾರೆಂಬುದು ಸ್ಪಷ್ಟವಾಗುವುದಿಲ್ಲ.

ಯಾವಾಗ 1980 ರ ದಶಕದ ಮಧ್ಯಭಾಗದಲ್ಲಿ ಪೆಟ್ರೋ ಡಾಲರಿನ ಆಸೆಗಾಗಿ ಶಾರ್ಜಾದಲ್ಲಿ ಕ್ರಿಕೆಟನ್ನು ಬಲವಂತವಾಗಿ ತುರುಕಲಾಯಿತೋ ಆಗ ಪಾತಕ ಜಗತ್ತು ಹಣದ ವಾಸನೆ ಹಿಡಿಯಿತು. ಅದು ಕ್ರಿಕೆಟ್ ಕಾರ್ಪೊರೆಟ್ ಉದ್ಯಮದ ಆಯಾಮವನ್ನು ಪಡೆದುಕೊಳ್ಳುತ್ತಿದ್ದ ಕಾಲವೂ ಹೌದು. ಬಂಡವಾಳ, ಟಿ.ವಿ. ನೇರಪ್ರಸಾರ, ಜಾಹಿರಾತು ಹಾಗೂ ಪ್ರಾಯೋಜಕತ್ವ ಎಂಬ ತೀವ್ರರೂಪಿ ಪ್ರಕ್ರಿಯೆಗಳು ಆಟವನ್ನು ಹಾಗೂ ಆಟಗಾರರನ್ನು ನಿಯಂತ್ರಿಸಲು ಪ್ರಾರಂಭ ಮಾಡಿದ ಕಾಲವೂ ಹೌದು. ಆಟ ಹಾಗೂ ಆಟಗಾರರು ಬಹುರಾಷ್ಟ್ರೀಯ ಕಂಪೆನಿಗಳ ಪ್ರಾಡಕ್ಟ್‌ಗಳಾಗಿ ಮಾರ್ಪಾಡು ಹೊಂದಿ ಕೋಟಿಗಟ್ಟಲೆ ಹಣ ಮಾಡತೊಡಗಿದ್ದರಿಂದ ಕಾಂಚಾಣದ ಥಣ-ಥಣ ಸದ್ದು ಅಪಾಯಕಾರಿ ಜನರನ್ನು ಕ್ರಿಕೆಟನತ್ತ ಆಕರ್ಷಿಸತೊಡಗಿತು. ಇದರಿಂದಾಗಿ ಆಡಳಿತ ಮಂಡಳಿಗಳೂ ಕೊಬ್ಬಿ ತೊಡಗಿದವು. ಖುಲ್ಲಾ ವ್ಯಾಪಾರಿಗಳು, ಮಾರ್ವಾಡಿಗಳು, ದಂಧೆಕೋರರು ಈ ಮಂಡಳಿಗಳ ಅಧ್ಯಕ್ಷರು - ನಿರ್ದೇಶಕರುಗಳಾದರು. ಟಿ.ವಿ. ನೇರಪ್ರಸಾರ ಹಾಗೂ ಪ್ಯಾಕೇಜ್ ಜಾಹಿರಾತುಗಳು ಆಟವನ್ನು ನುಂಗಿ ನಿರ್ಲಜ್ಜ ಪ್ರದರ್ಶನದ ಶೋಕಿಗಳಾಗಿದ್ದು ಹೆಚ್ಚುಕಡಿಮೆ ಈ ಕತೆಯ ಮುಂದಿನ ಭಾಗ. ಇಂತಹ ಅದ್ಭುತ ಸಕ್ಕರೆಪಾಕಕ್ಕೆ ಬೆಟ್ಟಿಂಗ್, ಫಿಕ್ಸಿಂಗ್ ಮಾಫಿಯಾ ಎಂಟ್ರಿ ಕೊಟ್ಟಿದ್ದು ಆಶ್ಚರ್ಯವೂ ಅಲ್ಲ, ಕಾಕತಾಳೀಯವೂ ಅಲ್ಲ, ಇದು ಆಟದ ವ್ಯಾಪಾರೀಕರಣ ಹಾಗೂ ಖಾಸಗೀಕರಣದ ಸ್ವಂತ ಮಾವನ ಮಗಳು ಅಷ್ಟೆ!! ನಾವು ನಿರ್ಲಜ್ಜ ಹಾಗೂ ಆಸೆಬುರುಕ ಪಾಕಿಗಳನ್ನು ಬಯ್ಯುವುದೇನೋ ಸರಿ. ಆದರೆ ನಮ್ಮದೇ ಐಪಿಎಲ್ ಟೂರ್ನಿಯ ಕಡೆಗೆ ನಮ್ಮ ದಿವ್ಯದೃಷ್ಟಿ ಹರಿಸಿದರೆ ಯಾರು - ಯಾವುದನ್ನು ನಿಯಂತ್ರಿಸುತ್ತಿದೆ ಎಂಬುದು ಅರಿವಿಗೆ ಬರುತ್ತದೆ.

ಮೊದಲನೆಯದಾಗಿ ಈ ಐಪಿಎಲ್ ತಂಡದ ಒಡೆಯರುಗಳೇ ಉದ್ಯಮಿಗಳು, ಗ್ಲಾಮರ್ ಜಗತ್ತಿನ ಮಾನಿನಿಯರು ಹಾಗೂ ಏಜೆಂಟರುಗಳು. ಅನೇಕ ತಂಡದ ನಿಜವಾದ ಯಜಮಾನರು ಯಾರು ಎಂಬುದೇ ಗೊತ್ತಿಲ್ಲ. ಮುಖಕ್ಕಿಂತಲೂ ಮುಖವಾಡಗಳೇ ತುಂಬಿರುವ ಅಶ್ಲೀಲ ಟೂರ್ನಿ ಇದು. ಜಿ. ಟಿವಿಯಿಂದ ಈ ಕಲ್ಪನೆಯನ್ನು ಕದ್ದು ಯಶಸ್ಸು ಪಡೆದವನು ಲಲಿತ್ ಮೋದಿ ಎಂಬ ಕ್ರಿಮಿನಲ್ ಭಂಡ. ಆಟ ನಡೆಯುವುದು ಕ್ಷಣಮಾತ್ರ. ಸುತ್ತಮುತ್ತಲೂ ಮದ್ಯ ಹೆಂಗಳೆಯರು ಹಾಗೂ ಗ್ಲಾಮರ್ ಜಗತ್ತಿನ ಲಲನಾಮಣಿಗಳ ಅಟ್ಟಹಾಸ. 'ಆಟದ' ನಂತರ ಪಾನಗೋಷ್ಠಿ. ಪರಿಸ್ಥಿತಿ ಹೀಗಿರುವಾಗ ಇಂತಹ ನಿರ್ಲಜ್ಜತನ ಹಾಗೂ ಕ್ರೀಡೆ ಸರ್ವಾಂಗಶುದ್ಧತೆಯಲ್ಲಿ ಸಹಬಾಳ್ವೆ ನಡೆಸುವುದು ಸಾಧ್ಯವೆ?


Cricket is a game of glorious uncertainty ಎಂಬುದು ಹಳೆಯ ನಾಣ್ನುಡಿ. ಅಂದರೆ ಅನಿಶ್ಚಿತತೆಯೇ ಕ್ರಿಕೆಟ್‌ನ ಸೌಂದರ್ಯ. ಇಲ್ಲಿಯವರೆಗೆ ಈ ಅನಿಶ್ಚಿತತೆ ಹಾಗೂ ಅನಿರೀಕ್ಷಿತಗಳೇ ಕ್ರಿಕೆಟ್‌ನ ಬಂಡವಾಳವಾಗಿತ್ತು, ಆದರೆ ಈಗ ಎಲ್ಲವೂ ನಿಶ್ಚಿತ. ಪಂದ್ಯದ ಗತಿಯನ್ನು ಈಗ ನಿರ್ಧರಿಸುವವರು ಪಾತಕಲೋಕದ ಬುಕ್ಕಿಗಳು. ಆಸೆಬುರುಕ ಆಟಗಾರರು ಹಾಗೂ ಇವರಿಗೆ ಸಾತ್‌ನೀಡುತ್ತಿರುವ ಖಾಸಗಿ ವ್ಯವಸ್ಥೆ. ಒಂದು ಚಿಕ್ಕ ಉದಾಹರಣೆ ನೋಡಿ. ಕ್ರಿಕೆಟನ್ನು ಇಲ್ಲಿಯವರೆಗೂ ಜನರಿಗೆ ತಲುಪಿಸಿರುವುದು ರೇಡಿಯೋ ಹಾಗೂ ಟಿ.ವಿ ವೀಕ್ಷಕ ವಿವರಣೆಕಾರರು. ಆಟದ ಗತಿ, ವಿಶ್ಲೇಷಣೆ ಹಾಗೂ ದರ್ಶನವನ್ನು ನೀಡುತ್ತಿದ್ದ ಬಿ.ಬಿ.ಸಿ ಟೆಸ್ಟ್ ಮ್ಯಾಚ್ ಸ್ಪೆಷಲ್ ತಂಡದ ಜಾನ್



ಜಡೇಜಾ



ಆಸೀಫ್



ಆಮೀರ್

ಅರ್ಲಾಟ್, ಬ್ರಿಯಾನ್ ಜಾನ್‌ಸ್ಟನ್, ಕ್ರಿಸ್ ಮಾರ್ಟಿನ್ ಜೆಂಕಿನ್ಸ್, ಡಾನ್ ಮೋಸಿ ರೀತಿಯ ಅದ್ಭುತ ವಿವರಣೆಕಾರರು ಈ ಹೊಸ ವ್ಯವಸ್ಥೆಯಲ್ಲಿ ಕೇವಲ ಮಾಮಾಮೂಪಿಗಳಾಗಿ ಬದಲಾಗಬಹುದು. ಏಕೆಂದರೆ ಈಗಿನ ವ್ಯವಸ್ಥೆಯಲ್ಲಿ ವೀಕ್ಷಕ ವಿವರಣೆಕಾರರು ನಿರ್ದಿಷ್ಟ ಪ್ರಾಯೋಜಕರ, ಕಂಪನಿಗಳ ಅಥವಾ ವಾಹಿನಿಗಳು ಗುತ್ತಿಗೆ ಆಳುಗಳು. ಹಾಗಾಗಿ ಕಟುಟೀಕೆ ಹಾಗೂ ವಿಮರ್ಶೆಗಳಿಗೆ ಇಲ್ಲಿ ಅವಕಾಶವೇ ಇಲ್ಲ. ಟಿ.ವಿ ಕ್ಯಾಮೆರಾ ಖಾಲಿ ಕುರ್ಚಿ ತೋರಿಸುವುದಿಲ್ಲ, ವಾಸ್ತವವೇ ಅವಾಸ್ತವ. ಯಾವುದು ಬಿಂಬ, ಯಾವುದು ಪ್ರತಿಬಿಂಬ ಎಂಬುದೇ ಸಮಸ್ಯಾತ್ಮಕ ಪ್ರಶ್ನೆ. ನೇರನುಡಿಯ ಗವಾಸ್ಕರ್‌ನಂತಹ ಮನುಷ್ಯನೇ ಐಪಿಎಲ್ ಪಂದ್ಯಾವಳಿಗಳಲ್ಲಿ ದೇಶಾವರಿ ಹಲ್ಲು ಕಿರಿಯುವ ವ್ಯವಸ್ಥೆಯನ್ನು ಈ ಖಾಸಗೀ ಕ್ರಿಕೆಟ್ ಸೃಷ್ಟಿಸಿಕೊಂಡಿದೆ.

ಇನ್ನೊಂದು ವ್ಯಂಗ್ಯವೆಂದರೆ ಆಟದ ಮುನ್ನೋಟ-ರಿಸಲ್ಟ್ ಬುಕ್ಕಿಗಳಿಗೆ ಮೊದಲೇ ಗೊತ್ತಿರುವುದರಿಂದ ಒಬ್ಬ ಅಪರೂಪದ ದರ್ಶನ ನೀಡುವ ವಿವರಣೆಕಾರ(ಉದಾ: ಇಯಾನ್, ಚಾಪೆಲ್ ರಿಚಿ ಬೆನೊ) ತಬ್ಬಿಬ್ಬಾಗುವ ಪರಿಸ್ಥಿತಿ ಇದೆ. ಹಾಗಾಗಿಯೇ ಈ ಖಾಸಗಿ ಪ್ರಾಯೋಜಕರು ತೀರಾ ಮೀಡಿಯೋಕರ್ ಮನುಷ್ಯರನ್ನು ಗುತ್ತಿಗೆಗೆ ತೆಗೆದುಕೊಂಡು ಆಟವನ್ನು ಇನ್ನೂ ಬೋರ್ ಹೊಡೆಸುತ್ತಿದ್ದಾರೆ. ಮೊನ್ನೆತಾನೆ ದಿ ಹಿಂದೂ ಪತ್ರಿಕೆಯಲ್ಲಿ ಜಾನ್ ಅರ್ಲಾಟನನ್ನು ಕುರಿತು ನಿರ್ಮಲ್ ಶೇಖರ್ ಅದ್ಭುತ ಲೇಖನ ಬರೆದಿದ್ದರು. ಈಗಲೂ ರೋಮಾಂಚನಕಾರಿ ವಿವರಣೆಕಾರರು ಇಲ್ಲವೆಂದೇನಿಲ್ಲ. (ಇವತ್ತಿಗೂ ಆಸ್ಟ್ರೇಲಿಯಾದ ಚಾನೆಲ್ 9 ತಂಡ ಅಮೋಘವೆ) ಆದರೆ ಘಟಾನುಘಟಿಗಳ ನಾಲಿಗೆಗೆ ಬೀಗ ಹಾಕಿ ಪಳಗಿಸಿಟ್ಟಿರುವುದು ಈ ಖಾಸಗೀ ವ್ಯವಸ್ಥೆ. ಖ್ಯಾತ ಚಿಂತಕ ಏಜಾಜ್ ಅಹ್ಮದ್ ಜಾಗತೀಕರಣವನ್ನು ವ್ಯಾಖ್ಯಾನಿಸುತ್ತಾ ತಲೆತಲಾಂತರದ ವಿವೇಕವನ್ನು ತಲೆಕೆಳಗೆ ಮಾಡುವುದೇ ಜಾಗತೀಕರಣದ ಹುನ್ನಾರಗಳಲ್ಲೊಂದು ಎಂದು ವಾದಿಸಿದ್ದ. ಈಗ ಕ್ರಿಕೆಟ್ ಜಗತ್ತಿಗೂ ಈ ಅವಿವೇಕದ ರೋಗ ಬಡಿದಿದೆ.

ಕೊನೆಯದಾಗಿ: ನನ್ನ ಸ್ನೇಹಿತನೊಬ್ಬ ಈಗ ಫಿಕ್ಸಿಂಗ್‌ನಲ್ಲಿ ಸಿಲುಕಿರುವ ಪಾಕೀಸ್ತಾನದವರನ್ನು ಕುರಿತು ಇಷ್ಟೆಲ್ಲಾ ನೈತಿಕ ಪ್ರಶ್ನೆಯನ್ನೆತ್ತುವವರು ಹ್ಯಾನ್ಸಿಕ್ರೋನಿಯೆ ಅಥವಾ ಜಡೇಜಾ ಸಿಕ್ಕಿಬಿದ್ದಾಗ ಇವರೊಂದಿಗೆ ನಾವು ಆಡುವುದೇ ಇಲ್ಲ ಎಂದು ಹೇಳಿರಲಿಲ್ಲ, ಇದು ಜನಾಂಗೀಯವಾದವಲ್ಲವೆ? ಎಂದು ಪ್ರಶ್ನಿಸಿದ್ದ.

ನನ್ನಲ್ಲಂತೂ ಉತ್ತರವಿಲ್ಲ...!

• ಟಿ. ಅವಿನಾಶ್

ಬರೀ ಬರಹಗಳಲ್ಲ ವಿಮರ್ಶೆಗಳೂ ಹೌದು...



ಜಿ.ರಾಜಶೇಖರ

ಜಿ. ರಾಜಶೇಖರ ತಮ್ಮ ಬರಹಗಳನ್ನು ಪುಸ್ತಕ ರೂಪದಲ್ಲಿ ಪ್ರಕಟಿಸಲು ಎಂದೂ ಆಸಕ್ತಿ ತೋರಿದವರಲ್ಲ, ಆದರೆ ನಿರಂತರವಾಗಿ ಬರಹವನ್ನು ಸಾಧನವಾಗಿ ಬಳಸಿದವರು. ಬಹುಶಃ ಲೇಖಕರೊಬ್ಬರ ಬರಹಗಳು ಪುಸ್ತಕ ರೂಪದಲ್ಲಿ ಬರುತ್ತಿದೆ ಎಂಬುದನ್ನೇ ಸಂಭ್ರಮಿಸಲು ಸಾಧ್ಯವಾಗುವ ಲೇಖಕರೆಂದರೆ ರಾಜಶೇಖರ ಎನ್ನಬಹುದು.

'ಜಿ. ರಾಜಶೇಖರ ಅವರ ಆಯ್ದ ಬರಹಗಳು' ಅಕ್ಷರ ಪ್ರಕಾಶನದ 'ಮೊದಲ ಓದು' ಮಾಲಿಕೆಯಲ್ಲಿ ಪ್ರಕಟಗೊಂಡಿದೆ. (ಈ ಮಾಲಿಕೆಯಲ್ಲಿ ಪ್ರಕಟವಾಗುವ ಪುಸ್ತಕಗಳು 108 ಪುಟಗಳನ್ನಷ್ಟೇ ಹೊಂದಿರುತ್ತವೆ) ಈ ಸಂಕಲನದಲ್ಲಿ ಸಾಹಿತ್ಯಕ್ಕೆ ಸಂಬಂಧಿಸಿದ ನಾಲ್ಕು ಲೇಖನಗಳು, ಮತೀಯವಾದದ ಮೇಲಿನ ಪ್ರತಿಕ್ರಿಯೆಗಳ ನಾಲ್ಕು ಲೇಖನಗಳು, ಸಮಾಜವಾದ, ಸಾಹಿತ್ಯ ಸಮ್ಮೇಳನ ಮತ್ತು ಭಾವಿಸಿದ ಜನಪದವೆಂಬ ಕನ್ನಡತನಕ್ಕೆ ಸಂಬಂಧಿಸಿದ ಒಂದೊಂದು ಲೇಖನಗಳಿವೆ. ಇಲ್ಲಿರುವುದು ಅವರ ಬರಹಗಳು-ವಿಮರ್ಶೆಗಳಲ್ಲ, ಹಾಗಂತ ಇವು ಕೇವಲ ಬರಹಗಳೂ ಅಲ್ಲ ವಿಮರ್ಶೆಗಳೂ ಹೌದು. ಈ ಮಾತಿಗೆ ಕಾರಣ, ರಾಜಶೇಖರ ಸಾಹಿತ್ಯ ಕೃತಿಗಳ ಬಗ್ಗೆ ಬರೆಯುವುದನ್ನಾಗಲೀ, ತನ್ನ ಸುತ್ತಲಿನ ವಿದ್ಯಮಾನಗಳನ್ನು ಕುರಿತು ಬರೆಯುವುದನ್ನಾಗಲೀ ಭಿನ್ನ ಎಂದು ಭಾವಿಸುವುದಿಲ್ಲ ಎಂಬುದೇ ಆಗಿದೆ.

ಈ ಸಂಕಲನದ ಯಾವುದೇ ಲೇಖನದಲ್ಲೂ ಕಾಣಬಹುದಾದ ಸಮಾನ ಅಂಶವೆಂದರೆ, ರಾಜಶೇಖರ ಒಂದು ಚಿಕ್ಕ ಪ್ರತಿಕ್ರಿಯೆಯನ್ನು ಕೊಡುವಾಗಲೂ ಆ ಕುರಿತು ಆಳವಾದ ಅಧ್ಯಯನ ಮಾಡಿಯೇ ಮುಂದುವರಿಯುವುದು. ಮತ್ತದನ್ನು ನೇರವಾಗಿ, ನಿಷ್ಠುರವಾಗಿ ಮಂಡಿಸುವುದು ಹಾಗೆಯೇ ಪ್ರತೀ ಸಂದರ್ಭದಲ್ಲೂ ಸ್ವವಿಮರ್ಶೆಗೆ ಒಳಪಡುವುದನ್ನು ಅವರು ಮರೆಯುವುದಿಲ್ಲ, ಇವರ ಈ ಕ್ರಮ, ನಮ್ಮ ಕಣ್ಣೆದುರೇ ಇರುವ ಅನೇಕ ವಿಚಾರಗಳನ್ನು ಇನ್ನೊಂದು ಕಣ್ಣಿನಿಂದಲೂ ನೋಡಬಹುದು ಎಂಬುದನ್ನು ತೆರೆದು ತೋರುತ್ತದೆ.

ರಾಜಶೇಖರ ಚಿಂತನೆಗಳ ಸ್ಥಾಯಿ ಗುಣವೆಂದರೆ, ನೈತಿಕತೆಯ ಎಚ್ಚರದ ಸ್ಥಿತಿ. ಅವರನ್ನು ಕಾಡುವ ವಿಷಾದವೆಂದರೆ ನಮ್ಮೊಡನಾಡಿಗಳನ್ನೇ ನಾವು ನಂಬದ, ಹಿಂಸೆಯ ನಡುವಿದ್ದೂ ಹಿಂಸೆಗೆ ಪ್ರತಿಕ್ರಿಯಿಸಲಾರದ ಜಡ್ಡುಗಟ್ಟಿದ ಮತ್ತು ಅದನ್ನು ಸಮರ್ಥಿಸತೊಡಗಿರುವ ಸಾಮಾನ್ಯರ ಮತ್ತು ಮಧ್ಯಮ ವರ್ಗದವರ ನಡೆಗಳು. ಮತೀಯವಾದದ ಕುರಿತಾಗಿ ಬರೆಯುವಾಗ ಈ ಭಾವಗಳು ಹೆಚ್ಚು ಮಡುಗಟ್ಟುತ್ತವೆ.



ಈ ಸಂಕಲನದಲ್ಲಿ ರಾಜಶೇಖರ 1975 ರಲ್ಲಿ ಬರೆದ ಲೇಖನದಿಂದ ಹಿಡಿದು 2009 ರ ತನಕದ ಲೇಖನಗಳೂ ಇವೆ. ಈ ಬರಹಗಳಲ್ಲಿ ಮತ್ತು ಚಿಂತನೆಗಳಲ್ಲಿ, ಮೂವತ್ತೈದು ವರ್ಷಗಳ ಹಿಂದಿನ ಮಾತಿನ ಹರಿತ ಈಗಲೂ ಇದೆ. ಆದರೆ ಚಿಂತನೆಗಳಲ್ಲಿನ ಕೆಲವು ಬದಲಾವಣೆಗಳಿಂದ ಸಮಾಜದ ವಿದ್ಯಮಾನಗಳ ಗ್ರಹಿಕೆಗಳಲ್ಲಿ ಸೂಕ್ಷ್ಮತೆ ಮತ್ತು ಉದಾರತೆ ಕಾಣುತ್ತದೆ. 1975 ರಲ್ಲಿ ಅವರು ಜಡಭರತರ 'ಸತ್ತವರ ನೆರಳು' ನಾಟಕದ ಮತ್ತು ಅದನ್ನು ನಿರ್ದೇಶಿಸಿದ ಬಿ.ವಿ. ಕಾರಂತರ ಪ್ರಯೋಗದ ವಿಮರ್ಶೆ ಮಾಡುವಾಗ ಮಾರ್ಕ್ಸ್‌ವಾದಿ ನೆಲೆಯಲ್ಲಿ ನಾಟಕದ ಆಶಯ ಮತ್ತು ಪ್ರದರ್ಶನ ಜನಪ್ರಿಯವಾಗಿಯೂ ಅದೆಷ್ಟು ವಿಫಲ ಎಂದು ವಿಶ್ಲೇಷಿಸುತ್ತಾರೆ. ಮಧ್ಯಮ ವರ್ಗದ ಪ್ರೇಕ್ಷಕರು ಮತ್ತು ಓದುಗರಿಗೆ ಹಿಡಿದಿರುವ ರೋಗಗಳ ಬಗ್ಗೆ ಕಿಡಿ ಕಾರುತ್ತಾರೆ. ನಮ್ಮ ಜನರಿಗೆ ಚರಿತ್ರೆ ಮತ್ತು ಪುರಾಣಗಳ ಕುರಿತು ಇರುವ ಭ್ರಷ್ಟ ಯೋಚನೆಗಳನ್ನು ಜರಿಯುತ್ತಾರೆ. ಶಿವಪ್ರಕಾಶರ ನಾಟಕ 'ಸುಲ್ತಾನ್ ಟಿಪ್ಪು' ಎಂಬ ಬರಹದಲ್ಲಿ ಈ ಕುರಿತು ಹೆಚ್ಚಿನ ಚರ್ಚೆಯಿದೆ. ನಮ್ಮ ಮಧ್ಯಮ ವರ್ಗದ ಜನಕ್ಕೆ 'ಅರ್ಥ ಎಂದರೆ ದುಡ್ಡು ದೇಶಪ್ರೇಮ ಎಂದರೆ ಪಾಕಿಸ್ತಾನವನ್ನು ಬಡಿದು ಹಾಕುವುದು, ದೇವರು ಎಂದರೆ ಟೀವಿಯಲ್ಲಿ ಬರುವ ರಟ್ಟಿನ ಚಿತ್ರ' ಎನ್ನುವ ರಾಜಶೇಖರ "ಚರಿತ್ರೆ ಮತ್ತು ಪುರಾಣದ ಜೊತೆಗೆ ಇರಬೇಕಾದ್ದು ನೈತಿಕ ಸಂಬಂಧ. ಚರಿತ್ರೆ-ಪುರಾಣಗಳನ್ನು 'ನಿಜ'ಗೊಳಿಸಬೇಕಾಗಿಲ್ಲ, ಭಕ್ತಿ ಪಂಥದ ಸಂತರಂತೆ, ರಾಮಕೃಷ್ಣ ಪರಮಹಂಸ, ರಮಣ ಮಹರ್ಷಿಗಳಂತೆ ಇತರರನ್ನು ವಶಪಡಿಸಿಕೊಂಡು ಆಳಬೇಕು ಎನ್ನುವ ಆಶೆ ಚೂರೂ ಇಲ್ಲದೆ ತಾವೇ ಪರವಶವಾಗುವ ನೈತಿಕ ಸಂಬಂಧದಲ್ಲಿ, ಅಯೋಧ್ಯೆಯಲ್ಲಿಯೇ ರಾಮ ಹುಟ್ಟಿದ್ದು ಎಂದು ನಂಬುವ ಪೇಜಾವರ ಮತ್ತು ಕ್ಯಾಲೆಂಡರ್ ಚಿತ್ರದಂತೆ ರಾಮನನ್ನು ಚಿತ್ರಿಸುವ ರಮಾನಂದ ಸಾಗರರಿಗೂ ಗುಣದಲ್ಲಿ ವ್ಯತ್ಯಾಸವಿಲ್ಲ, ಪುರಾಣದ ಜೊತೆ ಇಬ್ಬರಿಗೂ ಇರುವ ಸಂಬಂಧ ಅಮಾನುಷ, ಅನೈತಿಕ ಮತ್ತು ಅಶ್ಲೀಲ" ಎನ್ನುತ್ತಾರೆ. ಹಾಗೇ ಮುಂದುವರಿದು ಅವರು ಕೇಳುವ ಮುಖ್ಯ ಪ್ರಶ್ನೆಯೊಂದು ಹೀಗಿದೆ: *ಮಧ್ಯಮ ವರ್ಗದ ರೋಗಗಳು ನಮ್ಮ ವಿಮರ್ಶಕರಿಗೂ ಹಿಡಿದದ್ದು ಎಂದಿನಿಂದ?*

'ಅಹಲ್ಯೆ ಮತ್ತು ಸಂಗ್ಯಾಬಾಳ್ಯಾ' ಲೇಖನದಲ್ಲಿ ಪು.ತಿ.ನ.ರ 'ಅಹಲ್ಯೆ' ನಾಟಕ ಪಾತಿವ್ರತ್ಯ ಮತ್ತು ದಾಂಪತ್ಯವನ್ನು ಉದಾತ್ತೀಕರಿಸಿ ಇಲ್ಲದ್ದನ್ನು ಇದೆ ಎನ್ನುವುದನ್ನೂ, ಸಂಗ್ಯಾಬಾಳ್ಯ ಯಾವುದನ್ನೂ ಉದಾತ್ತೀಕರಿಸದೆ ಅಸ್ತಿತ್ವವಾದಿ ಅನುಭವ ನೀಡುವುದನ್ನೂ ಹೇಳುತ್ತಾರೆ. ಈ ಸಂದರ್ಭ ದಲ್ಲಿ ಕಲಾತಪಸ್ವಿಗಳ ಕುರಿತಾಗಿ ಪ್ರಕಟವಾದ ಮಾಸ್ತಿಯವರ 'ಸುಬ್ಬಣ್ಣ', ತರಾಸುರ 'ಹಂಸಗೀತೆ', ಅನಕೃರ 'ಸಂಧ್ಯಾರಾಗ', ಕಾರಂತರ 'ಮೊಗ ಪಡೆದ ಮನ', ಅಯ್ಯರ್‌ರ ಕಾದಂಬರಿಗಳು ಮೊದಲಾದವನ್ನು ನೆನಪಿಸಿ ಕೊಳ್ಳುತ್ತಾ ಈ ಕೃತಿಗಳು ಕಲೆಯ ಬಗ್ಗೆ 'ಮೈಸೂರು ಮಲ್ಲಿಗೆ' ದಾಂಪತ್ಯದ ಬಗ್ಗೆ ಮತ್ತು 'ಅಹಲ್ಯೆ' ಕಾಮದ ಬಗ್ಗೆ ನಮ್ಮ ಮಧ್ಯಮ ವರ್ಗ ನಂಬಲು ಬಯಸುವ ಸುಳ್ಳನ್ನು ಹೇಳಿದವು. ಈ ಆಧಾರದ ಮೇಲೆ ಹೇಳುವುದಾದರೆ ಸ್ವಾತಂತ್ರ್ಯಕ್ಕೆ ನಿಕಟಪೂರ್ವದ ಕರ್ನಾಟಕದ ಬ್ರಾಹ್ಮಣರೇ ಅಹಲ್ಯೆಯ ಕಾಲ ಮತ್ತು ದೇಶ (ಪು. 42) ಎಂಬ ನಿರ್ಣಯಕ್ಕೆ ಬರುತ್ತಾರೆ. ಈ ಸಂಕಲನದಲ್ಲಿ ಸಾಹಿತ್ಯದ ಕುರಿತಂತೆ ಇರುವ ಇನ್ನೊಂದು ಪ್ರಮುಖ ಲೇಖನ 'ಶಿವರಾಮ ಕಾರಂತ ಮತ್ತು ದಕ್ಷಿಣ ಕನ್ನಡತನ.'

ಹೆಚ್ಚೂಕಡಿಮೆ 2000ನೆಯ ಇಸವಿಯ ನಂತರ ರಾಜಶೇಖರ ಸಾಹಿತ್ಯ ಕೃತಿಗಳ ಕುರಿತು ಬರೆಯುವ ಒಲವನ್ನು ಕಳೆದುಕೊಂಡಂತೆ ಕಾಣುತ್ತದೆ. ಈಚಿನ ದಿನಗಳಲ್ಲಿ ಅವರು ಹೆಚ್ಚು ಸ್ಪಂದಿಸುತ್ತಿರುವುದು ಕೋಮುವಾದದ ವಿರುದ್ಧ. ಅದಕ್ಕೆ ಪುರಾವೆಗಳು ಈ ಸಂಕಲನದಲ್ಲೂ ಕಾಣುತ್ತವೆ. ರಾಜಶೇಖರ ನಿರಂತರವಾಗಿ ಈ ಕುರಿತು ಬರೆಯುತ್ತಿರುವುದರಿಂದ ಅವರ ಈ ಕುರಿತ ಮಂಡನೆಗಳು 'ಸಾಮಾನ್ಯ' ಅನ್ನಿಸುವ ಸಾಧ್ಯತೆಯೂ ಇದೆ. ಇನ್ನೂ ಕೆಲವೊಮ್ಮೆ ಅವರದು 'ಏಕಪಕ್ಷೀಯ' ನಿಲುವು ಅನ್ನಿಸಲೂಬಹುದು. ಆದರೆ ಈ ಸಂಕಲನದ ಈ ಸಂಬಂಧಿ ಲೇಖನಗಳು ಕೆಲವು ಮಹತ್ವದ ಪ್ರಶ್ನೆಗಳನ್ನು ಎತ್ತುತ್ತಾ ಮೇಲಿನ ನಿಲುವುಗಳನ್ನು ನಿರಾಕರಿಸುತ್ತವೆ.

ಪುತ್ತೂರಿನ ಪ್ರಕರಣವೊಂದರ ಕುರಿತಂತೆ ಬರೆಯುತ್ತಾ, ಮತೀಯವಾದ ಹೇಗೆ ಅರಿವಿಲ್ಲದೇ ಆವರಿಸಿಕೊಳ್ಳುತ್ತದೆ, ಬೆರೆತು ಹೋಗುತ್ತದೆ ಎಂಬುದಕ್ಕೆ ಒಂದು ಪ್ರಸಂಗವನ್ನು ನೆನಪಿಸುತ್ತಾರೆ. ಅಶ್ರಫ್ ಎನ್ನುವವನು ಪುತ್ತೂರಿನ ಹೆಣ್ಣುಮಗಳೊಬ್ಬಳ ಅತ್ಯಾಚಾರಕ್ಕೆ ಯತ್ನಿಸಿದ. ವಿರೋಧಿ[sic] ಆಕೆಯನ್ನು ಇರಿದುಕೊಂದ. ಈ ಪ್ರಕರಣದಲ್ಲಿ ಆಕೆ ಹೆಣ್ಣುಮ[…] ಎಂಬುದಕ್ಕಿಂತಲೂ 'ಹಿಂದೂ' ಎಂಬುದೂ, ಆತ ಅತ್ಯಾಚ[…] ಎಂಬುದಕ್ಕಿಂತಲೂ 'ಮುಸ್ಲಿಂ' ಎಂಬುದೂ ಮುಖ್ಯವಾಯಿ[…] ಈ ವಿಚಾರವಾಗಿ ಅಧ್ಯಯನ ನಡೆಸಲು ಹೊರಟ ಲೇಖ[…] ತಮ್ಮ ಗೆಳೆಯ ಐ.ಕೆ. ಬೊಳುವಾರು ಅವರ ಬಳಿ ಅಶ್ರ[…] ಕುರಿತು ವಿವರ ಕೇಳುತ್ತಾರೆ. ಆದರೆ, ಆತನ ಬಗ್ಗೆ ಐ.[…] ಏನೂ ತಿಳಿದಿರುವುದಿಲ್ಲ, ಆಗ ತಮ್ಮ ಯೋಚನಾ ಕ್ರಮ[…] ಅಸಾಂಗತ್ಯ ಅವರಿಗೆ ಹೊಳೆಯುತ್ತದೆ. ಅಶ್ರಫ್‌ನಿಗೆ ಮುಸ್ಲಿ[…] ರೆಲ್ಲರೂ ಜವಾಬ್ದಾರರು ಎಂದು ತಿಳಿದುಕೊಳ್ಳದೆ, 'ಅಶ್ರಫ[…] ಮುಸ್ಲಿಮರು ಮಾತ್ರವಲ್ಲ, ಗಂಡಸರಾದ ನಾವೆಲ್ಲರೂ ಜ[…] ಬ್ದಾರರು' ಎಂಬ ತಿಳಿವಳಿಕೆಯೆಡೆಗೆ ನಾವು ಚಲಿಸು[…] ಎಂಬೆಡೆಗೆ ಗಮನ ಸೆಳೆಯುತ್ತಾರೆ. ಮಾತ್ರವಲ್ಲ ಇಂದು ದಕ್ಷಿಣ ಕನ್ನಡದ ಮತೀಯ ಹಿಂಸೆಯಲ್ಲಿ ಭಾಗಿಗಳಾದವರು ಅದನ್ನು ಹಿಂಸೆ ಎಂದಾಗಲೀ ಅನೈತಿಕ ಎಂದಾಗಲೀ ಭಾವಿಸದೆ ತಾವು ದೇಶ, ಧರ್ಮಗಳ ರಕ್ಷಕ[…] ಎಂದು ಭಾವಿಸುವುದನ್ನೂ ಜೊತೆಜೊತೆಗೇ ತಮ್ಮ ದೈನಂದಿನ ಅನುಭವದ[…] ಮುಸ್ಲಿಮರೆಲ್ಲಾ ಕೆಟ್ಟವರಲ್ಲ ಎಂದು ಅರಿತಿರುವುದನ್ನೂ-ಈ ಎರಡರ ನಡು[…] ಗೊಂದಲಕ್ಕೊಳಗಾಗಿ 'ಕಾಶ್ಮೀರದಲ್ಲಿ ಹಿಂದೂಗಳಿಗೆ ಏನಾಗುತ್ತಿದೆ? ಯ[…] ಈ ಬಗ್ಗೆ ಬುದ್ಧಿಜೀವಿಗಳು ಮಾತನಾಡುವುದಿಲ್ಲ? ಎಂದು ಲಿಂಕ್ ಮಾಡು[…] ತಮ್ಮನ್ನು ಸಮರ್ಥಿಸಿಕೊಳ್ಳುತ್ತಾ, ತಮ್ಮನ್ನೇ ನಂಬಿಸಿಕೊಳ್ಳುವುದನ[…] ವಿಶ್ಲೇಷಿಸುತ್ತಾರೆ. ಮತೀಯವಾದವೆಂದರೆ, 'ಕಾಶ್ಮೀರದ ಭಯೋತ್ಪಾದಕರಿಗ[…] ಗೋಧ್ರಾದಲ್ಲಿ ಬೆಂಕಿ ಹಚ್ಚಿದವರಿಗೂ, ನಮ್ಮೂರಿನ ಮುಸ್ಲಿಮರಿಗೂ ವ್ಯತ್ಯ[…] ಕಲ್ಪಿಸದೇ ಅವರೆಲ್ಲರೂ ಒಂದೇ ಎಂದು ಭಾವಿಸುವ ಮನಸ್ಥಿತಿಯಾಗಿ[…] ಎಂಬುದನ್ನು ದಕ್ಷಿಣ ಕನ್ನಡದಲ್ಲಿ ಕೋಮುವಾದಿ ಸಂಘರ್ಷಗಳು ನ[…] ಜಾಗಗಳಿಗೆ ತೆರಳಿ ಅಭ್ಯಸಿಸಿ, ಸಾಮಾನ್ಯರನ್ನು ಸಂದರ್ಶಿಸಿ ಕಂಡುಕೊಳ್ಳುತ್ತಾ[…]

ಹಾಗೆಯೇ, 'ಪ್ರಗತಿಶೀಲ'ರ ಎಡಬಿಡಂಗಿತನದ ಕುರಿತಾಗಿ ಸ್ಪಷ್ಟ ನಿಲುವ[…] 'ಉಡುಪಿಯ ಎರಡು ವಿವಾದಗಳು' ಎಂಬ ಲೇಖನ ಮಂಡಿಸುತ್ತ[…] ಮಠಮಾನ್ಯಗಳಂತೆಯೇ ಅಥವಾ ಅದಕ್ಕಿಂತ ಹೆಚ್ಚಾಗಿ ನಮ್ಮ ಆಧು[…] ಶಾಲೆ ಕಾಲೇಜುಗಳು, ಆಸ್ಪತ್ರೆಗಳು, ವಾಣಿಜ್ಯ ಮಳಿಗೆಗಳು, ಬ್ಯಾಂಕುಗ[…] ಇತ್ಯಾದಿಗಳಲ್ಲಿ ಬಡವರನ್ನು ನಿಷ್ಠುರವಾಗಿ ಹೊರಗಿಡಲಾಗುತ್ತಿದೆ. ಈ ಬ[…] ಯೋಚಿಸದ ಪ್ರಗತಿಶೀಲರು ಮಠವನ್ನು ಸರ್ಕಾರದ ವಶಕ್ಕೆ ಕೊಡಬೇಕೆನ್ನು[…] ದನ್ನೂ ರಾಜಶೇಖರ ವಿರೋಧಿಸುತ್ತಾರೆ. 'ಭಕ್ತಿ ಜನರ ಸ್ವತಂತ್ರ ಆಯ್ಕೆಯಾ[…] ಬಹುದು ಎಂಬುದರ ಬಗ್ಗೆಯೇ ಅವರಿಗೆ ಭಯವಿದೆ. ಮತಾಂತರವ[…] ಸರ್ಕಾರ ನಿಷೇಧಿಸಲಿ ಎಂದು ವಾದಿಸುವ ಪೇಜಾವರ ಸ್ವಾಮಿಗಳಿಗ[…] ಇರುವುದು ಇದೇ ಭಯ. ಇಬ್ಬರೂ-ಸದ್ಯದ ನಮ್ಮ ಕಾಲ ದೇಶ ಪರಿಸ್ಥಿತಿ[…] ಅವಳಿಜವಳಿಗಳು' (ಪು. 79) ಎನ್ನುತ್ತಾರೆ.

ತಮ್ಮ ಎಲ್ಲಾ ಲೇಖನಗಳಲ್ಲೂ ಹೀಗೆ ಹರಿತವಾಗಿ ವಾದ ಮಂಡಿಸುತ್ತ[…] ನಾಡು, ಗುಡಿ, ಮಠ, ಸಾಹಿತ್ಯ ಯಾವುದೇ ಆಗಿರಲಿ ಬಹುಮ[…] ಪೂರಕವಾದದ್ದನ್ನೇ ಬರೆಯುವದಕ್ಕಿಂತಲೂ ವಿಮರ್ಶಕನ ಮತ್ತು ಬುದ್ಧಿಜೀವಿ[…] ಜವಾಬ್ದಾರಿ, ನೈತಿಕತೆಗಳ ಸಾಕ್ಷಿಪ್ರಜ್ಞೆಯಾಗಿರಲು ಬಯಸುತ್ತಾರೆ. ಕರ್ನಾಟ[…] ಕೆಲವೇ ವಿಶಿಷ್ಟ ಲೇಖಕರಲ್ಲಿ ಇವರು ಮುಖ್ಯರು. ಆದರೆ, ಪುಸ್ತಕ ರೂಪ[…] ತಮ್ಮ ಬರಹಗಳನ್ನು ಪ್ರಕಟಿಸದ ಇವರ ಹಠಕ್ಕೆ ಯಾವ ಅರ್ಥವೂ ಇ[…] ಈ ಹಠವನ್ನು ರಾಜಶೇಖರ ಬಿಟ್ಟುಕೊಡವುದು ಇಂದಿನ ಅ[…] ಎಂಬುದನ್ನು ಮನಗಾಣಬೇಕು. ಇದು ಯಾಕೆ ಅಗತ್ಯ ಎಂಬುದಕ್ಕೆ ಇಂ[…] ಬರಹಗಳ ಕುರಿತ ಅವರ ಈ ಮಾತುಗಳೇ ಸಾಕ್ಷಿ:

"ಕನ್ನಡದಲ್ಲಿ ಇವತ್ತು ಮಹತ್ವಾಕಾಂಕ್ಷೆಯ ಬರವಣಿಗೆಯೇ ಅಪರೂಪವಾ[…] ತ್ತಿದೆ. ತಾವು ಯಾವುದೇ ತಾತ್ವಿಕ ಚಿಂತನೆಗಳ ಉಸಾಬರಿ ಹಚ್ಚಿಕೊಂಡವ[…] ಎಂದು ಮೊದಲೇ ವಿನಯದಲ್ಲಿ ನಿವೇದಿಸಿಕೊಂಡು ತಮಗೆ ಗೊತ್ತಿರ[…] ನಾಲ್ಕು ಶಬ್ದಗಳನ್ನೇ ದುಂಡಗೆ ಬರೆದು, ಕ್ರಮವಾಗಿ ಜೋಡಿಸಿ, ಓದು[…] ಮುಂದೆ ಇಡುವ ದಸ್ತಾವೇಜು ಬರಹಗಾರರೇ ಈಗ ಎಲ್ಲೆಡೆ ಕಾಣಿಸುತ್ತಿದ[…] ಗಾಜಿಗೆ ಸಾಣೆ ಹಿಡಿಯುವ ಈ ಸನ್ನಿವೇಶ ನನಗೆ ರೋಲೆಂಡ್ ಬಾರ್ಥ್ಸ[…] ಒಂದು ಮಾತನ್ನು ನೆನಪಿಗೆ ತರುತ್ತಿದೆ. ತಾತ್ವಿಕ ಕಾಳಜಿಗಳಿಲ್ಲದ ಬರವಣಿಗೆಯ[…] ಖಂಡಿಸುತ್ತಾ ಬಾರ್ಥೆಸ್ ಹೇಳುತ್ತಾನೆ: 'ಒಳ್ಳೆಯ ಬರವಣಿಗೆಯ ದ[…] ಶತ್ರು ಬರೇ ಬರವಣಿಗೆಯೇ ಹೊರತು ಕೆಟ್ಟ ಬರವಣಿಗೆ ಖಂಡಿತ ಅ[…] (ಪು. 33).

• ಸಬಿತಾ ಬನ್ನಾ[…]

ಒಂದಿಷ್ಟು ಪ್ರಾರ್ಥನೆಗಳು

ಮೋಡಗಳು ಕದಡಿ ಮಳೆ ಸುರಿಯಲಿ
ಬಿದ್ದ ಮಳೆ ಬದುಕ ಬೀದಿಗಿಡದಿರಲಿ.

ಅನ್ನದಾತ ಕುಣಿಕೆಗೆ ಕೊರಳೊಡ್ಡದಿರಲಿ
ಮನೆಯಲ್ಲಿ ಮೂರೊತ್ತು ಒಲೆ ಉರಿಯಲಿ.

ಕಸದ ಬುಟ್ಟಿಯಲಿ ಹಸುಗೂಸು ಅಳದಿರಲಿ
ಹೆತ್ತವರು ವೃದ್ಧಾಶ್ರಮದ ವಿಳಾಸ ಕೇಳದಿರಲಿ.

ಭಿಕಾರಿಗೆ ತುತ್ತು ಕೂಳು ಸಿಗಲಿ
ಹೂ ಮಾರುವ ಹುಡುಗಿ ಬೀದಿ ಹೆಣವಾಗದಿರಲಿ.

ಭೂಗೋಳದಲ್ಲಿ ಯುದ್ಧಗಳು ಗಡಿಪಾರಾಗಲಿ
ಕಣ್ಣಿನಲ್ಲಿ ಹೃದಯದಲ್ಲಿ ತೇವವಿರಲಿ.

ಅಪ್ಪೂ ಕನಸುಗಳ ಹೆಣ್ಣುಮಗಳು ಸುಟ್ಟುಹೋಗದಿರಲಿ
ಯೋಧನ ಹೆಂಡತಿ ವಿಧವೆಯಾಗದಿರಲಿ.

ನದಿಗಳಿಗೂ ಎದೆ ಬೇನೆ ಕಾಡದಿರಲಿ
ಕಡಲ ತ್ಸುನಾಮಿಗೂ ಕರುಣೆ ಇರಲಿ.


ಮತ್ತೇನು ತಕರಾರುಗಳಿಲ್ಲ ಪ್ರಭುವೆ
ನಮ್ಮ ಮೆದುಳಿಗಿಷ್ಟು ಹೃದಯದ ಭಾಷೆ ಬರಲಿ.

• ರಂಗಮ್ಮ ಹೊದೇಕಲ್, ತುಮಕೂರು



...ಡೂರಪ್ಪ ಬಾಡು ತಿನ್ನೊ ಮಂತ್ರಿಗಳ ಬಿಸಾಕಿದನಂತೆ!

...ರ ಸುತ್ತ ಚಾವಲ ಬೀಸುವ ಹೊಲಗಳು, ...ಮುಕ್ಕಳಿಸುವ ಗದ್ದೆಗಳು. ಇಂತಹ ಸಮಯದಲ್ಲಿ ...ಲ್ಲಿ ಕೂರಲಾಗುವುದಿಲ್ಲ, ಆದ್ದರಿಂದ ಕಾಳಮಾವ ...ಕ್ಕಾದರೂ ಒಂದು ಭೇಟಿ ಕೊಟ್ಟು ಬರುತ್ತಿದ್ದ. ...ಗ ಇದ್ದಕ್ಕಿದ್ದಂತೆ ಆತಂಕ ಶುರುವಾಗಿಬಿಟ್ಟಿತು. ...ಪೈರು ನೆದರಿಲ್ಲದೆ ಬೆಳೆಯುವ ಸಮಯದಲ್ಲಿ ...ಬೇಕಿತ್ತು, ಆ ಬಗ್ಗೆ ಯೋಚಿಸುತ್ತ ದುಗುಡದಿಂದ ...ನಿಗೆ, ರಾಜಕಾರಣದ ಮಾತು ಬೇಕಿರಲಿಲ್ಲ. ...ಪಟ್ಟು ಬಿಡದ ಸೀರ



"ನಮ್ಮ ಚುಂಚನಗಿರಿ ಐನೋರು ರಾಜಕಾರಣ ಮಾಡಿದ್ರುವೆ ತಿಕೀಟು ಕೇಳೋ ಮಟ್ಟಕೆ ಹೋಗಿಲ್ಲ ಕಂಡ್ಯ" ಎಂದ ಕಾಳಮಾವ.

"ಹೋಗಿದ್ರು ಕಣಮಾವ. ಚನ್ನಪಟ್ಟಣದ ಎಮ್ಮೆಲ್ಲೆ ಪರ ತಿಕೀಟು ಕೇಳಕ್ಕೆ ಡೆಲ್ಲಿಗೋಗಿ, ಲಾಡಜಲ್ಲಿ ಉಳಕಂಡಿದ್ರು. ಅವುರು ಚುಂಚನಗಿರಿಗೆ ಸ್ವಾಮಿಯಾದ್ರೆ ಡೆಲ್ಲಿಲ್ಯಾರು ಕೇಳಬೇಕು. ಅದ್ಕೆ ತಿಕೀಟು ಸಿಗಲಿಲ್ಲ, ಆ ಚನ್ನಪಟ್ಣದ ಗಿರಾಕಿ ಇಂಡಿಪೆಂಡೆಂಟಾಗಿ ನಿಂತು, ಜಾತಿ ಜಗಳ ಮಾಡಿಸಿದ್ರೂ ಅಲ್ಲಿ ಸ್ವಾಮಿಗಳ ಕಟೌಟ್ ನಿಲ್ಲಿಸಿಗಂಡು ಗೆದ್ದು ಬಂದೇಬುಟ್ಟ ಇದಕ್ಕೇನೇಳ್ತಿ."

"ನನಿಗೊತ್ತಿರಲಿಲ್ಲ ಬುಡು."

"ಯಲ್ಲಾ ಸ್ವಾಮಿಗಳೂ ರಾಜಕಾರಣ ಮಾಡ್ತ ಅವುರೆ, ಅದರಲ್ಲಲ್ಲ ಶೃಂಗೇರಿ ಸ್ವಾಮಿ ಮಾತ್ರ ರಾಜಕಾರಣ ಮಾಡದಿಲ್ಲ."

"ಅದ್ಯಾಕ್ ಮಾಡದಿಲ್ಲ" ಎಂದಳು ಜುಮ್ಮಿ.

"ಅದು ನಮ್ಮ ಕ್ಯಲಸಲ್ಲ, ನಾವು ರಾಜಕಾರಣ ಮಾಡಬಾರ್ದು ಅಂತ ತಿಳಕಂಡವುರೆ. ಅಂಗಿರಬೇಕು ಕಂಡ್ಯ. ಅದುಬುಟ್ಟು ಸಿ.ಟಿ.ರವಿ ಪರ ವಯಿಸಿಗಂಡು ಬೀದಿಗೆ ಬಂದವುರಲ್ಲಾ, ನಾಳೆ ದಿನ ಸಿ.ಟಿ.ರವಿ ಮಾಡಬಾರದ್ನೆ ಮಾಡಿದ್ರೆ ಏನ್ ಕತೆ" ಎಂದ ಸೀರ.

"ಈಗಾಗ್ಲೆ ಮಾಡಿಲ್ಲ ಅಂತ ಯಂಗೇಳ್ತಿಯೊ ನೀನು, ಆದ್ರೂ ಈ ಸ್ವಾಮಿಗಳು ನಾಚಿಗೆ ಮಾನ ಮರಿಯಾದಿ ಬುಟ್ಟು ಪುಢಾರಿಗಳ ತರ ಅವುನ ಪರ ಬಂದ್ರು ಅಂದ್ರೆ ಇನ್ನಿದಕಿಂತ ಕೆಟ್ಟೊಗಲಾರ್ರು."

"ಅವುರ್ಯಾವೂರು ಸ್ವಾಮಿಗಳ್ಳ."

"ವಬ್ಬರು ಅಜ್ಜಂಪುರದ ಕಡಿಯೋರು, ಇನ್ನೊಬ್ಬರು ಕಡೂರು ಕಡಿಯೋರು. ಇಬ್ರು ಒಂಥರ ವಯಿಸಾದ ಎತ್ತಿದ್ದಂಗವುರೆ."

"ಎತ್ತು ಅಂದೇಟಿಗೆ ಗೆಪ್ತಿಗೆ ಬತ್ತು. ಅವುಕೆ ಬೀಜ ಹ್ವಡದ್ರೆ ತಲಿಯೋಡಕ್ಕಿಲವಂತೆ ಮಂಕಾಗಿರತವಂತೆ ನಿಜವುಲ" ಎಂದ ಸೀರ.

"ನಿಜ ಚಿಗಪ್ಪ ನೀನೇಳಿದ್ದು, ಎಜ್ಜಾಟ್ಟಿ ಕರಟ್, ಪರೆಗ್‌ಜಾಂಪಲ್ ಬೀಜದ ಕರ ಕುಣದಾಡಂಗೆ ಎತ್ತು ಕುಣದಾಡದಿಲ್ಲ, ಆಕ್ಟಿವಿಟೀಸ್‌ಗೆ ಟೆಸ್ಟಿಕಲ್ ಬಾಳ ಇಂಪಾರ್ಟೆಂಟು" ಎನ್ನುತ್ತಾ ವಾಟಿಸ್ಸೆ ಬಂದ.

"ಯಾರ್‍ಯಾರು ಮಂತ್ರಿಯಾದುರ್ಲ."

"ಅದೇ ಕಣಕ್ಕ ವಿ.ಸೋಮಣ್ಣ ಸೋಬಕ್ಕಾ..."

"ವಿ.ಸೋಮಣ್ಣ ಅಂದ್ಯಾರೊ?"


"ನಮ್ಮ ವಿ.ಸೋಮಣ್ಣ ಇಲವೇನಕ್ಕ ಅವುನು. ಯಾರೇ ಮುಖ್ಯಮಂತ್ರಿಯಾದ್ರೂ, ಅವುರತ್ರಕೋಗಿ ಹಲ್ಲುಕಿರಿಯದ್ರಿಂದ ಮ್ಯಾಕ್ಕೆ ಬಂದ. ಈಗ ಎಡೂರಪ್ಪ ಮುಖ್ಯಮಂತ್ರಿಯಾದೇಟಿಗೆ ಜಾತಿವಾದಿ ರಾಜಕಾರಣಿಯಾಗಿ ಮಂತ್ರಿಯಾಗೇ ಬುಟ್ಟ ಇನ್ನ ಶೋಬಕ್ಕಂತು ಎಡೂರಪ್ಪನ ಜ್ವತೆ ಇರಲೇಬೇಕು. ಆಮ್ಯಾಲೆ ಮೈಸೂರಲ್ಲಿ ವಬ್ಬ ಹಳಸಿ ಹೋದ ಬಿಸಿಬೇಳೆ ಬಾತಿನಂಗವುನೆ ರಾಮದಾಸ ಅಂತ. ಅವುನ್ನ ಮಂತ್ರಿ ಮಾಡಿದ್ರು. ಆಮ್ಯಾಲೆ ಕ್ಯಟ್ಟ ಬ್ರಾಹ್ಮಣ ತರ ಕಾಣೊ ವಬ್ಬ ಕುರುಬರ ಪೈಕಿ ವಿಜಯಶಂಕ್ರ ಅಂತ ಅವುನೆ, ಅವುನು ಜಾತಿ ಕೋಟಾದಡಿ ಮಂತ್ರಿಯಾದ, ಇನ್ನ ಸಿ.ಸಿ.ಪಾಟೀಲ, ನಾರಾಯಣಸ್ವಾಮಿ ಅಂತ ಇಬ್ಬರಾದ್ರು. ಅಂತು ದಲಿತ ಮಂತ್ರಿಗಳ ತಗದ್ಯಸ್ತು ಮೇಲಜಾತಿ ಮಂತ್ರಿ ಮಾಡಿಕಂಡ ಎಡೂರಪ್ಪ."

"ಅಂತೂ ಬಾಡ ತಿನ್ನೊ ಮಂತ್ರಿ ಬೀದಿಗೆ ಬಿದ್ರು ಅನ್ನು."

"ಅಂಗೂ ಅನ್ನಬವುದು ಕಣೊ ಉಗ್ರಿ. ಈ ಎಡೂರಪ್ಪ ಮೇಲ್ಜಾತಿ ಮಂತ್ರಿಗಳ ಇಷ್ಟು ಸುಲಭವಾಗಿ ತಗದಾಕಕ್ಕೆ ಆಯ್ತದೇನೊ, ಪಾಪ ಆ ಗೂಳಿಹಟ್ಟಿ ಶೇಖರನ ಕಣ್ಣೀರ ನೋಡಕ್ಯಾಗದಿಲ್ಲ ಕಣೊ ಉಗ್ರಿ."

"ಅದ್ಯಾಕಂಗಳತನ್ನ ಅವುನು."

"ದದ್ದ ಮುಂಡೆ ಮಕ್ಕಳು ಕಣಕ್ಕ, ಇಂತ ನನ್ನ ಮಕ್ಕಳಿಗೆ ಕಡದಾಳು ಮಂಜಪ್ಪ ಏನಂದಿದ್ದ ಅಂತ ಹೇಳಬೇಕು."



"ಕಡುದಾಳು ಮಂಜಪ್ಪಾರು ಏನಂದಿದ್ರೂ."

"ನಿಜಲಿಂಗಪ್ಪ ಸಂಪುಟಕ್ಕೆ ಸೇರಿ ಮಂತ್ರಿಯಾಗಿ ಅಂತರೆ. ಅದ್ಕೆ ಮಂಜಪ್ಪ ಇಲ್ಲ, ನನ್ನ ಲಾಯರ್‌ಗಿರಿ ಚೆನ್ನಾಗಿ ನ್ಯಡೀತಾ ಅದೆ, ಆ ಮಂತ್ರಿಗಿರಿಲಿ ಯಾವ ಫಾಯ್ದೆನೂ ಇಲ್ಲ, ಇಲಾಖೆ ಜನಗಳ ಕೈಲಿ ಕ್ಯಲಸ ಮಾಡಸದ ಬುಟ್ರೆ, ಇನ್ಯಾವ ಆದಾಯನೂ ಇಲ್ಲ, ನಾನೇನಾರ ಮಂತ್ರಿಯಾದ್ರೆ, ಕೇಸು ಕೈಬುಟ್ಟು ಹೋಯ್ತವೆ ಅಂತರೆ. ಇವತ್ತಿದ್ದರೆ ಅಂಥೊರು."

"ಇದ ಬರದು ಆ ಮಂತ್ರಿಯಾಗಬೇಕು ಅನ್ನೊರು ಮಂತ್ರಿಗಿರಿ ಕಳಕಂಡು ಅಳೋರಿಗೆ ಪೋಸ್ಟು ಮಾಡ್ಯ" ಎಂದ ಕಾಳಮಾವ.

"ಪೋಸ್ಟು ಮಾಡಿದ್ರೆ ತಗಂಡು ಓದಿ ಕಡದಾಳ ಮಂಜಪ್ಪಾರ್ನ ಮೆಚ್ಚಗಂಡು ತಿರಗಾ ಅಳಕ್ಕೆ ಸುರುಮಾಡ್ತರೆ ದ್ವಡಪ್ಪ."

"ಗೂಳಿಹಟ್ಟಿ ಶೇಖರ ಯಾಕಳತನೆ ಗೊತ್ತೇನೊ, ನಾಳೆ ವತ್ತಾರಿಂದ್ಲೆ ಕಾರು ಬಂಗ್ಲೆ ಪೊಲೀಸು ಆಳು ಕಾಳ್ಕಲ್ಲ ಹೋಗಿ, ಥೇಟ್ ನಿನ್ನಂಗಾಗಿಬುಡ್ತನೆ, ಅದ್ಕೆ ಅಳದು" ಎಂದ ಉಗ್ರಿ.

"ಸರಿಯಪ್ಪ ಇವತ್ತಲ್ಲ ನಾಳೆ ನನ್ನಂಗೆ ಆಗೇ ಆಯ್ತನಿ ಅಂತ ತಿಳಕಳಕ್ಕೇನೂ."

"ಅಂಗಂತ ತಿಳಕಳಕ್ಕೆ ಅವುನೇನು ಎಂ.ಪಿ.ಪ್ರಕಾಶನೆನೊ."

"ನಮ್ಮ ಎಂ.ಪಿ.ಪ್ರಕಾಶನ್ನ ಇವುರ್ದ್ಯಾರಿಗೂ ಓಲುಸ್‌ಬ್ಯಾಡ ಬುಡೊ ಇನ್ನ ಮುಂದೆ ಅಂಥೊರೆಲ್ಲಿ ಮಂತ್ರಿಯಾದರು."

"ಹಾಲಿ ಸರ್ಕಾರದಲ್ಲಿ ಅಂಥೋರು ಒಬ್ಬರೇ ಒಬ್ಬರೂ ಇಲವಲ್ಲ ಹೇಳು."

"ಅಲ್ಲಾ ಬಿಜೆಪಿಗಳು ಸುಸಂಸ್ಕೃತರು, ಸತ್ಯವಂತರೂ, ನೀತಿವಂತ್ರು ಅಂತ ಬಬ್ಬೆ ವಡಿತಿದ್ರು. ಜ್ವತಿಗೆ ದೇಸಭಕ್ತರೂ ಅಂತ್ಲೂ ಸೇರಿಸಿಗತ್ತಿದ್ರು, ಅಂಥೊರ ಸರ್ಕಾರದಲ್ಲಿ ಯಂಥಾ ಜನವರಲ್ಲಾ."

"ಥೂವ್, ಅವುರ ಅಧಿಕಾರದಲ್ಲಿ ಇಲ್ದಾಗ ಹಾಕಿದ್ದು ಸೋಗು ಕಣ್ರೊ. ಅವುರ ಮಕವಾಡ ಏನದೆ. ಅದೀಗ ಕಳಚಗಂಡು ಬಿತ್ತು ಅಷ್ಟೆಯಾ."

"ಈ ಟೀಮಲ್ಲಿ ಎಡೂರಪ್ಪನ ಮಂಡ ಧೈರ್ಯ ಮೆಚ್ಚಲೇಬೇಕಪ್ಪ."

"ಅದೇನಪ್ಪ ಮೆಚ್ಚೋ ಅಂತದೂ."

"ಏನಂದ್ರೆ, ಜಾತಿವಾದಿ ರಾಜಕಾರಣನೂ ಮಾಡ್ತನೆ ಕ್ಯಟ್ಟ ಜನಗಳನೂ ಎದುರಾಯ್ಕತ್ತನೆ, ಧೈರ್ಯ ಅಂದ್ರೆ ಅವುಂದೆ ಕಣೊ."

"ನಿಜಕಣೊ, ಮೂರು ಜನ ಹಿಂದುಳಿದ ಜನಾಂಗದ ಮಂತ್ರಿಗಳ ವಜಮಾಡ್ತನೆ. ರೆಡ್ಡಿಗಳಿಗೂ ಕೇರ್ ಮಾಡದಿಲ್ಲ, ಇಂತ ಗಂಡುಸ್ತನ ಯಂಗೆ ಬತ್ತು ಅಂತ."

"ಜ್ವತೇಲಿ ಶೋಭ ಇರದ್ರಿಂದ ಅಂತ ಸಗತಿ ಬಂದಿರಬವುದು."

"ಇರಬವುದು ಹೇಳಕ್ಯಾಗದಿಲ್ಲ, ಕ್ಯಟ್ಟ ಮ್ಯಾಲೆ ಲ್ವಟ್ಟೆ ಅಂತ ಅದೇನಾಯ್ತದೆ ನೋಡೇಬುಡನ ಅಂತ ಚಡ್ಡಿ ಲಾಡಿಯ ಬಿಚ್ಚೇಬುಟ್ಟರಬೇಕು."

"ಸರಿಯಾಗಿ ಮಾತಾಡಿರ್ಲ" ಎಂದಳು ಜುಮ್ಮಿ.

"ಯಕ್ಕವ್, ಚಡ್ಡಿಬಿಚ್ಚದ ಅಂದ್ರೇನೂ, ಕಾಚದಲ್ಲಿ ಅಖಾಡಕ್ಕೆ ಇಳದ ಅಂತ. ಆ ರೆಡ್ಡಿ ನನ್ ಮಕ್ಕಳಿಗೆ ಎಡೂರಪ್ಪ ಸರಿಯಾಗೇ ಶೆಡ್ಡು ಹ್ವಡದವುನೆ ಅಂತ ಹೇಳಿದ್ದು, ಕನ್ನಡ ಭಾಷೆಲಿರೊ ಮರ್ಮ ತಿಳಕ ಮದ್ದು..."

"ಅದೇನಾರ ಆಗ್ಲಿ ಇನ್ನೊಂದು ಕಿತ ಚೆಡ್ಡಿ ಜಗಳ ನೋಡಬವುದು."

"ಏನೇ ಆದ್ರು, ಬಿಜೆಪಿಗಳು ಸರಕಾರ ಕೆಡಿಕ್ಯಾಗದಿಲ್ಲ ಕಣೋ ಉಗ್ರಿ, ಹೆಂಗೋ ಯಳದಾಡಿಕಂಡೋಗಿ ಕಡೇವರಿಗೂ ಗಂಟು ಮಾಡ್ತರೆ ವರತೂ, ಸರ್ಕಾರ ಕೆಡಿಕಂಡು ಬೀಳಕ್ಕೆ ಅವುರೇನು ದಳದೋರೆ!" ●

...ರ್‍ಯಾರೊ ಸ್ವಾಮಿಗಳು ಸಿ.ಟಿ.ರವಿ ಮಂತ್ರಿಯಾಗ...ಂತ ರಚ್ಚೆ ಹಿಡಿದ್ರಂತೆ" ಎಂದ.

"...ಗೆರೆ ಸ್ವಾಮಿಗಳು ರಾಜಕೀಯಕ್ಕೆ ಬಂದ್ರು ಅನ್ನು" ...ಳಮಾವ.

"...ಪದೇನು ಮಾವ, ತಿಕೀಟ ತಗಂಡು ಯಲಕ್ಷನ್ನಿಗೆ ...ಅಷ್ಟೆಯ" ಎಂದ ಉಗ್ರಿ.

"...ಟ ಕೊಟ್ರೆ ನಿಂತೆ ಬುಡತರೆ ಕಂಡ್ಯ ಅವುರು."

"... ಕಣೊ ಮಾವ, ಸ್ವಾಮಿಗಳ ಕೋಟ ಅಂತ ...ಈ ಸಿರಿಗೆರೆ ಸ್ವಾಮಿಗೆ ಹೊಳಲ್ಕೆರೆ, ಹಣ್ಣೆ ಸ್ವಾಮಿಗೆ ...ವುರ ಜೊತೆ ಇನ್ನಬ್ಬನವುನಲ್ಲ ಅವುನಿಗೆ ಕಡೂರು, ...ರಿ ಐನೋರಿಗೆ ರಾಮನಗರ, ಪೇಜಾವರನಿಗೆ ...ಹಿಂಗೆ ಕೊಟ್ರೆ ನಿಂತೇಬುಡ್ತರೆ ಸೋತೂ ಬುಡ್ತರೆ!"

"...ಲ್ತರೆ ಅಂತಿಯಾ."


"...ಲದ? ಠೇವಣಿ ಉಳಿಸಿಗಂಡ್ರೆ ಸಾಕು. ಅದಕ್ಕಿಂತ ...ಮಾಡ್ತಯಿರೊ ರಾಜಕಾರಣವೇ ಸಾಕು ಅಂತ, ...ಬೇಕಾದ ಅಧಿಕಾರಿಗಳ ಹಾಕಿಸಿಗಳದು ತಮಗೆ ...ರಿಗೆ ತಿಕೀಟ ಕೊಡಿ ಅನ್ನದು. ಬರೀ ಇಂತ ...ಮಾಡ್ತ ಕುಂತವೆ ಅತ್ತಗೆ" ಎಂದ ಉಗ್ರಿ.

"...ಲ್ಲಾ ಸಿ.ಟಿ. ರವಿಯಂಥೋನಿಗೆ ಮಂತ್ರಿ ಮಾಡಿ ...ತರೆ ಅಂದ್ರೆ, ಅವುರಿನ್ನಂಥ ಸ್ವಾಮಿಗಳು ಅಂತ."

"...ಪ್ಪರೂ ಅಂಥೋರೆ ಇರಬೇಕು. ಮಠದಲ್ಲಿ ಬಡಸ್ತನ ... ಭಕ್ತಾದಿಗಳು ಕಡಮೆ ಆಗಿರಬೇಕು. ಮಾಡಕ್ಕೇನೂ ...ನೊ ಅದ್ಕೆ ಸೀಮೆಯಣ್ಣೆ ಗಿರಾಕಿಯ ಮಂತ್ರಿ ...ಅಂತ ಬಂದಿರಬೇಕು."

"...ಗವುನು ಮಂತ್ರಿಯಾಗಲಿಲ್ಲವಲ್ಲ ಇವರು ಮಕ...ಲಿಲ್ಲವೆ?"

"...ಜ್ಜೋಗ್ಲಿ ತರದೋಗ್ಲಿ ಅವುರಿಗೇನೂ ಅನ್ನದಿಲ್ಲ ...ರಾಜಕಾರಣಿಗಳ ತರ ಆಗ್ಯವುರೆ, ರಾಜಕಾರಣಿಗಳು ...ಓದು ಬರ ಮಾಡದಿಲ್ಲವೊ ಇವುರು ಅಂಗೆ ... ಅದ್ಕೆ ಬೀದಿಗೆ ಬಂದವುರೆ."




ಮನಸ್ಸಿನ ಶಕ್ತಿ ಬಳಸುವ ದಾರಿ

ಈ ನನ್ನ ಸೂಚನೆ ನಿಮಗೆ ಉಪಯೋಗವಾಗಬಹುದೋ ನೋಡಿ. ಒಮ್ಮೆ ನಮ್ಮ 'ಪತ್ರಿಕೆ'ಯ ಮೇಲೆ ಹತ್ತಾರು ಕೇಸುಗಳಿದ್ದವು. ಯಾವುದೋ ಸಂದರ್ಭದಲ್ಲಿ ನಮ್ಮ ಕಚೇರಿಗೆ ಬಂದ ತೇಜಸ್ವಿಯವರು ಈ ಕೇಸ್‌ಗಳ ಸಂಖ್ಯೆ ನೋಡಿ ಹೌಹಾರಿದರು. "ನಾನಾಗಿದ್ದರೆ ಈ ಕೇಸೂ ಬೇಡ, ಈ ಪತ್ರಿಕೆಯ ಸಾಹಸವೂ ಬೇಡ ಅಂತ ತಲೆತಪ್ಪಿಸಿಕೊಂಡು ಓಡಿಹೋಗ್ತಿದ್ದೆ" ಅಂದು ನಕ್ಕರು. ಅದು ನಿಜ. ಅವರು ಎಷ್ಟು ಸೂಕ್ಷ್ಮ ಅಂದರೆ ಇದೆಲ್ಲ ಕಿರಿಕಿರಿಯನ್ನು ಅವರು ಸಹಿಸಲಾಗುತ್ತಿರಲಿಲ್ಲ, ನಾನು ಅವರಿಗೆ ಏನೂ ಹೇಳಲಿಲ್ಲ.

'ಇದನ್ನೆಲ್ಲ ನೀವು ಹೇಗೆ ನಿಭಾಯಿಸ್ತೀರಿ?' ಅಂತ ಗೆಳೆಯರು ಕೇಳಿದರು. 'ಇಂಥ ಪತ್ರಿಕೆ ನಡೆಸಬೇಕೆಂದಿದ್ದರೆ ಇಂತ ಕಷ್ಟ ಅನುಭವಿಸಲೇಬೇಕು. ...ನ್ನ ನನ್ನ ವೃತ್ತಿಯ ಒಂದು ಭಾಗವಾಗಿ ತಗೋತೀನಿ. ಹಾಗೆಯೇ ಇನ್ನೂ ಅನೇಕ ವಿಷಯಗಳು; ಪತ್ರಿಕೆಗೆ ಮುಖ್ಯವಾದ ...ಮೌಲ್ಯ, ಜನರ ಕಷ್ಟ–ಇದನ್ನೆಲ್ಲ ನೋಡಿಕೊಳ್ಳುವ ಜವಾಬ್ದಾರಿಯಂತೆಯೇ ಇದು' ಅಂದೆ.

...ನು ಬಹಳ ದಿನದಿಂದ ಅನೇಕ ಬಗೆಯ ತಲ್ಲಣ, ಮಾನಸಿಕ ಅನಾನುಕೂಲಗಳನ್ನು ಎದುರಿಸುವುದನ್ನು ಕಲಿತಿದ್ದೇನೆ. ...ನಂತೆ ಒಂದು ಸಮಸ್ಯೆ ಎದ್ದರೆ ಅದನ್ನು ಬಗೆಹರಿಸಲು ತುಂಬ ಮಾನಸಿಕ ಶಕ್ತಿಬೇಕು. ಹಾಗೆಯೇ ಅನೇಕ ಮಾನಸಿಕ ದಾಳಗಳು. ಯಾವುದೋ ... ಊರಿನಲ್ಲಿ ಒಂದು ಕೇಸ್ ಇದೆ, ಅದಕ್ಕೆ ನಾನು ಖುದ್ದು ಹೋಗಲೇಬೇಕು ಎಂದಿಟ್ಟುಕೊಳ್ಳಿ. ಅದರ ಬಗ್ಗೆ ಕ್ಷಣ ಚಿಂತಿಸಿರುತ್ತೇನೆ; ನನ್ನ ...ಮಿತ್ರರು, ವಕೀಲರೊಂದಿಗೆ ಮಾತಾಡಿರುತ್ತೇನೆ. ಅಷ್ಟರಲ್ಲಿ ಅದನ್ನು ಕೇವಲ ದೈಹಿಕ ಶ್ರಮಕ್ಕೆ ಇಳಿಸಿಬಿಟ್ಟಿರುತ್ತೇನೆ. ಇಲ್ಲಿಂದ ಹೋಗುವುದು, ...ಹಾಜರಿರುವುದು, ಬರುವುದು–ಎಲ್ಲವೂ ದೇಹದ ಕೆಲಸ ಎಂಬಷ್ಟು ಸುಲಭವಾಗಿರುತ್ತವೆ. ಬೇರೆ ಬಗೆಯ ಕಷ್ಟಗಳನ್ನು ನಾನು ಎದುರಿಸುವುದೂ ... ದೇಹ ಮತ್ತು ಮನಸ್ಸಿಗೆ ಅದನ್ನು ಸಮಾನವಾಗಿ ಹಂಚಿಕೊಟ್ಟರೆ ಅದರಲ್ಲಿನ ಕಷ್ಟ ಕಮ್ಮಿಯಾಗುತ್ತದೆ. ಯಾವುದೋ ಒಂದು ಕಿರಿಕಿರಿ ...ಮಾಡುವ ಜಗಳವನ್ನು ಪರಿಹರಿಸಬೇಕಿದ್ದರೆ ಹೋಗುವುದು, ನೋಡುವುದು–ಎಲ್ಲವೂ ದೈಹಿಕ ಕೆಲಸವೆನ್ನುವಂತೆ ಮಾಡಿರುತ್ತೇನೆ. ಇಲ್ಲಿಂದಲೇ ...ಗಳದ ಬಗ್ಗೆ ತಲೆಕೆಡಿಸಿಕೊಂಡರೆ ಮನಸ್ಸು ಸುಸ್ತಾಗಿ ದುರ್ಬಲವಾಗಿರುತ್ತದೆ. ನಾನು ಅದಕ್ಕೆ ಅವಕಾಶವನ್ನೇ ಕೊಡುವುದಿಲ್ಲ...



'ಆಮದಾದ....'

ನನ್ನ ಕೈ ಬರಹದ ತರಹವೇ ಇದ್ದ ಬೋರ್ಡ್ ಕಂಡು ಚಕಿತನಾದೆ. ಕಾರ್ ಜೋರಾಗಿ ಹೋಗುತ್ತಿದ್ದುದರಿಂದ ಆ ಬರಹ ಏನೆಂದು ಗೊತ್ತಾಗಲಿಲ್ಲ, ಮರುದಿನ ನಿಧಾನ ನಿಂತು ನೋಡಿದರೆ, 'ಆಮದಾದ ಸೀಮೆಯೆಣ್ಣೆ ಇಲ್ಲಿ ದೊರೆಯುತ್ತದೆ' ಎಂದಿತ್ತು. ಅರ್ಥವಾಗಲಿಲ್ಲ, ನಿಧಾನವಾಗಿ ನೋಡಿದರೆ 'ಆಮದಾದ ಸೀಮೆಯೆಣ್ಣೆ ಇಲ್ಲಿ ದೊರೆಯುತ್ತದೆ', **'Imported kerosene is available here'** ಎಂದಿತ್ತು. ದಿನದ ವ್ಯವಹಾರದಲ್ಲಿ 'ಆಮದು', 'ರಫ್ತು' ಪದಗಳನ್ನು ಅಷ್ಟಾಗಿ ಬಳಸುವುದಿಲ್ಲವಾದ್ದರಿಂದ ಹಾಗೆ ಗೊಂದಲವಾಗಿತ್ತು. ಸರಿ, ಸೀಮೆಯೆಣ್ಣೆ **Import** ಆಗುತ್ತಿದೆಯೇ? ಎಂಥ ಸೀಮೆಯೆಣ್ಣೆ? ಅದರಲ್ಲಿ ವಿಶೇಷವೇನಿರಬಹುದು–ಎಂದುಕೊಂಡು ಮಂತ್ರಿ ಮನಮೋಹನ್ ಸಿಂಗ್ ಅವರ ಇನ್ನೊಂದು 'ಆರ್ಥಿಕ ಸುಧಾರಣೆ' ಇರಬಹುದು ಅಂದುಕೊಂಡು ಮುಂದೆಹೋದೆ.




ಜೂನ್ 29, 1994

ಹತ್ತು ರೂಪಾಯಿ ಸಾಹೇಬರು

ಎದ್ದೋನು ಎಲ್ಲಿಗೆ ಹೋಗಿದ್ದೆ?
ಬೆಳ್ಳೂರು ಕಾಲೇಜಿಗೆ ಹೋಗಿದ್ದೆ
ಕಾಲೇಜಲಿ ಏನು ಕೊಟ್ರು?
ಸುಳ್ಳು ಸರ್ಟಿಫಿಕೇಟ್ ಕೊಟ್ರು
ಸರ್ಟಿಫಿಕೇಟ್ ಏನು ಮಾಡ್ದೆ?
ಮಂಡ್ಯದ ಕಾಲೇಜಿಗೆ ಕೊಟ್ಟೆ
ಕಾಲೇಜಲಿ ಏನು ಕೊಟ್ರು?
ಪ್ರೊಫೆಸರ್ ಗಿರಿ ಕೊಟ್ರು!
ಸುಪ್ರಭಾತ ಕೇಳಿ ಬಂತು!

ಅಣಕ



▶▶ ಎಚ್.ಎಲ್. ಕೇಶವಮೂರ್ತಿ

ಹಾಡುತ್ತಿದ್ದವನು ಕ್ಯಾತ. ಹಳ್ಳಿ ಹೈದ. ಮಕ್ಕಳ ಪದ ಹಾಡಿ ಹಾಡಿ ರೂಢಿಯಾಗಿತ್ತು. ಅದೇ ಧಾಟೀಲಿ ಈ ಆಧುನಿಕ ಮಕ್ಕಳ ಪದ ಹಾಡ್ತಿದ್ದ. ನೋಡ್ದೆ. ಬಲೇ ಖುಷೀಲಿದ್ದ. 'ಕಳ್ಳರನ್ನೆಲ್ಲ ಹಿಡಿದಾಕ್ಬುಡ್ತೀನಿ ಸಾ' ಅಂತ ಜೋಷ್‌ನಲ್ಲಿ ಹೇಳ್ದ. ಅದೆಂಗೊ ಅಂದೆ. 'ಮಾಹಿತಿ ಹಕ್ಕಲಿ ಸಾ' ಅಂತ ನಲಿದಾಡಿದ.

ಅವನ ಸಂಭ್ರಮಕ್ಕೆ ಕಾರಣ ಇತ್ತು. ಅದು ಸರ್ಕಾರಿ ಸ್ವಾಯತ್ತ ವೈದ್ಯಕೀಯ ಕಾಲೇಜುಗಳನ್ನು ಜಾತ್ಯತೀತ-ಕೋಮುವಾದಿ ಸಮ್ಮಿಶ್ರ ಸರ್ಕಾರ ಪ್ರಾರಂಭಿಸಿತಲ್ಲ ಆಗಲೇ ಆದಕ್ಕೆ ಬಾಲಅರಿಷ್ಟ ಕಾಡೋಕೆ ಪ್ರಾರಂಭವಾಗಿತ್ತು. ವಿ.ಎಸ್. ಆಚಾರ್ಯ ಕೃಪಾಪೋಷಿತ ನಾಟಕ ಮಂಡಳಿ ದರೋಡೆಗೆ ಇಳಿದಿತ್ತು. ಲೋಕಾಯುಕ್ತರು ಇಂತಹವರ ಸದೆಬಡೀತಾರೆ ಎಂಬ ಭ್ರಮೆ ಇರುತ್ತಲ್ಲ, ಅದರ ಉಮೇದಿನಲ್ಲೇ ದೂರು ನೀಡಿದರು. ಸುಮ್ಮನೆ ಹೇಳಬಾರದು. ಅವರೂ ಮಾಡಿದ್ರು ಮಾಡಿದ್ರು ಮೂರು ವರ್ಷ ತನಿಖೆ ಮಾಡಿದ್ರು. ಬೇಕಾದ ಮಾಹಿತಿ ಬಿಟ್ಟು ಬೇರೆ ಎಲ್ಲಾನೂ ಸಂಗ್ರಹಿಸಿದರು! ಅದರ ತಕ್ಕನಾಗಿ ವರದೀನೂ ನೀಡಿದರು ಅನ್ನಿ! 'ಇವರ ನಂಬಿದ್ರೆ ಆಗೋದಿಲ್ಲ ಬೇಕಾದ ಮಾಹಿತೀನ ಮಾಹಿತಿ ಹಕ್ಕು ಕಾಯ್ದೆಯನ್ವಯ ಪಡೀರಿ' ಅಂತ ಯಾರೋ ಸಲಹೆ ನೀಡಿದರಂತೆ. 'ಅದ್ರಲಿ ಕೇಳಿದರೆ ಕೊಡ್ತಾರಾ ಸಾ' ಅಂತ ಕೇಳಿದನಂತೆ. ಅದಕ್ಕೆ ಅವರು 'ಕೊಡ್ಲೇ ಬೇಕು. ಇಲ್ದಿದ್ರೆ ಆಯುಕ್ತರು ಸುಮ್ಮನೆ ಬಿಟ್ಟಾರಾ... ಜೈಲು ಜೈಲಿಗೆ ಕಳಿಸ್ತಾರೆ' ಅಂದರಂತೆ. ಅದಕ್ಕೆ ಕ್ಯಾತ ಈ ಆನಂದಾವತಾರ ತಾಳಿದ್ದ.


ಇಷ್ಟು ಭರವಸೆ ಸಿಕ್ಕಿದ ಮೇಲೆ ಇನ್ನೇನು ಬೇಕು. ಮಾಹಿತಿ ಕೋರಿ ರಾಜೀವ್ ಗಾಂಧಿ ವಿಶ್ವವಿದ್ಯಾಲಯಕ್ಕೆ ಅರ್ಜಿ ಗುಜರಾಯಿಸಿದ. ಅವ್ರು 'ಇದು ನಮ್ತಾವ ಇಲ್ಲ, ಬೆಳ್ಳೂರು ಹತ್ತಿರ ಕೇಳಿ' ಅಂದ್ರು. ಇದನ್ನೇನಿದ್ರೂ ಬೆಳ್ಳೂರು ಹತ್ತಿರ ಕೇಳಿ' ಅಂದ್ರು. ಹಿಂಗಿಂಗೆ ಇಂತಿಂತಹ ಮಾಹಿತಿ ಕೊಡಿ ಅಂತ ಕ್ಯಾತ ಅವರ್‍ಗೂ ಕಾಗ್ದ ಬರುದು. ಅವರನ್ನು ಕೇಳ್ದ. ಅದ್ಕೆ ಅವರೇನಂದ್ರು 'ನಾವು ಪ್ರೈವೇಟ್ ಜನ. ನಮಗೂ ನಿಮಗೂ ಸಂಬಂಧ ಇಲ್ಲ. ಹಂಗೆಲ್ಲ ಮಾಹಿತಿಯ ನೀವು ಕೇಳಂಗೂ ಇಲ್ಲ, ನಾವು ಕೊಡಂಗೂ ಇಲ್ಲ' ಅಂದ್ರು. ಅರೆ ಇದೇನಯ್ಯ ಇದು ಅವರ್‍ನ ಕೇಳಿದ್ರೆ ಹಂಗಂತಾರೆ, ಇವರ್‍ನ ಕೇಳಿದ್ರೆ ಹಿಂಗಂತಾರೆ ಅಂತ ತಿರ್ಗ ಬೆಂಗ್ಳೂರಿಗೆ ಕಾಗದ ಬರ್‍ದ. ಅವ್ರು 'ನೀವು ಹಂಗೆಲ್ಲ ಅನ್ನಾಕೆ ಬರಾದಿಲ್ಲ. ನಂ ಯೂನಿ ವರ್ಸಿಟೀಗೆ ನಿಂ ಕಾಲೇಜು ಅಫಿಲಿಯೇಟ್ ಆಗದೆ ಅನ್ನೋದ ತಿಳ್ಕಳಿ, ಅಂತಾವ ಬೆಳ್ಳೂರಿ ನೋರ್‍ಗೆ ಕಾಗ್ದ ಬರುದ್ರು. ಇನ್ನು ಇಪ್ಪತ್ತೈದು ದಿವಸದಲ್ಲಿ ಇದ ಒದಗಿಸಲೇಬೇಕು ಅಂತಾನೂ ಆರ್ಡ್ರು ಮಾಡಿದ್ರು. ಅದರ ನಕಲ ನೋಡಿ ಕ್ಯಾತ ಖುಷಿ ಆದ. ಮಾಹಿತಿ ಸಿಕ್ಕೆ ಬಿಡ್ತು ಅಂತ ಕುಣಿದಾಡ್ತಾ ಅಲ್ಲಿಗೋದ. ಅವ್ರು 'ಅವ ಲೋಕಾಯುಕ್ತಕ್ಕೆ ಕೊಟ್ಬಿವಿ. ನಮ್ತಾವ ಯಾವ್ದೂ ಇಲ್ಲ' ಅಂತ ತಾರಮ್ಮಯ್ಯ ಆಡಿದರು. ಇದೇನು ಇದು ಹಿಂಗಾಯ್ತಲ್ಲ ಅಂತಾವ ಲೋಕಾಯುಕ್ತರಿಗೇ ಹಿಂಗಿಂಗೆ ಅಂತ ಬರ್‍ದು 'ಮಾಹಿತಿ ಕೊಡಿ' ಅಂದ. ಅದ್ಕೆ ಅವ್ರೇ ನಂದ್ರು ಅಂದ್ರೆ 'ಅಂತವ್ಯಾವೂ ನಮ್ತಾವ ಇಲ್ಲ' ಅಂದ್ರು! ಇವ್ರಲಿ ಯಾರನ್ನ ನಂಬೋದೋ ಸಿವನೆ ಅಂದುಕೊಳ್ತಿದ್ದಂಗೆ ಮಾಹಿತಿ ಆಯುಕ್ತರು ನೆನಪಾದ್ರು. ಹತ್ತು ರೂಪಾಯಿ ಖರ್ಚು ಮಾಡಿ ಲಕ್ಷಗಟ್ಟಲೆ ಪಡೆದರು ಹಿಂಗೆ ಹಿಂಗೆ ಅಂತಾವ ಹೇಳ್ತಿದ್ದಾರಲ್ಲ ಅವರನ್ನ ಹಿಡಿದರೆ ಕೆಲ್ಸ ಕುರ್ತೇಟು ಅಂದುಕೊಂಡು ಅವರಿಗೆ ದೂರು ನೀಡಿದ. ಅವ್ರು ಇವನ್ನ ಕರ್‍ಸುದ್ರು. ಅವರ ನೋಡ್ತಿದ್ದಂಗೆ ಚುಂಚನಗಿರಿ ಮಠದ ಮರಿ ನೋಡ್ದಂಗಾಯ್ತು. ಅವರು ತನಿಖೆ ಯಾವ ಪರಿ ನಡೆಸಿದ್ರು ಅಂದ್ರೆ..... 'ಮೆಡಿಕಲ್ ಕಾಲೇಜ ನಡ್ಸೋದು ಪುಗಸಟ್ಟೆಪುನಗಲ್ಲ ಕನಯ್ಯ. ಸ್ವಾಮಿಗಳು ಎಷ್ಟು ಕಷ್ಟಪಟ್ಟು ಅದ ಬೆಳಿಸ್ತಿದಾರೆ ಗೊತ್ತ? ನಿಮ್ಮಂಥೋರಿಂದ್ಲೆ ನಾವು ಹಿಂದೆ ಬಿದ್ದಿರೋದು, ಅಂತೆಲ್ಲ ಆಧ್ಯಾತ್ಮ ಬೋಧನೆ ರೀತೀಲಿ ಪ್ರವಚನೆ ಮಾಡಿದರು? 'ಸುಳ್ಳು ಸರ್ಟಿಫಿಕೇಟ್ ಕೊಡಿ ಅಂತಾನೂ ಸ್ವಾಮಿಗಳೇ ಹೇಳಿದ್ರ' ಎಂದು ಕೇಳಬೇಕೆಂದಿದ್ದೆ, ಕೇಳ್ಳಿಲ್ಲ ಬುಡಿ. ಯಾಕೇಂದ್ರೆ ಅವರು ಜಡ್ಜು ಅಂತೆ. ಅವರು ಕೋರ್ಟ್‌ಲಿ ಬೇಕಾದಂಗೆ ಮಾತಾಡ ಬಹುದಂತೆ. ನಾವು ಮಾತನಾಡಿದರೆ ನ್ಯಾಯಾಂಗ ನಿಂದನೆ ಆಗುತ್ತಂತೆ. ಜೈಲಿಗೆ ನೂಕ್ಸೋ ಅಧಿಕಾರಾನೂ ಅವರಿಗೆ ಇದ್ದತ್ತಂತೆ! ಕೊನೆಗೆ ಹತ್ತು ರೂಪಾಯಿ ಕೊಟ್ರೆ.... ಎಂದು ಮಾಹಿತಿ ಹಕ್ಕಿನ ಮಹತ್ವ ಹೇಳುತ್ತಿದ್ದ ಸಾಹೇಬರು ಏನು ಮಾಡಿದ್ರು... ಈ ಮಾಹಿತಿ ಕೊಡಾಕೆ ಬರಂಗಿಲ್ಲ ಅಂತಾವ ಜಡ್ಜ್‌ಮೆಂಟ್ ಕೊಟ್ರು!

ಈಗ ಕ್ಯಾತನ ಪದ ಹೀಗಿರಬಹುದು:

ಎಲ್ಲಿಗೋಗಿದ್ದೆ?
ಬೆಂಗ್ಳೂರಿಗೋಗಿದ್ದೆ
ಯಾಕೋಗಿದ್ದೆ?
ಸಾಹೇಬರ ನೋಡಾಕೋಗಿದ್ದೆ
ಸಾಹೇಬರೇನು ಕೊಟ್ರು
ಚೋಗುಳ ಕೊಟ್ರು!

ಅವರೇನು ಓಡೋಗ್ತಾರಾ?

'ನಮ್ಮದು ದಕ್ಷ, ಪ್ರಾಮಾಣಿಕ ಆಡಳಿತ,' 'ಬಡವರ ಕಣ್ಣೀರು ಒರೆಸಲು ಪ್ರಯತ್ನಿಸ್ತಿದೀವಿ' ಅಂತ ದಿನಾ ಹೇಳ್ತಾ



ಇದ್ದರೆ ಆಡಳಿತ ನಡೆಸೋರ್‍ಗೆ ಅವರು ಮಾಡೋ ಮನೆ ಹಾಳು ಕೆಲಸವ್ರೂ 'ದಕ್ಷ, ಪ್ರಾಮಾಣಿಕ, ಕಣ್ಣೀರು ಒರೆಸುವ' ಕಾರ್ಯವೇಯೆ ಎಂಬ ಭ್ರಮೆ ಆವರಿಸುತ್ತಂತೆ. ಯಡ್ಯೂರಪ್ಪನವರದ್ದೂ ಅದೇ ಕತೆ ಅನ್ಕೊಂಡಿದ್ದೆ. ಛೇ ಇಲ್ಲ ಕಣ್ರಿ. ನಿಜವಾಗಲೂ ಅಂತಹ ಆಡಳಿತಾನೆ ಅವ್ರುದ್ದು ಅನ್ನೋದು ಇತ್ತೀಚೆಗೆ ಅರಿವಿಗೆ ಬಂತು.

ಪೊಲೀಸ್ನೋರು ಮನೆಗೆ ಬಂದ್ರ ಅಂದ್ರೆ ಯಾವುದೋ ಅನಿಷ್ಟ ಮನೆ ಹೊಕ್ಕಂಗೇಯ ಅನ್ನೋದು ಲಾಗಾಯ್ತಿನಿಂದಲೂ ಹಲವರ ನಂಬಿಕೆ. 'ಟೇಸನ್ನಿಗೆ ಹೋಗವ್ನೆ' ಅಂದ್ರೆ ವಂಶದ ಮರ್ಯಾದೆ ಹರಾಜು ಆಯ್ತು ಅಂತ ಲೆಕ್ಕ. ಅಂತಹದರಲ್ಲಿ ಜಾಮೀನುರಹಿತ ವಾರಂಟು ಬಂ[...] ಅಂದ್ರೆ ಮುಗಿದೇಹೋಯಿತು. 'ಸರೀಕರ ಮುಂದೆ [...] ಮೊಕ ಎತ್ಕಂಡು ಬದುಕೋದು ಕಷ್ಟಲ್ಲಪ್ಪ' ಅಂತ ಮನೆಮ[...] ಎಲ್ಲ ಮೂರ್ತಿಂಗ್ಳು ಕ್ವಾಣೆ ಸೇರ್‍ಕಂತಾರೆ. ಯಡ್ಯೂರಪ್ಪನ[...] ಆಡಳಿತ ಇದೆಯಲ್ಲ, ಅದು ಒಂದು ರೀತೀಲಿ ಸ್ವ[...] ಇದ್ದಂಗೆ. ಪೊಲೀಸು, ವಾರಂಟು ಅಂತೆಲ್ಲ ಹೆದರಿ ಮ[...] ಸೇರಂಗೇ ಇಲ್ಲ. ಈಗ ಜನಾರ್ದನ ರೆಡ್ಡಿ ಕೇಸ್ನೆ ತ[...] ಸಂಡೂರು ನ್ಯಾಯಾಲಯ ಜಾಮೀನುರಹಿತ ವಾರಂ[...] ನೀಡ್ತು. ಅದೂ ಒಂದು ಸಲ ಅಲ್ಲ, ಒಂಭತ್ತು [...] ಅವರು ಮಂತ್ರಿ ಬೇರೆ ಅಂತೆ. ಅಂದ್ಮೇಲೆ ಜನರಿಗೆ ಕಾ[...] ಕೊಳ್ಳಲೇಬೇಕಲ್ಲ ಕಾಣಿಸಿಕೊಳ್ತಾರೆ ಬೇಜಾನು ಕಾಣಿಸಿಕೊ[...] ಆದ್ರೆ ಪೊಲೀಸಿನವರಿಗೆ ಕಾಣಿಸೋದಿಲ್ಲವಂತೆ! ಅವ[...] ಕಾಣಿಸ್ದಂಗೆ ಕಣ್ಕಟ್ಟು ವಿದ್ಯೆ ಕಲಿತಿರಬಹುದೋ ಏನೋ[...] ಜಾಮೀನು ರಹಿತ ವಾರಂಟು ಅಂದ್ರೆ ಹುಡುಗಾಟ ಆ[...] ಆ ಸಾಮಿ ಎಲ್ಲಿದ್ರೂ, ಹೆಂಗಿದ್ರೂ ಎಳ್ಕಂಬಂದು [...] ಅಂತಾನೆ ಅಲ್ವಾ... ಹಿಂಗಾದ್ಮೇಲೆ ನ್ಯಾಯಾಧೀಶರು ಸುಮ್[...] ಇರಾಕಾಯ್ತದಾ. 'ಎಲ್ರಿ ರೆಡ್ಡಿ' ಅಂತ ಪೊಲೀಸ್ನೋರ್‍ನ ಕೇಳಿ[...] ಅವರೇನು ಮಾಡ್ತಾರೆ 'ಹಿಡ್ಕಂಬರಾನ ಅಂತಾನೆ ಹೋ[...] ಸಾ. ಆದ್ರೆ ಸಾಹೇಬರು ಮೀಟಂಗ್‌ನಲ್ಲಿದ್ರು' ಅಂದಿ[...] 'ಮೀಟಂಗ್ ಆದ್ಮೇಲೆ ಅರೆಸ್ಟ್ ಮಾಡ್ಬೇಕಿ[...] ಅಂದಿರ್‍ತಾರೆ ನ್ಯಾಯಾಧೀಶರು' ಹಂಗೆ ಮಾಡೊ[...] ಅಂತಿದ್ದೆ ಸಾ. ಹಿಡ್ಕೋಳಾನ ಅನ್ನೊ ಹೊತ್ಗೆ ಕಾ[...] ಭರ್ ಅಂತ ಹೊಂಟೋದ್ರು' ಅಂದಿರ್‍ತಾರೆ. ಹಿ[...] ಏನೋ ಒಂದು ನೆಪಾನ ಒಂದೊಂದ್ಸಲವೂ ಹ[...] ರ್‍ತಾರೆ. ಕೋರ್ಟ್ ಅದನ್ನ ಒಪ್ತಾತ್ತಿರುತ್ತೆ. ಇದರಿ[...] ರೋಸತ್ತು ಹೋದ ಜನಾನೆ ರೆಡ್ಡಿ ಎಳ್ಕಂಬ[...] ಕೋರ್ಟ್ ಮುಂದೆ ನಿಲ್ಲಿಸಿದರೆ ಏನಾಗಬಹು[...] ಅಂದ್ರೆ 'ನಿಮಗ್ಯಾರು ಈ ಹಕ್ಕು ಕೊಟ್ಟೋರು' ಅ[...] ಉಗ್ದು ಜೈಲಿಗೆ ಹಾಕಿದ್ರೂ ಹಾಕಬಹುದು!

ಆಗಳು ನೋಡೇ ಅನ್ನದ ಗುಣ ಹೇಳಬಹು[...] ಅನ್ನೋ ಹಾಗೆ ಆಡಳಿತದ ದಕ್ಷತೆಗೆ ಇ[...] ಸಾಕಾಗಬಹುದು. ಆದರೂ ಮಾತಿಗೆ ಹೇಳ್[...] ನಮ್ಮ ಗೃಹಮಂತ್ರಿಗಳಿದಾರಲ್ಲ ಅದೇ ವಿ.ಎ[...] ಆಚಾರ್ಯರು ಕಣ್ಕಟ್ಟು ವಿದ್ಯೆ ಎಲ್ಲಾನೂ ತಿಳ್ಕೊಂ[...] ಅದೇ ಜಾಮೀನುರಹಿತ ವಾರೆಂಟ್ ಇರೋ ಮ[...] ಪಕ್ಕದಲ್ಲಿ ಕುಳ್ಳರಿಸಿಕೊಂಡು ಸಭೆ ನಡೆಸ್ತಿದ್ರು. ನಿಂಬೆ ಕಾಯಿಗಳೆಲ್ಲ ಮಾಧ್ಯಮದೋಳ್ಕೆ ತೂರಿಕೊ[...] ದಾವಲ್ಲ ಅಂತೋರಲ್ಲಿ ಬಂದು 'ಜಾಮೀನುರ[...] ವಾರಂಟ್ ಇರುವವರು ನಿಮ್ಮ ಪಕ್ಕದಲ್ಲಿ[...] ಕುಳಿತಿದ್ದಾರಲ್ಲ' ಅಂತ ಕೇಳಿತಂತೆ. ಗೃಹಮಂತ್ರಿ ಸುತ್ತಮ[...] ಪೊಲೀಸ್ನೋರೆ ತುಂಬಿರ್‍ತಾರಲ್ಲ ಅರೆಸ್ಟ್ ಮಾಡಿ ಆ[...] ಇರಬೇಕು. ಎಂತಹ ಕ್ರಿಮಿನಲ್ ಬ್ರೈನು! ಆಚಾಯ[...] ಬ್ರೈನು ಅಂದ್ರೆ ಹುಡುಗಾಟಾನಾ. ಇಂತೋರ ನ[...] ಕ್ರಿಮಿನಲ್ ಬ್ರೈನ್ ಹಾಕ್ಬೇಕು!

'ವಾರಂಟ್ ಇರಲೇಳ್ರಿ.... ಇವರೇನು ದೇಶ ಬಿ[...] ಓಡೋಗ್ತಾರಾ' ಅಂತ ದಬಾಯಿಸಿದರು!

ಗೃಹಮಂತ್ರಿ ಅಂದ್ರೆ ಹಿಂಗಿರಬೇಕು!

ಸಮಾನತೆ, ಸುಧಾರಣೆ ಮತ್ತು ಸಂವಿಧಾನ ಇತ್ಯಾದಿ

ಒಂದು ಪತ್ರ

ಕಳೆದ ವಾರದ ಪತ್ರಿಕೆಯಲ್ಲಿನ ಅಬ್ದುಲ್ ರಜಾಕ್ ಅವರ ಪತ್ರದಲ್ಲಿರುವ ಕೋಮುವಾದ ಮತ್ತು ಪಿ.ಎಫ್.ಐ.ಯ ಪಾತ್ರದ ವಿವರಗಳ ಅಧಿಕೃತತೆಯನ್ನು ನಾನು ಎಲ್ಲೂ ಅಲ್ಲಗಳೆದಿಲ್ಲ, ಆದರೆ ಅವರು ನಾನು ಎತ್ತಿರುವ ಮೂಲ ಅಂಶಗಳ ಬಗ್ಗೆ ಜಾಣ ಮರೆವು, ಜಾಣ ಕುರುಡು ತೋರಿದ್ದಾರೆ. ಬಾಹ್ಯ ದಬ್ಬಾಳಿಕೆಯ ವಿರುದ್ಧ ಹೋರಾಡುವುದರ ಜೊತೆಗೆ, ತನ್ನದೇ ಸಮುದಾಯದ ಮಹಿಳೆಯರನ್ನು ದಮನಿಸುವ ಪುರುಷ ಪ್ರಧಾನ ಧಾರ್ಮಿಕ ಕಪಿಮುಷ್ಠಿಯ ವಿರುದ್ಧದ ಆಂತರಿಕ ಹೋರಾಟವೂ ಮುಖ್ಯವಾಗಬೇಕು ಎಂಬುದು ನನ್ನ ಆಶಯವಾಗಿತ್ತು.

ಹಿಂದೂ ಸಮುದಾಯದ ಧಾರ್ಮಿಕ ದಿಕ್ಟಟ್‌ಗಳ ಬಗ್ಗೆ ಈ ದೇಶದ ಪ್ರಗತಿಪರರು ಕಾಲಕಾಲಕ್ಕೆ ದಬಾಯಿಸಿದ ಕಾರಣ ಒಂದು ಸಹನೀಯ ಸುಧಾರಣೆ ಸಾಧ್ಯವಾಗಿದೆ.. ಈ ಪ್ರಗತಿಪರರು ಹಿಂದೂಗಳಾಗಿದ್ದ ಕಾರಣಕ್ಕೇ ಅವರ ಆಂತರಿಕ ಹೋರಾಟಕ್ಕೆ ದೃಢತೆ ಬಂದಿರುವುದು.

ಎಲ್ಲಾ ಸಮುದಾಯಗಳಂತೆ, ಮುಸ್ಲಿಂ ಸಮುದಾಯವೂ ಧಾರ್ಮಿಕತೆಯ ಮುಷ್ಠಿಯೊಳಗೆ ಶತಮಾನಗಳಿಂದ ನರಳಿದೆ ಎಂಬ ಸತ್ಯವನ್ನು ಪಿ.ಎಫ್.ಐ. ಸಹಿತ ಎಲ್ಲರೂ ಒಪ್ಪಿಕೊಳ್ಳುತ್ತಾರೆಂದುಕೊಂಡಿದ್ದೇನೆ ಮತ್ತು ಈ ಸಮುದಾಯಗಳಿಗೆ ದೃಢತೆ ಬರುವುದು ಅವು ತನ್ನೊಳಗೇ ಸಮಾನತೆ ಮತ್ತು ಪ್ರಗತಿಶೀಲತೆಯನ್ನು ರೂಢಿಸಿಕೊಳ್ಳಲು ಆಂತರಿಕ ವಿಮರ್ಶೆ, ಹೋರಾಟ ಮಾಡಿದಾಗಲೇ. ಹಿಂದೂ, ಕ್ರೈಸ್ತ ಮತ್ತಿತರ ಧಾರ್ಮಿಕ ಸಮುದಾಯಗಳು ಈ ನಿಟ್ಟಿನಲ್ಲಿ ಕ್ರಿಯಾಶೀಲವಾಗಿವೆ. ಈ ವಾಸ್ತವವೂ ಹೊರಗಿನ ಅಪಾಯದ ವಿರುದ್ಧ ಹೋರಾಡುವಷ್ಟೇ ಮುಖ್ಯವೆಂದು ಪಿ.ಎಫ್.ಐ.ಗೆ ಅರ್ಥವಾಗಿದ್ದರೆ ಅದರ ಚಟುವಟಿಕೆಗಳಲ್ಲಿ, ಈ ಆಂತರಿಕ ಲಿಂಗ ಸಮಾನತೆಯ ಅಂಶವೂ ಮುಖ್ಯವಾಗಬೇಕು. ತಾನು ಸಮುದಾಯದ ಪ್ರಾತಿನಿಧಿಕ ಸಂಘಟನೆಯಾದರಷ್ಟೇ ಸಾಲದು, ಸಮುದಾಯದ ಒಳಗಿನ ಶೋಷಣೆಯ ವಿರುದ್ಧವೂ ಕ್ರಿಯಾಶೀಲರಾಗುವ ಬಂಡಾಯ ಸಂಘಟನೆಯೂ ಆಗಬೇಕು.

ಗಾಂಧಿ ಮುಖ್ಯರಾಗುವುದು ಈ ಕಾರಣಕ್ಕೇ ಅಲ್ಲವೇ.

ಧರ್ಮದ ಬೆನ್ನೇರಿ ಹೊರಟ ಯಾವ ಹೋರಾಟಗಳೂ ಒಟ್ಟಾರೆ ಸಾಮುದಾಯಿಕ ಒಳಿತಿನ ಗುರಿ ಮುಟ್ಟಿದ್ದಿಲ್ಲ?... ಧಾರ್ಮಿಕ, ಭೌತಿಕ ಸಂಕಟಗಳು ತುರ್ತಿನ ಪರಿಹಾರ ಬೇಡುತ್ತವೆ, ನಿಜ. ಆದರೆ ಸಾವಿರಾರು ವರ್ಷಗಳ ಹಿಂದಿನಿಂದ ಜಡ್ಡುಗಟ್ಟಿರುವ ಕಮಟು ಕೊಳಕುಗಳನ್ನು ತುರ್ತಾಗಲ್ಲದಿದ್ದರೂ ಒಟ್ಟಲ್ಲಿ ತೊಳೆಯಲು ಶುರುವಂತೂ ಮಾಡಬೇಕು ತಾನೆ.? ಮೊನ್ನೆ ತಾನೆ ಮುಸ್ಲಿಂ ಮಹಿಳೆಯರು, ಮಂಗಳೂರು ಮಸೀದಿಯೊಂದರೊಳಕ್ಕೆ ಶುಕ್ರವಾರದಂದೂ ತಮಗೆ ಪ್ರವೇಶ ನೀಡಬೇಕೆಂದು ಪ್ರತಿಭಟನೆ ನಡೆಸಿದ ವರದಿ ಓದಿದೆ. 21ನೇ ಶತಮಾನದಲ್ಲಿ ಇದೊಂದು ದಾರುಣ ಘಟನೆಯೆಂದು ಅನ್ನಿಸುವುದಿಲ್ಲವೇ?

ಧಾರ್ಮಿಕ, ಸಾಂಸ್ಕೃತಿಕ ಅನನ್ಯತೆಯೆನ್ನುವುದು ಪುರುಷ ಪ್ರಧಾನ ಧಾರ್ಮಿಕತೆ ಮಾತ್ರವೇ? ನೆನಪಿಡಿ: ಈ ಅಂಶವನ್ನು ಹಿಂದೂ - ಮುಸ್ಲಿಂ ಎರಡರ ಪುರುಷ ಪ್ರಧಾನ ಪುರೋಹಿತಶಾಹಿಗಳೂ ಗುರಾಣಿಯಂತೆ ಬಳಸುತ್ತಿವೆ.

ಗಾಂಧಿ, ಅಂಬೇಡ್ಕರ್ ವಸಾಹತುಶಾಹೀ ವಿರುದ್ಧ ಹೋರಾಡುವಾಗಲೇ ಭಾರತೀಯ ಸಮಾಜದ ಕರ್ಮಠ ಧಾರ್ಮಿಕತೆಯ ವಿರುದ್ಧ ಹೋರಾಡದೇ ಇದ್ದಿದ್ದರೆ ಇಂದು ಈ ಲಿಬರಲ್ ಸಂವಿಧಾನವೂ ನಮಗಿರುತ್ತಿರಲಿಲ್ಲ.

ಇಂದು ಈ ದೇಶದ ಮೂಲಭೂತವಾದಿ, ಕೋಮುವಾದಿಗಳ ವಿರುದ್ಧ ನಾವೆಲ್ಲ ನಮ್ಮ ಕೈಲಾದ ನೆಲೆಯಲ್ಲಿ ಸಂವಿಧಾನಾತ್ಮಕವಾಗಿ ಧ್ವನಿಯೆತ್ತುತ್ತಿದ್ದೇವೆ. ಜೊತೆಗೆ ನನ್ನಂಥಾ ಮಹಿಳೆಯರು ಸಂವಿಧಾನದ ಮೂಲ ಆಶಯಗಳಲ್ಲೊಂದಾದ ಲಿಂಗಸಮಾನತೆಯನ್ನೂ ಆಗ್ರಹಿಸುತ್ತಿದ್ದೇವೆ. ಆ ಬಗ್ಗೆ ರಜಾಕ್ ಅವರು ಪಾ[...] ಹೇಳಬೇಕಿಲ್ಲ.


ಆದರೆ ಅವರ ಈ ಹೋರಾಟವನ್ನು ಪುರುಷ ಪ್ರಧಾನ ಅಸ್ಮಿತೆಯ ಉಳಿವಿಗೆ ಸೀಮಿತಗೊಳಿಸಬಾರದಷ್ಟೇ. ಸಮಾನತೆಯೆನ್ನುವುದು ಏಕಕಾಲದಲ್ಲಿ ಬಾಹ್ಯ ಮತ್ತು ಆಂತರಿಕ ಗುರಿಯಾಗಿರಬೇಕು. ಹೋರಾಟವೂ ಗರಗಸದಂತೆ ಒಳಗೂ ಹೊರಗೂ ಕುಯ್ಯಬೇಕು, ಅಲ್ಲವೇ. ಮುಂದಿನ ದಿನಗಳಲ್ಲಿ ಪಿ.ಎಫ್.ಐ.ಯ ಚಟುವಟಿಕೆಗಳಲ್ಲಿ, ಈ ಆಂತರಿಕ ಸಮಾನತೆಯ ಅಂಶಗಳೂ ಪ್ರಾಧಾನ್ಯತೆ ಪಡೆಯಲಿ.ನಾವೆಲ್ಲರೂ ಭಾರತೀಯರು, ಸಮಾನರು ಅಂತ ಗಂಡಸರು ಘೋಷಿಸಿಕೊಳ್ಳುವ ಮೊದಲು, ಮಹಿಳೆಯರೂ ನಮ್ಮ ಸಮಾನರು ಎಂದು ಒಪ್ಪಿಕೊಂಡು, ಮಹಿಳಾ ಸಮಾನತೆಗಾಗಿ ಆಂತರಿಕ ಹೋರಾಟವನ್ನೂ ನಡೆಸಲಿ ಎಂಬುದು ನನ್ನ ಬೇಡಿಕೆ. ..!!

ನಾನು ಎತ್ತಿರುವ ದೊಡ್ಡ ಪ್ರಶ್ನೆಗೆ ಉತ್ತರಿಸಲು ನುಣುಚಿಕೊಳ್ಳುತ್ತಾ ಸದ್ಯದ ಸಂದರ್ಭದಲ್ಲಿ ನಾನು ಪ್ರಶ್ನೆ ಎತ್ತುವುದೇ ತಪ್ಪು ಎಂಬಂತೆ ರಜಾಕ್ ನನ್ನ ಮೇಲೇ ಗೂಬೆ ಕೂರಿಸುತ್ತಾ ನನ್ನ ಬದ್ಧತೆಯ ಬಗ್ಗೆ ಗುಮಾನಿ ಬರುವಂತೆ ಬರೆವ ತಂತ್ರಗಾರಿಕೆ ಬಳಸುವ ಬದಲು ನಾನು ಎತ್ತಿರುವ ಅಪ್ರಿಯ ಸತ್ಯದ ಬಗ್ಗೆ ಧ್ಯಾನಿಸಿ ಕಾರ್ಯ ಪ್ರವೃತ್ತರಾಗುವುದು ಲೇಸು.

(ಅಂದಹಾಗೆ, ಪಟ್ಟಾಭಿಯವರಂಥ ಮಾದರಿ ಹೋರಾಟಗಾರರಿಂದ ಕಲಿಯುವುದು ಬಹಳಷ್ಟಿದೆ ಎಂದು ಒಪ್ಪಿಕೊಂಡಿರುವುದರಿಂದ, ಅವರನ್ನು ನೋಡಿಯಾದರೂ ರಜಾಕ್ ಅಂಥವರು ಒಳಗಿನ ವಿಮರ್ಶಕರಾಗಬಹುದಲ್ಲ?!)

ಇಂಥಾ ಹೇಳಿಕೆಗಳ ಬದಲು, ಪಿ.ಎಫ್.ಐ ಯು , ತನ್ನ ಮಹಿಳಾಪ[...] ಚಟುವಟಿಕೆಗಳ ಮೂಲಕವೇ ಮಾತಾಡಲಿ ಎಂದು ಹೇಳುತ್ತಾ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.


-ಸುಮಾ ಎಂಬಾರ[...]
ಮೈಸೂರ[...]




...ಲೆ ಕಸ ಗುಡಿಸುವ ರಾಮಣ್ಣ ...ಮತ್ತು ಯುಗಧರ್ಮ

...ಪ್ರೊಮ್ಮೆ ದೊಡ್ಡ ಮಟ್ಟದ ಪ್ರತಿಭಾವಂತರೂ ...ದ್ದೇ ಒಳಗೊಳಗೇ ...ಹೋಗುತ್ತಾರೆ.

...ವರ ಪಟ್ಟಿಯಲ್ಲಿ ಈ ...ರ್ಮ ರಾಮಣ್ಣ ಕೂಡಾ ...ಈ ವ್ಯಕ್ತಿ ಬಾಯಿತೆರೆದರೆ ... ವಚನಗಳು, ಬಸವಣ್ಣನ ... ಕಾಳಿವ್ವನ ಸಾಲುಗಳು ...ಕುಪ್ಪಳಿಸುತ್ತವೆ. ಶಿವ ...ಹೊಲೆಮಾದಿಗರ, ಜನಪದ ... ಅಷ್ಟೂ ತತ್ವನುಡಿಗಳನ್ನು ...ಮೆಂಬ ಹಾರ್ಡ್ ಡಿಸ್ಕ್‌ನಲ್ಲಿ ...ಮಾಡಿಕೊಂಡು ...ಷ್ಟವರು ಬೆಚ್ಚಿ ಬೆರಗಾಗುವಂತೆ ...ಸುವ ಈ ರಾಮಣ್ಣ ...ಇಲ್ಲೀತನಕ ಎಲ್ಲಿದ್ದರೋ, ಯಾವ ಕೋಟೆ, ...ಮಧ್ಯೆ ಮರೆಯಾಗಿದ್ದರೋ ಗೊತ್ತಿಲ್ಲ. ...ನಾಗೆರೆಯ ಚೆನ್ನಗಿರಿಯವರಾದ ರಾಮಣ್ಣ ...ಐತರಗತಿಯನ್ನು ಐದು ಬಾರಿ ...ಅಂತೆ! ಆದರೆ ಇವರ ದೇಸೀ ಚಿಂತನೆಯ ...ಕೇಳಿದ ಯಾರೇ ಆದರೂ ಅವಾಕ್ಕಾಗಿ ... ಅಂಥ ಅದ್ಭುತ ಮಾತುಗಾರ. ತಮಟೆ ...ಅಂತರೆಂದರೆ ಕೇಳುಗರ ಕಿವಿಗೆ ಹಸೀ ... ಆರು ಸಾವಿರ ತ್ರಿಪದಿಗಳೂ, ಮೂರು ಸಾವಿರ ತತ್ವಪದಗಳೂ ರಾಮಣ್ಣನ ಲೇಖನಿಯಿಂದ ಮೂಡಿಬಂದಿದೆ. ಇದುವರೆಗೂ ರಾಜ್ಯದ ನಾನಾ ಭಾಗಗಳಲ್ಲಿ ಸಂಚರಿಸಿ, ಹಲವಾರು ವೇದಿಕೆಗಳಲ್ಲಿ ತನ್ನ ತತ್ವಪದಗಳನ್ನು ಹಾಡುವ ಮೂಲಕ ಹಳ್ಳಿಗಾಡುಗಳಲ್ಲಿ ಸಾಕಷ್ಟು ಹೆಸರು ಮಾಡಿದ್ದಾರೆ. ಇಂಥ ರಾಮಣ್ಣನನ್ನು ಚಿತ್ರ ನಿರ್ದೇಶಕ ಪಲ್ಲಕ್ಕಿ ರಾಧಾಕೃಷ್ಣ ಮತ್ತು ಗೋಲ್ಡನ್ ಈವೆಂಟ್ಸ್‌ನ ರಾಜೇಶ್ ಸೇರಿ ಬೆಂಗಳೂರಿಗೆ ಕರೆತಂದಿದ್ದಾರೆ.




ಸಿಟಿ ಲೈಫ್‌ನ ನರಳಾಟದಲ್ಲಿ ಸಿಕ್ಕು ತಲೆಯನ್ನು ತಿಪ್ಪೆ ಮಾಡಿಕೊಂಡವರಿಗಾಗಿ ರಾಮಣ್ಣ ಒಂದು ಕಾರ್ಯಕ್ರಮ ನೀಡಿ, ಆ ಮೂಲಕ ಜನರ ತಲೆಯಲ್ಲಿನ ಕಸ ಗುಡಿಸುತ್ತಾರಂತೆ. ಅಕ್ಟೋಬರ್ 27ರಂದು ಬೆಂಗಳೂರಿನ ಪ್ಯಾಲೇಸ್ ಗ್ರೌಂಡ್‌ನಲ್ಲಿ ಈ ಕಾರ್ಯಕ್ರಮ ಏರ್ಪಾಟಾಗಿದೆ. ಟೀವಿ ಮುಂದೆ ಕುಂತು ಕವಡೆ ಜ್ಯೋತಿಷಿಗಳ ಬುರುಡೆ ಕಾರ್ಯಕ್ರಮಗಳಿಂದ ಪೆಟ್ಟು ತಿಂದು, ನ್ಯೂಮರಾಲಜಿ ಕೀಟಗಳಿಂದ ಕಚ್ಚಿಸಿಕೊಂಡು ಒದ್ದಾಡುತ್ತಿರುವವರು ಬಿಡುವು ಮಾಡಿಕೊಂಡು ರಾಮಣ್ಣನ ಕಾರ್ಯಕ್ರಮಕ್ಕೆ ಹೋಗಿ ತಲೆ ಕ್ಲೀನ್ ಮಾಡಿಸಿಕೊಂಡು ಬಂದರೆ ಚೆನ್ನ ಅಲ್ಲವೆ?!



ಮೊಗಲ್ ದೊರೆ ದಾರಾಶಿಕೊ

ಭಾರತೀಯ ಚಿತ್ರರಂಗದ ಇತಿಹಾಸದಲ್ಲೇ ತನ್ನ ವಿಶಿಷ್ಟವಾದ ಕಥಾವಸ್ತುಗಳಿರುವ ಚಿತ್ರಗಳಿಂದ ಎಲ್ಲರ ಗಮನ ಸೆಳೆದಿರುವ ಕನ್ನಡದ ನಿರ್ದೇಶಕರೆಂದರೆ ಎಂ.ಎಸ್.ಸತ್ಯು. ಅವರು ಹಿಂದಿ, ಕನ್ನಡ, ಮರಾಠೀ ಸಮೇತ ಇನ್ನೂ ಅನೇಕ ಭಾಷೆಗಳಲ್ಲಿ ಸಿನಿಮಾವನ್ನು ನಿರ್ದೇಶಿಸಿದ ಖ್ಯಾತಿಯುಳ್ಳವರು. ಸಿನಿಮಾ ಮತ್ತು ರಂಗಭೂಮಿ ಎರಡೂ ಕ್ಷೇತ್ರಕ್ಕೂ ಸಲ್ಲುವ ಸತ್ಯು ಈಗ ಮತ್ತೊಮ್ಮೆ ಸುದ್ದಿಯಲ್ಲಿದ್ದಾರೆ. ಅದೇನೆಂದರೆ ಸದ್ಯದಲ್ಲೇ ಇವರ ನಿರ್ದೇಶನದ ಚಿತ್ರದಲ್ಲಿ ಹಿಂದಿಯ ಖ್ಯಾತ ನಟ ಅಮೀರ್ ಖಾನ್ ನಟಿಸಲಿದ್ದಾರೆ. ಸತ್ಯು ನಿರ್ದೇಶಿಸಿದ ಮೊದಲ ನಾಟಕ 'ಮೊಗಲ್ ದೊರೆ ದಾರಾಶಿಕೊ' ಅನ್ನೇ ಈಗ ಅವರು ಸಿನಿಮಾ ಮಾಡಲು ಹೊರಟಿದ್ದಾರೆ ಈ ಚಿತ್ರವನ್ನು ಹಿಂದಿ ಮತ್ತು ಉರ್ದು ಭಾಷೆಗಳಲ್ಲಿ ನಿರ್ಮಿಸಿ ನಿರ್ದೇಶಿಸಲು ಹೊರಟಿರುವ ಸತ್ಯುವಿಗೆ ಅಮೀರ್‌ಖಾನ್ ಕಾಲ್‌ಶೀಟ್ ನೀಡಿರುವುದು ಬಹುತೇಕ ಖಾತ್ರಿಯಾಗಿದೆ.

ಅಲ್ಲಿಗೆ ಸತ್ಯು ಎಂದಿನಂತೆ ಮತ್ತೊಮ್ಮೆ ಹಿಂದಿ ಚಿತ್ರರಂಗದಲ್ಲಿ 'ಗರಂ ಹವಾ' ಹಬ್ಬಿಸಲು ತಯಾರಾದಂತಿದೆ. ತನ್ನ ವಿಶಿಷ್ಟವಾದ ಮತ್ತು ವಿವಾದಾತ್ಮಕ ಕಥಾವಸ್ತುಗಳಿಂದಲೇ ಅಲ್ಲೂ-ಇಲ್ಲೂ ಸದಾ ಸುದ್ದಿ ಮಾಡುವ ಸತ್ಯು ಈ ಚಿತ್ರದ ಮುಖಾಂತರ ಇನ್ನೇನು ಚರ್ಚೆಗಳನ್ನು ಹುಟ್ಟುಹಾಕುತ್ತಾರೋ ನೋಡಬೇಕು.




ಹೃದಯದಲಿ ಇದೇನಿದು-ವಂದನಾ ಗುಪ್ತ

...ಟ್ಟಸ್ವಾಮಿಯವರ ಪ್ರಶಸ್ತಿಯಾನ...

...ವೇ ಮೊದಲ ಬಾರಿಗೆ ಕನ್ನಡದ ಸಿನಿಮಾ ಬರಹದ ಪುಸ್ತಕಕ್ಕೆ ಅತ್ಯುತ್ತಮ ...ಶಸ್ತಿ ರಾಷ್ಟ್ರಮಟ್ಟದಲ್ಲಿ ದೊರಕಿದೆ. ಬರಹಗಾರ ಮತ್ತು ಅಧಿಕಾರಿ ಪುಟ್ಟಸ್ವಾಮಿ ...ವ 'ಸಿನಿಮಾಯಾನ' ಪುಸ್ತಕಕ್ಕೆ ಪ್ರಶಸ್ತಿ ಬಂದಿರುವುದು ನಿರ್ದೇಶಕ ಗಿರೀಶ್ ... ಸ್ವರ್ಣ ಕಮಲ ಪಡೆದಷ್ಟೇ ದೊಡ್ಡ ಸುದ್ದಿಯಾಗಬೇಕಿತ್ತು. ಇದು ಕೂಡಾ ...ದೊಡ್ಡ ಸಾಧನೆ ಎಂಬುದು ನಮ್ಮ ಚಿತ್ರೋದ್ಯಮಿಗಳಿಗೆ ಯಾಕೆ ಗೊತ್ತಾಗುತ್ತಿಲ್ಲ. ... ಇರಲಿ, ಕನ್ನಡ ಭಾಷೆಯ ಸೊಗಡನ್ನು ರಾಷ್ಟ್ರ ಮಟ್ಟದಲ್ಲಿ ಪಸರಿಸಿರುವ ...ರ ಪುಟ್ಟಸ್ವಾಮಿಗೆ ಅಭಿನಂದನೆಗಳು.





ಮಲಾನಿಯ ಮಿನಿ ಸಿನಿಮಾ

ಯಾಕೋ ನಮ್ಮ ಗಾಂಧೀನಗರದ ಮಂದಿ ಎಚ್.ಐ.ವಿ./ಏಡ್ಸ್ ರೋಗಗಳ ಹಿಂದೆ ಬಿದ್ದಿದ್ದಾರೆ. ನಟಿ ರೂಪಾ ಅಯ್ಯರ್ ಇತ್ತೀಚೆಗೆ ತಾನೇ 'ಮುಖಪುಟ' ಎಂಬ ಸಿನಿಮಾವನ್ನು ನಿರ್ದೇಶಿಸಿ ಸಿಕ್ಕಾಪಟ್ಟೆ ಪಬ್ಲಿಸಿಟಿ ತೆಗೆದುಕೊಂಡಿದ್ದರು.

ಒಂದೆರಡು ವರ್ಷಗಳ ಹಿಂದೆ ದಿಗಂತನ ಎಸ್.ಎಂ.ಎಸ್. ಚಿತ್ರವನ್ನು ನಿರ್ದೇಶಿಸಿದ್ದ ಸಂದೀಪ್ ಮಲಾನಿ ಈಗ ಮತ್ತೊಂದು ಸಿನಿಮಾ ಮಾಡಿದ್ದಾರೆ. ಆದರೆ ಅದು ಕಿರುಚಿತ್ರ. ಈ ಸಿನಿಮಾ ಕೂಡಾ ಎಚ್‌ಐವಿ ಕುರಿತದ್ದೇ ಆಗಿದೆ.

ಕನ್ನಡ ಚಿತ್ರಗಳನ್ನು ಓವರ್ ಸೀಸ್ ವಿತರಣೆ ಮಾಡುತ್ತಾ ಜೊತೆಗೆ ಕಿಮ್ಸ್ ಆಸ್ಪತ್ರೆಯಲ್ಲಿ ಪ್ರೊಫೆಸರ್ ಆಗಿರುವ ಡಾ. ಕಿರಣ್ ಎಂಬ ಯುವ ವೈದ್ಯ ಈ ಚಿತ್ರವನ್ನು ನಿರ್ಮಿಸಿದ್ದಾರೆ.

Regd.No.KA/RNP/BGS/2036/2008-10 Posted at : GPO, Bangalore-01. R B P LANKESH, Kannada Weekly Price Rs. 12/- 06-10-2010

'ಜಾಕಿ'ಕೆ ಜಾಗ ಬಿಡಬೇಕು



ಎಲ್ಲಾ ನಿರೀಕ್ಷಿಸಿದಂತೆ ಮುಗಿದುಹೋದಲ್ಲಿ ಇಷ್ಟೊತ್ತಿಗೆ ವಜ್ರೇಶ್ವರಿ ಕಂಬೈನ್ಸ್‌ನಲ್ಲಿ ನಿರ್ಮಾಣಗೊಳ್ಳುತ್ತಿರುವ 'ಜಾಕಿ' ಚಿತ್ರ ಬಿಡುಗಡೆಯಾಗಬೇಕಿತ್ತು. ದುನಿಯಾ ಖ್ಯಾತಿಯ ಸೂರಿ ನಿರ್ದೇಶಿಸುತ್ತಿರುವ 'ಜಾಕಿ' ಚಿತ್ರ ಹೆಡ್ಡಾಫೀಸ್‌ನ ಬ್ಯಾನರ್‌ನಲ್ಲಿ ನಿರ್ಮಾಣಗೊಳ್ಳುತ್ತಿರುವ ಅತ್ಯಂತ ಅದ್ದೂರಿ ವೆಚ್ಚದ ಚಿತ್ರವೆಂಬ ಹೆಗ್ಗಳಿಕೆಗೂ ಪಾತ್ರವಾಗಿದೆ. ಈಗಾಗಲೇ ಈ ಚಿತ್ರದ ಹಲವಾರು ಏರಿಯಾಗಳನ್ನು ನಿರ್ಮಾಪಕ ರಾಘವೇಂದ್ರ ರಾಜ್‌ಕುಮಾರ್ ಭರ್ಜರಿಯಾಗಿ ಮಾರಾಟ ಮಾಡಿದ್ದರೂ ಕೂಡಾ ಚಿತ್ರ ಬಿಡುಗಡೆ ವಿಳಂಬವಾಗುತ್ತಿರುವ ಬಗ್ಗೆ ಹಂಚಿಕೆದಾರರಿಗೆ ಕಸಿವಿಸಿಯಾಗುತ್ತಿದೆ.

ಇದಕ್ಕೆ ಕಾರಣವೇನು? ಎಂದು ತಲಾಶ್ ನಡೆಸಿದಾಗ ಗೊತ್ತಾದ ಸಂಗತಿಯೆಂದರೆ ಚಿತ್ರದ ಕ್ಲೈಮ್ಯಾಕ್ಸ್ ಮತ್ತು ಹಾಡಿನ ಕೆಲವು ದೃಶ್ಯಗಳು ನಿರ್ಮಾಪಕ ರಾಘಣ್ಣನಿಗೆ ಅಷ್ಟೇನೂ ಇಷ್ಟವಾಗಲಿಲ್ಲವಂತೆ! ಈ ಕಾರಣಕ್ಕೆ ಆ ದೃಶ್ಯಗಳನ್ನು ಮರುಚಿತ್ರೀಕರಣ ಮಾಡಲಾಗುತ್ತಿದೆ ಎಂಬುದೊಂದು ಗಾಳಿಸುದ್ದಿ ಹರಡಿದೆ.

ಸಾಧಾರಣವಾಗಿ ಹೆಡ್ಡಾಫೀಸ್‌ನಲ್ಲಿ ಈ ತರಹ ಮರುಚಿತ್ರೀಕರಣವಾಗುವುದು ಬಹಳ ಅಪರೂಪ. ಸಿನಿಮಾ ಮಾಡುವ ಮೊದಲೇ ಸಿನಿಮಾವನ್ನು ನೋಡುವ ಈ ಜನ ಈ ಬಾರಿ ಯಾಕೆ ಹೀಗಾದರೋ ಗೊತ್ತಿಲ್ಲ. ದುನಿಯಾ ಸೂರಿಯ ಕಾರ್ಯಶೈಲಿ ಇವರಿಗೆ ಹೊಸತು ತಾನೆ? ನಿರ್ದೇಶಕ ಯೋಗರಾಜ್ ಭಟ್ ಮತ್ತು ಸೂರಿ ಚಿತ್ರಕಥೆ ಮುಗಿಸಿದ ನಂತರವೂ ಯಾವಾಗಲೂ ಚಿತ್ರದ ಬಗ್ಗೆ ನಿರಂತರವಾಗಿ ಚಿಂತಿಸುತ್ತಲೇ ಇರುತ್ತಾರೆ. ಹೀಗಾಗಿ ಇವರ ನಿರ್ದೇಶನದ ಚಿತ್ರಗಳಲ್ಲಿ ಕೊನೇಕ್ಷಣದ ಬದಲಾವಣೆ ಅಥವಾ ಸೇರ್ಪಡೆ ಹೊಸತಲ್ಲ. ಬಹುಶಃ ಹೆಡ್ಡಾಫೀಸ್‌ನವರಿಗೆ ಇದು ಹೊಸ ಅನುಭವವಿರಬಹುದು. ಅದೇನೇ ಇರಲಿ ಸದ್ಯಕ್ಕೆ 'ಜಾಕಿ' ಚಿತ್ರದ ಬಗ್ಗೆ ಕುತೂಹಲ ಮತ್ತು ನಿರೀಕ್ಷೆ ದಿನದಿಂದ ದಿನಕ್ಕೆ ಇಮ್ಮಡಿಯಾಗುತ್ತಾ ಹೋಗುತ್ತಿದೆ.

ಅರುಂಧತಿ ನಾಗ್‌ಗೆ ಮತ್ತೊಂದು ಗೌರವ



ಈ ಬಾರಿ ಅತ್ಯುತ್ತಮ ಪೋಷಕ ನಟಿ ಎಂಬ ಕೇಂದ್ರ ಸರ್ಕಾರದ ಪ್ರಶಸ್ತಿಗೆ ಅರುಂಧತಿ ನಾಗ್ ಪಾತ್ರರಾಗಿದ್ದಾರೆ. ಅದೂ ಈ ಕನ್ನಡತಿ ನಟಿಸಿದ 'ಪಾ' ಚಿತ್ರದಲ್ಲಿನ ಮನೋಜ್ಞ ನಟನೆಗಾಗಿ.

ಕೆಲವು ವರ್ಷಗಳ ಪ್ರೇಮ್ ನಿರ್ದೇಶಿಸಿದ 'ಜೋಗಿ' ಚಿತ್ರದಲ್ಲಿ ಮನೋಜ್ಞವಾಗಿ ನಟಿಸಿ ಅರುಂಧತಿ ನಾಗ್ ಪ್ರಶಸ್ತಿ ವಿಮರ್ಶಕರ ಮೆಚ್ಚುಗೆ ಮತ್ತು ಅಭಿಮಾನಿಗಳ ಚಪ್ಪಾಳೆ ಗಿಟ್ಟಿಸಿಕೊಂಡಿದ್ದರು. ಈಗ ಅದನ್ನೇ ರಾಷ್ಟ್ರಮಟ್ಟದಲ್ಲಿ ರಿಪೀಟ್ ಮಾಡಿದ್ದಾರೆ.

ಮೊನ್ನೆಮೊನ್ನೆಯಷ್ಟೇ ಕೇಂದ್ರ ಸರ್ಕಾರದ ಪದ್ಮಶ್ರೀ ಪ್ರಶಸ್ತಿಯನ್ನು ಗಿಟ್ಟಿಸಿಕೊಂಡ ಅರುಂಧತಿ ನಾಗ್ ಹೀಗೆ ಆಗೊಮ್ಮೆ-ಈಗೊಮ್ಮೆ ಸುದ್ದಿಯಲ್ಲಿರುತ್ತಾರೆ. ಉಳಿದಂತೆ ಅವರ ಕನಸಿನ ರಂಗಶಂಕರದ ಚಟುವಟಿಕೆಗಳಲ್ಲಿ ಬಿಜಿಯಾಗಿರುತ್ತಾರೆ. "ನನಗೆ ಕೇಂದ್ರ ಸರ್ಕಾರದ ಸಂಗೀತ ಅಕಾಡೆಮಿಯ ಪ್ರಶಸ್ತಿ ಬಂದಾಗ ಖುಷಿಯಾಗಿತ್ತು, ರಂಗಭೂಮಿ ನನ್ನ ಕ್ಷೇತ್ರ. ಆದರೆ ಸಿನಿಮಾದಲ್ಲಿ ಈ ರೀತಿ ರಾಷ್ಟ್ರಮಟ್ಟದಲ್ಲಿ ಪ್ರಶಸ್ತಿ ಬರುತ್ತದೆ ಎಂದು ಭಾವಿಸಿರಲಿಲ್ಲ." ಎಂದು ಪ್ರಶಸ್ತಿ ಬಗ್ಗೆ ಅರುಂಧತಿ ತಣ್ಣಗೆ ಪ್ರತಿಕ್ರಿಯಿಸುತ್ತಾರೆ. ಅಂತೂ ತನ್ನ ಪತಿ ಶಂಕರನಾಗ್ ಅವರನ್ನು ನೆನಪಿಸುವ ರೀತಿಯಲ್ಲಿ ಅವರು ಕೂಡಾ ಸಿನಿಮಾ ಮತ್ತು ರಂಗಭೂಮಿ... ಎರಡೂ ಕ್ಷೇತ್ರಗಳಲ್ಲೂ ಮೆರೆಯುತ್ತಿರುವುದು ಸಂತೋಷದ ವಿಷಯ.

ಸೂಪರ್ ಕತೆ ಏನು ಗೊತ್ತೇ?



ಹತ್ತು ವರ್ಷಗಳ ಹಿಂದೆ ಉಪೇಂದ್ರ ಸಿನಿಮಾಗಳನ್ನು ನಿರ್ದೇಶಿಸಿದಾಗ ಕನ್ನಡ ಚಿತ್ರರಂಗದ ಪರಿಸ್ಥಿತಿಯೇ ಬೇರೆಯಿತ್ತು, ಆದರೆ ಇವತ್ತಿನ ಪರಿಸ್ಥಿತಿಯೇ ಬೇರೆಯದ್ದಾಗಿದೆ. ಉಪ್ಪಿಗಿಂತಲೂ ಕ್ರಿಯಾಶೀಲವಾಗಿ ಚಿಂತಿಸುವ ಯೋಗರಾಜ್ ಭಟ್, ಸೂರಿ, ಗುರುಪ್ರಸಾದ್, ಶಶಾಂಕ್‌ರಂಥ ಹೊಸ ಪೀಳಿಗೆಯ ನಿರ್ದೇಶಕರು ಬಂದಿದ್ದಾರೆ. ಒಂದು ದಶಕದ ಹಿಂದೆ ಯಾವ ಯೋಗರಾಜ್ ಭಟ್ ಉಪೇಂದ್ರನ ಬಳಿ ಅವಕಾಶಕ್ಕಾಗಿ ಅಲೆದಾಡುತ್ತಿದ್ದರೋ ಅದೇ ಭಟ್ಟರೀಗ ಉಪೇಂದ್ರನನ್ನೂ ಮೀರಿಸುವ ನಿರ್ದೇಶಕನಾಗಿ ಬೆಳೆದುನಿಂತಿದ್ದಾರೆ. ಪ್ರೇಮ್ ಎಂಬ ಹಳ್ಳಿ ಹೈದ ಉಪ್ಪಿಗಿಂತಲೂ ಹೆಚ್ಚು ಗಿಮಿಕ್‌ಗಳನ್ನು ಮಾಡಿ ಗಮನ ಸೆಳೆಯುತ್ತಿರುತ್ತಾನೆ.

ಹೀಗಾಗಿ ಏನಾದರೂ ಮಾಡಿ ಅವರನ್ನೆಲ್ಲಾ ಹಿಂದಿಕ್ಕಬೇಕು ಎಂದು ತೀರ್ಮಾನಿಸಿರುವ ಉಪೇಂದ್ರ ಈ ಬಾರಿ ಯಾರೂ ಮಾಡದ ಕಥೆಯನ್ನು ಮಾಡಿದ್ದಾರೆ. ಬ್ರಿಟಿಷರು ಭಾರತಕ್ಕೆ ಬಂದಿದ್ದು, ಅವರ ಆಳ್ವಿಕೆ, ಶೋಷಣೆಗಳನ್ನು ಕುರಿತಾದ ಹತ್ತಾರು ಸಿನಿಮಾಗಳು ದಕ್ಷಿಣ ಭಾರತದಲ್ಲಿ ಬಂದುಹೋಗಿವೆ.

ಆದರೆ ಭಾರತೀಯನೊಬ್ಬ ಲಂಡನ್‌ಗೆ ಹೋಗಿ ಅಲ್ಲಿನವರನ್ನು ಹಿಡಿತದಲ್ಲಿಟ್ಟುಕೊಂಡು, ತನ್ನ ಅಡಿಯಾಳಾಗಿಸಿಕೊಂಡರೆ ಹೇಗಿರುತ್ತದೆ? ಉಪ್ಪಿಯ ಹೊಸ ಚಿತ್ರ 'ಸೂಪರ್'ನ ಕಥಾಹಂದರ ಇದೇ ಆಗಿದೆ. ಭಾರತೀಯ ಪ್ರಜೆ ಉಪೇಂದ್ರ ಲಂಡನ್‌ಗೆ ಹೋಗಿ ಅಲ್ಲಿ ಅಧಿಕಾರ ಪಡೆದು ಸರ್ವಾಧಿಕಾರಿಯಾಗುವುದೇ 'ಸೂಪರ್' ತಿರುಳು.

ಇದು ಉಪೇಂದ್ರನ ಬುದ್ಧಿವಂತಿಕೆಯೋ, ಅಥವಾ ವಿಚಿತ್ರ ತರ್ಕವೋ ಗೊತ್ತಿಲ್ಲ, ಹಿಂದೆ ಇದೇ ಉಪ್ಪಿ 'ಎಚ್‌ಟುಓ' ಹೆಸರಿನ ಸಿನಿಮಾ ಮಾಡಿ ತಮಿಳುನಾಡು ಕರ್ನಾಟಕ ಮತ್ತು ಈ ಎರಡೂ ರಾಜ್ಯಗಳ ನಡುವೆ ಹರಿಯುವ ಕಾವೇರಿಯನ್ನು ಎಳೆದುತಂದು ಸಿನಿಮಾ ಮಾಡಲು ಹೋಗಿ ಮುಖಭಂಗ ಅನುಭವಿಸಿದ್ದರು.

ಕ್ರಿಯಾಶೀಲನಾದವನು ರಾಜ್ಯರಾಜ್ಯಗಳ, ದೇಶದೇಶಗಳ ನಡುವೆ ಸಾಮರಸ್ಯ ಸಾರುವ, ಭ್ರಾತೃತ್ವದ ಕಥೆಗಳನ್ನು ಆಯ್ಕೆ ಮಾಡಿಕೊಳ್ಳುವುದು ಲಕ್ಷಣ. ಆದರೆ, ಉಪ್ಪಿ ಸಮಸ್ಯೆಗಳಿಗೆ ತುಪ್ಪ ಸುರಿಯುವುದು, ಶಾಂತಿ ಕದಡುವ ಕಥೆಗಳನ್ನು ಆಯ್ಕೆಮಾಡಿಕೊಳ್ಳುವುದನ್ನೇ ತನ್ನ ಟ್ಯಾಲೆಂಟು ಎಂದು ತಿಳಿದಂತಿದೆ.

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427, Fax : 26604536, E-mail :lankesh70@rediffmail.com, Printed at Rajhans Enterprises, # 134, 4th Main, Industrial Estate, Rajajinagar, Bangalore-44